ಭಾನುವಾರ, ನವೆಂಬರ್ 5, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ಸ್ಪರ್ಶ
ದೀಪಾವಳಿ ಹಬ್ಬದ ಪೂರ್ವಭಾವಿಯಾಗಿ ಅಮೃತಸರದಲ್ಲಿ ವ್ಯಕ್ತಿಯೊಬ್ಬರು ಹಣತೆಗಳಿಗೆ ಅಂತಿಮ ಸ್ಪರ್ಶ ನೀಡಿದರು

ಜೋಸ್ಕೊ ಗ್ರೂಪ್

ಸಿಲಿಕಾನ್ ವ್ಯಾಲಿ ಈಗ ಗೋಲ್ಡನ್ ವ್ಯಾಲಿ!

ಜೋಸ್ಕೊ ಜ್ಯುವೆಲ್ಲರ್ಸ್ ಬೆಂಗಳೂರಿನ ಡಿಕೆನ್ಸನ್ ರೋಡ್ ನಲ್ಲಿ
ವಿಶ್ವ ದರ್ಜೆ ಗುಣಮಟ್ಟದ ಹೊಸ ಮಳಿಗೆಯನ್ನು
ಅನಾವರಣಗೊಳಿಸುತ್ತಿದೆ





ಉದ್ಘಾಟನೆ
ಇಂದು
11 ಗಂಟೆಗೆ

ನಟ ಶ್ರೀ ಮೋಹನ್ ಲಾಲ್ ಮತ್ತು
ನಟಿ ಶ್ರೀಮತಿ ಆಶಿಕಾ ರಂಗನಾಥ್ ಅವರಿಂದ

ಸರ್ವರಿಗೂ
ಸುಸ್ವಾಗತ

ಫಾರ್‌ಎವರ್ ಗ್ಯಾಲರಿ | ಡಿಸೈನರ್ ಗ್ಯಾಲರಿ | ಡೈಮಂಡ್ ಜೋನ್ | ಎಕ್ಸೋಟಿಕ್ ಜ್ಯುವೆಲ್ಲರಿ | ಸಿಲ್ವರ್ ಆರ್ಕಿಡ್

ಉದ್ಘಾಟನಾ ಕೊಡುಗೆಗಳು **5 - 15 ನವೆಂಬರ್**

ಮೆಗಾ ಬಂಪರ್ ಬಹುಮಾನ — ವಜ್ರದ ನೆಕ್ಲೆಸ್ ಸೆಟ್

ಚಿನ್ನದ ನಾಣ್ಯಗಳು ಉಚಿತ
50,000 ಮೌಲ್ಯದ ಮೇಲ್ಪಟ್ಟ
ಚಿನ್ನಾಭರಣಗಳ ಖರೀದಿ ಮೇಲೆ

2 ಚಿನ್ನದ ನಾಣ್ಯಗಳು ಉಚಿತ
ತಲಾ 1 ಲಕ್ಷ ಮೌಲ್ಯದ ವಜ್ರ ಮತ್ತು ಅನ್ ಕಟ್
ವಜ್ರದ ಆಭರಣಗಳ ಖರೀದಿಯ ಮೇಲೆ

ಪ್ರತಿ ಖರೀದಿಯ ಮೇಲೆ ನಿಶ್ಚಿತ ಉಡುಗೊರೆಗಳು

ಖರೀದಿಸಿ ಮತ್ತು ದೀಪಾವಳಿ ವಿಶೇಷ ಉಡುಗೊರೆ
ಮತ್ತು ಸ್ವೀಟ್ ಬಾಕ್ಸ್ ಮನೆಗೆ ಕೊಂಡೊಯ್ಯಿರಿ!

ವಿಶೇಷ ಮುಂಗಡ ಬುಕ್ಕಿಂಗ್ 1%

* ಷರತ್ತುಗಳು ಅನ್ವಯಿಸುತ್ತವೆ * ಪ್ರತಿ ಉಚಿತ ಚಿನ್ನದ ನಾಣ್ಯ 100 ಮಿಗ್ರಾಂ

ಜಯನಗರದಲ್ಲಿರುವ ಜೋಸ್ಕೊ ಜ್ಯುವೆಲ್ಲರ್ಸ್ ನವೀಕೃತ ಮಳಿಗೆ ಡಿಸೆಂಬರ್ 9, 2023 ರಂದು ಮರು ಲೋಕಾರ್ಪಣೆ

ವಿಶಾಲವಾದ ಕಾರ್ ಪಾರ್ಕಿಂಗ್ ಸೌಕರ್ಯ ಲಭ್ಯ | ಎಲ್ಲಾ ಭಾನುವಾರಗಳಂದು ತೆರೆದಿರುತ್ತದೆ

ರಾಯಲ್ ಎಂಎಲ್‌ಎಸ್ ಪ್ರೈಡ್, ನಂ.8, ಡಿಕೆನ್ಸ್‌ನ್ ರಸ್ತೆ,
ಕಮರ್ಷಿಯಲ್ ಸ್ಟ್ರೀಟ್ ಜಂಕ್ಷನ್ ಹತ್ತಿರ,
ಬೆಂಗಳೂರು– 560 042 ಫೋ: 080 41211312

ಜೋಸ್ಕೊ ಜ್ಯುವೆಲ್ಲರ್ಸ್
ಕೇರಳ. ಕರ್ನಾಟಕ. ತಮಿಳುನಾಡು

TONICO

100% 916 HUID JEWELLERY | Shop Online: www.joscojewellers.in | office@joscogroup.com | /joscojewellers | +91 83 04 04 9000

ಸಿಬಿಡಿಯಲ್ಲಿ ಪೊಲೀಸರ ಗಸ್ತು ಹೆಚ್ಚಳ ● ವಿಶೇಷ ಕಾರ್ಯಾಚರಣೆ: ಮನೆ ಬಳಿ ಆರೋಪಿಗಳ ಮೆರವಣಿಗೆ

17 ಸುಲಿಗೆ ಪ್ರಕರಣ ಪತ್ತೆ: 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಸುತ್ತ ಮುತ್ತಲಿನ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಸುಲಿಗೆ ಹಾಗೂ ಹಲ್ಲೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ಗಸ್ತು ಹೆಚ್ಚಿಸಿದ್ದು, ವಿಶೇಷ ಕಾರ್ಯಾಚರಣೆ ನಡೆಸಿ 6 ಆರೋಪಿಗಳನ್ನು ಬಂಧಿಸಿದ್ದಾರೆ.

ಶಿವಾಜಿನಗರ ಠಾಣೆ ವ್ಯಾಪ್ತಿಯ ಕಂಟೋನ್ಮೆಂಟ್ ರೈಲು ನಿಲ್ದಾಣ ಬಳಿ ಪತ್ರಿಕಾ ವಿತರಕ ಆಂಥೋನಿ ಸಿ. (75) ಅವರನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳು ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಮೇಲಿಂದ ಮೇಲೆ ನಡೆಯುತ್ತಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಶನಿವಾರ ನಸುಕಿನಿಂದ ಹಲವು ಪ್ರದೇಶಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದರು.

ಅಶೋಕನಗರ, ಭಾರತಿನಗರ, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ, ಹಲಸೂರು, ಡಿ.ಜೆ.ಹಳ್ಳಿ, ಕೆ.ಜಿ. ಹಳ್ಳಿ, ಬಾಣಸವಾಡಿ ಹಾಗೂ ಸುತ್ತಮುತ್ತಲಿನ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಯಿತು.

‘ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಜನರಿಗೆ ರಕ್ಷಣೆ ಒದಗಿಸಲು ದಿನದ 24 ಗಂಟೆಯೂ ಪೊಲೀಸರು ಕೆಲಸ ಮಾಡುತ್ತಿದ್ದಾರೆ. ನಸುಕಿನಲ್ಲಿ ಓಡಾಡುವವರನ್ನು ಗುರಿಯಾಗಿಸಿ ಸುಲಿಗೆ ಮಾಡುತ್ತಿರುವ ಆರೋಪಿಗಳ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಲಾಗಿದೆ. ಅಪರಾಧ ತಡೆಯಲು ಗಸ್ತು ಹೆಚ್ಚಿಸಲಾಗಿದೆ’ ಎಂದು ಪೂರ್ವ ವಿಭಾಗದ ಡಿಸಿಪಿ ಡಿ. ದೇವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

7 ಪ್ರಕರಣಗಳಲ್ಲಿ ನಾಲ್ವರು ಬಂಧನ: ಜನರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ನೀಲಸಂದ್ರದ ಸೈಯದ್ ಉಸ್ಮನ್ (21), ಇರ್ಫಾನ್ ಅಲಿಯಾಸ್ ಚುವ್ವಿ (20), ಜೀವಾ (20) ಹಾಗೂ ಸೂರ್ಯನನ್ನು (21) ಪುಲಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪುಲಕೇಶಿನಗರ, ಬಾಣಸವಾಡಿ, ಬೊಮ್ಮನಹಳ್ಳಿ, ಕಮರ್ಷಿಯಲ್ ಸ್ಟ್ರೀಟ್, ಕೋರಮಂಗಲ ಹಾಗೂ ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ 10 ಸುಲಿಗೆ ಪ್ರರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದರು’ ಎಂದು ಪೊಲೀಸರು ಹೇಳಿದರು.

ಇಬ್ಬರ ಬಂಧನದಿಂದ 10 ಪ್ರಕರಣ ಪತ್ತೆ: ಸುಲಿಗೆ ಹಾಗೂ ದ್ವಿಚಕ್ರ ವಾಹನ ಕಳ್ಳತನ ಪ್ರಕರಣದಲ್ಲಿ ಆರೋಪಿಗಳಾದ ಮೊಹಮ್ಮದ್ ಜಬಿ ಹಾಗೂ ಜುನೈದ್‌ನನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ.

‘ಆರೋಪಿಗಳು ಮಾರಕಾಸ್ತ್ರ ಹಿಡಿದು ಓಡಾಡುತ್ತಿದ್ದರು. ದಾರಿಹೋಕರನ್ನು ಅಡ್ಡಗಟ್ಟಿ ಜೀವ ಬೆದರಿಕೆಯೊಡ್ಡಿ ಸುಲಿಗೆ ಮಾಡುತ್ತಿದ್ದರು. ಪುಲಕೇಶಿನಗರ, ಭಾರತಿನಗರ, ಹೆಬ್ಬಾಳ, ಕೆ.ಆರ್. ಪುರ, ಹೆಣ್ಣೂರು, ಕಮರ್ಷಿಯಲ್ ಸ್ಟ್ರೀಟ್, ಕೋರಮಂಗಲ, ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳ ವಿರುದ್ಧ 10 ಪ್ರಕರಣಗಳು ದಾಖಲಾಗಿದ್ದವು. ‘ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪಿಗಳು, ಅದರಲ್ಲಿಯೇ ಸುತ್ತಾಡಿ ಸುಲಿಗೆ ಮಾಡುತ್ತಿದ್ದರು. ಬಂಧಿತರಿಂದ ₹5.50 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನ, 9 ಮೊಬೈಲ್, ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಮನೆ ಬಳಿ ಆರೋಪಿ ಕರೆದೊಯ್ದ ಪೊಲೀಸರು: ಬಂಧಿತ ಆರೋಪಿಗಳು, ಪದೇ ಪದೇ ಸುಲಿಗೆ ಪ್ರಕರಣದಲ್ಲಿ ಭಾಗಿಯಾಗುತ್ತಿದ್ದರು. ಈ ಬಗ್ಗೆ ಕುಟುಂಬಸ್ಥರಿಗೆ ಮಾಹಿತಿ ಇರಲಿಲ್ಲ.

ಆರೋಪಿಗಳನ್ನು ಅವರ ಮನೆಗೆ ಕರೆದೊಯ್ದಿದ್ದ ಪೊಲೀಸರು, ಕುಟುಂಬದವರಿಗೆ ಮಾಹಿತಿ ನೀಡಿದರು. ಮನೆ ಬಳಿಯೇ ಆರೋಪಿಗಳನ್ನು ಸುತ್ತಾಡಿಸಿದರು. ‘ಸುಲಿಗೆ ಆರೋಪಿಗಳ ಬಗ್ಗೆ ಎಚ್ಚರಿಕೆ ವಹಿಸಿ’ ಎಂದು ಜನರಲ್ಲಿ ಜಾಗೃತಿ ಮೂಡಿಸಿದರು.

ಸುಲಿಗೆ ಪ್ರಕರಣದ ಆರೋಪಿಗಳನ್ನು ಅವರ ಮನೆ ಬಳಿ ಸುತ್ತಾಡಿಸಿದ ಪೊಲೀಸರು, ಜನರಲ್ಲಿ ಜಾಗೃತಿ ಮೂಡಿಸಿದರು

ಅಪರಾಧ ಸುದ್ದಿ

‘24 ಗಂಟೆ ಗಸ್ತು: 8 ನಿಮಿಷಗಳಲ್ಲಿ ಸ್ಪಂದನೆ’

‘ಬೆಂಗಳೂರಿನಲ್ಲಿ ಗಸ್ತು ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ರೂಪಿಸಲಾಗಿದೆ. ದಿನದ 24 ಗಂಟೆಯೂ ಪೊಲೀಸರು ಗಸ್ತು ತಿರುಗುತ್ತಿದ್ದು, ನಿಯಂತ್ರಣ ಕೊಠಡಿಗೆ ಯಾವುದಾದರೂ ತುರ್ತು ಕರೆ ಬಂದರೆ ಪೊಲೀಸರು 8 ನಿಮಿಷಗಳ ಒಳಗೆ ಸ್ಥಳದಲ್ಲಿರುತ್ತಾರೆ’ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಎನ್. ಸತೀಶ್‌ಕುಮಾರ್ ತಿಳಿಸಿದ್ದಾರೆ.

ಸಿಬಿಡಿ ಪ್ರದೇಶದಲ್ಲಿ ಹೆಚ್ಚುತ್ತಿರುವ ಸುಲಿಗೆ ಹಾಗೂ ಹಲ್ಲೆ ಪ್ರಕರಣಗಳ ಬಗ್ಗೆ ‘ಪ್ರಜಾವಾಣಿ’ಯಲ್ಲಿ ನ. 4ರಂದು ಪ್ರಕಟವಾದ ‘ಗಸ್ತು ತಿರುಗದ ಪೊಲೀಸರು; ಹೆಚ್ಚಿದ ಸುಲಿಗೆ, ಹಲ್ಲೆ ಕೃತ್ಯ’ ಶೀರ್ಷಿಕೆಯ ವರದಿಗೆ ಅವರು ಸ್ಪಷ್ಟೀಕರಣ ನೀಡಿದ್ದಾರೆ.

‘ಪ್ರತಿ ನಿತ್ಯವೂ ರಾತ್ರಿ 241 ಹೊಯ್ಸಳ ವಾಹನಗಳು, 632 ದ್ವಿಚಕ್ರ ವಾಹನಗಳಲ್ಲಿ ಸುಮಾರು 2000 ಪೊಲೀಸರು ಗಸ್ತು ತಿರುಗುತ್ತಾರೆ. ಸುಮಾರು 10,000 ಬೀಟ್ ಪಾಯಿಂಟ್‌ಗಳಿಗೆ ಭೇಟಿ ನೀಡುತ್ತಾರೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ‘ಸ್ಮಾರ್ಟ್ ಇ-ಬೀಟ್’, ‘ಗುಡ್ ಮಾರ್ನಿಂಗ್ ಬೀಟ್’ ಹಾಗೂ ‘ದಿಢೀರ್ ಬೀಟ್’ ಪರಿಚಯಿಸಲಾಗಿದೆ. ನಸುಕಿನಲ್ಲಿ ನಡೆಯುವ ಅಪರಾಧಗಳನ್ನು ತಡೆಯಲು ಪ್ರತ್ಯೇಕವಾಗಿ 650 ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ’ ಎಂದಿದ್ದಾರೆ.

‘ನಿತ್ಯವೂ 1600 ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ. ತಂತ್ರಜ್ಞಾನದ ಸಹಾಯದಿಂದ ಅನುಮಾನಾಸ್ಪದ ವ್ಯಕ್ತಿಗಳ ಬೆರಳಚ್ಚು ಸಂಗ್ರಹಿಸಲಾಗುತ್ತಿದೆ. ನಗರದಲ್ಲಿ ಪೊಲೀಸರ ಕರ್ತವ್ಯದಲ್ಲಿ ಯಾವುದೇ ನಿರ್ಲಕ್ಷ್ಯ ಆಗಿಲ್ಲ. ಸಿಬ್ಬಂದಿ ಕೊರತೆ ಹಾಗೂ ಒತ್ತಡದ ನಡುವೆಯೂ ಪೊಲೀಸರು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ’ ಎಂದು ಅವರು ಹೇಳಿದ್ದಾರೆ.

ಅವಧಿ ಮೀರಿದ ಔಷಧಿ: ಆಸ್ಪತ್ರೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಚಿಕಿತ್ಸೆಗೆಂದು ದಾಖಲಾಗಿದ್ದ ಎರಡು ವರ್ಷದ ಮಗುವಿಗೆ ಅವಧಿ ಮೀರಿದ ಔಷಧಿ ನೀಡಿದ್ದ ಆರೋಪದಡಿ ಸಂಜೀವಿನಿ ಆಸ್ಪತ್ರೆ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಮಂಜುನಾಥ್ ನಗರ ನಿವಾಸಿ ಕಿರಣ್ ಜೆ. ಅವರು ದೂರು ನೀಡಿದ್ದಾರೆ. ಸಂಜೀವಿನಿ ಆಸ್ಪತ್ರೆ ವೈದ್ಯರು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಂಪನಿಯೊಂದರಲ್ಲಿ ವ್ಯವಸ್ಥಾಪಕರಾಗಿರುವ ಕಿರಣ್, ಜ್ವರದಿಂದ ಬಳಲುತ್ತಿದ್ದ ತಮ್ಮ ಹೆಣ್ಣು ಮಗುವನ್ನು ಅ. 28ರಂದು ಸಂಜೀವಿನಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಪ್ರಾಥಮಿಕ ಚಿಕಿತ್ಸೆ ನೀಡಿದ್ದ ವೈದ್ಯರು, ಜ್ವರ ಕಡಿಮೆಯಾಗುವುದಾಗಿ ಹೇಳಿದ್ದರು. ಆದರೆ, ಜ್ವರ ಕಡಿಮೆ ಆಗಿರಲಿಲ್ಲ. ಹೀಗಾಗಿ, ಅ. 29ರಂದು ಪುನಃ ಮಗುವನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು.’

‘₹ 5,000 ನೋಂದಣಿ ಶುಲ್ಕ ಪಡೆದಿದ್ದ ಆಸ್ಪತ್ರೆಯವರು, ಚಿಕಿತ್ಸೆಗೆಂದು ಮಗುವನ್ನು ದಾಖಲಿಸಿಕೊಂಡಿದ್ದರು. ಅದೇ ದಿನ ಮಗುವಿನ ಕೈಗೆ ಡ್ರಿಪ್ಸ್ ಹಾಕಲಾಗಿತ್ತು. ಇದೇ ಸಂದರ್ಭದಲ್ಲಿ ಡ್ರಿಪ್ಸ್‌ನೊಳಗೆ ಅವಧಿ ಮೀರಿದ ಔಷಧಿಯನ್ನು ಮಿಶ್ರಣ ಮಾಡಲಾಗಿತ್ತು. ಔಷಧಿಯ ಉತ್ಪಾದನಾ ದಿನಾಂಕ ಗಮನಿಸಿದ್ದ ದೂರುದಾರರು, ಆಸ್ಪತ್ರೆ ಸಿಬ್ಬಂದಿಯನ್ನು ಪ್ರಶ್ನಿಸಿದ್ದರು. ಆದರೆ, ಸಿಬ್ಬಂದಿ ಉಡಾಫೆ ಉತ್ತರ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಅವಧಿ ಮೀರಿದ ಔಷಧಿ ನೀಡಿದ್ದರಿಂದ ಮಗುವಿನ ಆರೋಗ್ಯದಲ್ಲಿ ಏರುಪೇರಾಗಿತ್ತು. ದೂರುದಾರರು, ತಮ್ಮ ಮಗುವನ್ನು ರಾಜಾಜಿನಗರದ ಬೇರೊಂದು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದರು. ಅದೇ ಆಸ್ಪತ್ರೆಗೆ ಹೋಗಿದ್ದ ಸಂಜೀವಿನಿ ಆಸ್ಪತ್ರೆ ಸಿಬ್ಬಂದಿ, ಅವಧಿ ಮೀರಿದ ಔಷಧಿ ನೀಡಿದ್ದ ಬಗ್ಗೆ ಯಾರಿಗೂ ಹೇಳದಂತೆ ಹಣದ ಆಮಿಷವೊಡ್ಡಿದ್ದರು. ಇದಕ್ಕೆ ಸೊಪ್ಪು ಹಾಕದ ದೂರುದಾರ, ಠಾಣೆಗೆ ದೂರು ನೀಡಿದ್ದಾರೆ. ಭಾರತೀಯ ವೈದ್ಯಕೀಯ ಮಂಡಳಿಗೆ ಪತ್ರ ಬರೆದು, ಕಾನೂನು ಪ್ರಕ್ರಿಯೆ ಆರಂಭಿಸಲಾಗುವುದು’ ಎಂದು ಮೂಲಗಳು ಹೇಳಿವೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಂಜೀವಿ ಆಸ್ಪತ್ರೆ ವೈದ್ಯರು ಸಂಪರ್ಕಕ್ಕೆ ಸಿಗಲಿಲ್ಲ.

ಸುದ್ದಿ 2 ನಿಮಿಷ

ಡ್ರಗ್ಸ್: 30 ಬ್ಯಾಂಕ್ ಖಾತೆ ಪಾಸ್‌ಬುಕ್ ಜಪ್ತಿ

ಬೆಂಗಳೂರು: ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಪೀಟರ್ ಐಕಿಡಿ ಬಿಲನ್ವೊನನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದು, 30 ಬ್ಯಾಂಕ್ ಖಾತೆಗಳ ಪಾಸ್‌ಬುಕ್ ಜಪ್ತಿ ಮಾಡಿದ್ದಾರೆ.

‘ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಪೀಟರ್, ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಿಇಎಲ್ ಬಡಾಣೆಯಲ್ಲಿ ಡ್ರಗ್ಸ್ ಮಾರುತ್ತಿದ್ದ ಸಂದರ್ಭದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಈತನ ಬಳಿ ₹ 5.15 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಸಿಕ್ಕಿದೆ. ಜೊತೆಗೆ, ನಾನಾ ಹೆಸರಿನಲ್ಲಿ 30 ಬ್ಯಾಂಕ್‌ಗಳಲ್ಲಿ ತೆರೆಯಲಾಗಿದ್ದ ಖಾತೆಗಳ ಪಾಸ್‌ಬುಕ್ ಸಹ ಜಪ್ತಿ ಮಾಡಲಾಗಿದೆ. ಈತ ಸೈಬರ್ ಅಪರಾಧಗಳಲ್ಲೂ ಭಾಗಿಯಾಗಿರುವ ಶಂಕೆ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿವೆ.

ಗೋವಾದಲ್ಲಿ ‘ಎಸ್ಕೇಪ್’ ಕಾರ್ತಿಕ್ ಸೆರೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಕಾರ್ತಿಕ್ ಕುಮಾರ್ ಅಲಿಯಾಸ್ ‘ಎಸ್ಕೇಪ್ ಕಾರ್ತಿಕ್‌ನನ್ನು’ ಗೋವಿಂದರಾಜನಗರ ಠಾಣೆ ಪೊಲೀಸರು ಗೋವಾದಲ್ಲಿ ಇತ್ತೀಚೆಗೆ ಬಂಧಿಸಿದ್ದಾರೆ.

‘ಹೆಣ್ಣೂರು ಬಳಿಯ ಪ್ರಕೃತಿ ಬಡಾವಣೆಯ ನಿವಾಸಿ ಕಾರ್ತಿಕ್, ಅಪರಾಧ ಹಿನ್ನೆಲೆಯುಳ್ಳವ. ಪ್ರಕರಣವೊಂದರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ ಈತ, ಅಲ್ಲಿಂದಲೇ ಪರಾರಿಯಾಗಿದ್ದ. ಹೀಗಾಗಿ, ಈತನಿಗೆ ಎಸ್ಕೇಪ್ ಎಂಬ ಅಡ್ಡ ಹೆಸರಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಐಷಾರಾಮಿ ಜೀವನಕ್ಕೆ ಹಣ ಹೊಂದಿಸಲು ಕಳ್ಳತನ ಮಾಡುತ್ತಿದ್ದ ಆರೋಪಿ, ಇತ್ತೀಚೆಗೆ ಬೆಂಗಳೂರಿನ ಹಲವೆಡೆ ಕೃತ್ಯ ಎಸಗಿದ್ದ. ನಂತರ, ಗೋವಾಗೆ ಪರಾರಿಯಾಗಿದ್ದ. ಇತ್ತೀಚೆಗೆ ನಡೆದಿದ್ದ ಸಾಫ್ಟ್‌ವೇರ್ ಕಂಪನಿ ಮಹಿಳಾ ಉದ್ಯೋಗಿ ಆತ್ಮಹತ್ಯೆ ಪ್ರಕರಣದ ಆರೋಪಿಗಳ ಪತ್ತೆಗಾಗಿ ಪೊಲೀಸರ ವಿಶೇಷ ತಂಡ ಗೋವಾಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ, ಎಸ್ಕೇಪ್ ಕಾರ್ತಿಕ್ ಬಗ್ಗೆ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಜಾತಿ ನಿಂದನೆ: ಪುನೀತ್ ಕೆರೆಹಳ್ಳಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ನಿಂದನೆ ಆರೋಪದಡಿ ರಾಷ್ಟ್ರ ರಕ್ಷಣಾ ಪಡೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಅವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ಆರೋಪಿಯನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

‘ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ್ದ ಪೋಸ್ಟ್‌ಗೆ ಪ್ರತಿಕ್ರಿಯಿಸಿದ್ದ ಪುನೀತ್ ಕೆರೆಹಳ್ಳಿ, ಜಾತಿ ನಿಂದನೆ ಮಾಡಿ ಜೀವ ಬೆದರಿಕೆಯೊಡ್ಡಿದ್ದಾರೆ’ ಎಂದು ಆರೋಪಿಸಿ ಕರ್ನಾಟಕ ರಣಧೀರ ಪಡೆಯ ರಾಜ್ಯ ಘಟಕದ ಅಧ್ಯಕ್ಷ ಭೈರಪ್ಪ ಹರೀಶ್‌ಕುಮಾರ್ ದೂರು ನೀಡಿದ್ದರು.

ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಶುಕ್ರವಾರ ಮಧ್ಯಾಹ್ನ ಪುನೀತ್ ಅವರನ್ನು ವಶಕ್ಕೆ ಪಡೆದಿದ್ದರು. ನಂತರ, ವಿಚಾರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯನ್ನು ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಸದ್ಯ ಪುನೀತ್ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾರೆ.

ರೌಡಿಶೀಟರ್‌ಗೆ ಗುಂಡೇಟು: ಪೊಲೀಸರಿಂದಲೇ ಆರೈಕೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಚಾಕುವಿನಿಂದ ಇರಿಯಲು ಯತ್ನಿಸಿ ಪೊಲೀಸರಿಂದ ಕಾಲಿಗೆ ಗುಂಡೇಟು ತಿಂದಿರುವ ರೌಡಿಶೀಟರ್, ಕುಟುಂಬದವರಿಗೂ ಬೇಡವಾಗಿದ್ದು ಮಾನವೀಯತೆ ಆಧಾರದಲ್ಲಿ ಪೊಲೀಸರೇ ಆರೈಕೆ ಮಾಡುತ್ತಿದ್ದಾರೆ.

ಹಲವು ಪ್ರಕರಣಗಳಲ್ಲಿ ಪೊಲೀಸರು ಹುಡುಕುತ್ತಿದ್ದ ನರಸಿಂಹರಾಜಪುರ ತಾಲ್ಲೂಕಿನ ಮಾಗಲು ಗ್ರಾಮದ ಎಂ.ಕೆ.ಪೂರ್ಣೇಶ್ ಬಂಧಿಸಲು ಅ.30ರಂದು ಬೆಳಿಗ್ಗೆ ಮನೆ ಸುತ್ತುವರಿದಿದ್ದರು. ಪೊಲೀಸರ ಮೇಲೆ ಆರೋಪಿ ದಾಳಿಗೆ ಮುಂದಾದಾಗ ಪಿಎಸ್ಐ ದಿಲೀಪ್‌ಕುಮಾರ್ ಅವರು ಪೂರ್ಣೇಶ್ ಕಾಲಿಗೆ ಗುಂಡು ಹೊಡೆದಿದ್ದರು.

ಮುಂಗಾಲಿನ ಪ್ರಮುಖ ರಕ್ತನಾಳಕ್ಕೆ ಗುಂಡೇಟು ತಗುಲಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಸಾಧ್ಯವಾಗದೆ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ರವಾನಿಸಲಾಗಿದೆ. ಅಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ಪೂರ್ಣೇಶ್ ಚೇತರಿಸಿಕೊಳ್ಳುತ್ತಿದ್ದು, ಆರೋಪಿಯ ಪತ್ನಿಗೆ ವಿಷಯ ಮುಟ್ಟಿಸಿದ್ದರೂ ಪತಿ ನೋಡಲು ಬರಲು ನಿರಾಕರಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇನ್‌ಸ್ಪೆಕ್ಟರ್ ಸೇರಿ ಐವರು ಪೊಲೀಸ್ ಸಿಬ್ಬಂದಿ ಜಯದೇವ ಆಸ್ಪತ್ರೆಯಲ್ಲಿ ಹಗಲು–ರಾತ್ರಿ ಕಾರ್ಯನಿರ್ವಹಿಸುತ್ತಿದ್ದಾರೆ. ತೀವ್ರ ನಿಗಾ ಘಟಕದಲ್ಲಿರುವ ಆರೋಪಿಯ ಆರೈಕೆ ಮಾಡುತ್ತಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ, ‘ಆರೋಪಿಯ ಸಂಬಂಧಿಕರಿಗೆ ತಿಳಿಸಿದರೂ ನೋಡಲು ಯಾರೂ ಬಂದಿಲ್ಲ. ರೌಡಿ ಶೀಟರ್ ಆದರೂ ಮಾನವೀಯತೆಯ ದೃಷ್ಟಿಯಿಂದ ನಮ್ಮ ಸಿಬ್ಬಂದಿಯೇ ಆರೈಕೆ ಮಾಡುತ್ತಿದ್ದಾರೆ. ಪೊಲೀಸರ ಮಾನವೀಯತೆಗೆ ಇದು ಉದಾಹರಣೆ’ ಎಂದು ಹೇಳಿದರು.



ಆರೋಪಿ ಪೂರ್ಣೇಶ್ ಆರೈಕೆಯಲ್ಲಿ ನಿರತವಾಗಿರುವ ಚಿಕ್ಕಮಗಳೂರು ಪೊಲೀಸರು

ಪ್ರಪಾತಕ್ಕೆ ಉರುಳಿದ ಬಸ್: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ಬೆಂಗಳೂರಿನಿಂದ ಹೊರನಾಡಿಗೆ ಪ್ರವಾಸ ಹೊರಟಿದ್ದ ಖಾಸಗಿ ಬಸ್ಸೊಂದು ಶನಿವಾರ ನಸುಕಿನಲ್ಲಿ ತಾಲ್ಲೂಕಿನ ಕಸ್ಕೆಬೈಲ್ ಸಮೀಪ ರಸ್ತೆ ಬದಿಯ ಪ್ರಪಾತಕ್ಕೆ ಉರುಳಿದ್ದು, ಮಹಿಳೆ ಮತ್ತು ಯುವಕ ಮೃತಪಟ್ಟಿದ್ದಾರೆ.

ಬೆಂಗಳೂರಿನ ಕೆ.ಆರ್.ಪುರ ಸಮೀಪದ ದ್ಯಾವಸಂದ್ರದ ಸುರೇಖಾ (45) ಸ್ಥಳದಲ್ಲೇ ಮೃತಪಟ್ಟರು. ಬಸ್‌ನಲ್ಲಿದ್ದ 17 ಜನ ಗಾಯಗೊಂಡಿದ್ದರು. ಈ ಪೈಕಿ ಇದೇ ಬಡಾವಣೆಯ ಅಶೋಕ್(22) ಹಾಸನದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಬೆಂಗಳೂರಿಂದ ಹೊರನಾಡಿಗೆ ಹೊರಟಿದ್ದ ಪ್ರವಾಸಿಗರ ಬಸ್‌ನಲ್ಲಿ 48 ಜನ ಪ್ರವಾಸಿಗರು ಇದ್ದರು. ಬೆಳಿಗಿನ ಜಾವ 4 ಗಂಟೆ ಸುಮಾರಿನಲ್ಲಿ ಬೇಲೂರು ಕಡೆಯಿಂದ ವೇಗವಾಗಿ ಬಂದ ಬಸ್, ತಿರುವಿನಲ್ಲಿ ನಿಯಂತ್ರಣಕ್ಕೆ ಸಿಗದೆ ರಸ್ತೆ ಬದಿಯ ಕಾಫಿ ತೋಟಕ್ಕೆ ಉರುಳಿದೆ. ಸ್ಥಳಕ್ಕೆ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ಬಂದು ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕಿಯೋನಿಕ್ಸ್ ವೆಂಡರ್‌ಗಳ ಪ್ರತಿಭಟನೆ

ಬಿಲ್ ತಡೆಹಿಡಿದು ಕಿರುಕುಳ ನೀಡುತ್ತಿರುವ ಆರೋಪ: ವಿಷ ಸೇವನೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ವ್ಯವಸ್ಥಾಪಕ ನಿರ್ದೇಶಕರು ₹ 150 ಕೋಟಿಯಷ್ಟು ಬಿಲ್ ಪಾವತಿಯನ್ನು ತಡೆಹಿಡಿದು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಸಂಸ್ಥೆಯ ನೋಂದಾಯಿತ ವೆಂಡರ್‌ಗಳು ಕಿಯೋನಿಕ್ಸ್ ಕೇಂದ್ರ ಕಚೇರಿಯಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಕಿಯೋನಿಕ್ಸ್ ನೋಂದಾಯಿತ ವೆಂಡರ್‌ದಾರರ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ವಸಂತ್ ಕೆ. ಬಂಗೇರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ವೆಂಡರ್‌ದಾರರು, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ವಿರುದ್ಧ ಘೋಷಣೆಗಳನ್ನು ಕೂಗಿದರು. ‘ಬಿಲ್ ತಡೆ ಹಿಡಿದಿರುವುದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ’ ಎಂದು ದೂರಿದ ಕೆಲವು ವೆಂಡರ್‌ಗಳು ವಿಷ ಸೇವಿಸಲು ಯತ್ನಿಸಿದರು. ಪೊಲೀಸರು ಅವರನ್ನು ತಡೆದರು.

ಬಿಲ್ ಪಾವತಿಗೆ ಸಂಬಂಧಿಸಿದಂತೆ ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರು ಮತ್ತು ವೆಂಡರ್‌ದಾರರ ಮಧ್ಯೆ ತಿಂಗಳಿನಿಂದಲೂ ಜಟಾಪಟಿ ನಡೆಯುತ್ತಿದೆ. ವೆಂಡರ್‌ದಾರರು ಈ ಹಿಂದೆ ಎರಡು ಬಾರಿ ಪ್ರತಿಭಟನೆ ನಡೆಸಿದ್ದರು. ಶನಿವಾರ ಮೂರನೇ ಬಾರಿ ಪ್ರತಿಭಟನೆ ಆರಂಭಿಸಿದ ಅವರು, ಬಿಲ್ ಪಾವತಿಸುವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು.

ಕಮಿಷನ್ ಬೇಡಿಕೆ ಆರೋಪ: ‘ಕಿಯೋನಿಕ್ಸ್‌ನಿಂದ ವೆಂಡರ್‌ದಾರರಿಗೆ ₹ 150 ಕೋಟಿಯಷ್ಟು ಬಿಲ್ ಪಾವತಿ ಬಾಕಿ ಇದೆ. ಬಾಕಿ ಹಣ ಪಾವತಿ ಆದೇಶ ನೀಡಲು ಶೇಕಡ 12ರಷ್ಟು ಕಮಿಷನ್ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ಬೇಡಿಕೆ ಇಟ್ಟಿದ್ದರು. ಅದನ್ನು ನಾವು ಒಪ್ಪದ ಕಾರಣದಿಂದ ತಪಾಸಣೆ, ಪರಿಶೀಲನೆ ಹೆಸರಿನಲ್ಲಿ ಕಿರುಕುಳ ನೀಡುತ್ತಿದ್ದಾರೆ’ ಎಂದು ವಸಂತ್ ಬಂಗೇರ ಆರೋಪಿಸಿದರು.

‘ಮಾರ್ಚ್ ತಿಂಗಳಿನಿಂದಲೂ ಸರಿಯಾಗಿ ಬಿಲ್ ಪಾವತಿಯಾಗಿಲ್ಲ. ಸಾಲ ಮಾಡಿ ಕೆಲಸ ಮಾಡಿರುವ ವೆಂಡರ್‌ದಾರರು ಆರ್ಥಿಕ ಹೊರೆ ತಡೆಯಲಾಗದೆ ವಿಷ ಕುಡಿಯಬೇಕಾದ ಪರಿಸ್ಥಿತಿ ಎದುರಾಗಿದೆ. ವ್ಯವಸ್ಥಾಪಕ ನಿರ್ದೇಶಕರು ತಮ್ಮ ಸ್ವಾರ್ಥಕ್ಕಾಗಿ ಕಿಯೋನಿಕ್ಸ್ ಅನ್ನೇ ಹಾಳುಮಾಡಲು ಹೊರಟಿದ್ದಾರೆ’ ಎಂದು ದೂರಿದರು.

ಕಾರ್ಯದರ್ಶಿ ಚರ್ಚೆ: ಪ್ರತಿಭಟನೆಯ ನೇತೃತ್ವ ವಹಿಸಿದ್ದ ವೆಂಡರ್‌ದಾರರ ವೆಲ್ಫೇರ್ ಅಸೋಸಿಯೇಷನ್‌ನ ಪ್ರಮುಖರನ್ನು ತಮ್ಮ ಕಚೇರಿಗೆ ಕರೆಸಿಕೊಂಡ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್, ಮಾತುಕತೆ ನಡೆಸಿದರು.

‘ಆದಷ್ಟು ಬೇಗ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವುದಾಗಿ ಕಾರ್ಯದರ್ಶಿ ಭರವಸೆ ನೀಡಿದ್ದಾರೆ. ಬಿಲ್ ಪಾವತಿ ವಿಳಂಬವಾದರೆ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸುತ್ತೇವೆ’ ಎಂದು ಸಂಘಟನೆಯ ಪ್ರಮುಖರು ಹೇಳಿದರು.

ಕಿಯೋನಿಕ್ಸ್ ಕೇಂದ್ರ ಕಚೇರಿಯಲ್ಲಿ ಕಿಯೋನಿಕ್ಸ್ ವೆಂಡರ್‌ದಾರರ ವೆಲ್ಫೇರ್ ಅಸೋಸಿಯೇಷನ್ ಸದಸ್ಯರು ಶನಿವಾರ ಪ್ರತಿಭಟನೆ ನಡೆಸಿದರು

‘ಆಧಾರರಹಿತ ಆರೋಪ’

‘ನಾನು ಯಾರಿಂದಲೂ ಕಮಿಷನ್‌ಗೆ ಬೇಡಿಕೆ ಇಟ್ಟಿಲ್ಲ. ಲೆಕ್ಕಪರಿಶೋಧನಾ ವರದಿಯ ಶಿಫಾರಸಿನಂತೆ ಮೂರನೇ ವ್ಯಕ್ತಿ ತಪಾಸಣೆ ನಡೆಯುತ್ತಿದೆ. ಈ ಕಾರಣದಿಂದ ಬಿಲ್ ಪಾವತಿ ವಿಳಂಬವಾಗಿದೆ. ವೆಂಡರ್‌ದಾರರು ನನ್ನ ವಿರುದ್ಧ ಆಧಾರರಹಿತ ಆರೋಪ ಮಾಡಿದ್ದಾರೆ’ ಎಂದು ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ಹೇಳಿದರು.

ಆರೋಪಗಳ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ಹಿಂದೆ ಕೆಲವು ಅವ್ಯವಹಾರಗಳು ನಡೆದಿವೆ ಎಂಬ ವರದಿ ಸಲ್ಲಿಕೆಯಾಗಿದೆ. ತಪಾಸಣೆ ನಡೆಸದೇ ಬಿಲ್ ಪಾವತಿಸಲು ಸಾಧ್ಯವಿಲ್ಲ’ ಎಂದರು.

ಕ್ಯಾನ್ಸರ್: ಶೇ 1ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕ್ಯಾನ್ಸರ್ ಪ್ರಕರಣಗಳು ಪ್ರತಿ ವರ್ಷ ಶೇ 1ರಷ್ಟು ಹೆಚ್ಚಳವಾಗುತ್ತಿದ್ದು, ಸ್ತನ ಕ್ಯಾನ್ಸರ್ ಪ್ರಕರಣ ಏರುಗತಿ ಪಡೆದಿರುವುದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಡೆಸಿದ ವಿಶ್ಲೇಷಣೆಯಿಂದ ದೃಢಪಟ್ಟಿದೆ.

ಸಂಸ್ಥೆಯ ಕ್ಯಾನ್ಸರ್ ನೋಂದಣಿ ಆಧಾರದಲ್ಲಿ ಕ್ಯಾನ್ಸರ್ ತಜ್ಞರು ಈ ವಿಶ್ಲೇಷಣೆ ನಡೆಸಿದ್ದಾರೆ. ರಾಜ್ಯದಲ್ಲಿ ಸದ್ಯ 2.3 ಲಕ್ಷ ಸಕ್ರಿಯ ಕ್ಯಾನ್ಸರ್ ಪ್ರಕರಣಗಳಿದ್ದು, ವಾರ್ಷಿಕ 87 ಸಾವಿರ ಪ್ರಕರಣಗಳು ಹೊಸದಾಗಿ ದೃಢಪಡುತ್ತಿವೆ. ಇದರ ಆಧಾರದಲ್ಲಿ ಮುಂದಿನ ಎರಡು ವರ್ಷಗಳಲ್ಲಿ ದೃಢಪಡುವ ಪ್ರಕರಣಗಳನ್ನು ಅಂದಾಜಿಸಿದ್ದಾರೆ.

ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್, ಬಾಯಿ, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಸ್ತನ ಮತ್ತು ಗರ್ಭಕಂಠದ ಗರ್ಭಾಶಯದ ಕ್ಯಾನ್ಸರ್ ಮಹಿಳೆಯರಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆ. ಪಾಶ್ಚಾತ್ಯ ಆಹಾರ ಪದ್ಧತಿ, ಬದಲಾದ ಜೀವನ ವಿಧಾನ ಹಾಗೂ ಧೂಮಪಾನದಂತಹ ವ್ಯಸನವೇ ಕ್ಯಾನ್ಸರ್ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ಸಂಸ್ಥೆ ವಿಶ್ಲೇಷಿಸಿದೆ.

ಮಕ್ಕಳಲ್ಲೂ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. 14 ವರ್ಷದೊಳಗಿನವರಲ್ಲಿ ಲ್ಯುಕೇಮಿಯಾ, ಲಿಂಫೋಮಾ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಒಟ್ಟಾರೆ ಪ್ರಕರಣಗಳಲ್ಲಿ ಶೇ 7.9ರಷ್ಟು ಈ ಮಾದರಿಯ ಕ್ಯಾನ್ಸರ್ ಪತ್ತೆಯಾಗುತ್ತಿವೆ. ರಾಜ್ಯದಲ್ಲಿ ಸರಾಸರಿ ಒಂದು ಲಕ್ಷ ಪುರುಷರಲ್ಲಿ 46 ಮಂದಿ, ಮಹಿಳೆಯರಲ್ಲಿ 23 ಮಂದಿ ತಂಬಾಕು ಸಂಬಂಧಿತ ಕ್ಯಾನ್ಸರ್‌ಗೆ ಒಳಪಡುತ್ತಿದ್ದಾರೆ.

ತಡವಾಗಿ ಆಸ್ಪತ್ರೆಗೆ: ‘ಹಿಂದೆ ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗಿ ದೃಢಪಡುತ್ತಿತ್ತು, ಈಗ ಈ ಪ್ರಕರಣಗಳ ಸಂಖ್ಯೆ ತಕ್ಕಮಟ್ಟಿಗೆ ನಿಯಂತ್ರಣಕ್ಕೆ ಬಂದಿದೆ. ಸ್ತನ ಕ್ಯಾನ್ಸರ್ ಪ್ರಕರಣ ಹೆಚ್ಚಿನ ಸಂಖ್ಯೆಯಲ್ಲಿ ಖಚಿತಪಡುತ್ತಿವೆ. ಆದ್ದರಿಂದ ತಪಾಸಣೆಯನ್ನೂ ವಿವಿಧೆಡೆ ನಡೆಸಲಾಗುತ್ತಿದೆ. ಕ್ಯಾನ್ಸರ್ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಆದರೂ ರೋಗಿಗಳು ತಡವಾಗಿ ಆಸ್ಪತ್ರೆಗೆ ಬರುತ್ತಿದ್ದಾರೆ. ಬೇಗ ಆಸ್ಪತ್ರೆಗಳಿಗೆ ತೆರಳಿ, ತಪಾಸಣೆ ಮಾಡಿಸಿಕೊಂಡಲ್ಲಿ ಜೀವಕ್ಕೆ ಅಪಾಯವಾಗುವುದನ್ನು ತಪ್ಪಿಸಲು ಸಾಧ್ಯ’ ಎಂದು ಸಂಸ್ಥೆಯ ಡಾ. ಸುರೇಶ್ ಬಾಬು ತಿಳಿಸಿದರು.

‘ಸ್ತನದಲ್ಲಿ ಕಾಣಿಸಿಕೊಳ್ಳುವ ಗಡ್ಡೆಯಲ್ಲಿ ನೋವು ಕಾಣಿಸಿಕೊಳ್ಳುವುದು ಕಡಿಮೆ. ಇದನ್ನು ಮಹಿಳೆಯರು ಕಡೆಗಣಿಸುತ್ತಾರೆ. ಹೀಗಾಗಿ, ಸ್ತನ ಕ್ಯಾನ್ಸರ್ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ’ ಎಂದು ಹೇಳಿದರು.

ವರ್ಷವಾರು ಕ್ಯಾನ್ಸರ್ ಪ್ರಕರಣ

ವರ್ಷ	ಪ್ರಕರಣಗಳು
2020	2.29 ಲಕ್ಷ
2021	2.33 ಲಕ್ಷ
2022	2.36 ಲಕ್ಷ
2023	2.40 ಲಕ್ಷ
2024	2.43 ಲಕ್ಷ (ಅಂದಾಜು)
2025	2.47ಲಕ್ಷ (ಅಂದಾಜು)

ಕ್ಯಾನ್ಸರ್ ವಿಧ	ಪ್ರಮಾಣ
ಸ್ತನ ಕ್ಯಾನ್ಸರ್	ಶೇ 29.4
ಗರ್ಭಕಂಠದ ಗರ್ಭಾಶಯ ಕ್ಯಾನ್ಸರ್	ಶೇ 10.8
ಶ್ವಾಸಕೋಶ ಕ್ಯಾನ್ಸರ್	ಶೇ 9.4
ಅಂಡಾಶಯ ಕ್ಯಾನ್ಸರ್	ಶೇ 7
ಉದರ–ಮೂತ್ರನಾಳ ಕ್ಯಾನ್ಸರ್	ತಲಾ ಶೇ 6.6
ಇತರೆ ಕ್ಯಾನ್ಸರ್ ಪ್ರಮಾಣ	ಶೇ 6ಕ್ಕಿಂತ ಕಡಿಮೆ

ಕಾಂತರಾಜು ವರದಿ ತಿರಸ್ಕರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂತರಾಜು ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ರಾಜಕೀಯ ಪ್ರೇರಿತವಾಗಿದ್ದು, ಅದನ್ನು ತಿರಸ್ಕರಿಸಬೇಕು’ ಎಂದು ಒತ್ತಾಯಿಸಿ ಒಕ್ಕಲಿಗರ ಕ್ರಿಯಾ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

‘ಕಾಂತರಾಜು ಅವರ ಜಾತಿ ಗಣತಿಯ ವರದಿ ಅಪೂರ್ಣವಾಗಿದೆ. ಇದರಲ್ಲಿ ಒಕ್ಕಲಿಗರ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ತೋರಿಸಲಾಗಿದೆ. ಇದನ್ನು ನಾವು ಒಪ್ಪಲು ಸಾಧ್ಯವಿಲ್ಲ. ಅದಕ್ಕಾಗಿ ನೈಜವಾದ ನಿಖರವಾದ ಜಾತಿ ಗಣತಿ ನಡೆಸಬೇಕು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

‘ಈ ವರದಿಗೆ ಯಾವುದೇ ಮಾನ್ಯತೆ ಇಲ್ಲ. ಕಾರ್ಯದರ್ಶಿಯ ಸಹಿ ಕೂಡ ಆಗಿಲ್ಲ. ಅವರ ಸಹಿ ಇಲ್ಲದೇ ಸರ್ಕಾರ ಅದನ್ನು ಹೇಗೆ ಸ್ವೀಕರಿಸುವುದಕ್ಕೆ ಸಾಧ್ಯ. ಸಹಿ ಇಲ್ಲದ ವರದಿಯನ್ನು ಸ್ವೀಕರಿಸುವುದಾಗಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಇದಕ್ಕೆ ಒಕ್ಕಲಿಗ ಸಮುದಾಯ ವಿರೋಧವಿದೆ’ ಎಂದು ಹೇಳಿದರು.

‘ರಾಜ್ಯದಲ್ಲಿರುವ ಒಕ್ಕಲಿಗ ಸಮುದಾಯದ ಶೇ 40–50 ರಷ್ಟು ಮನೆಗಳಿಗೆ ಹೋಗಿಲ್ಲ. ಇನ್ನಾವ ಯಾವ ಆಧಾರದ ಮೇಲೆ ವರದಿ ಸಿದ್ಧಪಡಿಸಿದ್ದಾರೂ ಗೊತ್ತಿಲ್ಲ? ಆದ್ದರಿಂದ, ಕಾಂತರಾಜು ವರದಿಯನ್ನು ತಿರಸ್ಕರಿಸಿ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಮತ್ತೊಮ್ಮೆ ನೈಜ ಜಾತಿಗಣತಿ ನಡೆಸಬೇಕು’ ಎಂದರು.

ಕಾಂತರಾಜು ನೇತೃತ್ವದಲ್ಲಿ ಸಿದ್ಧಪಡಿಸಿರುವ ಜಾತಿ ಗಣತಿ ವರದಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಒಕ್ಕಲಿಗರ ಕ್ರಿಯಾ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

‘ಇಸ್ರೇಲ್ ಬಿಕ್ಕಟ್ಟಿಗೆ ಹಮಾಸ್ ಕಾರಣ’

ನವದೆಹಲಿ: ಅಂತರರಾಷ್ಟ್ರೀಯ ಮಾನವೀಯ ಕಾಯ್ದೆಗೆ ಬದ್ಧರಾಗಿರಬೇಕು ಎಂದು ಇಸ್ರೇಲ್‌ಗೆ ಒತ್ತಾಯಿಸಿರುವ ಭಾರತ, ಇದೇ ಮೊದಲ ಬಾರಿಗೆ, ಪಶ್ಚಿಮ ಏಷ್ಯಾದಲ್ಲಿ ಈಗ ಮೂಡಿರುವ ಬಿಕ್ಕಟ್ಟಿಗೆ ಹಮಾಸ್ ಕೂಡಾ ಕಾರಣ ಎಂದು ಹೇಳಿದೆ.

ಪಶ್ಚಿಮ ಏಷ್ಯಾದ ಬಿಕ್ಕಟ್ಟು ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ರಿಷಿ ಅವರು ದೂರವಾಣಿಯಲ್ಲಿ ಚರ್ಚಿಸಿದ್ದು, ಅದರ ಹಿಂದೆಯೇ ವಿದೇಶಾಂಗ ಸಚಿವಾಲಯ ಈ ಸಂಬಂಧ ಹೇಳಿಕೆ ನೀಡಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಇಸ್ರೇಲ್ ವಿದೇಶಾಂಗ ಸಚಿವರು ಶನಿವಾರ ಚರ್ಚಿಸಿದರು. ಆಗ, ಭಯೋತ್ಪಾದನೆ ನಿಗ್ರಹದಲ್ಲಿ ಭಾರತದ ಬದ್ಧತೆಯನ್ನು ಪುನರುಚ್ಚರಿಸಿದ್ದು, ಇಸ್ರೇಲ್‌ನಲ್ಲಿ ನಡೆದ ಉಗ್ರರ ದಾಳಿ ದಿಗ್ಭ್ರಮೆ ಮೂಡಿಸಿದೆ ಎಂದರು.

ನಗರದ ಹಲವೆಡೆ ಜೋರು ಮಳೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶನಿವಾರ ಸಂಜೆ ಹಾಗೂ ರಾತ್ರಿ ಜೋರು ಮಳೆಯಾಗಿದೆ.

ವೈಟ್‌ಫೀಲ್ಡ್, ಮಾರುತಹಳ್ಳಿ, ಮಹಾದೇವಪುರ, ವರ್ತೂರು, ಯಲಹಂಕ, ಹೆಮ್ಮಿಗೆಪುರ ಭಾಗದಲ್ಲಿ ಜೋರು ಮಳೆಯಾಗಿದೆ.

ಜಾಲಹಳ್ಳಿ, ಪೀಣ್ಯ, ಸುಂಕದಕಟ್ಟೆ, ಮಹಾಲಕ್ಷ್ಮಿಲೇಔಟ್, ರಾಜಾಜಿನಗರ, ಮಲ್ಲೇಶ್ವರ, ಶೇಷಾದ್ರಿಪುರ, ಮೆಜೆಸ್ಟಿಕ್ ಸುತ್ತಮುತ್ತ, ಗಾಂಧಿನಗರ, ಮೈಸೂರು ಬ್ಯಾಂಕ್ ವೃತ್ತ, ಚಾಮರಾಜ ಪೇಟೆ, ವಿಧಾನಸೌಧದ ಸುತ್ತಮುತ್ತ ಸಾಧಾರಣ ಮಳೆಯಾಗಿದೆ. ನಗರದ ಹೊರವಲಯದ ಕೆಲವು ಪ್ರದೇಶದಲ್ಲೂ ಧಾರಾಕಾರ ಮಳೆಯಾಗಿದೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸವಾರರ ಪರದಾಟ

ಹೆದ್ದಾರಿ ಸರ್ವೀಸ್ ರಸ್ತೆ ಮತ್ತೆ ಜಲಾವೃತ!

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನಲ್ಲಿ ಶನಿವಾರ ಧಾರಾಕಾರವಾಗಿ ಸುರಿದ ಅಕಾಲಿಕ ಮಳೆಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯು ವಿವಿಧೆಡೆ ಜಲಾವೃತಗೊಂಡಿತು. ಮೊಣಕಾಲುತನಕ ನಿಂತ ನೀರಿನಿಂದಾಗಿ ವಾಹನ ಸವಾರರು ಮುಂದಕ್ಕೆ ಹೋಗಲಾಗದೆ ಪರದಾಡಿದರು.

ಸಂಜೆ 5ರ ಸುಮಾರಿಗೆ ಆರಂಭವಾದ ಮಳೆಯು ಬಿಡದೆ ಮುಕ್ಕಾಲು ತಾಸು ಸುರಿಯಿತು. ಇದರಿಂದಾಗಿ, ತಾಲ್ಲೂಕಿನ ಕೆಂಪನಹಳ್ಳಿ ಗೇಟ್, ಬಸವನಪುರ, ಕಲ್ಲುಗೋಪಹಳ್ಳಿ, ದಾಸಪ್ಪನದೊಡ್ಡಿ ಬಳಿ ಹೆದ್ದಾರಿ ಮತ್ತು ಸರ್ವೀಸ್ ರಸ್ತೆ ಬದಿ ನಿರ್ಮಿಸಿರುವ ಚರಂಡಿಗಳು ತುಂಬಿ ಹರಿದಿದ್ದರಿಂದ ಮಳೆ ನೀರು ಕೆಳ ಸೇತುವೆ ಬಳಿ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಗೊಂಡಿತು.

ನೀರಿನ ಪ್ರಮಾಣ ತಗ್ಗುವವರೆಗೆ ದ್ವಿಚಕ್ರ ಸವಾರರು ಸೇರಿದಂತೆ ಇತರ ವಾಹನಗಳ ಚಾಲಕರು ವಿಧಿ ಇಲ್ಲದೆ ಮಳೆಯಲ್ಲೇ ನೆನೆಯುತ್ತಾ ಕಾಯಬೇಕಾಯಿತು. ಸರ್ವೀಸ್ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಸಂಚಾರ ದಟ್ಟಣೆ ಉಂಟಾಯಿತು.

ಆಕ್ರೋಶ: ‘ಮಳೆ ಶುರುವಾದ ಕೆಲವೇ ನಿಮಿಷದಲ್ಲಿ ಕೆಳ ಸೇತುವೆಗಳ ಬಳಿ ನೀರು ಸಂಗ್ರಹಗೊಳ್ಳಲಾರಂಭಿಸಿತು. ನೀರಿನ ಮಟ್ಟ ಏರುತ್ತಲೇ ಇತ್ತು. ವಿಧಿ ಇಲ್ಲದೆ ನಾವೆಲ್ಲರೂ ವಾಹನಗಳನ್ನು ನಿಲ್ಲಿಸಿಕೊಂಡು ಕಾಯಬೇಕಾಯಿತು. ರಸ್ತೆ ಜಲಾವೃಗೊಂಡಿರುವ ಕುರಿತು ಮಾಹಿತಿ ನೀಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕೆಲವರಿಗೆ ಕರೆ ಮಾಡಿದರೂ ಸ್ವೀಕರಿಸಲಿಲ್ಲ’ ಎಂದು ವಾಹನ ಸವಾರ ಕಾಕರಾನಹಳ್ಳಿಯ ಹೇಮಂತ್ ಆಕ್ರೋಶ ವ್ಯಕ್ತಪಡಿಸಿದರು.

‘ಹೆದ್ದಾರಿ ಪಹರೆ ವಾಹನವೂ ಇತ್ತ ಸುಳಿಯಲಿಲ್ಲ. ಮಳೆ ನಿಲ್ಲುವವರೆಗೆ ಕಾದು, ನೀರಿನ ಪ್ರಮಾಣ ಇಳಿದ ಬಳಿಕ ಸಾಲುಗಟ್ಟಿ ನಿಂತಿದ್ದ ವಾಹನಗಳು ಮುಂದಕ್ಕೆ ಸಾಗಿದವು. ಅಲ್ಲಿಯವರೆಗೆ ಪ್ರಾಧಿಕಾರದ ಯಾವ ಸಿಬ್ಬಂದಿಯೂ ಇತ್ತ ಸುಳಿಯಲಿಲ್ಲ. ಕೋಟ್ಯಂತರ ರೂಪಾಯಿ ಖರ್ಚು ಮಾಡಿದ ಹೆದ್ದಾರಿ ಗುಣಮಟ್ಟದ ಬಂಡವಾಳ ಮಳೆ ಬಂದಾಗ ಬಯಲಾಗಿದೆ’ ಎಂದರು.

ಮಳೆ ನಿಂತ ಬಳಿಕ ಸ್ಥಳಕ್ಕೆ ಬಂದ ಹೆದ್ದಾರಿ ಪ್ರಾಧಿಕಾರದ ತುರ್ತು ಸಿಬ್ಬಂದಿ, ಚರಂಡಿಗಳಲ್ಲಿ ಕಟ್ಟಿಕೊಂಡಿದ್ದ ಕಸವನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಿದರು.

ಮಳೆಯಿಂದಾಗಿ ರಾಮನಗರ ತಾಲ್ಲೂಕಿನ ಕಲ್ಲುಗೋಪನಹಳ್ಳಿ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯ ಸರ್ವೀಸ್ ರಸ್ತೆ ಜಲಾವೃತಗೊಂಡಿತ್ತು

‘ಸಂಸದ ಸಿಂಹ ಬಂದು ನೋಡಲಿ’

ಜಲಾವೃತಗೊಂಡ ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಕಾರಿನಲ್ಲಿ ಸಿಲುಕಿದ್ದ ಕಾಂಗ್ರೆಸ್ ಮುಖಂಡ ಗಾಣಕಲ್ ನಟರಾಜ್ ಅವರು, ಸಂಗ್ರಹಗೊಂಡಿದ್ದ ನೀರಿನ ದೃಶ್ಯವನ್ನು ಚಿತ್ರೀಕರಿಸಿ ತಮ್ಮ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ. ‘ಮೈಸೂರು ಸಂಸದ ಪ್ರತಾಪ್ ಸಿಂಹ ಅವರು ತಾನು ನಿರ್ಮಾಣ ಮಾಡಿದ್ದು ಎಂದು ಕೊಚ್ಚಿಕೊಂಡಿದ್ದ ಹೆದ್ದಾರಿಯ ಸ್ಥಿತಿ ಇದು. ಕೇವಲ ಮುಕ್ಕಾಲು ತಾಸು ಸುರಿದ ಅಕಾಲಿಕ ಮಳೆಗೆ ಸರ್ವೀಸ್ ರಸ್ತೆ ಜಲಾವೃತಗೊಂಡಿದೆ. ಸಂಸದರು ತಾವು ನಿರ್ಮಾಣ ಮಾಡಿರುವ ರಸ್ತೆಯನ್ನೊಮ್ಮೆ ಬಂದು ನೋಡಲಿ’ ಎಂದರು.

ಹೆದ್ದಾರಿ, ಸರ್ವೀಸ್ ರಸ್ತೆ ಬದಿಯ ಚರಂಡಿಗಳಲ್ಲಿ ಕಸ ಕಟ್ಟಿಕೊಂಡಿದ್ದರಿಂದ ರಸ್ತೆ ಜಲಾವೃತ ಗೊಂಡಿದೆ. ಸಿಬ್ಬಂದಿಯನ್ನು ಕಳಿಸಿ ನೀರು ಹರಿದು ಹೋಗುವಂತೆ ಮಾಡಲಾಗಿದೆ

ರಾಹುಲ್ ಗುಪ್ತಾ

ಬೆಂ–ಮೈ ಹೆದ್ದಾರಿಯ ಯೋಜನಾಧಿಕಾರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವನ್ಯಜೀವಿಗಳ ಕಳ್ಳಸಾಗಣೆಯ ಈ ಕಾಲಘಟ್ಟದಲ್ಲಿ ಅವುಗಳ ಸಂರಕ್ಷಣೆಯ ಸೊಲ್ಲು ಏಕೆ ಎಳಬೇಕಿದೆ?



‘ಕೊಬ್ಬರಿ ಬೆಂಬಲ ಬೆಲೆ ಹೆಚ್ಚಿಸಿ’ 10
ಇಸ್ರೇಲ್ ದಾಳಿಗೆ ಹಿಜ್ಬುಲ್ಲಾ ಬಂಡುಕೋರರ ಪ್ರತಿದಾಳಿ
ಒಬಿಸಿ ಪ್ರಧಾನಿಗೆ ಕಾಂಗ್ರೆಸ್ ನಿಂದನೆ: ಮೋದಿ 9
ಗಾಜಾ: ಆಹಾರ, ನೀರಿಗೆ ಹಾಹಾಕಾರ 9

ಜನರ ಶೋಕಿಗಾಗಿ ಅಪಾಯ ಎದುರಿಸುತ್ತಿರುವ ಕಾಡುಪ್ರಾಣಿಗಳು

ಕಾನೂನಿದೆ; ರಕ್ಷಣೆ ಇಲ್ಲ!

• ಕೆ.ಎಚ್. ಓಬಳೇಶ್

‘ನಮ್ಮದು ಕೃಷಿ ಕುಟುಂಬ. ಮಗನಿಗೆ ವ್ಯವಸಾಯ ಬಿಟ್ಟರೆ ಬೇರೆ ವೃತ್ತಿ ಗೊತ್ತಿಲ್ಲ. ಅವನಿಗೆ ಚಿನ್ನದ ಪೆಂಡೆಂಟ್ ಮಾಡಿಸಿ ಕೊಟ್ಟಿದ್ದು ನಾನೇ. ಆದರೆ, ಅದರೊಳಗಿರುವ ಹುಲಿ ಉಗುರು ಅಸಲಿಯೋ ಅಥವಾ ನಕಲಿಯೋ ಎಂಬುದು ನನಗೆ ತಿಳಿದಿಲ್ಲ’

‘ರಾಜಕಾರಣಿಗಳ ಮಕ್ಕಳು, ಸಿನಿಮಾ ನಟರು ಕೂಡ ಪೆಂಡೆಂಟ್ ಧರಿಸಿದ್ದಾರಲ್ಲವೇ? ತಪಾಸಣೆಗೂ ಮೊದಲು ಅವರಿಗೆ ಅರಣ್ಯ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ಆದರೆ, ನನ್ನ ಮಗನನ್ನು ಏಕಾಏಕಿ ಬಂಧಿಸಿದ್ದಾರೆ. ಅವರಿಗೊಂದು ನ್ಯಾಯ; ನಮಗೊಂದು ನ್ಯಾಯವೇ?’

‘ಬಿಗ್‌ಬಾಸ್’ ಸ್ಪರ್ಧಿ ವರ್ತೂರು ಸಂತೋಷ್ ಅವರ ತಾಯಿ ಮಂಜುಳಾ ಅವರು, ತಮ್ಮ ಮಗನ ಬಂಧನದ ವೇಳೆ ಮಾಧ್ಯಮಗಳ ಮೂಲಕ ರಾಜ್ಯ ಸರ್ಕಾರ ಹಾಗೂ ಅರಣ್ಯ ಇಲಾಖೆಯ ಮುಂದಿಟ್ಟಿದ್ದ ಪ್ರಶ್ನೆ ಇದು. ಸದ್ಯ ಸಂತೋಷ್‌ಗೆ ಜಾಮೀನು ಸಿಕ್ಕಿದೆ. ಆದರೆ, ಅವರ ತಾಯಿ ಕೇಳಿದ ಪ್ರಶ್ನೆಗೆ ಉತ್ತರ ಮಾತ್ರ ಕನ್ನಡಿಯೊಳಗಿನ ಗಂಟಾಗಿದೆ.

ಒಳನೋಟ

ಹುಲಿ ಉಗುರು ಪೆಂಡೆಂಟ್ ಧರಿಸಿದ್ದ ಆರೋಪದ ಮೇಲೆ ಚಿಕ್ಕಮಗಳೂರು ಜಿಲ್ಲೆಯ ಖಾಂಡ್ಯ ಮಾರ್ಕಂಡೇಶ್ವರ ದೇವಸ್ಥಾನದ ಅರ್ಚಕರಾದ ಕೃಷ್ಣಾನಂದ ಹೊಳ್ಳ ಹಾಗೂ ನಾಗೇಂದ್ರ ಜೋಯಿಸ್ ಅವರನ್ನೂ ಬಂಧಿಸಲಾಯಿತು. ಸದ್ಯ ವಶಪಡಿಸಿಕೊಂಡಿರುವ ಎಲ್ಲಾ ಪೆಂಡೆಂಟ್‌ಗಳನ್ನು ಪರಿಶೀಲನೆಗಾಗಿ ಇಲಾಖೆಯು ಡೆಹ್ರಾಡೂನ್‌ನ ಭಾರತೀಯ ವನ್ಯಜೀವಿ ಸಂಸ್ಥೆಗೆ ಕಳುಹಿಸಿಕೊಟ್ಟಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಸೆಕ್ಷನ್ 40ರ ಅನ್ವಯ ಪರಿಚ್ಛೇದ 1ರ ಅಡಿ ನಿರ್ದಿಷ್ಟಪಡಿಸಿದ ಯಾವುದೇ ಬಂಧಿತ ಪ್ರಾಣಿ, ಪ್ರಾಣಿಗಳ ಅವಯವ, ಟ್ರೋಫಿ ಅಥವಾ ಸಂಸ್ಕರಿಸದಿರುವ ಟ್ರೋಫಿ ಇಟ್ಟುಕೊಳ್ಳುವಂತಿಲ್ಲ.

8ನೇ ಪುಟ ನೋಡಿ

ಬಂಧಿತ ಆರೋಪಿಗಳಿಂದ ವಶಪಡಿಸಿಕೊಂಡಿರುವ ವಿವಿಧ ಪ್ರಾಣಿಗಳ ಚರ್ಮ

‘ಟ್ರೋಫಿ ಘೋಷಣೆಗೆ ಈಗ ಅವಕಾಶವಿಲ್ಲ’

‘2002ರಲ್ಲಿ ವನ್ಯಜೀವಿ (ರಕ್ಷಣಾ) ತಿದ್ದುಪಡಿ ಅಧಿನಿಯಮ ಜಾರಿಗೊಂಡಿತು. ಇದರ ಆಧಾರದ ಮೇಲೆಯೇ 2003ರಲ್ಲಿ ವನ್ಯಜೀವಿ ಟ್ರೋಫಿಗಳ ಘೋಷಣೆಗೆ 180 ದಿನಗಳ ಕಾಲಾವಕಾಶ ನೀಡಲಾಗಿತ್ತು. ಈಗ ಘೋಷಿಸಿಕೊಳ್ಳಲು ಸಾಧ್ಯವಿಲ್ಲ. ಟ್ರೋಫಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲು ಸರ್ಕಾರದ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ’ ಎಂದು ರಾಜ್ಯ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ತಿಳಿಸಿದರು.

‘ಕಾಯ್ದೆಯಡಿ ಮತ್ತೆ ಟ್ರೋಫಿಗಳ ಘೋಷಣೆಗೆ ಅವಕಾಶ ಕಲ್ಪಿಸಲು ಸಾಧ್ಯ ಇದೆಯೇ ಎಂಬ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲು ಸರ್ಕಾರದ ಮಟ್ಟದಲ್ಲಿ ನಿರ್ಧರಿಸಲಾಗಿದೆ’ ಎಂಬುದು ಅವರ ವಿವರಣೆ.

ಸದ್ಯಕ್ಕಿಲ್ಲ ನೌಕರರ ವೇತನ ಪರಿಷ್ಕರಣೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 7ನೇ ವೇತನ ಆಯೋಗದ ಅವಧಿಯನ್ನು ಮತ್ತೆ ವಿಸ್ತರಿಸಲು ಆರ್ಥಿಕ ಇಲಾಖೆಯು ಮುಖ್ಯಮಂತ್ರಿಗೆ ಪ್ರಸ್ತಾವ ಸಲ್ಲಿಸಿದ್ದು, ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ.

ನೌಕರರ ವೇತನ ಶ್ರೇಣಿಗಳ ಪರಿಷ್ಕರಣೆಗಾಗಿ ಹಿಂದಿನ ಬಿಜೆಪಿ ಸರ್ಕಾರವು ನಿವೃತ್ತ ಮುಖ್ಯಕಾರ್ಯದರ್ಶಿ ಸುಧಾಕರ್ ರಾವ್ ಅವರ ಅಧ್ಯಕ್ಷತೆಯಲ್ಲಿ 2022ರ ನ.19ರಂದು ಆಯೋಗ ರಚಿಸಿತ್ತು. ವರದಿ ಸಲ್ಲಿಸಲು 6 ತಿಂಗಳ ಗಡುವು ನೀಡಲಾಗಿತ್ತು. ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಿತ್ತು. ಇದೇ 18ಕ್ಕೆ ಅವಧಿ ಮುಗಿಯಲಿದೆ.

ಗ್ಯಾರಂಟಿ ಯೋಜನೆಗಳಿಗೆ ಹಣಕಾಸು ಹೊಂದಾಣಿಕೆ ಮಾಡುವ ಸವಾಲು ಸರ್ಕಾರದ ಮುಂದಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ತಕ್ಷಣಕ್ಕೆ ನೌಕರರ ವೇತನ ಪರಿಷ್ಕರಣೆ ಮಾಡಿದರೆ ಆರ್ಥಿಕ ಹೊರೆಯಾಗಲಿದೆ.

4 ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸೋತವರ ಸೆಳೆಯಲು ‘ಆಪರೇಷನ್ ಹಸ್ತ’

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ಗೆಲ್ಲಿಸಿಕೊಡಬೇಕೆಂದು ಪಣ ತೊಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭೆ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಸೋಲು ಕಂಡಿರುವ ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳನ್ನು ಕಾಂಗ್ರೆಸ್‌ಗೆ ಕರೆ ತರುವಂತೆ ಸಚಿವರಿಗೆ ಗುರಿ ನೀಡಿದ್ದಾರೆ.

6

ದೆಹಲಿ ವಾಯು ಮಾಲಿನ್ಯ ಸ್ವಲ್ಪ ಇಳಿಕೆ 7

ನೇಪಾಳ ಭೂಕಂಪ 157 ಜನ ಸಾವು

ಕಠ್ಮಂಡು (ಪಿಟಿಐ/ರಾಯಿಟರ್ಸ್): ನೇಪಾಳದ ಪಶ್ಚಿಮ ಭಾಗದಲ್ಲಿ ಶುಕ್ರವಾರ ರಾತ್ರಿ ಪ್ರಬಲ ಭೂಕಂಪ ಸಂಭವಿಸಿದ ಪರಿಣಾಮ 157 ಜನರು ಮೃತಪಟ್ಟಿದ್ದು, 150ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ರಿಕ್ಟರ್ ಮಾಪಕದಲ್ಲಿ 6.4 ರಷ್ಟು ತೀವ್ರತೆ ದಾಖಲಾಗಿದೆ. ಭೂಕಂಪ ಉಂಟಾದ ಪ್ರದೇಶದಲ್ಲಿ ನೂರಾರು ಮನೆ, ಕಟ್ಟಡಗಳು ನೆಲಸಮವಾಗಿವೆ. ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಜಾಜರ್‌ಕೋಟ್ ಮತ್ತು ರುಕುಂ ಜಿಲ್ಲೆಗಳು ಹೆಚ್ಚು ಹಾನಿಗೆ ಒಳಗಾಗಿವೆ.

ಕಟ್ಟಡಗಳ ಅವಶೇಷಗಳಡಿ ಸಿಲುಕಿರುವ ಜನರ ರಕ್ಷಣೆಗೆ ಸೇನೆ ಮತ್ತು ಪೊಲೀಸ್ ಸಿಬ್ಬಂದಿ ಅವಿರತ ಶ್ರಮ ಪಡುತ್ತಿವೆ. ಹೆಲಿಕಾಪ್ಟರ್ ಮೂಲಕ ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಲಾಗುತ್ತಿದೆ. ಭೂಕಂಪದ ಪರಿಣಾಮವಾಗಿ ಕಠ್ಮಂಡು, ಸುತ್ತಮುತ್ತಲಿನ ಜಿಲ್ಲೆಗಳು ಹಾಗೂ ನವದೆಹಲಿಯಲ್ಲಿಯೂ ಭೂಮಿ ಕಂಪಿಸಿದ ಅನುಭವ ಆಗಿದೆ.

ಇನ್ನಷ್ಟು ಸುದ್ದಿಗಳು 7

‘ಡಿಕೆಶಿ ಹೆಸರಿನಲ್ಲಿ ಪ್ರಹ್ಲಾದ್ ವಸೂಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಸರಿನಲ್ಲಿ ಬೃಹತ್ ಬೆಂಗಳೂರು ಮಹಾ ನಗರಪಾಲಿಕೆಯ (ಬಿಬಿಎಂಪಿ) ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ಗುತ್ತಿಗೆದಾರರಿಂದ ಹಣ ವಸೂಲಿ ಮಾಡುತ್ತಿದ್ದಾರೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆರೋಪಿಸಿದರು.

ಡಿ.ಕೆಂಪಣ್ಣ

4 ನೇ ಪುಟ ನೋಡಿ

'ಸುಸ್ಥಿರ ಅಭಿವೃದ್ಧಿ ಶೃಂಗಸಭೆ'ಯಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಸಲಹೆ

'ಜೀವರಾಶಿ ಉಳಿಯಲಿ, ಜೀವನೋಪಾಯವೂ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವಿಂದು ಕೈಗೊಳ್ಳುವ ನಿರ್ಧಾರಗಳು, ರೂಪಿಸುವ ಯೋಜನೆಗಳು ರಾಷ್ಟ್ರದ ಭವಿಷ್ಯಕ್ಕೆ ಮಾರಕ ಆಗಬಾರದು. ಹಾಗೆಯೇ ಭವಿಷ್ಯದ ಕ್ಷೇಮದೊಂದಿಗೆ ರಾಜೀ ಮಾಡಿಕೊಳ್ಳದಂತೆ ಇರಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದರು.

ಸುಸ್ಥಿರ ಅಭಿವೃದ್ಧಿ ಕೇಂದ್ರ (ಸಿಎಸ್‌ಡಿ) ಶನಿವಾರ ಆಯೋಜಿಸಿದ್ದ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯಲ್ಲಿ 'ಬೆಂಗಳೂರು ಘೋಷಣೆ' ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪರಿಸರ ಸಂರಕ್ಷಣೆ ಮಾಡುತ್ತಲೇ ಅಭಿವೃದ್ಧಿ ಸಾಧಿಸುವುದೇ ಸುಸ್ಥಿರ ಅಭಿವೃದ್ಧಿ. ಜೀವರಾಶಿಯೂ ಉಳಿಯಬೇಕು, ಜೀವನೋಪಾಯವೂ ಇರಬೇಕು. ಇದರ ಜೊತೆಗೆ ಪ್ರಗತಿ ಸಾಧಿಸಬೇಕು ಎಂಬುದು ರಾಜ್ಯ ಸರ್ಕಾರದ ನಿಲುವಾಗಿದೆ' ಎಂದು ಪ್ರತಿಪಾದಿಸಿದರು.

'ಇಂಗಾಲದ ಹೊರಸೂಸುವಿಕೆ ತಗ್ಗಿಸಲು ಶುದ್ಧ ಇಂಧನಕ್ಕೆ ಹೆಚ್ಚು ಒತ್ತು ನೀಡಬೇಕು. ಸುಸ್ಥಿರ ಅಭಿವೃದ್ಧಿಗೆ ನಾವೀನ್ಯಪೂರ್ಣ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಬೇಕು. ಕೃಷಿ, ಇಂಧನ ಮತ್ತು ಆರೋಗ್ಯ ಆರೈಕೆ ಕ್ಷೇತ್ರದಲ್ಲೂ ಉತ್ತಮ ರೂಢಿಗಳನ್ನು ಅಳವಡಿಸಿಕೊಳ್ಳಬೇಕು. ಶಿಕ್ಷಣದ ಹಂತದಲ್ಲಿಯೇ ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆ ಮೂಡಿಸಬೇಕು' ಎಂದು ಹೇಳಿದರು.

'ಅರಣ್ಯ ಉಳಿದಾಗ ಮಾತ್ರ ಮನುಕುಲ ಉಳಿಯಲು ಸಾಧ್ಯ. ಬೆಂಗಳೂರು ಸುಸ್ಥಿರ ಅಭಿವೃದ್ಧಿ ಅನ್ವೇಷಣೆಯಲ್ಲಿಯೂ ಮುಂಚೂಣಿಯಲ್ಲಿದೆ. ಜಗತ್ತು ಇಂದು ಹಲವು ಸವಾಲುಗಳಿವೆ. ಅದಕ್ಕೆ ಪರಿಹಾರ ಕಂಡುಕೊಳ್ಳುವ ಕೆಲಸ ಆಗಬೇಕಿದೆ' ಎಂದು ಹೇಳಿದರು.

ಶನಿವಾರ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯಲ್ಲಿ ಸುಸ್ಥಿರ ಭಾರತ@75 ಮಾಹಿತಿ ಪುಸ್ತಕವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಬಿಡುಗಡೆ ಮಾಡಿದರು. ಆರ್‌.ಶ್ರೀನಿವಾಸ್, ಜಾವೇದ್ ಅಖ್ತರ್, ಎಂ.ಆರ್‌.ಶ್ರೀನಿವಾಸ ಮೂರ್ತಿ, ಎ.ರವೀಂದ್ರ ಇದ್ದರು

ಗೋಕುಲ ಎಜುಕೇಷನ್ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಾಹಕ (ಮೆಡಿಕಲ್) ಎಂ.ಆರ್‌.ಶ್ರೀನಿವಾಸ ಮೂರ್ತಿ ಮಾತನಾಡಿ, 'ಕೃಷಿ ಹಾಗೂ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಸುಸ್ಥಿರ ಅಭಿವೃದ್ಧಿ ಕಾಣಬೇಕಿದೆ. ಭವಿಷ್ಯದಲ್ಲಿ ನೀರಿನ ಅಭಾವ ಸೃಷ್ಟಿಯಾಗುವ ಸಾಧ್ಯತೆಯಿದೆ. ಕಡಿಮೆ ನೀರಿನಲ್ಲಿ ಹೆಚ್ಚು ಬೆಳೆ ಬೆಳೆಯುವ ಆವಿಷ್ಕಾರಗಳು ನಡೆಯಬೇಕಿದೆ' ಎಂದು ಹೇಳಿದರು.

> **ನಗರೀಕರಣ, ಸಂಚಾರ ದಟ್ಟಣೆ, ಮಾಲಿನ್ಯದಿಂದ ಇಂದು ಶುದ್ಧ ಗಾಳಿ, ಶುದ್ಧ ನೀರಿನ ಲಭ್ಯತೆಯ ಸಮಸ್ಯೆಗಳು ಎದುರಾಗಿವೆ.**
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

'ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡರೆ ನೀರು ಪೋಲಾಗುವುದು ಕಡಿಮೆಯಾಗಲಿದೆ. ಕಲುಷಿತ ನೀರನ್ನು ಶುದ್ಧೀಕರಿಸಿ ಮರು ಬಳಕೆ ಮಾಡಿಕೊಳ್ಳುವ ಕೆಲಸವು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯಬೇಕಿದೆ. ವ್ಯರ್ಥವಾಗಿ ಸಮುದ್ರಕ್ಕೆ ಸೇರುವ ಮಳೆ ನೀರನ್ನು ಬಳಕೆ ಮಾಡಿಕೊಳ್ಳುವ ವ್ಯವಸ್ಥೆ ಆಗಬೇಕಿದೆ. ಪವನಶಕ್ತಿ, ಸೌರಶಕ್ತಿ ಹೆಚ್ಚು ಬಳಸಿಕೊಳ್ಳಬೇಕು' ಎಂದು ಹೇಳಿದರು.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಸಿಎಸ್‌ಡಿ ಕಾರ್ಯ ನಿರ್ವಾಹಕ ನಿರ್ದೇಶಕ ಆರ್‌.ಶ್ರೀನಿವಾಸ್ ಇದ್ದರು.

'ಅಸ್ಥಿರ ಅಭಿವೃದ್ಧಿಯತ್ತ ಸಚಿವರ ಹೆಜ್ಜೆ'

'ಬೆಂಗಳೂರು ನಗರದಲ್ಲಿ ಅಭಿವೃದ್ಧಿ ಎಂಬುದು ಸುಸ್ಥಿರ ಹಾದಿಯಲ್ಲಿ ಸಾಗಬೇಕಿದೆ. ಆದರೆ, ಮಂತ್ರಿಯೊಬ್ಬರು ಅಸ್ಥಿರವಾದ ಅಭಿವೃದ್ಧಿಯತ್ತ ಹೆಜ್ಜೆ ಹಾಕುತ್ತಿದ್ದಾರೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಆ ಸಚಿವರಿಗೆ ಸಲಹೆ ನೀಡಬೇಕು' ಎಂದು ಸುಸ್ಥಿರ ಅಭಿವೃದ್ಧಿ ಕೇಂದ್ರದ (ಸಿಎಸ್‌ಡಿ) ಮುಖ್ಯಸ್ಥ ಹಾಗೂ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಎ.ರವೀಂದ್ರ ಅವರು ಯಾರ ಹೆಸರು ಪ್ರಸ್ತಾಪಿಸದೆ ಹೇಳಿದರು.

'ದೆಹಲಿ ಹಾಗೂ ಮುಂಬೈನಲ್ಲಿ ಗಾಳಿ ಉಸಿರಾಟಕ್ಕೆ ಯೋಗ್ಯವಾಗಿಲ್ಲ. ದೇಶದ 20ಕ್ಕೂ ಹೆಚ್ಚು ನಗರಗಳು ಹೆಚ್ಚು ಮಾಲಿನ್ಯಗೊಂಡಿವೆ. ಬೆಂಗಳೂರಿನ ಜನರು ಸಹ ಎಚ್ಚರಿಕೆ ವಹಿಸಬೇಕಾದ ಸಂದರ್ಭ ಎದುರಾಗಿದೆ' ಎಂದು ಸಲಹೆ ನೀಡಿದರು.

'ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದ್ದೇವೆ ಎಂದು ಹೇಳುತ್ತಿದ್ದೇವೆ. ಅದೇ ವೇಳೆಯಲ್ಲಿ ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಮೃತಪಡುವ ಘಟನೆಗಳೂ ನಡೆಯುತ್ತಿವೆ. ಆದರೆ, ಎಲ್ಲಿ ಲೋಪವಾಗಿದೆ ಎಂಬುದನ್ನು ಪತ್ತೆ ಮಾಡಬೇಕಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಹುಣಸೆ ವನ ಅಭಿವೃದ್ಧಿಗೆ ಸೂಚನೆ

ಬೆಂಗಳೂರು: ದೇವನಹಳ್ಳಿ ಬಳಿ ಅರಣ್ಯ ಪ್ರದೇಶದಲ್ಲಿ 400 ವರ್ಷಗಳಷ್ಟು ಪುರಾತನವಾದ ಹುಣಸೆ ಮರಗಳಿರುವ ಪ್ರದೇಶವನ್ನು ಹುಣಸೆ ವನವನ್ನಾಗಿ ಅಭಿವೃದ್ಧಿಪಡಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

ಶನಿವಾರ ತಮ್ಮ ಕಚೇರಿಯಲ್ಲಿ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, 'ಪುರಾತನವಾದ ಹುಣಸೆ ತೋಪು ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದಲ್ಲಿದೆ. ಅಲ್ಲಿರುವ ಮರಗಳನ್ನು ರಕ್ಷಿಸಬೇಕು. ಅದನ್ನು ಒಂದು ಉತ್ತಮ ಪ್ರವಾಸಿ ತಾಣವಾಗಿ ರೂಪಿಸಬೇಕು' ಎಂದರು.

ಅವಧಿ ವಿಸ್ತರಣೆ: ಕರ್ನಾಟಕದಲ್ಲಿ ಗಿಡಮೂಲಿಕೆ ಮತ್ತು ವಿವಿಧ ಜೀವ ವೈವಿಧ್ಯ ಸಂಪನ್ಮೂಲವನ್ನು ಬಳಕೆ ಮಾಡಿಕೊಂಡು ಉತ್ಪನ್ನ ತಯಾರಿಸುವ ಕಂಪನಿಗಳು ಮಂಡಳಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಇನ್ನೂ ಹಲವು ಕಂಪನಿಗಳು ನೋಂದಣಿ ಮಾಡಿಕೊಂಡಿಲ್ಲ. ಈ ಕಾರಣದಿಂದ ನೋಂದಣಿಗೆ ನೀಡಿದ್ದ ಕಾಲಾವಕಾಶವನ್ನು ಎರಡು ತಿಂಗಳವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ. ಈ ಕುರಿತು ಉದ್ಯಮಗಳಿಗೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಿದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿ ವತಿಯಿಂದ ನೀಡಲಾಗುವ ವಾರ್ಷಿಕ ಪ್ರಶಸ್ತಿಗಳಿಗೆ ಹೊಸದಾಗಿ ಅರ್ಜಿ ಆಹ್ವಾನಿಸಬೇಕು. ಪ್ರಶಸ್ತಿಯ ಮೊತ್ತವನ್ನು ₹ 25,000ದಿಂದ ₹ 50,000ಕ್ಕೆ ಹೆಚ್ಚಿಸಬೇಕು ಎಂದು ನಿರ್ದೇಶನ ನೀಡಿದರು.

ಮನೆಗಳ್ಳರ ಬಂಧನ: ₹ 17 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಕನಕಪುರ: ನಾಲ್ಕು ಮನೆಗಳಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಮನೆ ಕಳ್ಳರನ್ನು ಬಂಧಿಸಿರುವ ಕನಕಪುರ ಪೊಲೀಸರು ಅವರಿಂದ ₹17 ಲಕ್ಷ ಮೌಲ್ಯದ 290 ಗ್ರಾಂ ತೂಕದ ಚಿನ್ನಾಭರಣ, ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದಿದ್ದಾರೆ.

ಶಿವಮೊಗ್ಗದ ಮೊಹಮ್ಮದ್ ಅಲಿ (30), ಬೆಂಗಳೂರಿನ ನೀಲಸಂದ್ರದ ಮುನಿಸ್ವಾಮಿ ಬಡಾವಣೆಯ ಸುಜಾದ್ ಅಲಿ (44) ಬಂಧಿತರು.

ನಗರದ ಬಸವೇಶ್ವರನಗರ ಮತ್ತು ಮಹಾರಾಜರ ಕಟ್ಟೆ ರಸ್ತೆಯಲ್ಲಿ ಮೇ ತಿಂಗಳಲ್ಲಿ ಯಾರು ಇಲ್ಲದಿರುವ ಸಮಯ ನೋಡಿ ನಾಲ್ಕು ಮನೆಗಳ ಬಾಗಿಲು ಒಡೆದು ಮನೆಯಲ್ಲಿದ್ದ ಚಿನ್ನಭರಣ ದೋಚಿದ್ದರು.

ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಪ್ರಕರಣ ಭೇದಿಸಲು ವಿಶೇಷ ತಂಡ ರಚಿಸಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂದಿಸಿದ್ದರು.

ತಾವೇ ನಾಲ್ಕು ಮನೆಗಳ ಕಳ್ಳತನ ಮಾಡಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದು, ಮಹಜರು ನಡೆಸಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಟೌನ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಮಿಥುನ್ ಶಿಲ್ಪಿ, ಪಿಎಸ್‌ಐಗಳಾದ ಉಷಾ ನಂದಿನಿ, ರತ್ನಮ್ಮ, ಎಚ್‌ಸಿಗಳಾದ ಶಿವಶಂಕರ್, ರವಿ, ಅನಂತ್ ಕುಮಾರ್, ಮನು, ಪಿಸಿಗಳಾದ ರಮೇಶ್, ಶಿವರಾಜು, ಮೋನಿಷಾ, ಶಂಕರ ಲಿಂಗಯ್ಯ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ನಗರದಲ್ಲಿ ಅಜಿತ್ ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗನಿರ್ದೇಶಕ ಎಂ.ಎಸ್‌. ಸತ್ಯು ಅವರ ಜೀವಮಾನ ಸಾಧನೆಗೆ 'ರಾಷ್ಟ್ರೀಯ ಅಜಿತಶ್ರೀ' ಪುರಸ್ಕಾರ ನೀಡಿ ಗೌರವಿಸಲಾಯಿತು. ಸಾಹಿತಿ ಚಂದ್ರಶೇಖರ ಕಂಬಾರ, ವೇದಿಕೆಯ ಅಧ್ಯಕ್ಷ ಬಿ.ಎಲ್‌. ಶಂಕರ್ ಇದ್ದಾರೆ –ಪ್ರಜಾವಾಣಿ ಚಿತ್ರ

ತೆಂಗು ಬೆಳೆಗಾರರ ರಕ್ಷಣೆಗೆ ಹೋರಾಟ

ತಿಪಟೂರು: ತೆಂಗು ಕೃಷಿ, ತೆಂಗು ಉದ್ಯಮ ಕ್ಷೇತ್ರ ಎದುರಿಸುತ್ತಿರುವ ಮಾರುಕಟ್ಟೆ ಒತ್ತಡ ಹಾಗೂ ಹವಾಮಾನ ವೈಪರೀತ್ಯದಂತಹ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ರೈತ ಮುಖಂಡರು, ತಜ್ಞರು, ಉದ್ಯಮಿಗಳು ಭಾಗವಹಿಸಿದ್ದ ರಾಷ್ಟ್ರ ಮಟ್ಟದ ದುಂಡು ಮೇಜಿನ ಸಭೆಯಲ್ಲಿ ಚರ್ಚಿಸಲಾಯಿತು.

330 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ವೆಂಕಟೇಶ್ವರ ಎಂಜಿನಿಯರಿಂಗ್ ತಾಂತ್ರಿಕ ವಿದ್ಯಾಲಯದ 19ನೇ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ವಿದ್ಯಾನಗರ ಕ್ರಾಸ್ ಬಳಿಯಿರುವ ವೆಂಕಟೇಶ್ವರ ಎಂಜಿನಿಯರಿಂಗ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ 19ನೇ ಘಟಿಕೋತ್ಸವದಲ್ಲಿ 330 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪ ಕುಲಪತಿ ವಿದ್ಯಾಶಂಕರ್ ಮಾತನಾಡಿ, 'ಪದವಿ ಪಡೆದಿರುವ ವಿದ್ಯಾರ್ಥಿಗಳು ಕೇವಲ ತರಗತಿಗಳಲ್ಲಿ ಪಾಠ ಕಲಿತರೆ ಸಾಲದು. ಜಾಗತಿಕ ತಂತ್ರಜ್ಞಾನದಲ್ಲಿ ಸಾಕಷ್ಟು ಬದಲಾವಣೆ ಆಗುತ್ತಿರುವ ಕಾರಣ, ಅದಕ್ಕೆ ಅನುಗುಣವಾಗಿ ನಿಮ್ಮ ಜ್ಞಾನ ಮತ್ತು ಕೌಶಲ ಹೆಚ್ಚಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ವಿದ್ಯಾರ್ಥಿಗಳು ತಮ್ಮಲ್ಲಿರುವ ಈಗಿನ ಕೌಶಲದ ಜೊತೆಗೆ ಉನ್ನತ ಕೌಶಲ ಹೆಚ್ಚಿಸಿಕೊಳ್ಳಬೇಕು. ಹಲವಾರು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆನ್‌ಲೈನ್ ಮೂಲಕ ಪರಿಚಯಿಸಿದ್ದು, ಮುಂದಿನಯುಗ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಯುಗ ಆಗಿರುವುದರಿಂದ ನೀವು ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್ ತಂತ್ರಜ್ಞಾನದಲ್ಲಿ ಸಂಶೋಧನೆಯನ್ನು ಮುಂದುವರಿಸುವ ಮೂಲಕ ಅದಕ್ಕೆ ತಕ್ಕಂತೆ ಜ್ಞಾನವನ್ನು ಮೇಲ್ದರ್ಜೆಗೇರಿಸಿಕೊಳ್ಳಲು ಶ್ರಮಿಸಬೇಕು' ಎಂದು ಅವರು ತಿಳಿಸಿದರು.

ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಅಂಕಗಳಿಸಿದ ವಿದ್ಯಾರ್ಥಿನಿ ನಿಶಾ ಆರ್‌. ಅವರಿಗೆ ಡಾ.ವಿದ್ಯಾಶಂಕರ್ ಅವರು ಪ್ರಮಾಣಪತ್ರ ವಿತರಿಸಿದರು

ಮುಖ್ಯಾಂಶಗಳು

- ಜಾಗತಿಕ ಬದಲಾವಣೆಗೆ ಅನುಗುಣವಾಗಿ ಜ್ಞಾನ, ಕೌಶಲ ವೃದ್ಧಿಗೆ ಸಲಹೆ
- ಕೃತಕ ಬುದ್ಧಿಮತ್ತೆ, ಮೆಷಿನ್ ಲರ್ನಿಂಗ್ ತಂತ್ರಜ್ಞಾನದ ಸಂಶೋಧನೆಗೆ ಸಲಹೆ

ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕ ಡಾ.ಶಶಿಧರ್ ಮುನಿಯಪ್ಪ ಮಾತನಾಡಿದರು.

ವಿಟಿಯುನಲ್ಲಿ 10ನೇ ರ್‍ಯಾಂಕ್ ಪಡೆದಿರುವ ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಗಗನಾ ಅವರನ್ನು ಸನ್ಮಾನಿಸಿದರು. ವಿಟಿಯು ಕಾರ್ಯಕಾರಿ ಮಂಡಳಿ ಸದಸ್ಯ ದಿಲೀಪ್ ಕೃಷ್ಣ, ಪ್ರಾಂಶುಪಾಲ ಡಾ.ನಾಗೇಶ್ವರ ಗುಪ್ತ ಉಪಸ್ಥಿತರಿದ್ದರು.

‘ಬಹುಮುಖಿ’ ಕೃತಿ ಬಿಡುಗಡೆ ● ಅಗ್ರಹಾರ ಕೃಷ್ಣಮೂರ್ತಿ ಅಭಿಮತ

‘ವಿಮರ್ಶಾಲೋಕದ ಒಂಟಿಸಲಗ ಕೆಜಿಎನ್’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಉಪನ್ಯಾಸಕ ಡಿ.ಆರ್. ದೇವರಾಜ್, ಪುಸ್ತಕಪ್ರೇಮಿ ಶಂಕರ್ ಬುಚಾಲಿ, ಕೃತಿಕಾರ ಕೆ.ಜಿ.ನಾಗರಾಜಪ್ಪ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ಪ್ರಕಾಶಕ ರವೀಂದ್ರನಾಥ್ ಸಿರಿವರ ಇದ್ದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಅನ್ನಿಸಿದ್ದನ್ನು ನಿಷ್ಠುರವಾಗಿ ಹೇಳುವ ವಿಧಾನ ಅಳವಡಿಸಿಕೊಂಡಿರುವ ಕೆ.ಜಿ. ನಾಗರಾಜಪ್ಪ ಅವರು ವಿಮರ್ಶಾ ಲೋಕದ ಒಂಟಿ ಸಲಗ’ ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಶನಿವಾರ ಅಭಿಪ್ರಾಯಪಟ್ಟರು.

ಕೆ.ಜಿ. ನಾಗರಾಜಪ್ಪ ಅವರ ‘ಬಹುಮುಖಿ’ ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಸಾಹಿತ್ಯದ ವಿಮರ್ಶೆ ಅಕಾಡೆಮಿಕ್ ವಲಯದ ತುತ್ತೂರಿ ಎಂಬುದು ಕೆಜಿಎನ್ ಅವರ ಅಭಿಪ್ರಾಯ. ಅವರ ಬರಹ, ಮಾತು ಎರಡೂ ಅಕಾಡೆಮಿಕ್‌ಗಿಂತ ಭಿನ್ನವಾದುದು’ ಎಂದು ತಿಳಿಸಿದರು.

‘ಮೈಸೂರಿನಲ್ಲಿ ಕುವೆಂಪು ಅವರ ಅಭಿಮಾನಿ ಗುಂಪು, ಅದಕ್ಕೆ ವಿರುದ್ಧದ ಅಡಿಗ ಪರ ಗುಂಪು ಹೀಗೆ ಹಲವು ಗುಂಪು ರಾಜಕೀಯವನ್ನು ನಾಗರಾಜಪ್ಪ ದಾಖಲಿಸಿದ್ದಾರೆ. ಅದೇ ರೀತಿ ಬೈರಪ್ಪ ಅವರ ಅಷ್ಟಾಗಿ ಪ್ರಸಿದ್ಧಿಯಾಗದ ‘ಸಾರ್ಥ’ ಕಾದಂಬರಿಯಲ್ಲಿರುವ ವೈದಿಕ ಮತ್ತು ಅವೈದಿಕದ ದಾರಿಗಳನ್ನು ಶೋಧಿಸಿದ್ದಾರೆ. ದಲಿತ ಚಳವಳಿಯನ್ನು ವಿಮರ್ಶಿಸಿದ್ದಾರೆ’ ಎಂದು ವಿವರಿಸಿದರು.

ಉಪನ್ಯಾಸಕ ಡಿ.ಆರ್. ದೇವರಾಜ್ ಅವರು ಕೃತಿ ಪರಿಚಯ ಮಾಡಿ, ‘ಭಾರತೀಯತೆ ವೇದಮೂಲದಲ್ಲಿದೆ ಎಂಬುದನ್ನು ಕೆಜಿಎನ್ ಒಡೆಯುತ್ತಾರೆ. ವೇದಪೂರ್ವದ, ಬುದ್ಧಪೂರ್ವದ ಶಾಕ್ತ ಮತ್ತು ತಂತ್ರದಲ್ಲಿ ಭಾರತೀಯತೆ ಇದೆ. ಅದು ಮಾತೃಮೂಲ, ನೆಲಮೂಲದ ಸಂಸ್ಕೃತಿ. ಹೀಗೆ ಸಮಾಜವನ್ನು, ಸಂಸ್ಕೃತಿಯನ್ನು ಭಿನ್ನವಾಗಿ ನೋಡುವ ಕಣ್ಣೋಟವನ್ನು ನೀಡುವ ಬರಹಗಳು ಇಲ್ಲಿವೆ’ ಎಂದು ಬಣ್ಣಿಸಿದರು.

ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅಧ್ಯಕ್ಷತೆ ವಹಿಸಿದ್ದರು. ಕೃತಿಕಾರ ಕೆ.ಜಿ. ನಾಗರಾಜಪ್ಪ, ಪ್ರಕಾಶಕ ರವೀಂದ್ರನಾಥ ಸಿರಿವರ, ಸಾಹಿತ್ಯ ಪ್ರೇಮಿಗಳಾದ ಶಂಕರ್ ಬುಚಾಲಿ, ಬಸವರಾಜ್ ಇದ್ದರು.

ಕೃತಿ ಪರಿಚಯ

ಕೃತಿ	: ಬಹುಮುಖಿ
ಲೇಖಕ	: ಕೆ.ಜಿ. ನಾಗರಾಜಪ್ಪ
ಪ್ರಕಾಶನ	: ಸಿರಿವರ ಪ್ರಕಾಶನ
ಪುಟ	: 196
ದರ	: ₹240

ಒಳ ಮೀಸಲಾತಿ ಸಭೆ ನಾಳೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿಗೆ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಲು ಮಾದಿಗ ಸಮುದಾಯ ಮುಂದಾಗಿದೆ. ಈ ಕುರಿತು ಚರ್ಚೆಗೆ ಕರ್ನಾಟಕ ಆದಿಜಾಂಭವ ಸಾಂಸ್ಕೃತಿಕ ಸಮಿತಿ ನೇತೃತ್ವದಲ್ಲಿ ಸಮುದಾಯದ ಮುಖಂಡರ ಸಭೆಯನ್ನು ಮಹಾರಾಣಿ ಕಾಲೇಜು ಬಳಿಯ ಸ್ಕೌಟ್ ಆ್ಯಂಡ್ ಗೈಡ್ಸ್‌ನ ಸಭಾಂಗಣದಲ್ಲಿ ಇದೇ 6ರಂದು ಮಧ್ಯಾಹ್ನ 3 ಗಂಟೆಗೆ ಕರೆಯಲಾಗಿದೆ ಎಂದು ಸಮಿತಿಯ ಹೇಳಿಕೆ ತಿಳಿಸಿದೆ.

ಬಾಗಲಗುಂಟೆಯಲ್ಲಿ ಜಾತ್ರೆ ಸಂಭ್ರಮ

ಪೀಣ್ಯದಾಸರಹಳ್ಳಿ: ಬಾಗಲಗುಂಟೆ ಮಾರಮ್ಮದೇವಿ ದೇವಸ್ಥಾನ, ವೇಣು ಗೋಪಾಲ ಸ್ವಾಮಿ ದೇವಸ್ಥಾನ ಹಾಗೂ ಆಂಜನೇಯಸ್ವಾಮಿ ದೇವಸ್ಥಾನ ಸೇವಾ ಸಮಿತಿ ಆಶ್ರಯದಲ್ಲಿ ನ. 5ರಿಂದ 7ರ ವರೆಗೆ ಜಾತ್ರೆ ಮಹೋತ್ಸವ ನಡೆಯಲಿದೆ.

ಪ್ರಸಿದ್ಧ ಜಾತ್ರೆಗೆ ಸುತ್ತಮುತ್ತಲ ಹಳ್ಳಿಗಳಿಂದ ಸಂಪ್ರದಾಯದಂತೆ ಆರತಿಗಳನ್ನು ತರಲಾಗುತ್ತದೆ. ಶಾಸಕ ಎಸ್. ಮುನಿರಾಜು ಅವರು ಅಧಿಕಾರಿಗಳ ಜತೆಗೆ ಜಾತ್ರೆ ಸಿದ್ಧತೆ ಸಭೆ ನಡೆಸಿದರು.

‘ಸ್ವಚ್ಛತೆ, ನೀರು ಪೂರೈಕೆ, ಭದ್ರತೆ, ಸಂಚಾರ, ಕಾನೂನು ಸುವ್ಯವಸ್ಥೆ, ವಿದ್ಯುತ್, ಆಂಬುಲೆನ್ಸ್, ಅಗ್ನಿಶಾಮಕ ದಳ ಭದ್ರತೆ ಇರಬೇಕು’ ಎಂದರು.

‘ಡಿ.ಜೆ ಹಾಕಲು ಅನುಮತಿ ಪಡೆದಿಲ್ಲ. ಅಗತ್ಯ ಭದ್ರತೆ ಕೈಗೊಳ್ಳಲಾಗಿದೆ’ ಎಂದು ಬಾಗಲಗುಂಟೆ ಠಾಣೆ ಇನ್‌ಸ್ಪೆಕ್ಟರ್ ಹನುಮಂತರಾಜು ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕೇಂದ್ರ ಕಛೇರಿ, ಎನ್. ಆರ್. ಚೌಕ, ಬೆಂಗಳೂರು– 560 002.

ಸಾರ್ವಜನಿಕ ಪ್ರಕಟಣೆ

ಸಹಾಯ 2.0 ತಂತ್ರಾಂಶ –
ಕುಂದು ಕೊರತೆಗಳ ಪರಿಹಾರ ವ್ಯವಸ್ಥೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ನಾಗರಿಕರು ತಮ್ಮ ಕುಂದು ಕೊರತೆಗಳನ್ನು ದಾಖಲಿಸುವ ಸಲುವಾಗಿ “ಸಹಾಯ 2.0” ತಂತ್ರಾಂಶವು ಕಾರ್ಯ ನಿರ್ವಹಿಸುತ್ತಿದ್ದು, ಈ ತಂತ್ರಾಂಶವು ಪ್ಲೇ ಸ್ಟೋರ್‌ನಲ್ಲಿ “ನಮ್ಮ ಬೆಂಗಳೂರು” ಹೆಸರಿನಲ್ಲಿ ಲಭ್ಯವಿರುತ್ತದೆ. ನಾಗರಿಕರು ಪಾಲಿಕೆಗೆ ಸಂಬಂಧಿಸಿದ “ರಸ್ತೆಗುಂಡಿಗಳು”, “ಪಾದಾಚಾರಿ ಮಾರ್ಗಗಳು”, ಬೀದಿ ದೀಪಗಳು”, “ಕಸ ವಿಲೇವಾರಿ” “ಕಟ್ಟಡ ಪರವಾನಗಿ” ಇತ್ಯಾದಿ ಪಾಲಿಕೆ ಸಂಬಂಧಿತ ಯಾವುದೇ ದೂರುಗಳನ್ನು ಸಹಾಯ 2.0 ತಂತ್ರಾಂಶದಲ್ಲಿ ದಾಖಲಿಸಬಹುದಾಗಿರುತ್ತದೆ.

ಪ್ಲೇ ಸ್ಟೋರ್ ಮುಖಾಂತರ ‘ನಮ್ಮ ಬೆಂಗಳೂರು’ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಬಿಬಿಎಂಪಿ ಅಧಿಕೃತ ಜಾಲತಾಣ https://bbmp.gov.in ತಾಣದಲ್ಲಿಯೂ ದೂರನ್ನು ನಮೂದಿಸಬಹುದಾಗಿರುತ್ತದೆ.

ಟೋಲ್ ಫ್ರೀ ನಂ. 1533 ಗೆ ಕರೆ ಮಾಡಿ ದೂರು ನಮೂದಿಸಬಹುದಾಗಿರುತ್ತದೆ.

ಸಹಿ/–
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಬಿಬಿಎಂಪಿ ನೋಂದಣಿ ಪ್ರಕ್ರಿಯೆಯಲ್ಲಿ ತಾಂತ್ರಿಕ ಸಮಸ್ಯೆ; ಪರಿಹರಿಸದ ಪಾಲಿಕೆ ಸಿಬ್ಬಂದಿ

ಕೆರೆ ಮಿತ್ರರಾಗಲು ನಾಗರಿಕರ ನಿರಾಸಕ್ತಿ!

• ಆರ್.ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆಗಳು ಹಾಗೂ ಉದ್ಯಾನಗಳ ನಿರ್ವಹಣೆ ಮೇಲ್ವಿಚಾರಣೆಗೆ 'ಕೆರೆ ಮಿತ್ರ' ಮತ್ತು 'ಹಸಿರು ಮಿತ್ರ'ರಾಗಲು ನಾಗರಿಕರು ಹೆಚ್ಚಿನ ಆಸಕ್ತಿ ತೋರಿಲ್ಲ.

'ಕೆರೆ ಮಿತ್ರ' ಮತ್ತು 'ಹಸಿರು ಮಿತ್ರ'ರಾಗಲು ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ನೋಂದಣಿ ಮಾಡಲು ಪ್ರಯತ್ನಿಸಿದ್ದರು. ಆದರೆ, ತಾಂತ್ರಿಕ ಸಮಸ್ಯೆ ಎದುರಾಗಿ ಅವರಿಗೆ ನೋಂದಣಿ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ, ಅಂತಿಮ ದಿನವಾಗಿದ್ದ ಅ.30ರೊಳಗೆ 1,158 ಮಾತ್ರ ನೋಂದಣಿಯಾಗಿದೆ.

ಹೆಸರು ನೋಂದಾಯಿಸಿದವರಲ್ಲಿ ಯಾದ್ರಚ್ಛಿಕವಾಗಿ(ರ್‍ಯಾಂಡಮ್) 10 ಜನರನ್ನು ಆಯ್ಕೆ ಮಾಡಿ, 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ'ರಾಗಿ ಒಂದು ತಿಂಗಳು ಕೆರೆ ಅಥವಾ ಉದ್ಯಾನದ ಮೇಲ್ವಿಚಾರಣೆಯನ್ನು ನಿರ್ವಹಿಸುವ ಅವಕಾಶ ನೀಡುವುದಾಗಿ ಬಿಬಿಎಂಪಿ ತಿಳಿಸಿತ್ತು.

ಪಟ್ಟಿಯಲ್ಲೇ ಗೊಂದಲ: ಬಿಬಿಎಂಪಿ ವ್ಯಾಪ್ತಿಯಲ್ಲಿ 202 ಕೆರೆಗಳಿವೆ ಎಂದು ಅಧಿಕೃತವಾಗಿ ಹೇಳಲಾಗಿದೆ. ಆದರೆ, 'ಕೆರೆ ಮಿತ್ರ'ರಾಗಲು ನೋಂದಣಿ ಪ್ರಕ್ರಿಯೆಯಲ್ಲಿದ್ದುದು 198 ವಾರ್ಡ್‌ಗಳ 168 ಕೆರೆಗಳು ಮಾತ್ರ. ₹35 ಕೋಟಿಯನ್ನು 174 ಕೆರೆಗಳಿಗೆ ನಿರ್ವಹಣೆಗೆ ವೆಚ್ಚ ಮಾಡಲಾಗುತ್ತಿದೆ. ಅಷ್ಟಾದರೂ ಕೆರೆಗಳಿಗೆ 'ಮಿತ್ರರಾಗಲು' ಇಲ್ಲಿ ಅವಕಾಶ ಇರಲಿಲ್ಲ.

ನಗರದಲ್ಲಿರುವ 202 ಕೆರೆಗಳಿಗೆ ತಲಾ 10 'ಕೆರೆ ಮಿತ್ರ'ರಾಗಬೇಕಾದರೆ ಕನಿಷ್ಠ 2,020 ನಾಗರಿಕರಾದರೂ ನೋಂದಣಿಯಾಗಬೇಕು. ಆದರೆ, ಇದರಲ್ಲಿ ಕಾಲು ಭಾಗದಷ್ಟು ಮಾತ್ರ ನೋಂದಣಿಯಾಗಿದೆ. ಇನ್ನು, 198 ವಾರ್ಡ್‌ಗಳಲ್ಲಿ 1,030 ಉದ್ಯಾನಗಳಿವೆ. ಇವುಗಳ ಮೇಲ್ವಿಚಾರಣೆಗೆ 'ಹಸಿರು ಮಿತ್ರ'ರಾಗಲು 10,300 ನಾಗರಿಕರ ಅಗತ್ಯವಿದೆ. ಶೇ 5ರಷ್ಟು ಸಾರ್ವಜನಿಕರು ನೋಂದಣಿಯಾಗಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಾಗರಿಕರಿಗೆ ಕೆರೆ, ಉದ್ಯಾನಗಳ ನಿರ್ವಹಣೆ ನೀಡುವ ಬಗ್ಗೆ 'ಬ್ರ್ಯಾಂಡ್ ಬೆಂಗಳೂರು ಸಮ್ಮೇಳನ'ದಲ್ಲಿ ಭರವಸೆ ನೀಡಿದ್ದರು. ಅದರಂತೆ 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ' ಯೋಜನೆ ಆರಂಭಿಸಲಾಗಿತ್ತು. ಆದರೆ, ಅದಕ್ಕೆ ಅಗತ್ಯವಾದ ತಂತ್ರಜ್ಞಾನವನ್ನು ರೂಪಿಸಿಕೊಳ್ಳುವಲ್ಲಿ ಬಿಬಿಎಂಪಿ ವಿಫಲವಾಗಿದೆ ಎಂದು ನಾಗರಿಕರು ದೂರುತ್ತಿದ್ದಾರೆ.

ಹಲಗೆವಡೇರಹಳ್ಳಿ ಕೆರೆ ಮರುಅಭಿವೃದ್ಧಿ ಕಾಮಗಾರಿ

ಅಂಕಿ-ಅಂಶಗಳು

202 ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆಗಳು

1,020 ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಉದ್ಯಾನಗಳು

652 ಕೆರೆ ಮಿತ್ರರಾಗಲು ನೋಂದಾಯಿತರಾದವರು

506 ಹಸಿರು ಮಿತ್ರರಾಗಲು ನೋಂದಾಯಿತರಾದವರು

'ಪ್ರಚಾರಕ್ಕಾಗಿ ನೋಂದಣಿ ಬೇಡ'

'ಕೆರೆಗಳು ಹಾಗೂ ಉದ್ಯಾನಗಳನ್ನು ಸಿವಿಲ್ ಕಾಮಗಾರಿಗಷ್ಟೇ ಮೀಸಲಿಟ್ಟು, ಅದಕ್ಕೆ ನಾಗರಿಕರ ಮೊಹರು ಪಡೆದುಕೊಂಡು ಪ್ರಚಾರ ಪಡೆಯಲು 'ಕೆರೆ ಮಿತ್ರ' ಮತ್ತು 'ಹಸಿರು ಮಿತ್ರ'ರನ್ನಾಗಿಸುತ್ತಿದ್ದರೆ ಇದನ್ನು ಇಲ್ಲಿಗೇ ನಿಲ್ಲಿಸುವುದು ಉತ್ತಮ. ಕೆರೆ ನಿರ್ವಹಣೆ ಎಂದರೆ ಅಲ್ಲಿ ಗುಣಮಟ್ಟದ ನೀರು ಇರಬೇಕು, ಸ್ವಚ್ಛ ಪರಿಸರ ಇರಬೇಕು, ಉತ್ತಮ ಪ್ರಮಾಣದಲ್ಲಿ ಶುದ್ಧ ನೀರು ಇರಬೇಕು. ಈ ಕಾಮಗಾರಿಗಳಿಗೆ ಒತ್ತು ನೀಡದೆ, ಅವರೇ ನಿರ್ಧರಿಸಿರುವ ಕೆಲಸಗಳನ್ನು ನಾವು ನೋಡುವುದು ಸರಿಯಲ್ಲ. 'ಕೆರೆ ಮಿತ್ರ'ರಾಗಲು ಬಹಳಷ್ಟು ಮಂದಿಗೆ ಆಸಕ್ತಿ ಇದೆ. ಆದರೆ, ತಾಂತ್ರಿಕವಾಗಿ ಇದು ಸಾಧ್ಯವಾಗುತ್ತಿಲ್ಲ. ಸಮಸ್ಯೆ ಪರಿಹರಿಸಲು ಯಾರಿಗೂ ಉತ್ಸಾಹ ಇಲ್ಲ' ಎಂದು ಫ್ರೆಂಡ್ಸ್ ಆಫ್ ಲೇಕ್ಸ್‌ನ ರಾಮಪ್ರಸಾದ್ ದೂರಿದರು.

'ನೋಂದಣಿಗೆ ಮತ್ತೆ ಅವಕಾಶ'

'ಕೆರೆ ಮಿತ್ರ' ಮತ್ತು 'ಹಸಿರು ಮಿತ್ರ'ರಾಗಲು ನೋಂದಣಿ ಮಾಡಿಕೊಳ್ಳಬೇಕಿತ್ತು. ಆದರೆ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿವೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಯಾಗಿಲ್ಲ. ಇನ್ನೂ ಹೆಚ್ಚಿನ ಸಮಯಾವಕಾಶ ನೀಡಲಾಗುತ್ತದೆ. ನೋಂದಣಿ ಅವಧಿಯನ್ನು ವಿಸ್ತರಿಸಲಾಗುತ್ತದೆ. ನಾಗರಿಕರಿಗೆ ಈ ಬಗ್ಗೆ ಶೀಘ್ರವೇ ಮಾಹಿತಿ ನೀಡಲಾಗುತ್ತದೆ' ಎಂದು ಬಿಬಿಎಂಪಿ ಕೆರೆ, ತೋಟಗಾರಿಕೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದರು.

'ಸಿಬ್ಬಂದಿಗೆ ಇಷ್ಟವಿಲ್ಲ'

'ಸಾರ್ವಜನಿಕರು 'ಕೆರೆ ಮಿತ್ರ' ಮತ್ತು 'ಹಸಿರು ಮಿತ್ರ'ರಾಗುವುದು ಬಿಬಿಎಂಪಿ ಸಿಬ್ಬಂದಿಗೆ ಇಷ್ಟವಿಲ್ಲ. ಹೀಗಾಗಿಯೇ ಈ ಯೋಜನೆ ಬಗ್ಗೆ ಹೆಚ್ಚಿನ ಪ್ರಚಾರ ನೀಡಲಿಲ್ಲ. ನೋಂದಣಿಗೆ ಅವಕಾಶವಿದ್ದ ಅ.19ರಿಂದಲೂ ವೆಬ್‌ಸೈಟ್‌ನಲ್ಲಿ ಮೊದಲು ಲಿಂಕ್ ಇರಲಿಲ್ಲ, ನಂತರ ಅದು ತೆರೆದುಕೊಳ್ಳುತ್ತಿರಲಿಲ್ಲ. ಆಮೇಲೆ ಕೆರೆಗಳ ಪಟ್ಟಿಯೇ ಇರಲಿಲ್ಲ. ನೋಂದಣಿ ಪುಟ ಮುಚ್ಚಿಕೊಂಡರೂ ನೋಂದಣಿ ಆಯಿತೇ ಇಲ್ಲವೇ ಎಂಬ ಮಾಹಿತಿ ಲಭ್ಯವಾಗುತ್ತಿರಲಿಲ್ಲ. ಕನಿಷ್ಠ ಮೊಬೈಲ್ ಅಥವಾ ಇಮೇಲ್‌ಗೆ ಒಂದು ಸಂದೇಶವೂ ಬಂದಿಲ್ಲ. ಕೆರೆಗಳು ಹಾಗೂ ತೋಟಗಾರಿಕೆ ವಿಭಾಗದ ವಿಶೇಷ ಆಯುಕ್ತರಿಂದ ಹಿಡಿದು ಮುಖ್ಯ ಎಂಜಿನಿಯರ್, ಕಾರ್ಯಪಾಲಕ ಎಂಜಿನಿಯರ್‌ವರೆಗೂ ಮಾಹಿತಿ ನೀಡಲು ಸಮಯ ಇಲ್ಲ. ಒಬ್ಬರು ಮತ್ತೊಬ್ಬರ ಮೇಲೆ ಜವಾಬ್ದಾರಿ ಹೊರಿಸುತ್ತಾರೆ' ಎಂದು ಪರಿಸರ ಕಾರ್ಯಕರ್ತ ಟಿ.ಇ. ಶ್ರೀನಿವಾಸ್ ಆರೋಪಿಸಿದರು.

ಸುದ್ದಿ 2 ನಿಮಿಷ

ಅಕ್ರಮ ಆಸ್ತಿ: ಮೂವರಿಗೆ ಜೈಲು

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದಲ್ಲಿ ನೈರುತ್ಯ ರೈಲ್ವೆಯ ಹಿಂದಿನ ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಟಿ. ಶಿವಣ್ಣ, ಅವರ ಪತ್ನಿ ಆರ್.ಎನ್. ಮಂಜುಳಾ ಕುಮಾರ್ ಮತ್ತು ಪಾಲುದಾರ ಎಂ. ನಾರಾಯಣ ಸ್ವಾಮಿ ದೋಷಿಗಳು ಎಂದು ಸಾರಿರುವ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯ, ಮೂವರಿಗೂ ಜೈಲು ಶಿಕ್ಷೆ ವಿಧಿಸಿದೆ.

ಶಿವಣ್ಣ ಅವರಿಗೆ ನಾಲ್ಕು ವರ್ಷ ಸಾಧಾರಣ ಜೈಲು ಶಿಕ್ಷೆ ಹಾಗೂ ₹ 5 ಲಕ್ಷ ದಂಡ, ಮಂಜುಳಾ ಮತ್ತು ನಾರಾಯಣ ಸ್ವಾಮಿ ಅವರಿಗೆ ತಲಾ ಒಂದು ವರ್ಷ ಸಾಧಾರಣ ಜೈಲು ಶಿಕ್ಷೆ ಹಾಗೂ ತಲಾ ₹ 1 ಲಕ್ಷ ದಂಡ ವಿಧಿಸಲಾಗಿದೆ ಎಂದು ಸಿಬಿಐ ಪ್ರಕಟಣೆ ತಿಳಿಸಿದೆ.

ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗೀಯ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿವಣ್ಣ ವಿರುದ್ಧ ಆದಾಯಕ್ಕಿಂಯ ಹೆಚ್ಚು ಆಸ್ತಿ ಹೊಂದಿದ್ದ ಆರೋಪದ ಮೇಲೆ ಸಿಬಿಐ 2014ರಲ್ಲಿ ಪ್ರಕರಣ ದಾಖಲಿಸಿತ್ತು. ಅಧಿಕಾರಿಯು ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ₹ 1.58 ಕೋಟಿಯಷ್ಟು (ಶೇಕಡ 179ರಷ್ಟು) ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂದು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿತ್ತು.

ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಆದೇಶ ಪ್ರಕಟಿಸಿರುವ ನ್ಯಾಯಾಲಯ, ಅಧಿಕಾರಿ, ಅವರ ಪತ್ನಿ ಮತ್ತು ಪಾಲುದಾರರನ್ನು ಅಪರಾಧಿಗಳು ಎಂದು ಘೋಷಿಸಿದೆ.

ಪಿಐ ಲಕ್ಷ್ಮಣಗೌಡಗೆ ನಿರೀಕ್ಷಣಾ ಜಾಮೀನು ನಕಾರ

ಬೆಂಗಳೂರು: ಪ್ರಕರಣವೊಂದರಲ್ಲಿ 'ಬಿ' ವರದಿ ಸಲ್ಲಿಸಲು ₹ 50,000 ಲಂಚ ಪಡೆದ ಆರೋಪ ಎದುರಿಸುತ್ತಿರುವ ರಾಜಾಜಿನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಸ್. ಲಕ್ಷ್ಮಣಗೌಡ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ (ಲೋಕಾಯುಕ್ತ) ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಲಕ್ಷ್ಮಣ ಗೌಡ ಮತ್ತು ಸಬ್ ಇನ್‌ಸ್ಪೆಕ್ಟರ್ ಮಾರುತಿ ಪರವಾಗಿ ಸಾಗರ್ ಎಂಬುವವರಿಂದ ಲಂಚ ಪಡೆಯುತ್ತಿದ್ದ ಹೆಡ್ ಕಾನ್‌ಸ್ಟೆಬಲ್ ಆಂಜನೇಯ ಅವರನ್ನು ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಪೊಲೀಸರು ಅಕ್ಟೋಬರ್ 17ರಂದು ಬಂಧಿಸಿದ್ದರು. ತಲೆಮರೆಸಿಕೊಂಡಿರುವ ಲಕ್ಷ್ಮಣಗೌಡ ನಿರೀಕ್ಷಣಾ ಜಾಮೀನು ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

'ಅರ್ಜಿದಾರರು ಪೊಲೀಸ್ ಅಧಿಕಾರಿ. ತನಿಖೆಯ ಹಂತದಲ್ಲಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದರೆ ತನಿಖೆ ಮೇಲೆ ಪ್ರಭಾವ ಬೀರುವ, ಸಾಕ್ಷ್ಯನಾಶಕ್ಕೆ ಯತ್ನಿಸುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು' ಎಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎಂ. ರಾಧಾಕೃಷ್ಣ ಅರ್ಜಿಯನ್ನು ತಿರಸ್ಕರಿಸುವಾಗ ಅಭಿಪ್ರಾಯಪಟ್ಟಿದ್ದಾರೆ.

'ನಮ್ಮ ಬೆಂಗಳೂರು ಪ್ರತಿಷ್ಠಾನ'ದಿಂದ ವಿವಿಧ ಸಾಧಕರಿಗೆ 'ನಮ್ಮ ಬೆಂಗಳೂರು ಪ್ರಶಸ್ತಿ'ಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಿದರು

ವೆಂಕಟಾಚಲಯ್ಯಗೆ ಜೀವಮಾನದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರಿಗೆ 'ನಮ್ಮ ಬೆಂಗಳೂರು ಪ್ರತಿಷ್ಠಾನ'ದ ವತಿಯಿಂದ 'ಜೀವಮಾನದ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, 'ಬದ್ಧತೆ ಮತ್ತು ಅವಿಸ್ಮರಣೀಯ ಕೊಡುಗೆಗಳಿಗಾಗಿ ಸಾಧಕರು ಪ್ರಶಸ್ತಿ ಪಡೆದಿದ್ದಾರೆ. ಅವರ ಕಾರ್ಯ ಬದಲಾವಣೆಯ ಹೆಜ್ಜೆಯಾಗಿದ್ದು, ಎಲ್ಲರಿಗೂ ಮಾದರಿ' ಎಂದು ತಿಳಿಸಿದರು.

'ವರ್ಷದ ನಮ್ಮ ಬೆಂಗಳೂರಿಗ ಪ್ರಶಸ್ತಿಯನ್ನು' ಮೊಬಿಲಿಟಿ ಇಂಡಿಯಾ ಕಾರ್ಯಕಾರಿ ನಿರ್ದೇಶಕಿ ಅಲ್ಬಿನಾ ಶಂಕರ್ ಅವರಿಗೆ, 'ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿಯನ್ನು' ಡಿಡಬ್ಲ್ಯುಸಿಸಿ ಆಪರೇಟರ್ ಇಂದುಮತಿ ಅವರಿಗೆ, 'ವರ್ಷದ ಸರ್ಕಾರಿ ಅಧಿಕಾರಿ ಪ್ರಶಸ್ತಿಯನ್ನು' ಆರೋಗ್ಯ ಅಧಿಕಾರಿ ಡಾ. ರಘುನಾಥ್ ಬಿ.ಬಿ. ಅವರಿಗೆ ಹಾಗೂ 'ವರ್ಷದ ಉದಯೋನ್ಮುಖ ಪ್ರತಿಭೆ ಪ್ರಶಸ್ತಿಯನ್ನು' ವಾಯ್ಸ್‌ಲೆಸ್ ಇಂಡಿಯಾದ ಫೆಸಿಲಿಟೇಟರ್ ಅಂಕಿತ್ ಪುರಿ ಅವರಿಗೆ ಪ್ರದಾನ ಮಾಡಲಾಯಿತು.

'ವರ್ಷದ ಉದಯೋನ್ಮುಖ ಪ್ರತಿಭೆ' ಪ್ರಶಸ್ತಿಗೆ ₹25 ಸಾವಿರ ನಗದು ಹಾಗೂ ಉಳಿದ ನಾಲ್ಕು ಪ್ರಶಸ್ತಿಗೆ ತಲಾ ₹1 ಲಕ್ಷ ನಗದು ಬಹುಮಾನ ಮತ್ತು ಫಲಕಗಳನ್ನು ನೀಡಲಾಯಿತು.

ಪ್ರತಿಷ್ಠಾನದ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಜೇಕಬ್ ಮಾತನಾಡಿದರು.

ಬೆಂಗಳೂರು ಕಂಬಳಕ್ಕೆ 150 ಕೋಣ ನೋಂದಣಿ

ಸಮಾಲೋಚನಾ ಸಭೆಯಲ್ಲಿ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಅರಮನೆ ಮೈದಾನದಲ್ಲಿ ನ.25 ಮತ್ತು 26ರಂದು ನಡೆಯಲಿರುವ 'ಬೆಂಗಳೂರು ಕಂಬಳ–ನಮ್ಮ ಕಂಬಳ'ದಲ್ಲಿ ಭಾಗವಹಿಸಲು ಈಗಾಗಲೇ 150ಕ್ಕೂ ಅಧಿಕ ಕೋಣಗಳ ನೋಂದಣಿಯಾಗಿದ್ದು, ನ.23ರಂದು ಕೋಣಗಳಿಗೆ ಉಪ್ಪಿನಂಗಡಿಯಲ್ಲಿ ಬೀಳ್ಕೊಡುಗೆ ನಡೆಯಲಿದೆ. ಬಳಿಕ ಬೆಂಗಳೂರಿಗೆ ಬರಲಿವೆ ಎಂದು ಬೆಂಗಳೂರು ಕಂಬಳ ಸಮಿತಿ ಅಧ್ಯಕ್ಷರಾಗಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ತಿಳಿಸಿದರು.

ಬಂಟರ ಸಂಘದಲ್ಲಿ ಕರಾವಳಿಯ ವಿವಿಧ ಜಾತಿ-ಭಾಷಾ ಸಂಘಟನೆಗಳೊಂದಿಗೆ ಶನಿವಾರ ನಡೆದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಉಪ್ಪಿನಂಗಡಿಯಿಂದ ಹೊರಡುವ ಎಲ್ಲ ಕೋಣಗಳಿಗೆ ಹಾಸನ ಹಾಗೂ ನೆಲಮಂಗಲದಲ್ಲಿ ಅದ್ದೂರಿಯಾಗಿ ಸ್ವಾಗತ ನೀಡಲಾಗುವುದು. ಅಲ್ಲದೇ ಪ್ರತಿ ತಾಲ್ಲೂಕಿನಲ್ಲಿ ಸ್ವಾಗತ-ಬೀಳ್ಕೊಡುಗೆ ಇರಲಿದೆ ಎಂದು ಹೇಳಿದರು.

ಬೆಂಗಳೂರು ಕಂಬಳಕ್ಕೆ 3 ಲಕ್ಷದಿಂದ 5 ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಅದಕ್ಕೆ ತಕ್ಕಂತೆ ತಯಾರಿ ಮಾಡಿಕೊಳ್ಳಲಾಗಿದೆ. ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಕರಾವಳಿಯ ಸಮಸ್ತ ಸಮುದಾಯದವರು ಒಟ್ಟಾಗಲಿದ್ದಾರೆ. 50 ಅಧಿಕ ಸಂಘಟನೆಗಳು ಕಂಬಳಕ್ಕೆ ಸಹಕಾರ ನೀಡುತ್ತಿವೆ ಎಂದು ಕಂಬಳ ಸಮಿತಿ ಗೌರವಾಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ ವಿವರಿಸಿದರು.

ಬೆಂಗಳೂರಿನ ಅರಮನೆ ಮೈದಾನದ 70 ಎಕರೆ ಜಾಗದಲ್ಲಿ ಕಂಬಳ ನಡೆಯಲಿದೆ ಎಂದು ಸಮಿತಿ ಕಾರ್ಯಾಧ್ಯಕ್ಷ, ಸಂಗೀತ ನಿರ್ದೇಶಕ ಗುರುಕಿರಣ್ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಂಬಳಕ್ಕೆ ₹ 1 ಕೋಟಿ ಅನುದಾನ ಘೋಷಿಸಿದ್ದಾರೆ ಎಂದು ಕಂಬಳ ಸಮಿತಿ ಉಪಾಧ್ಯಕ್ಷ ಗುಣರಂಜನ್ ಶೆಟ್ಟಿ ಮಾಹಿತಿ ನೀಡಿದರು.

ಬಾಲಿವುಡ್ ನಟಿ ಐಶ್ವರ್ಯಾ ರೈ, ಕರಾವಳಿ ಬೆಡಗಿ ಅನುಷ್ಕಾ ಶೆಟ್ಟಿ ಸೇರಿದಂತೆ ವಿವಿಧ ಚಿತ್ರರಂಗಗಳಲ್ಲಿ ಇರುವ ಕರಾವಳಿ ಮೂಲದ ಸಿನಿಮಾತಾರೆಯರು ಭಾಗವಹಿಸಲಿದ್ದಾರೆ ಎಂದು ಸಂಘಟನಾ ಅಧ್ಯಕ್ಷ ಉಮೇಶ್ ಶೆಟ್ಟಿ ತಿಳಿಸಿದರು.

'ಬೆಂಗಳೂರು ಕಂಬಳ ನಮ್ಮ ಕಂಬಳ' ಎಂಬ ಥೀಮ್ ಸಾಂಗ್ ಬಿಡುಗಡೆ ಮಾಡಲಾಯಿತು. ವಿ.ಮನೋಹರ್ ಸಾಹಿತ್ಯ, ಗುರುಕಿರಣ್ ಸಂಗೀತ ಸಂಯೋಜನೆ, ಮಣಿಕಾಂತ್ ಕದ್ರಿ ಪ್ರೋಗ್ರಾಮಿಂಗ್‌ನಲ್ಲಿ ಥೀಮ್ ಸಾಂಗ್ ಮೂಡಿ ಬಂದಿದೆ.

ಕಂಬಳ ಶೀರ್ಷಿಕೆ ಪ್ರಾಯೋಜಕರಾದ ಆಭರಣ ಜುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಕಾಮತ್ ಇದ್ದರು.

ಕಂಬಳ ಸಮಾಲೋಚನಾ ಸಭೆಯಲ್ಲಿ 'ಬೆಂಗಳೂರು ಕಂಬಳ ನಮ್ಮ ಕಂಬಳ' ಎಂಬ ಥೀಮ್ ಸಾಂಗ್ ಬಿಡುಗಡೆ ಮಾಡಲಾಯಿತು

ಶ್ವಾಸಕೋಶದಲ್ಲಿ ಸೂಜಿ ಹೊರತೆಗೆದ ವೈದ್ಯರು

ನವದೆಹಲಿ: ಏಳು ವರ್ಷದ ಬಾಲಕನ ಶ್ವಾಸಕೋಶ ಹೊಕ್ಕಿದ್ದ ಹೊಲಿಗೆ ಯಂತ್ರದ ಸೂಜಿಯನ್ನು 'ಮ್ಯಾಗ್ನೆಟಿಕ್ ಸರ್ಜರಿ' ಮೂಲಕ ಹೊರತೆಗೆಯುವಲ್ಲಿ ನವದೆಹಲಿಯ ಏಮ್ಸ್‌ನ ಮಕ್ಕಳ ಶಸ್ತ್ರಚಿಕಿತ್ಸಕರು ಯಶಸ್ವಿಯಾಗಿದ್ದಾರೆ.

ನಾಲ್ಕು ಸೆಂ.ಮೀನಷ್ಟು ಉದ್ದದ ಸೂಜಿಯು ಬಾಲಕನ ಶ್ವಾಸಕೋಶಕ್ಕೆ ಹೊಕ್ಕಿತ್ತು. ಎಂಡೋಸ್ಕೋಪಿ ಪರೀಕ್ಷೆ ನಡೆಸಿದಾಗ ಕೆಲವೇ ಸೆಂ.ಮೀ.ನಷ್ಟು ಕಾಣುತ್ತಿತ್ತು.

ಪತ್ತೆಯಾಗಿದ್ದು ಹೇಗೆ?: ರಕ್ತದ ವಾಂತಿ ಮಾಡಿಕೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಬಾಲಕನನ್ನು ಆತನ ಕುಟುಂಬದವರು ಆಸ್ಪತ್ರೆಗೆ ದಾಖಲಿಸಿದ್ದರು. ವೈದ್ಯರು ಸ್ಕ್ಯಾನಿಂಗ್ ಮಾಡಿದ ವೇಳೆ ಶ್ವಾಸಕೋಶದ ಎಡಭಾಗದಲ್ಲಿ ಸೂಜಿ ಹೊಕ್ಕಿರುವುದು ಪತ್ತೆಯಾಗಿತ್ತು.

ಅದರ ಬಹುತೇಕ ಭಾಗವು ಒಳಗೆ ಹೋಗಿತ್ತು. ಹಾಗಾಗಿ, ಸಾಂಪ್ರದಾಯಿಕ ವಿಧಾನದಿಂದ ಅದನ್ನು ತೆಗೆಯಲು ಸಾಧ್ಯವಿಲ್ಲ ಎಂದು ನಿರ್ಧರಿಸಿದ ಶಸ್ತ್ರಚಿಕಿತ್ಸಕರ ತಂಡವು ಹೊಸ ಪರಿಹಾರ ಹುಡುಕಲು ಮುಂದಾಯಿತು.

'ಮೊದಲಿಗೆ ತಮ್ಮ ವೈದ್ಯ ಸ್ನೇಹಿತರ ಬಳಿ ಚರ್ಚಿಸಿದ ಶಸ್ತ್ರಚಿಕಿತ್ಸಕರ ತಂಡವು ಬಳಿಕ ಅಯಸ್ಕಾಂತ ಬಳಸಿ ಸೂಜಿ ಹೊರತೆಗೆಯಲು ನಿರ್ಧರಿಸಿತು. ವೈದ್ಯಕೀಯ ಶಸ್ತ್ರಚಿಕಿತ್ಸೆಗಳಲ್ಲಿ ಆಧಾರವಾಗಿ ಅಯಸ್ಕಾಂತ ಬಳಸುತ್ತೇವೆ. ಆದರೆ, ದೇಹದ ಒಳಭಾಗದ ಸರ್ಜರಿಗೆ ಇದನ್ನು ಸಾಧನವಾಗಿ ಬಳಸುವುದಿಲ್ಲ' ಎಂದು ಶಸ್ತ್ರಚಿಕಿತ್ಸೆ ನಡೆಸಿದ ತಂಡದಲ್ಲಿದ್ದ ಡಾ.ವಿಶೇಷ್ ಜೈನ್ 'ಪ್ರಜಾವಾಣಿ'ಗೆ ತಿಳಿಸಿದರು.

ಗಂಟಲು ನಾಳದೊಳಗೆ ಸುಲಭವಾಗಿ ಹೋಗುವಂತಹ ಅಯಸ್ಕಾಂತ ಹುಡುಕುವುದು ವೈದ್ಯರಿಗೆ ಮೊದಲಿಗೆ ಸವಾಲಾಯಿತು. ಬಳಿಕ ಚಾಂದಿನಿ ಚೌಕದಲ್ಲಿ ಅದನ್ನು ಸಂಗ್ರಹಿಸಿದರು.

ಬಳಿಕ ಸರ್ಜರಿಗೆ ಮುಂದಾದ ವೈದ್ಯರು ಎಂಡೋಸ್ಕೋಪಿ ಉಪಕರಣದ ತುದಿಗೆ ಅಯಸ್ಕಾಂತ ಅಳವಡಿಸಿದ್ದಾರೆ. ಬಳಿಕ ಅದನ್ನು ಜಾಗರೂಕವಾಗಿ ಬಾಲಕನ ಬಾಯಿಯ ಮೂಲಕ ಶ್ವಾಸನಾಳಕ್ಕೆ ಬಿಟ್ಟಿದ್ದಾರೆ. ಅಯಸ್ಕಾಂತಕ್ಕೆ ಸೂಜಿ ಆಕರ್ಷಿಸಿದೆ. ಬಳಿಕ ಉಪಕರಣವನ್ನು ಹೊರಗೆ ತೆಗೆದಿದ್ದಾರೆ.

ಪುರಸಭೆ ಕಾರ್ಯಾಲಯ, ಬಂಗಾರಪೇಟೆ

Mail id: ka.bangarpet.tmc@gmail.com, website:http:// www.bangarpettown.mrc.gov.in

ಸಂಖ್ಯೆ:ಪುಸಬಂ/ತಾಂತ್ರಿಕ/ಸಿಆರ್/52/2020–21 ದಿನಾಂಕ:02.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

14ನೇ ಹಣಕಾಸು, ಎಸ್‌ಎಫ್‌ಸಿ ವಿಶೇಷ ಉಳಿಕೆ ಅನುದಾನ, ಎಸ್‌ಎಫ್‌ಸಿ ವಿಶೇಷ ಅನುದಾನ, ಮತ್ತು ಕೆಯುಐಡಿಎಫ್‌ಸಿ ಸಂಸ್ಥೆಯ ಅನುದಾನದಡಿ ಬಂಗಾರಪೇಟೆ ಪುರಸಭೆ ಬಸ್ ನಿಲ್ದಾಣ ಮತ್ತು ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ಮೂಲಕ ಈ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರವಾಗಿರುತ್ತದೆ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. (1) ಕಾಮಗಾರಿಯ ಇಂಡೆಂಟ್ ನಂಬರ್ **Indent No.DMA/2023-24/BD/WORK_INDENT4828,** ಬಂಗಾರಪೇಟೆ ಪುರಸಭೆ ಬಸ್ ನಿಲ್ದಾಣ ಮತ್ತು ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿ. **ಅಂದಾಜು ಮೊತ್ತ: ರೂ.420.08 ಲಕ್ಷಗಳು.** (1) ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ಕೊನೆಯ ದಿನಾಂಕ: 09.11.2023ರ ಸಮಯ: 17.00 ಗಂಟೆಯವರೆಗೆ.** (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 10.11.2023ರ ಸಮಯ: 17.30 ಗಂಟೆಗೆ.** (3) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 11.11.2023ರ ಸಮಯ: 17.00 ಗಂಟೆಗೆ.**

ಸಹಿ/– ಮುಖ್ಯಾಧಿಕಾರಿ, ಪುರಸಭೆ ಬಂಗಾರಪೇಟೆ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:189/ಕೆಎಸ್‌ಎಂಸಿಎ/2023–24

ಕಾಡಾನೆ ದಾಳಿ ರೈತ ಸಾವು

ಕನಕಪುರ: ತಾಲ್ಲೂಕಿನ ಹೊನಗಳ್ಳಿ ಅರಣ್ಯ ಪ್ರದೇಶದ ಬಳಿ ಶನಿವಾರ ಕುರಿ ಮೇಯಿಸುತ್ತಿದ್ದ ರೈತರೊಬ್ಬರು ಕಾಡಾನೆ ದಾಳಿಯಿಂದಾಗಿ ಮೃತಪಟ್ಟಿದ್ದಾರೆ.

ಹೊನಗಳ್ಳಿ ಗ್ರಾಮದ ಮರಿಗೌಡ (79) ಮೃತ ರೈತ. ಮಧ್ಯಾಹ್ನ ಮರಿಗೌಡ ಮತ್ತು ಇತರರು ಕುರಿಗಳನ್ನು ಮೇಯಿಸುತ್ತಿದ್ದಾಗ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಜೊತೆಯಲ್ಲಿದ್ದವರು ಓಡಿ ತಪ್ಪಿಸಿಕೊಂಡಿದ್ದಾರೆ. ಆದರೆ, ವಯಸ್ಸಾಗಿದ್ದ ಮರಿಗೌಡ ಅವರು ಓಡಲಾಗದೆ ಆನೆ ದಾಳಿಗೆ ತುತ್ತಾಗಿದ್ದಾರೆ.

ಕಾಡಾನೆ ದಾಳಿಯಿಂದ ತೀವ್ರವಾಗಿ ಗಾಯಗೊಂಡ ಮರಿಗೌಡ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಗಿದೆ. ಶವವನ್ನು ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದ್ದು, ಕಾಡಾನೆ ಪತ್ತೆಗೆ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಗ್ರಾ.ಪಂ. ಸದಸ್ಯರಿಗೆ ಗೌರವಧನ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾ.ಪಂ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರ ತಿಂಗಳ ಗೌರವಧನವನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ವಿಧಾನ ಪರಿಷತ್ ಸದಸ್ಯ ದಿನೇಶ ಗೂಳಿಗೌಡ ಒತ್ತಾಯಿಸಿದ್ದಾರೆ.

ದಿನೇಶ್ ಗೂಳಿಗೌಡ

ಈ ಬಗ್ಗೆ ಪತ್ರ ಬರೆದಿರುವ ಅವರು, 'ರಾಜ್ಯದಲ್ಲಿ ಸದ್ಯ 6,022 ಗ್ರಾಮ ಪಂಚಾಯಿತಿಗಳಿದ್ದು, ಅಷ್ಟೇ ಸಂಖ್ಯೆಯ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ 90 ಸಾವಿರದಷ್ಟು ಸದಸ್ಯರಿದ್ದಾರೆ. ಅವರಿಗೆ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಗೌರವಧನ ಬಿಡುಗಡೆ ಆಗಿಲ್ಲ. ಇದರಿಂದ ತೀವ್ರ ಸಮಸ್ಯೆಯಾಗುತ್ತಿದೆ' ಎಂದಿದ್ದಾರೆ.

'ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮಾಸಿಕ ತಲಾ ₹ 6 ಸಾವಿರ, ಉಪಾಧ್ಯಕ್ಷರಿಗೆ ₹ 3 ಸಾವಿರ, ಸದಸ್ಯರಿಗೆ ₹ 2 ಸಾವಿರ ಗೌರವಧನ ನೀಡಲಾಗುತ್ತಿದೆ. ಆರ್ಥಿಕವಾಗಿ ಸಬಲರಲ್ಲದ ಗ್ರಾಮೀಣ ಜನಪ್ರತಿನಿಧಿಗಳಿಗೆ ಈ ಮೊತ್ತವು ತುಂಬಾ ಅವಶ್ಯ. ಸದ್ಯ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳು ನಡೆಯದೇ ಇರುವ ಕಾರಣ ಗ್ರಾಮ ಪಂಚಾಯಿತಿ ಆಡಳಿತವೇ ಜನರಿಗೆ ಸ್ಪಂದಿಸಬೇಕಿದೆ. ಆರ್ಥಿಕ ಸಮಸ್ಯೆಯಿಂದ ದೂರದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಅವರು ಖುದ್ದು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಗೌರವಧನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ತುರ್ತು ಗಮನಹರಿಸಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.

ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/07/2023–24 ದಿನಾಂಕ: 31.10.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ವಿ. ಲೋಕೇಶ್ ಬಿನ್ ಸಿ. ವೆಂಕಟರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	163/1	1–15	ಕೈಗಾರಿಕಾ	ವಸತಿ
2	ಶ್ರೀ ಸುರೇಶ್ ಬಿನ್ ಲೇ. ಮುನಿರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	164/2	0–05	ಕೈಗಾರಿಕಾ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ದೊರಕುತ್ತವೆ ಹಾಗೂ ಕಾನೂನುಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,

ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/1995/2023–24

ನಗರದಲ್ಲಿ ಇಂದು

'ಸೈಬರ್ ಅಪರಾಧ' ಕುರಿತು ಜಾಗೃತಿ ವಾಕಥಾನ್: ಅತಿಥಿ: ಪ್ರತಾಪ್ ರೆಡ್ಡಿ, ಆಯೋಜನೆ: ಟೆಲಿಕಾಂ ವಿಮೆನ್ ವೆಲ್ಫೇರ್ ಆರ್ಗನೈಸೇಷನ್, ಬಿಎಸ್‌ಎನ್‌ಎಲ್, ಸ್ಥಳ: ಕೃಷಿ ಮೇಳ ಮೈದಾನ, ಜಿಕೆವಿಕೆ, ಬೆಳಿಗ್ಗೆ 6.30

ಉಚಿತ ಮಧುಮೇಹ, ಹೃದಯ ತಪಾಸಣೆ: ಅತಿಥಿಗಳು: ಡಾ. ಮನೋಹರ್ ಕೆ.ಎನ್., ಡಾ. ವಿಜಯಕುಮಾರ್, ಸ್ಥಳ: ಕುಲಕರ್ಣಿಸ್ ಮೆಡ್‌ಜೋನ್ ಸ್ಪೆಷಾಲಿಟಿ ಸೆಂಟರ್, ಮಹಾಲಕ್ಷ್ಮಿಪುರ, ಬೆಳಿಗ್ಗೆ 8ರಿಂದ

ಅಬಾಕಸ್– ಬೌದ್ಧಿಕ ಅಂಕಗಣಿತ ಸ್ಪರ್ಧೆ: ಅತಿಥಿ: ದಿನೇಶ್ ವಿಕ್ಟರ್, ಆಯೋಜನೆ: ಎಸ್.ಐ.ಪಿ. ಅಕಾಡೆಮಿ ಇಂಡಿಯಾ, ಸ್ಥಳ: ನಂದಿ ಲಿಂಕ್ಸ್, ನಾಯಂಡಹಳ್ಳಿ, ನೈಸ್ ರಸ್ತೆ ಜಂಕ್ಷನ್, ಬೆಳಿಗ್ಗೆ 8ರಿಂದ

ಕಾರ್ತೀಕ ಸಂಗೀತೋತ್ಸವ, ರಜತ ಮಹೋತ್ಸವ: ಅತಿಥಿಗಳು: ಬಿ.ಕೆ. ಅನಂತರಾಮ, ಕೆ.ಸಿ. ರಾಮಮೂರ್ತಿ, ನಾಗಮಣಿ ಶ್ರೀನಾಥ್, ಉಪಸ್ಥಿತಿ: ಎನ್. ಸತ್ಯಪ್ರಕಾಶ್, 'ವಂಶಿ' ಪ್ರಶಸ್ತಿ ಪುರಸ್ಕೃತರು: ಬಿ.ಎಸ್. ಆನಂದ್, ಸಚಿನ್ ದೇವಿಪ್ರಸಾದ್, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಬೆಳಿಗ್ಗೆ 9

ಅಂತರ ಪ್ರೌಢಶಾಲಾ 'ಸಾಮಾನ್ಯ ಜ್ಞಾನ ಸ್ಪರ್ಧೆ': ಅತಿಥಿ: ಎಸ್. ರಾಮಲಿಂಗೇಶ್ವರ, ಅಧ್ಯಕ್ಷತೆ: ಎಂ.ಕೆ. ಚವ್ಹಾಣ್, ಆಯೋಜನೆ: ರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘ ಮೈಸೂರು, ಸ್ಥಳ: ಶೇಷಾದ್ರಿಪುರ ಪ್ರೌಢಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 9

ಭಕ್ತಿ ಭಾವಾನಂದ: ಅಖಂಡ ಭಜನೆ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 9

ಡಿ. ರಾಮಾನಾಯಕ್ ಅವರ 'ಮಹಾಚಲನೆ' (ಬಂಜಾರರ ಜೀವನ ಗಾಥೆ) ಪುಸ್ತಕ ಬಿಡುಗಡೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಬಿ.ಟಿ. ಲಲಿತಾ ನಾಯಕ್, ಅತಿಥಿಗಳು: ಪ್ರಕಾಶ್ ರಾಠೋಡ್, ಎ.ಸಿ. ಲಕ್ಷ್ಮಣ, ಪುಸ್ತಕದ ಕುರಿತು: ಕೆ.ವೈ. ನಾರಾಯಣಸ್ವಾಮಿ, ಪ್ರಸ್ತಾವನೆ: ಕೆ. ಪುಟ್ಟಸ್ವಾಮಿ, ಆಯೋಜನೆ: ಅಂತರರಾಷ್ಟ್ರೀಯ ಬಂಜಾರ ರೋಮಾ ಸಂಸ್ಥೆ, ಸ್ಥಳ: ಕೆ.ಎ.ಎಸ್ ಅಧಿಕಾರಿಗಳ ಭವನದ ಸಭಾಂಗಣ, ಭಗವಾನ್ ಮಹಾವೀರ ರಸ್ತೆ, (ಇನ್ಫೆಂಟ್ರಿ ರಸ್ತೆ), ಬೆಳಿಗ್ಗೆ 10

ಹಂ.ಪ. ನಾಗರಾಜಯ್ಯ

ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿ., ನೌಕರರ ಪತ್ತಿನ ಸಹಕಾರ ಸಂಘದ 'ಸುವರ್ಣ ಮಹೋತ್ಸವ': ಅಧ್ಯಕ್ಷತೆ: ಎಚ್.ಎ. ಪ್ರಕಾಶ್, ಅತಿಥಿಗಳು: ಕೆ.ಎನ್. ಶಾಂತಕುಮಾರ್, ಕೆ.ಎನ್. ಹರಿಕುಮಾರ್, ರವೀಂದ್ರ ಭಟ್ಟ, ಸೀತಾರಾಮನ್ ಶಂಕರ್, ರಾಜೀವ್ ವೆಲ್ಲೂರ್, ರವೀಂದ್ರ ಪ್ರಸಾದ್ ಕೆ., ಎಚ್.ವಿ. ಧರ್ಮೇಶ, ಎಂ.ಆರ್. ಕೃಷ್ಣಸ್ವಾಮಿ, ಆಯೋಜನೆ: ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿ., ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ, ಸ್ಥಳ: ಕರ್ನಾಟಕ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 10ರಿಂದ

ವಾಲ್ಮೀಕಿ ಜಯಂತಿ, ಪ್ರತಿಭಾ ಪುರಸ್ಕಾರ: ಅತಿಥಿಗಳು: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಅಧ್ಯಕ್ಷತೆ: ಬಿ.ಎನ್. ಚಂದ್ರಶೇಖರಯ್ಯ, ಆಯೋಜನೆ: ವಿಜಯನಗರ ನಾಯಕ ಸಂಘ, ಸ್ಥಳ: ರಾಜಾಜಿನಗರ ಪೇರೆಂಟ್ಸ್ ಎಜುಕೇಷನ್ ಸೊಸೈಟಿ, ಶಾಲಾ ಸಭಾಂಗಣ, ರಾಜಾಜಿನಗರ, ಬೆಳಿಗ್ಗೆ 10

ಶೈಲೇಶ್ ಪಟವರ್ಧನ ಅವರ 'ಖುಷಿ ಪಡಲು ಕಾರಣ' ಪುಸ್ತಕ, ಮೃತ್ಯುಂಜಯ ದೊಡ್ಡವಾಡ ನಿರ್ದೇಶನ '47ನೇ ಧ್ವನಿ ಸುರುಳಿ' ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಗೋಪಾಲ್ ನಾಯಕ್, ಅತಿಥಿಗಳು: ವಿ. ವೆಂಕಟ ಶಿವರೆಡ್ಡಿ, ನಂದಾ ಪಿ.ಎಲ್., ಆಯೋಜನೆ: ಸಂಗೀತ ಧಾಮ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.15

ಬಿ.ಆರ್. ಲಕ್ಷ್ಮಣರಾವ್

53ನೇ ಸಂಗೀತ ಸಮ್ಮೇಳನ, ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಯದುಗಿರಿ ಯತಿರಾಜ್ ನಾರಾಯಣ ರಾಮನುಜ ಜೀಯರ್ ಸ್ವಾಮೀಜಿ, ಅತಿಥಿ: ದಿನೇಶ್ ಗುಂಡೂರಾವ್, ಪ್ರಶಸ್ತಿ ಪುರಸ್ಕೃತರು: ವಿದ್ಯಾಭೂಷಣ (ಸಂಗೀತ ಕಲಾರತ್ನ ವಿ.ಟಿ. ಶ್ರೀನಿವಾಸ ಸ್ಮಾರಕ ಪ್ರಶಸ್ತಿ), ಎಚ್.ಕೆ. ನರಸಿಂಹಮೂರ್ತಿ (ಕರ್ನಾಟಕ ಕಲಾಚಾರ್ಯ ಪ್ರಶಸ್ತಿ), ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10.30ರಿಂದ

ಕನ್ನಡ ಪುಸ್ತಕ ಹಬ್ಬ 'ಸಂವಾದ': ಭಾಗವಹಿಸುವವರು: ಟಿ.ಆರ್. ಅನಂತರಾಮು, ಕಲ್ಗುಂಡಿ ನವೀನ್ ಬೆಳಿಗ್ಗೆ 11ಕ್ಕೆ, 'ಸನಾತನ ಭಾರತ' ಸಂವಾದ: ವಿ.ಬಿ. ಆರತಿ, ಸುವರ್ಣಿನಿ ಕೊಣಲೆ ಸಂಜೆ 5ಕ್ಕೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ

ಸೃಷ್ಟಿ ಯಕ್ಷೋತ್ಸವ, 'ಸೃಷ್ಟಿ ಕಲಾ ಭೂಷಣ ಪ್ರಶಸ್ತಿ' ಪ್ರದಾನ: 'ದ್ರೌಪದಿ ಪ್ರತಾಪ' ಯಕ್ಷಗಾನ ಪ್ರದರ್ಶನ ಮಧ್ಯಾಹ್ನ 3.30ಕ್ಕೆ, 'ಶ್ವೇತ ಕುಮಾರ ಚರಿತ್ರೆ' ಯಕ್ಷಗಾನ ಪ್ರದರ್ಶನ ಸಂಜೆ 5.30ಕ್ಕೆ, ಪ್ರಶಸ್ತಿ ಪುರಸ್ಕೃತರು: ಸುಬ್ರಹ್ಮಣ್ಯ ಧಾರೇಶ್ವರ, ಆಯೋಜನೆ: ಸೃಷ್ಟಿ ಕಲಾ ವಿದ್ಯಾಲಯ, ಸ್ಥಳ: ಪರಂಪರಾ ಸಭಾಂಗಣ, ಚನ್ನಮ್ಮನಕೆರೆ ಅಚ್ಚುಕಟ್ಟು

'ಕರ್ಮಬಂಧ' ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಸತೀಶ ಶೆಟ್ಟಿ, ಚೆಂಡೆ: ಶ್ರೀಶ ರಾವ್, ಮದ್ದಳೆ: ಅಕ್ಷಯ ರಾವ್, ಮುಮ್ಮೇಳ: ಸುಣ್ಣಂಬಳ ವಿಶ್ವೇಶ್ವರ ಭಟ್, ಮಧೂರು ವಾಸದೇವರಂಗ ಭಟ್, ಪೆಮುರ್ದೆ ಜಯಪ್ರಕಾಶ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಕಾಶೀಮಠ, ಮಲ್ಲೇಶ್ವರ, ಸಂಜೆ 4

'ನಮ್ಮ ದೇಶದ ಶಿಕ್ಷಣ ವಿಧಾನ ಮೌಲ್ಯಾಧಾರಿತವಾಗಿದೆಯಾ?' ವಿಚಾರಸಂಕಿರಣ: ಎನ್. ಕುಮಾರ್, ಆಯೋಜನೆ: ಎ.ಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸುಚೇತನಾ ಕಲಾವಿದರು, ಸ್ಥಳ: ಎ.ಜೀಸ್ ಕಲಾಶ್ರೀ ಸಭಾಂಗಣ, ನಾಗರಭಾವಿ, ಸಂಜೆ 6

ಮದ್ವವಿಜಯ ಪ್ರಶಸ್ತಿ ಪ್ರದಾನ: ಸಾನ್ನಿಧಿ: ಸುಜಯನಿಧಿ ತೀರ್ಥ ಶ್ರೀಪಾದ ಸ್ವಾಮೀಜಿ, ಅಕ್ಷೋಭ್ಯರಮಾ ಪ್ರಿಯತೀರ್ಥ ಶ್ರೀಪಾದ ಸ್ವಾಮೀಜಿ, ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ಉದಯ್ ಬಿ. ಗರುಡಾಚಾರ್, ಮೇದಿನಿ ಗರುಡಾಚಾರ್, ಅರಮನೆ ಶಂಕರ್, ಡಿ. ಶ್ರೀನಾಥ್, ಗುರುರಾಜ್ ಪೋಶೆಟ್ಟಿಹಳ್ಳಿ, ಅಧ್ಯಕ್ಷತೆ: ವೆಂಕೋಬರಾವ್ ಬುಕ್ಕಸಾಗರ, ಪ್ರಶಸ್ತಿ ಪುರಸ್ಕೃತರು: ಟಿ.ಎನ್. ನಾಗರತ್ನ, ಜಯಸಿಂಹ, ಸರೋಜಮ್ಮ, ಮಧುಸೂದನ್ ಹವಾಲ್ದಾರ್, ಎ.ವಿ. ಪ್ರಸನ್ನ, ಆಯೋಜನೆ: ವಿಶ್ವ ಮದ್ವಮತ ವೆಲ್ಫೇರ್ ಫೌಂಡೇಷನ್, ಸ್ಥಳ: ಶ್ರೀಮನ್ಮಾಧ್ವ ಸಂಘ, 5ನೇ ಮುಖ್ಯರಸ್ತೆ, ಚಾಮರಾಜಪೇಟೆ, ಸಂಜೆ 6

ಲಿಖಿತಾ ನಾರಾಯಣ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಲಿಖಿತಾ ನಾರಾಯಣ, ಅತಿಥಿಗಳು: ವಿಜಯ ಇ. ರವಿಕುಮಾರ್, ಉಮೇಶ್ ಕುಮಾರ್, ವೈ.ಕೆ. ಸಂಧ್ಯಾಶರ್ಮಾ, ಐಶ್ವರ್ಯ ನಿತ್ಯಾನಂದ್, ಜಿ. ಶಂಕರ್, ಆಯೋಜನೆ: ಸಾಧನ ಡ್ಯಾನ್ಸ್ ಸೆಂಟರ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5.15

'ಅಕಾಡೆಮಿಕ್ ಆಫ್ ಮ್ಯೂಸಿಕ್ ಚೌಡಯ್ಯ ಅವಾರ್ಡ್–2023' ಪ್ರದಾನ: ಪಿ.ಬಿ. ವರಾಳೆ, ಪ್ರಶಸ್ತಿ ಪುರಸ್ಕೃತರು, ಗಾಯನ: ರಂಜನಿ, ಗಾಯತ್ರಿ, ಪಿಟೀಲು: ಚಾರುಮತಿ ರಘುರಾಮನ್, ಮೃದಂಗ: ದೆಹಲಿ ಸಾಯಿರಾಮ್, ಘಟ: ಓಂಕಾರ ರಾವ್, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾಕರ ಸಭಾಂಗಣ, ವೈಯಾಲಿಕಾವಲ್, ಮಲ್ಲೇಶ್ವರ, ಸಂಜೆ 6.15

ಪಿ.ಬಿ. ವರಾಳೆ

'ರುಕ್ಮಿಣೀಶ ವಿಜಯ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಸಂಜೆ 6.30

ವಿದ್ಯಾರ್ಥಿ ವೇತನ ಹೆಚ್ಚಳ, ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನಗಳ ಪರಿಣಾಮ

‘ವಿದ್ಯಾಚೇತನ’ಕ್ಕೆ ಅರ್ಜಿಗಳ ಮಹಾಪೂರ!

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸಾರಿಗೆ ನಿಗಮಗಳ ನೌಕರರ ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸಲು ವಿದ್ಯಾಚೇತನ ಯೋಜನೆಯಡಿ ನೀಡುವ ಮೊತ್ತ ನಾಲ್ಕೈದು ಪಟ್ಟು ಏರಿಕೆಯಾಗಿರುವುದು ಮತ್ತು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಿರುವುದರಿಂದ ಫಲಾನುಭವಿಗಳಲ್ಲಿ ಹುರುಪು ತುಂಬಿದೆ. ಪರಿಣಾಮವಾಗಿ ಪ್ರತಿ ವರ್ಷ ನೂರರ ಗಡಿ ಮುಟ್ಟದ ಅರ್ಜಿಗಳ ಸಂಖ್ಯೆ, ಈ ವರ್ಷ 4 ಸಾವಿರದ ಹತ್ತಿರ ತಲುಪಿದೆ.

ವರ್ಷಕ್ಕೆ ₹2 ಲಕ್ಷದಿಂದ ₹3 ಲಕ್ಷವರೆಗೆ ವಿದ್ಯಾರ್ಥಿವೇತನ ನೀಡಲಾಗುತ್ತಿತ್ತು. ಈ ವರ್ಷ ಇಲ್ಲಿವರೆಗೆ ₹ 1.02 ಕೋಟಿ ನೀಡಲಾಗಿದೆ. ಮಾತ್ರವಲ್ಲ, ಇನ್ನೂ ಬಹಳಷ್ಟು ಅರ್ಜಿಗಳು ಬಾಕಿ ಉಳಿದಿವೆ. ಈ ಅಂಶಗಳು ‘ವಿದ್ಯಾ-ಚೇತನ’ದಲ್ಲಿ ಉಂಟಾಗಿರುವ ಭಾರಿ ಬದಲಾವಣೆಗೆ ಸಾಕ್ಷಿಯಾಗಿವೆ.

ಪ್ರಜಾವಾಣಿ ವಿಶೇಷ

ಪ್ರತಿ ವರ್ಷ ಒಟ್ಟು ಅರ್ಜಿಗಳ ಸಂಖ್ಯೆ 70–80 ಇರುತ್ತಿದ್ದರೆ ಈ ಬಾರಿ ಉನ್ನತ ಶಿಕ್ಷಣದ ವಿದ್ಯಾರ್ಥಿಗಳೇ 72 ಮಂದಿ ಇದ್ದಾರೆ. ಎಂಬಿಬಿಎಸ್– 55, ಐಐಟಿ – 3, ಪಿ.ಎಚ್‌ಡಿ – 3, ವಿದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ನಾಲ್ವರು ಸೇರಿದಂತೆ ಒಟ್ಟು 3,979 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ಐಟಿಐ, ಜೆಒಸಿ, ಬಿಇ, ಬಿವಿಎಸ್‌ಸಿ, ಬಿಎಚ್‌ಎಸ್‌ಸಿ, ಬಿಎಸ್‌ಸಿ ಸೇರಿದಂತೆ ವಿವಿಧ ಪದವಿ ವಿದ್ಯಭ್ಯಾಸ ಮಾಡುವವರಿಗೆ ₹ 900, ಡಿಪ್ಲೊಮಾ ಓದುವವರಿಗೆ ₹880 ವಿದ್ಯಾರ್ಥಿ ವೇತನ ನೀಡಲಾಗುತ್ತಿತ್ತು. ಈ ವರ್ಷ ₹5,000ಕ್ಕೆ ಏರಿಸಲಾಗಿದೆ. ವೈದ್ಯಕೀಯ ಪದವಿಯ ನಾಲ್ಕೂವರೆ ವರ್ಷಕ್ಕೆ ನೀಡಲಾಗುತ್ತಿದ್ದ ₹ 10,350 ಮೊತ್ತವನ್ನು ₹ 33,750ಕ್ಕೆ ಏರಿಸಲಾಗಿದೆ. 2 ವರ್ಷದ ಉನ್ನತ ಪದವಿಗೆ ನೀಡುತ್ತಿದ್ದ ₹ 3,500 ಮೊತ್ತವನ್ನು ದುಪ್ಪಟ್ಟು ಮಾಡಲಾಗಿದೆ. 3 ವರ್ಷದ ಉನ್ನತ ಪದವಿಗೆ ನೀಡುತ್ತಿದ್ದ ₹ 5,400 ಮೊತ್ತವನ್ನು ₹ 21,000ಕ್ಕೆ ಏರಿಸಲಾಗಿದೆ. ಈ ಬದಲಾವಣೆಗಳು ಫಲಾನುಭವಿಗಳನ್ನು ಆಸಕ್ತಿಯಿಂದ ಅರ್ಜಿ ಸಲ್ಲಿಸುವಂತೆ ಮಾಡಿವೆ.

‘ನನ್ನ ಮಗ ವಿನೋದ್ ಕುಮಾರ್ ಬೆಂಗಳೂರಿನಲ್ಲಿ ಬಿ.ಟೆಕ್ ಮಾಡಿದ್ದ. ಗೇಟ್ ಎಕ್ಸಾಂ ಉತ್ತೀರ್ಣನಾಗಿ ಈಗ ಪಶ್ಚಿಮ ಬಂಗಾಳದ ಖರಗ್‌ಪುರ ಐಐಟಿಯಲ್ಲಿ ಎಂ.ಟೆಕ್ ಮಾಡುತ್ತಿದ್ದಾನೆ. ಮೊತ್ತ ಕಡಿಮೆ ಹಾಗೂ ಅರ್ಜಿ ಸಲ್ಲಿಸಲು ಕಚೇರಿಗೆ ಹೋಗಬೇಕಾಗಿತ್ತು ಎಂಬ ಕಾರಣಕ್ಕೆ ಇಲ್ಲಿವರೆಗೆ ವಿದ್ಯಾರ್ಥಿ ವೇತನಕ್ಕೆ ಒಮ್ಮೆಯೂ ಅರ್ಜಿ ಸಲ್ಲಿಸಿರಲಿಲ್ಲ. ಈಗ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಕಾಶವಿರುವುದರಿಂದ ಓಡಾಟ ತಪ್ಪಿದೆ. ಹಾಗಾಗಿ ಇದೇ ಮೊದಲ ಬಾರಿಗೆ ಅರ್ಜಿ ಸಲ್ಲಿಸಿದ್ದೆ. ಸರ್ಕಾರ ₹ 7,000 ನೀಡಿದೆ. ಸರ್ಕಾರಿ ಸೀಟು ಸಿಕ್ಕಿದೆ. ಉಳಿದ ಖರ್ಚಿಗೆ ವಿದ್ಯಾರ್ಥಿ ವೇತನ ಉಪಯೋಗವಾಯಿತು’ ಎಂದು ಕೆಎಸ್‌ಆರ್‌ಟಿಸಿ ತುಮಕೂರು ವಿಭಾಗದ ಸಹಾಯಕ ಸಂಚಾರ ಅಧೀಕ್ಷಕ ಮಾಶಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

‘ನನ್ನ ಮಗಳು ಮೈತ್ರಿ ಸಿ.ಆರ್. ನಾಲ್ಕು ವರ್ಷಗಳ ಹಿಂದೆ ಪಿಯುಸಿ ಓದುತ್ತಿದ್ದಾಗ ಒಮ್ಮೆ ಅರ್ಜಿ ಸಲ್ಲಿಸಿದ್ದೆ. ಒಂದೇ ಬಾರಿಗೆ ಸುಸ್ತಾಗಿ ಮತ್ತೆ ಅರ್ಜಿ ಹಾಕಿರಲಿಲ್ಲ. ಈಗ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಎಂಬಿಬಿಎಸ್ (ಎರಡನೇ ವರ್ಷ) ಓದುತ್ತಿದ್ದಾಳೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೆ ವರ್ಷಕ್ಕೆ ₹7,500 ವಿದ್ಯಾರ್ಥಿವೇತನ ಸಿಗುತ್ತದೆ ಎಂದು ಗೊತ್ತಾಗಿ ಅರ್ಜಿ ಸಲ್ಲಿಸಿದಳು. ವಿದ್ಯಾರ್ಥಿ ವೇತನ ಕೈಸೇರಿತು. ವಸತಿ ನಿಲಯದ ಖರ್ಚಿಗೆ ಆಯಿತು. ಸರ್ಕಾರ ವಿದ್ಯಾರ್ಥಿ ವೇತನ ಹೆಚ್ಚಿಸಿರುವುದು ಬಹಳ ಮಂದಿಗೆ ಅನುಕೂಲವಾಗಿದೆ’ ಎಂದು ಕೆಎಸ್‌ಆರ್‌ಟಿಸಿ ಚಿಕ್ಕಮಗಳೂರು ವಿಭಾಗದಲ್ಲಿ ಚಾಲಕರಾಗಿರುವ ಎಚ್.ಎಸ್. ರಂಗನಾಥ್ ತಿಳಿಸಿದರು.

ಅಂಕದ ಮಿತಿ ತೆಗೆಯಲಾಗಿದೆ

ವಿದ್ಯಾಚೇತನಕ್ಕೆ ಸುಮಾರು ₹ 3 ಲಕ್ಷ ಬಜೆಟ್ ಇಡುತ್ತಿದ್ದರು. ಆ ಹಣಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಶೇ 80 ರಿಂದ ಶೇ 90 ಅಂಕ ಗಳಿಸಿರಬೇಕು ಎಂದೆಲ್ಲ ಷರತ್ತುಗಳನ್ನು ವಿಧಿಸಲಾಗುತ್ತಿತ್ತು. ಈ ಮಿತಿಗಳನ್ನೆಲ್ಲ ತೆಗೆದು ಸಾರಿಗೆ ನಿಗಮದಲ್ಲಿ ದುಡಿಯುವ ಎಲ್ಲರ ಮಕ್ಕಳ ಕಲಿಕೆಗೂ ಪ್ರೋತ್ಸಾಹ ನೀಡಲು ನಿರ್ಧರಿಸಿದೆವು. ವಿದ್ಯಾರ್ಥಿ ವೇತನದ ಮೊತ್ತವನ್ನು ಹೆಚ್ಚಿಸಿದೆವು. ಅದರ ಪರಿಣಾಮ ಅರ್ಜಿಗಳ ಸಂಖ್ಯೆ ಹೆಚ್ಚಳವಾಗಿದೆ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಅಂಕಿ-ಅಂಶಗಳು

80 ವಿದ್ಯಾಚೇತನಕ್ಕೆ ಪ್ರತಿ ವರ್ಷ ಬರುತ್ತಿದ್ದ ಸರಾಸರಿ ಅರ್ಜಿ

3,979 ಈ ವರ್ಷ ಸಲ್ಲಿಕೆಯಾಗಿರುವ ಅರ್ಜಿ

2,069 ಈ ವರ್ಷ ಇಲ್ಲಿವರೆಗೆ ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳು

₹1.02 ಕೋಟಿ ಈ ವರ್ಷ ವಿತರಣೆಯಾಗಿರುವ ಮೊತ್ತ

‘ಸರ್ಕಾರ ಬರವೀಕ್ಷಣೆ ನಾಟಕಕ್ಕೆ ಹೊರಟಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ತೀವ್ರ ಬರಗಾಲವಿದ್ದರೂ ಕಾಂಗ್ರೆಸ್ ಸರ್ಕಾರದ ಸಚಿವರು, ಶಾಸಕರು ಮೈಮರೆತು ಕುಳಿತಿದ್ದರು. ಬಿಜೆಪಿ ಅಧ್ಯಯನ ಪ್ರವಾಸ ಆರಂಭಿಸಿದ ಬಳಿಕ ಕಾಂಗ್ರೆಸ್‌ನವರೂ ಬರ ವೀಕ್ಷಣೆಯ ನಾಟಕಕ್ಕೆ ಹೊರಟಿದ್ದಾರೆ’ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಟೀಕಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗ ಮುಖ್ಯಮಂತ್ರಿ, ಸಚಿವರು ಮತ್ತು ಕಾಂಗ್ರೆಸ್ ಶಾಸಕರಿಗೆ ಜ್ಞಾನೋದಯವಾಗಿದೆ. ಜನರ ಕೋಪಕ್ಕೆ ಗುರಿಯಾಗಬಹುದು ಎಂಬ ಭಯದಿಂದ ಪ್ರವಾಸ ಹೊರಡಲು ಸಜ್ಜಾಗಿದ್ದಾರೆ’ ಎಂದರು.

ಬರ ನಿರ್ವಹಣೆಗೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಎಲ್ಲದಕ್ಕೂ ಕೇಂದ್ರ ಸರ್ಕಾರದ ಕಡೆ ಕೈ ತೋರಿಸುತ್ತಿದೆ. ಕೇಂದ್ರ ವಿಪತ್ತು ಪರಿಹಾರ ನಿಧಿಯಿಂದ ಈಗಾಗಲೇ ₹ 300 ಕೋಟಿ ಬಿಡುಗಡೆ ಮಾಡಲಾಗಿದೆ. ಮುಂದೆಯೂ ಹಣ ಬಿಡುಗಡೆ ಆಗಲಿದೆ. ಆದರೆ, ಬರ ಪರಿಸ್ಥಿತಿ ನಿಭಾಯಿಸಲು ರಾಜ್ಯ ಸರ್ಕಾರದ ಯೋಜನೆ ಏನು ಎನ್ನುವುದನ್ನು ಬಹಿರಂಗವಾಗಿ ಹೇಳಲಿ ಎಂದರು.

ಸಂಕಷ್ಟದಲ್ಲಿರುವ ರೈತರ ಸಾಲ ಮನ್ನಾ ಕುರಿತು ಸರ್ಕಾರ ಮೌನ ತಾಳಿದೆ. ಕೃಷಿ ನೀರಾವರಿಗೆ ಏಳು ಗಂಟೆ ತ್ರಿಫೇಸ್ ವಿದ್ಯುತ್ ಪೂರೈಕೆಯ ಭರವಸೆ ಈಡೇರಿಸಿಲ್ಲ. ರೈತರ ಆತ್ಮಹತ್ಯೆ ತಡೆಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಿದ್ದ ರೈತಪರ ಯೋಜನೆಗಳನ್ನೂ ಸ್ಥಗಿತಗೊಳಿಸಿ ಅನ್ಯಾಯ ಮಾಡಿದ್ದಾರೆ ಎಂದು ದೂರಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವರು ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದಾರೆ. ಜನಪರವಾದ ಯಾವ ಕೆಲಸಗಳೂ ಆಗುತ್ತಿಲ್ಲ. ರಾಜ್ಯದಲ್ಲಿ ಸರ್ಕಾರ ಇದೆಯೊ? ಇಲ್ಲವೊ? ತಿಳಿಯುತ್ತಿಲ್ಲ’ ಎಂದರು.

ಚಿತ್ರಸಂಪುಟ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ

‘ಚರಿತ್ರೆಕಾರರಿಗೆ ಕಡ್ಡಾಯ ರಜೆಯ ಕಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನ ಮತ್ತು ಆಧಾರ ಇಲ್ಲದೆಯೇ ಚರಿತ್ರೆಯ ಚಾರಿತ್ರ್ಯ ಹರಣ ಮಾಡಲಾಗುತ್ತಿದೆ. ಇದರಿಂದಾಗಿ ಚರಿತ್ರೆಕಾರರಿಗೆ ಕಡ್ಡಾಯ ರಜೆ ಘೋಷಿಸಿದಂತೆ ಕಾಣುತ್ತದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ವಿಕಾಸ ರಂಗ ಹಾಗೂ ವೀರಲೋಕ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಂತೋಷ ಹಾನಗಲ್ಲ ಅವರ ‘ವೀರ ಸೌದಾಮಿನಿ ಕಿತ್ತೂರು ರಾಣಿ ಚನ್ನಮ್ಮ’ ಚಿತ್ರಸಂಪುಟ ಬಿಡುಗಡೆ ಮಾಡಿ, ಮಾತನಾಡಿದರು.

‘ಈಗಿನ ಸ್ಥಿತಿಯಲ್ಲಿ ಜಾತಿ, ಧರ್ಮ ಹಾಗೂ ವರ್ಣದ ಮನ್ನಣೆ ಇಲ್ಲದವರಿಗೆ ಏನಾದರು ಆದರೆ ಅವರ ಪರವಾಗಿ ಯಾರೂ ಬರುವುದಿಲ್ಲ. ಇದಕ್ಕೆ ಉತ್ತಮ ಉದಾಹರಣೆ ಗಾಂಧೀಜಿ. ಅವರನ್ನು ಈ ದೇಶದಲ್ಲಿ ಯಾರು ಏನು ಬೇಕಾದರೂ ಟೀಕೆ ಮಾಡಬಹುದು. ಆದರೆ, ಬೇರೆಯವರನ್ನು ಹೀಗೆ ಟೀಕೆ ಮಾಡಲು ಸಾಧ್ಯವಿಲ್ಲ. ಕರ್ನಾಟಕ ಒಳಗೊಂಡಂತೆ ನಮ್ಮ ದೇಶದ ಚಾರಿತ್ರಿಕ ಸಾಧಕರನ್ನು ಜಾತಿ, ವರ್ಣ ಹಾಗೂ ಧರ್ಮದ ಮೇಲೆ ಅಳೆಯಲಾಗುತ್ತಿದೆ. ಹೀಗೆ ಅಳೆಯುವುದು ಚರಿತ್ರೆಯಲ್ಲ. ನಿಜವಾದ ಚರಿತ್ರೆ ಪಕ್ಷ, ಜಾತಿ ಹಾಗೂ ಧರ್ಮ ರಾಜಕೀಯದಿಂದ ದೂರ ಇರಬೇಕು’ ಎಂದು ಹೇಳಿದರು.

‘ಚರಿತ್ರೆಯ ಬಗ್ಗೆ ಅಧ್ಯಯನ, ಆಧಾರ ಇರದಿದ್ದರೆ ಮಾತನಾಡಬಾರದು. ಪಕ್ಷ, ಜಾತಿ ಹಾಗೂ ಧರ್ಮದ ಆಚೆ ಚರಿತ್ರೆಯನ್ನು ನೋಡದಿದ್ದರೆ ಚರಿತ್ರೆಯ ಚಾರಿತ್ರ್ಯ ಹರಣ ಆಗುತ್ತದೆ’ ಎಂದರು.

‘ನಮ್ಮ ಇತಿಹಾಸದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚನ್ನಮ್ಮ ಸೇರಿ ಬೆರಳಣಿಕೆಯಷ್ಟು ಮಹಿಳೆಯರು ಸಿಂಹಾಸನದಲ್ಲಿ ಕುಳಿತು, ಆಳ್ವಿಕೆ ಮಾಡಿದ್ದಾರೆ. ಅದು ಕೂಡ ಪತಿ ಇಲ್ಲದ ಸಂದರ್ಭದಲ್ಲಿ ಸತಿಗೆ ಸ್ಥಾನ ನೀಡಲಾಗಿದೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ಅವಕಾಶ ಸಿಕ್ಕಾಗ ಸಮರ್ಥವಾಗಿ ನಿಭಾಯಿಸಿ, ಸ್ತ್ರೀ ಶಕ್ತಿಯ ಬಗ್ಗೆ ತೋರಿಸಿಕೊಟ್ಟಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥ ಅಮರೇಶ ಯತಗಲ್, ‘ಕಿತ್ತೂರು ಸಂಸ್ಥಾನ ಸ್ವಾಭಿಮಾನ, ನಾಡಪ್ರೇಮ ಹಾಗೂ ಛಲದ ಸಂಕೇತ. ದೊಡ್ಡ ದೊಡ್ಡ ರಾಜಮನೆತನಗಳ ಬಗ್ಗೆ ಸಂಶೋಧನಾ ಕೃತಿಗಳು ಬರುವುದು ಸಾಮಾನ್ಯ. ಸ್ವಾತಂತ್ರ್ಯ ಹೋರಾಟಕ್ಕೆ ಸಣ್ಣ ಮನೆತನಗಳು ಕೂಡ ಕೊಡುಗೆ ನೀಡಿದ್ದು, ಇತ್ತೀಚೆಗೆ ಈ ಬಗ್ಗೆ ಸಂಶೋಧನಾ ಕೃತಿಗಳು ಹೊರಬರುತ್ತಿರುವುದು ಉತ್ತಮ ಬೆಳವಣಿಗೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂತೋಷ ಹಾನಗಲ್ಲ (ಎಡದಿಂದ ಮೊದಲಿಗರು) ಅವರ ‘ವೀರ ಸೌದಾಮಿನಿ ಕಿತ್ತೂರು ರಾಣಿ ಚನ್ನಮ್ಮ’ ಚಿತ್ರಸಂಪುಟವನ್ನು ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ಅಮರೇಶ ಯತಗಲ್, ಬೆಳಗಾವಿಯ ಕಿತ್ತೂರಿನ ರಾಜಗುರು ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಮಲ್ಲಿಕಾ ಎಸ್. ಘಂಟಿ ಇದ್ದಾರೆ –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: ‘ವೀರ ಸೌದಾಮಿನಿ ಕಿತ್ತೂರು ರಾಣಿ ಚನ್ನಮ್ಮ’
ಲೇಖಕರು: ಸಂತೋಷ ಹಾನಗಲ್ಲ
ಬೆಲೆ: ₹ 999
ಪುಟಗಳು: 372
ಪ್ರಕಾಶನ: ರಾಜಗುರು ಅಧ್ಯಯನ ಸಂಸ್ಥೆ ಕಲ್ಮಠ

ಅಮ್ಮನೊಂದಿಗೆ ಮರಿಯಾನೆ

ಶಿವಮೊಗ್ಗ ಸಮೀಪದ ಸಕ್ರೆಬೈಲು ಆನೆ ಬಿಡಾರದಲ್ಲಿ ಭಾನುಮತಿ ಆನೆಯು ಹೆಣ್ಣು ಮರಿಗೆ ಶನಿವಾರ ಜನ್ಮ ನೀಡಿದೆ

ಕನಿಷ್ಠ ವೇತನ: ಸಹಾಯವಾಣಿಗೆ ಚಿಂತನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ ಸಂಬಂಧ ಸಹಾಯವಾಣಿ ಆರಂಭಿಸಲು ಚಿಂತಿಸಲಾಗಿದೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

‘ಅಧಿಕಾರಿಗಳು, ಸಂಘಟನೆಗಳ ಮುಖಂಡರು ಈ ಕುರಿತು ಸಲಹೆ ನೀಡಬೇಕು. ತುರ್ತಾಗಿ ಪರಿಹಾರ ಒದಗಿಸಲು ಹಾಗೂ ಕುಂದುಕೊರತೆಗಳ ನಿವಾರಣೆಗೆ ಸಹಾಯವಾಣಿ ಸಹಕಾರಿಯಾಗಲಿದೆ’ ಎಂದು ಕಾರ್ಮಿಕ ಸಂಘಟನೆಗಳ ಮುಖಂಡರ ಜೊತೆಗಿನ ಸಭೆಯಲ್ಲಿ ಶನಿವಾರ ತಿಳಿಸಿದರು.

‘ಕಾರ್ಮಿಕ ಮಂಡಳಿ ಉಳಿಸುವುದು ನಮ್ಮ ಉದ್ದೇಶ. ಬೋಗಸ್ ಕಾರ್ಡ್‌ಗಳ ಪತ್ತೆಗಾಗಿ ಜಿಯೋ ಮ್ಯಾಪಿಂಗ್ ವ್ಯವಸ್ಥೆ ಜಾರಿಗೊಳಿಸಲು ಚಿಂತಿಸಿದ್ದೇವೆ. 2017ರಲ್ಲಿ ಕಟ್ಟಡ ಕಾರ್ಮಿಕರ ಸಂಖ್ಯೆ 8 ಲಕ್ಷದಷ್ಟಿತ್ತು. 2019–2022ರ ಅವಧಿಯಲ್ಲಿ ಇದು 39 ಲಕ್ಷಕ್ಕೆ ಏರಿದೆ. ಹಿಂದೆ ₹800 ಕೋಟಿಯಿಂದ ₹900 ಕೋಟಿ ಸೆಸ್ ಸಂಗ್ರಹವಾಗುತ್ತಿತ್ತು. ಕಾರ್ಮಿಕರ ಸಂಖ್ಯೆ ಹೆಚ್ಚಾದರೂ ಪ್ರಸ್ತುತ ₹1,000 ಕೋಟಿ ಸೆಸ್ ಸಂಗ್ರಹವಾಗುತ್ತಿದೆ. ನಕಲಿ ಕಾರ್ಡ್ ಪತ್ತೆ ಹಾಗೂ ಸೆಸ್ ಸಂಗ್ರಹ ಹೆಚ್ಚಿಸಲು ಜಿಯೋ ಮ್ಯಾಪಿಂಗ್ ನೆರವಾಗಲಿದೆ’ ಎಂದರು.

‘ಕೋವಿಡ್ ಸಮಯದಲ್ಲಿ ಕಾರ್ಮಿಕರಿಗೆ ಕಿಟ್ ವಿತರಣೆ, ಕಾಮಗಾರಿ ಸೇರಿದಂತೆ ಇಲಾಖೆಗೆ ಸಂಬಂಧಿಸಿದ ಇತರೆ ಹಲವು ವಿಚಾರಗಳಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ದೂರುಗಳು ಬಂದಿವೆ. ಈ ಕುರಿತು ತನಿಖೆ ನಡೆಸುತ್ತೇವೆ’ ಎಂದು ಹೇಳಿದರು.

ಇನ್ನೂ 7 ತಾಲ್ಲೂಕು ಬರ ಪಟ್ಟಿಗೆ

ಬೆಂಗಳೂರು: ಬೀದರ್, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ ಏಳು ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶಗಳ ಪಟ್ಟಿಗೆ ಸೇರಿಸಿ ಶನಿವಾರ ಆದೇಶ ಹೊರಡಿಸಲಾಗಿದೆ.

ಮುಂಗಾರು ಮಳೆಯ ತೀವ್ರ ಕೊರತೆಯ ಕಾರಣದಿಂದ ರಾಜ್ಯದ 195 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳು ಎಂದು ಮೊದಲ ಹಂತದಲ್ಲಿ ಘೋಷಿಸಲಾಗಿತ್ತು. ಎರಡನೇ ಹಂತದಲ್ಲಿ, ಬರಪೀಡಿತ ಪ್ರದೇಶಗಳ ಪಟ್ಟಿಗೆ 21 ತಾಲ್ಲೂಕುಗಳನ್ನು ಸೇರಿಸಲಾಗಿತ್ತು. ಮೂರನೇ ಹಂತದಲ್ಲಿ ಏಳು ತಾಲ್ಲೂಕುಗಳನ್ನು ಸೇರಿಸಲಾಗಿದೆ. ಈಗ ರಾಜ್ಯದ ಒಟ್ಟು 236 ತಾಲ್ಲೂಕುಗಳಲ್ಲಿ 223 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ.

ಬೀದರ್ ಜಿಲ್ಲೆಯ ಔರಾದ್, ಬೀದರ್, ಚಿಟಗುಪ್ಪಾ, ಹುಮ್ನಾಬಾದ್, ಕಮಲನಗರ, ರಾಯಚೂರು ಜಿಲ್ಲೆಯ ಸಿಂಧನೂರು ಮತ್ತು ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಮನೆಗಳಿಗೆ ಬೀಗ: ಬದುಕು ಬೀದಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಕ್ಷೇತ್ರದ ಕುವೆಂಪುನಗರದ ವಾರ್ಡ್ 15ರ ವರದರಾಜ ನಗರದಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ದೋಬಿಘಾಟ್ ನಿವಾಸಿಗಳನ್ನು ಶನಿವಾರ ಮಧ್ಯಾಹ್ನ ಖಾಲಿ ಮಾಡಿಸಲಾಗಿದ್ದು ನೂರಾರು ಮಂದಿ ಬದುಕು ಬೀದಿಗೆ ಬಿದ್ದಿದೆ.

ಪೊಲೀಸ್ ಭದ್ರತೆಯಲ್ಲಿ ಕೊಳೆಗೇರಿ ನಿರ್ಮೂಲನಾ ಮಂಡಳಿ ಅಧಿಕಾರಿಗಳು ಮನೆ ಖಾಲಿ ಮಾಡಿಸಿದರು ಎಂದು ನಿವಾಸಿಗಳು ಕಣ್ಣೀರು ಹಾಕಿದರು.

ಮನೆಗಳನ್ನು ಖಾಲಿ ಮಾಡಿಸಿದ್ದನ್ನು ಖಂಡಿಸಿ, ನಿವಾಸಿಗಳು ಅಪಾರ್ಟ್‌ಮೆಂಟ್ ಎದುರು ಪ್ರತಿಭಟನೆ ನಡೆಸಿದರು. ಮಂಡಳಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ಸ್ಥಳ ಬಿಟ್ಟು ಕದಲುವುದಿಲ್ಲ ಎಂದು ಪಟ್ಟುಹಿಡಿದರು.

‘ಹಾಸಿಗೆ, ಚಾಪೆ, ದಿಂಬು, ಪಾತ್ರೆಗಳು, ತಟ್ಟೆ-ಲೋಟ, ಟೇಬಲ್ ಫ್ಯಾನ್, ಟೇಬಲ್, ಕುರ್ಚಿಗಳು... ಹೀಗೆ ಯಾವುದನ್ನೂ ಬಿಡದೇ ಮನೆಯಿಂದ ಹೊರ ಹಾಕಿದರು. ಸಮಯವನ್ನೂ ನೀಡಲಿಲ್ಲ. ಬೀಗಕ್ಕೆ ಸೀಲ್ ಮಾಡಲಾಗಿದೆ’ ಎಂದು ನಿವಾಸಿ ಆರ್ಮುಗಂ ಹೇಳಿದರು.

‘ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 128 ಫ್ಲ್ಯಾಟ್‌ಗಳಿವೆ. ದೋಬಿಘಾಟ್‌ನಲ್ಲಿ ಕೆಲಸ ಮಾಡುತ್ತಿದ್ದವರು ಆ ಮನೆಗಳಲ್ಲಿ ನೆಲೆಸಿದ್ದರು. ಮನೆಗಳು ನಿಮ್ಮ ಹೆಸರಿಗೆ ಮಂಜೂರು ಆಗಿಲ್ಲ. ಅನಧಿಕೃತವಾಗಿ ನೆಲೆಸಿದ್ದೀರಿ ಎಂಬ ಕಾರಣ ನೀಡಿ ಮನೆಗಳನ್ನು ಖಾಲಿ ಮಾಡಿಸಲಾಗಿದೆ’ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

‘ನಮ್ಮ ಹೆಸರಿಗೇ ಮನೆ ಮಂಜೂರು ಮಾಡಿಕೊಡಬೇಕು. ಏಕಾಏಕಿ ಮನೆ ಖಾಲಿ ಮಾಡಿಸಿದರೆ ನಾವು ಎಲ್ಲಿಗೆ ತೆರಳುವುದು? ಮಡಿವಾಳ ಸಮುದಾಯಕ್ಕೆಂದೇ 2014ರಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಲಾಗಿತ್ತು. ಕೋವಿಡ್ ಸಮಯದಲ್ಲಿ ಮನೆ ಬಾಡಿಗೆ ಪಾವತಿಸಲು ಸಾಧ್ಯವಾಗದೆ ಇಲ್ಲಿಗೆ ಬಂದು ನೆಲೆಸಿದ್ದೆವು. ಈ ಫ್ಲ್ಯಾಟ್‌ಗಳನ್ನು ಬೇರೆಯವರಿಗೆ ಮಾರಾಟ ಮಾಡಿರುವ ಶಂಕೆಯಿದೆ’ ಎಂದು ನಿವಾಸಿ ಪ್ರಭು ಆಪಾದಿಸಿದರು.

ಮನೆ ಖಾಲಿ ಮಾಡಿಸಿದ್ದನ್ನು ಖಂಡಿಸಿ ದೋಬಿಘಾಟ್ ನಿವಾಸಿಗಳು ಶನಿವಾರ ಪ್ರತಿಭಟನೆ ನಡೆಸಿದರು

‘ಅನಧಿಕೃತ ವಾಸ’

ಫ್ಲ್ಯಾಟ್‌ಗಳಿಗೆ ವಿದ್ಯುತ್ ಹಾಗೂ ನೀರಿನ ಸಂಪರ್ಕ ಕಲ್ಪಿಸಿಲ್ಲ. ಬಿಬಿಎಂಪಿ ಸಿದ್ಧಪಡಿಸಿದ್ದ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೂ ಕೆಲವರು ಅನಧಿಕೃತವಾಗಿ ಬಂದು ನೆಲೆಸಿದ್ದರು. ಆ ಮನೆಗಳಲ್ಲಿ ನೆಲೆಸಿದ್ದವರನ್ನು ಖಾಲಿ ಮಾಡಿಸಲಾಗಿದೆ ಎಂದು ಕೊಳಗೇರಿ ನಿರ್ಮೂಲನಾ ಮಂಡಳಿ ಮುಖ್ಯ ಎಂಜಿನಿಯರ್ ಎನ್.ಪಿ.ಬಾಲರಾಜ್ ತಿಳಿಸಿದರು.

ಹೆಚ್ಚುವರಿ ವರಮಾನ: ವೆಚ್ಚ ಭರಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ ₹ 92 ಸಾವಿರ ಕೋಟಿ ವರಮಾನ ಜಮೆ ಆಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಜಮೆಯಾಗಿದ್ದ ₹ 82 ಸಾವಿರ ಕೋಟಿಗೆ ಹೋಲಿಸಿದರೆ ₹ 10 ಸಾವಿರ ಕೋಟಿ ಹೆಚ್ಚುವರಿ ವರಮಾನ ಬಂದಿದೆ. ಹೆಚ್ಚುವರಿ ವರಮಾನ ಸಂಗ್ರಹದಿಂದ ‘ಗ್ಯಾರಂಟಿ’ಗಳ ವೆಚ್ಚ ಭರಿಸಲು ಸಾಧ್ಯವಾಗಿದೆ ಎಂದು ಆರ್ಥಿಕ ಇಲಾಖೆಯ ಮೂಲಗಳು ತಿಳಿಸಿವೆ.

‘ರಾಜ್ಯದ ಪಾಲಿನ ಜಿಎಸ್‌ಟಿ ₹ 52,760 ಕೋಟಿ (ಕಳೆದ ವರ್ಷ 47 ಸಾವಿರ ಕೋಟಿ), ಅಬಕಾರಿ ಮೂಲದಿಂದ ₹ 19 ಸಾವಿರ ಕೋಟಿ (ಕಳೆದ ವರ್ಷ ₹ 17 ಸಾವಿರ ಕೋಟಿ), ಗಣಿ ಇಲಾಖೆಯಿಂದ ₹ 3,900 ಕೋಟಿ (ಕಳೆದ ವರ್ಷ ₹ 3 ಸಾವಿರ ಕೋಟಿ) ವರಮಾನ ಬಂದಿದೆ. ಹೀಗಾಗಿ ವೆಚ್ಚ ನಿರ್ವಹಣೆಗೆ ಯಾವುದೇ ಸಮಸ್ಯೆ ಆಗಿಲ್ಲ’ ಎಂದೂ ಮೂಲಗಳು ಹೇಳಿವೆ.

ಹೊಸ ಯೋಜನೆಗಳಿಗೆ ತಡೆ: ವಿವಿಧ ಕಾಮಗಾರಿಗಳ ಬಾಕಿ ಬಿಲ್ ₹ 25 ಸಾವಿರ ಕೋಟಿ, ಪ್ರಗತಿಯಲ್ಲಿರುವ ಕಾಮಗಾರಿಗಳ ಮೊತ್ತ ₹ 27 ಸಾವಿರ ಕೋಟಿ ಭರಿಸುವುದು ದೊಡ್ಡ ಸವಾಲು. ಹಿಂದಿನ ಸರ್ಕಾರ ಅಂದಾಜು ವೆಚ್ಚದ ಯೋಜನೆಗಳಿಗೆ ಸಾಂಕೇತಿಕವಾಗಿ ಅನುದಾನ ಕಾಯ್ದಿರಿಸಿ ಕಾಮಗಾರಿಗೆ ಚಾಲನೆ ನೀಡಿರುವುದು ಸಮಸ್ಯೆಗೆ ಕಾರಣ. ಹೀಗಾಗಿ, ಅಗತ್ಯವೆನಿಸಿದ ಮತ್ತು ತುರ್ತು ಕಾಮಗಾರಿಗಳಿಗೆ ಮಾತ್ರ ಅವಕಾಶ ನೀಡಲಾಗುತ್ತಿದೆ. ಹೊಸ ಯೋಜನೆಗಳಿಗೆ ಸದ್ಯಕ್ಕೆ ತಡೆ ಹಾಕಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ನೀರಾವರಿ ಪಂಪ್ ಸೆಟ್‌ಗಳಿಗೆ ಪೂರೈಸುವ ಉಚಿತ ವಿದ್ಯುತ್‌ಗೆ ವಾರ್ಷಿಕ ₹ 15 ಸಾವಿರ ಕೋಟಿ ವೆಚ್ಚವಾಗುತ್ತಿತ್ತು. ಆ ಮೊತ್ತ ಈ ಬಾರಿ 21 ಸಾವಿರ ಕೋಟಿಗೆ ಹೆಚ್ಚಳವಾಗಲಿದೆ ಎಂದು ಇಂಧನ ಇಲಾಖೆ ಮೂಲಗಳು ಮಾಹಿತಿ ನೀಡಿವೆ. ವಿದ್ಯುತ್ ಬೇಡಿಕೆ ಸರಿದೂಗಿಸಲು ಖರೀದಿಗೆ ವ್ಯಯಿಸಲಿರುವ ಮೊತ್ತ ಪ್ರತ್ಯೇಕವಾಗಿರಲಿದೆ ಎಂದು ಆರ್ಥಿಕ ಇಲಾಖೆಯ ಮೂಲಗಳು ವಿವರಿಸಿವೆ.

ನರೇಗಾ ಬಾಕಿ ಬಿಡುಗಡೆ: 3–4 ವರ್ಷಗಳಿಂದ ಬಾಕಿ ಇದ್ದ ಜಿಎಸ್‌ಟಿ ಪರಿಹಾರ ಮೊತ್ತ ₹ 2,300 ಕೋಟಿಯಲ್ಲಿ ₹ 1,190 ಕೋಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ನರೇಗಾ ಯೋಜನೆಯಡಿ ಪ್ರಸಕ್ತ ಆರ್ಥಿಕ ವರ್ಷದ ಕೂಲಿ ವೆಚ್ಚದ ಮೊತ್ತ ₹ 600 ಕೋಟಿ ಶುಕ್ರವಾರ ಬಿಡುಗಡೆ ಆಗಿದೆ.

ಪ್ರಜಾವಾಣಿ

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಪುಣೆ ರೇಸ್

ಡೇಂಜರಸ್ ಗೆಲ್ಲುವ ನಿರೀಕ್ಷೆ

ಟೀನಾ ಕಟ್ರಕ್ ಮೆಮೋರಿಯಲ್ ಆರ್.ಡಬ್ಲ್ಯು.ಐ.ಟಿ.ಸಿ ಲಿಮಿಟೆಡ್ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡೇಂಜರಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೌಸಾಬೆಲ್ 1, ಸ್ಲಮ್ ಡಂಕ್ 9, ಮುಫಾಜಾ 10
2ನೇ ರೇಸ್: ನೆಲ್ಸನ್ ರಿವರ್ 7, ಜೆಟ್‌ಫೈರ್ 1, ಲಿಯಮ್ 6
3ನೇ ರೇಸ್: ಅಟಾಶ್ 7, ಪೋರ್ಟೋಫಿನೊ ಬೇ 11, ಪ್ಯೂರ್ 8
4ನೇ ರೇಸ್: ಮೇಸಾರ 1, ಅಲ್ಟಿಮೊ 8, ಇನ್‌ಟುದಿ ಸ್ವಾರ್ಮ್ 7
5ನೇ ರೇಸ್: ಜೆಂಡಾಯ 3, ವೈಕಿಕಿ 2, ಹಾಲ್ ಆಫ್ ಗ್ರೇಸ್ 1
6ನೇ ರೇಸ್: ಲಿಟ್ಟೋರಿಯೊ 7, ಸೆರ್ರಾನೊ 9, ಬಬ್ಲಿ ಬಾಯ್ 4
7ನೇ ರೇಸ್: ಡೇಂಜರಸ್ 3, ನಾರ್ದರನ್ ಲೈಟ್ಸ್ 1
8ನೇ ರೇಸ್: ಐಡಿಯಾಲಿಸ್ಟ 2, ಗೋಲ್ಡಿವ 4, ಲಯನ್ ಕಿಂಗ್ 8
9ನೇ ರೇಸ್: ಫ್ಲಾಶಿಂಗ್ ಫೇಮಸ್ 2, ಹ್ಯಾರಿಯಟ್ 3, ಪ್ರಿನ್ಸ್ ಐಗೋರ್ 6

ಉತ್ತಮ ಬೆಟ್: ಫ್ಲಾಶಿಂಗ್ ಫೇಮಸ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್
2,3,4,5,6	5,6,7,8,9

1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
3,4,5	6,7,8	7,8,9

ಬರ ಅಧ್ಯಯನ: 24 ತಂಡ ರಚಿಸಿದ ಜೆಡಿಎಸ್

ಪ್ರಜಾವಾಣಿ ವಾರ್ತೆ

ರೈತ ಸಮುದಾಯಕ್ಕೆ ಧೈರ್ಯ ತುಂಬಲು ಡಿಸೆಂಬರ್‌ನಲ್ಲಿ ನಡೆಯುವ ಚಳಿಗಾಲದ ಅಧಿವೇಶನದ ನಂತರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ 'ರೈತ ಸಾಂತ್ವನ ಯಾತ್ರೆ' ಕೈಗೊಳ್ಳುತ್ತೇನೆ.

ಎಚ್‌.ಡಿ.ಕುಮಾರಸ್ವಾಮಿ,
ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಬೆಂಗಳೂರು: ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿಯನ್ನು ಅಧ್ಯಯನ ಮಾಡಲು, ಪ್ರತಿ ಜಿಲ್ಲೆಗೂ ಭೇಟಿ ನೀಡಿ ಸಂಕಷ್ಟದಲ್ಲಿರುವ ರೈತರಿಗೆ ಧೈರ್ಯ ತುಂಬಲು ಜೆಡಿಎಸ್ ಪಕ್ಷ 24 ತಂಡಗಳನ್ನು ರಚಿಸಿದೆ.

ಮುಂಗಾರು ವೈಫಲ್ಯದಿಂದ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸಂಪುಟದ ಸಚಿವರು ಜಿಲ್ಲಾ ಪ್ರವಾಸ ಮಾಡಿ ವರದಿ ಕೊಟ್ಟಿದ್ದಾರೆ. ಪರಿಹಾರಕ್ಕಾಗಿ ಕೇಂದ್ರಕ್ಕೆ ವರದಿಯನ್ನೂ ಸಲ್ಲಿಸಿದ್ದಾರೆ. ಆದರೆ, ಇಂತಹ ಸ್ಥಿತಿಯಲ್ಲಿ ರೈತರ ನೆರವಿಗೆ ಧಾವಿಸುವಲ್ಲಿ ಸರ್ಕಾರ ಸೋತಿದೆ. ನಷ್ಟದ ಖಚಿತ ಮಾಹಿತಿ ಪಡೆದು, ರೈತರಿಗೆ ಧೈರ್ಯ ತುಂಬಲು ಪಕ್ಷದ ನಾಯಕರನ್ನು ಒಳಗೊಂಡ ತಂಡಗಳನ್ನು ರಚಿಸಲಾಗಿದೆ. ನ.18ರ ಒಳಗೆ ತಂಡಗಳು ವರದಿ ನೀಡಲಿವೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವೈಫಲ್ಯ ಮುಚ್ಚಿಕೊಳ್ಳಲು ಆರೋಪ: ರಾಜ್ಯ ಸರ್ಕಾರ ಕಳೆದ ಐದು ತಿಂಗಳಿನಿಂದ ಎಲ್ಲ ಹಂತದಲ್ಲೂ ವಿಫಲವಾಗಿದೆ. ಅಕ್ಕಿ, ವಿದ್ಯುತ್ ಸೇರಿ ಎಲ್ಲ ಕೊರತೆಗೂ ಕೇಂದ್ರದ ಮೇಲೆ ಆರೋಪ ಮಾಡುತ್ತಿದೆ. ಬಿಜೆಪಿ ನಾಯಕರ ಬರ ಅಧ್ಯಯನ ಪ್ರವಾಸವನ್ನೂ ಸಿದ್ದರಾಮಯ್ಯ ಟೀಕಿಸಿದ್ದಾರೆ. ಅಧ್ಯಯನದ ಬದಲು ಕೇಂದ್ರದ ಬಳಿ ಹೋಗಿ ಪರಿಹಾರ ಕೇಳಬಹುದಿತ್ತು ಎಂದಿದ್ದಾರೆ. ಮುಖ್ಯಮಂತ್ರಿ ಹೀಗೆ ಹೇಳುವುದು ಸರಿಯೇ ಎಂದು ಪ್ರಶ್ನಿಸಿದರು.

214 ತಾಲ್ಲೂಕುಗಳಲ್ಲಿ ಬರ ಇದೆ. ಜನರ ಸಂಕಷ್ಟಕ್ಕೆ ಸ್ಪಂದಿಸಬೇಕಾದ ಮುಖ್ಯಮಂತ್ರಿ ಉತ್ಸವದಲ್ಲಿ ಡಾನ್ಸ್ ಮಾಡಿಕೊಂಡು ಕಾಲಹರಣ ಮಾಡುತ್ತಿದ್ದಾರೆ. ಕಷ್ಟದಲ್ಲಿರುವ ಜನರನ್ನು ಅಣಕಿಸುತ್ತಿದ್ದಾರೆ. ಬಿಜೆಪಿ ಅವಧಿಯಲ್ಲಿ ನೀಡುತ್ತಿದ್ದ ಕಿಸಾನ್ ಸಮ್ಮಾನ್ ಯೋಜನೆ ನಿಲ್ಲಿಸಿದ್ದಾರೆ ಎಂದು ಟೀಕಿಸಿದರು.

ಪ್ರಮುಖರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪೂರ, ವೆಂಕಟರಾವ್ ನಾಡಗೌಡ, ಆಲ್ಕೋಡ್ ಹನುಮಂತಪ್ಪ, ಶಾಸಕರಾದ ಸಮೃದ್ಧಿ ಮಂಜುನಾಥ್, ಸ್ವರೂಪ್ ಪ್ರಕಾಶ್, ನೇಮಿರಾಜ್ ನಾಯಕ್, ಮಾಜಿ ಶಾಸಕರಾದ ಆರ್. ಮಂಜುನಾಥ್, ರಾಜಾ ವೆಂಕಟಪ್ಪ ನಾಯಕ್, ನಗರ ಜೆಡಿಎಸ್ ಅಧ್ಯಕ್ಷ ಎಚ್‌.ಎಂ.ರಮೇಶ್ ಗೌಡ ಇದ್ದರು.

'ಚುನಾವಣೆಯಲ್ಲಿ ತೋರಿಸುತ್ತೇವೆ'

'ಬಿಜೆಪಿ ನಾಯಕರು ಜಾಬ್‌ಲೆಸ್, ಜೆಡಿಎಸ್ ಪೀಪಲ್‌ಲೆಸ್' ಎಂದು ಕಲಬುರಗಿ ನಾಯಕರೊಬ್ಬರು ಹೇಳಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಯಾರು 'ಪೀಪಲ್ ಲೆಸ್' ಎನ್ನುವುದನ್ನು ತೋರಿಸುತ್ತೇವೆ. ಅವರು ಪ್ರತಿನಿಧಿಸುವ ಕಲಬುರಗಿ ಜಿಲ್ಲೆಯ ಜನರಿಗೆ ಏನು ಕೊಟ್ಟಿದ್ದಾರೆ? ಅಲ್ಲಿನ ತೊಗರಿ ಬೆಳೆಗಾರರ ಸಂಕಷ್ಟಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಸ್ಪಂದಿಸಿದ್ದಾರಾ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ವಿಜಯಪುರ ಜಿಲ್ಲೆಯಿಂದ ಬರ ಅಧ್ಯಯನ ಆರಂಭಿಸಿದ ಬಿಜೆಪಿ; ರೈತರ ಅಹವಾಲು ಆಲಿಸಿದ ಪಕ್ಷದ ಮುಖಂಡರು

ರೈತರ ಶಾಪದಿಂದ ಸರ್ಕಾರ ಪತನ: ಕಟೀಲ್

ಪ್ರಜಾವಾಣಿ ವಾರ್ತೆ

ವಿಜಯಪುರ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದ ಬಿಜೆಪಿ ಬರ ಅಧ್ಯಯನ ತಂಡವು ಶನಿವಾರ ತಿಕೋಟಾ ತಾಲ್ಲೂಕಿನ ಜಾಲಗೇರಿ, ನಾಗಠಾಣ ಕ್ಷೇತ್ರದ ಜುಮನಾಳ ಮತ್ತು ಬಸವನ ಬಾಗೇವಾಡಿ ತಾಲ್ಲೂಕಿನ ಮುಳವಾಡ ಮತ್ತು ಕೊಲ್ಹಾರದಲ್ಲಿ ಬರಕ್ಕೆ ತುತ್ತಾದ ರೈತರ ಮೆಕ್ಕೆಜೋಳ, ಉಳ್ಳಾಗಡ್ಡಿ, ತೊಗರಿ, ಕಬ್ಬಿನ ಹೊಲಗಳಿಗೆ ಭೇಟಿ ನೀಡಿ, ವಸ್ತುಸ್ಥಿತಿ ಪರಿಶೀಲಿಸಿತು.

ಬರದಿಂದ ಸಂಕಷ್ಟಕ್ಕೆ ಒಳಗಾದ ರೈತರ ಅಹವಾಲು ಆಲಿಸಿದ ಕಟೀಲ್, ನಿಮ್ಮ ಹೊಲಕ್ಕೆ ಸ್ಥಳೀಯ ಶಾಸಕರು, ಸಚಿವರು, ಅಧಿಕಾರಿಗಳು ಭೇಟಿ ನೀಡಿದ್ದಾರೆಯೇ? ಪರಿಹಾರ ನೀಡಿದ್ದಾರೆಯೇ? ಎಷ್ಟು ಹೊತ್ತು ಕರೆಂಟ್ ಕೊಡುತ್ತಿದ್ದಾರೆ? ಯಾವ ಹೊತ್ತಿನಲ್ಲಿ ಕರೆಂಟ್ ಕೊಡುತ್ತಿದ್ದಾರೆ? ಎಂದು ರೈತರನ್ನು ಪ್ರಶ್ನಿಸಿದರು.

'ಇದುವರೆಗೂ ಯಾರೂ ನಮ್ಮ ಹೊಲಕ್ಕೆ ಭೇಟಿ ನೀಡಿಲ್ಲ, ಸಂಕಷ್ಟ ಕೇಳಿಲ್ಲ, ನಮಗೆ ಯಾವ ಉಚಿತ ಭಾಗ್ಯವೂ ಬೇಡ, ಸಂಕಷ್ಟದಲ್ಲಿರುವ ನಮಗೆ ಪರಿಹಾರ ಸೂಕ್ತ ಒದಗಿಸಿ, ದುಡಿಯಲು ಉದ್ಯೋಗ ಕೊಡಿಸಿ, ಸಮರ್ಪಕ ವಿದ್ಯುತ್ ಕೊಡಿಸಿ' ಎಂದು ರೈತರು ಮನವಿ ಮಾಡಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಳಿನ್ ಕುಮಾರ್ ಕಟೀಲ್, ರಾಜ್ಯ ಕಾಂಗ್ರೆಸ್ ಸರ್ಕಾರ ಬರ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ. ರಾಜ್ಯದ ಅಭಿವೃದ್ಧಿ ಕಡೆಗಣಿಸಿದೆ. ರೈತರ ಶಾಪ ಈ ಸರ್ಕಾರಕ್ಕೆ ತಟ್ಟಲಿದೆ, ಶೀಘ್ರದಲ್ಲೇ ಈ ಸರ್ಕಾರ ಪಥನವಾಗಲಿದೆ ಎಂದು ಹೇಳಿದರು.

ಕುರ್ಚಿಗಾಗಿ ಕಾಂಗ್ರೆಸ್ ಸರ್ಕಾರ ಮೂರು ಗುಂಪಾಗಿ ಕಾರ್ಯಾಚರಣೆ ನಡೆಸುತ್ತಿದೆ. ಜನಸಾಮಾನ್ಯರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ, ಜನರಿಗೆ ವಂಚನೆ ಮಾಡುತ್ತಿದ್ದಾರೆ ಎಂದು ದೂರಿದರು.

ರಾಜ್ಯದ ಭೀಕರ ಬರ ಕಂಡು ಮುಖ್ಯಮಂತ್ರಿ ಕಣ್ಣಲ್ಲಿ ನೀರು ಬರಬೇಕಿತ್ತು. ಆದರೆ, ಸಿದ್ರಾಮಣ್ಣಗೆ ಜನರ ಕಷ್ಟದ ಅರಿವಿಲ್ಲ, ನೃತ್ಯ ಮಾಡಿ, ದರ್ಪ ಪ್ರದರ್ಶಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಾಲ್ಕೇ ತಿಂಗಳಲ್ಲಿ 250 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದುವರೆಗೂ ಒಬ್ಬರಿಗೂ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರು.

ಬರದ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜಕಾರಣ ಮಾಡಿಲ್ಲ, ಈಗಾಗಲೇ ಅಧಿಕಾರಿಗಳ ತಂಡವನ್ನು ರಾಜ್ಯಕ್ಕೆ ಕಳುಹಿಸಿ, ಅಧ್ಯಯನ ಮಾಡಿಸಿದೆ. ಆದರೆ, ರಾಜ್ಯ ಸರ್ಕಾರ ಬರದಿಂದ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಇನ್ನೂ ವರದಿ ಕೊಟ್ಟಿಲ್ಲ ಎಂದು ದೂರಿದರು.

ಬಿಜೆಪಿ ರಾಜ್ಯದಾದ್ಯಂತ ಸಂಚರಿಸಿ ಬರ ಅಧ್ಯಯನ ಮಾಡಿದ ಬಳಿಕ ಕೋರ್ ಕಮಿಟಿಯಲ್ಲಿ ಚರ್ಚೆ ಮಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ. ಸಂಕಷ್ಟದಲ್ಲಿರುವ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಕೋರುತ್ತೇವೆ ಎಂದರು.

ಮೋದಿ ಅಲೆ: ದೇಶದಲ್ಲಿ ಪ್ರಧಾನಿ ಮೋದಿ ಅಲೆ ಇದೆ. ರಾಜ್ಯದಲ್ಲಿ ಕಾಂಗ್ರೆಸ್ ವಿರುದ್ಧ ವಾತಾವರಣ ಸೃಷ್ಟಿಯಾಗಿದೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ ಅತಿ ಹೆಚ್ಚು ಸ್ಥಾನ ಗೆಲ್ಲುತ್ತೇವೆ ಎಂದು ಹೇಳಿದರು.

ಬಿಜೆಪಿ ಬರ ಅಧ್ಯಯನ ತಂಡದಲ್ಲಿ ಸಂಸದರಾದ ರಮೇಶ ಜಿಗಜಿಣಗಿ, ಪಿ.ಸಿ.ಗದ್ದಿಗೌಡರ, ಶಾಸಕ ಸಿದ್ದು ಸವದಿ, ಮಾಜಿ ಸಚಿವ ಮುರುಗೇಶ ನಿರಾಣಿ, ಎಸ್‌.ಕೆ. ಬೆಳ್ಳುಬ್ಬಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್‌.ಎಸ್‌. ಪಾಟೀಲ ಕೂಚಬಾಳ, ಉಪಾಧ್ಯಕ್ಷ ಉಮೇಶ ಕಾರಜೋಳ, ವಿಜುಗೌಡ ಪಾಟೀಲ, ಉಮೇಶ ಕೋಳಕೂರ, ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ, ರಮೇಶ ಭೂಸನೂರ ಇದ್ದರು.

ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಜಾಲಗೇರಿ ಗ್ರಾಮದಲ್ಲಿ ಬರಕ್ಕೆ ತುತ್ತಾದ ಮೆಕ್ಕೆಜೋಳದ ತೆನೆಯನ್ನು ನಳಿನ್‌ಕುಮಾರ್ ಕಟೀಲ್ ನೇತೃತ್ವದ ಬಿಜೆಪಿ ತಂಡ ಶನಿವಾರ ಪರಿಶೀಲಿಸಿತು —ಪ್ರಜಾವಾಣಿ ಚಿತ್ರ

ಬಿಜೆಪಿ ಸಂಪರ್ಕದಲ್ಲಿ ಕಾಂಗ್ರೆಸ್‌ನ 50 ಶಾಸಕರು: ಮುರುಗೇಶ ನಿರಾಣಿ

ವಿಜಯಪುರ: ಕಾಂಗ್ರೆಸಿನ 50ಕ್ಕೂ ಹೆಚ್ಚು ಶಾಸಕರು ಬಿಜೆಪಿ ಸಂಪರ್ಕದಲ್ಲಿ ಇದ್ದಾರೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.

ಜಿಲ್ಲೆಯ ಜುಮನಾಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐದು ವರ್ಷ ಈ ಸರ್ಕಾರ ಮುಂದುವರಿಯಲ್ಲ, ಗೊಂದಲಮಯ ಕಾಂಗ್ರೆಸ್ ಸರ್ಕಾರ ಯಾವ ಕ್ಷಣದಲ್ಲಾದರೂ ಪಥನವಾಗಬಹುದು, ಬಿಜೆಪಿ ನೇತೃತ್ವದಲ್ಲಿ ಜನಪರವಾದ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು.

ಶೀಘ್ರದಲ್ಲೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕರ ಆಯ್ಕೆಯಾಗಲಿದೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ನಾನು ಆಕಾಂಕ್ಷಿಯಲ್ಲ, ಪಕ್ಷ ಯಾವುದೇ ಜವಾಬ್ದಾರಿ ವಹಿಸಿದರೂ ನಿರ್ವಹಿಸುತ್ತೇನೆ ಎಂದು ಹೇಳಿದರು.

'ಡಿಕೆಶಿ ಹೆಸರಿನಲ್ಲಿ ವಸೂಲಿ'

ಒಂದನೇ ಪುಟದಿಂದ

ತಮ್ಮ ಸ್ವಗ್ರಾಮದ ಕೆಲವರೊಂದಿಗೆ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಭೇಟಿಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಹ್ಲಾದ್ ಭ್ರಷ್ಟ ಅಧಿಕಾರಿ. ಅವರು ಇರುವವರೆಗೂ ಬಿಬಿಎಂಪಿ ಉದ್ಧಾರ ಆಗುವುದಿಲ್ಲ' ಎಂದು ದೂರಿದರು.

'ಪ್ರಹ್ಲಾದ್ ಬಂದ ನಂತರ ಬಿಬಿಎಂಪಿಯಿಂದ ಯಾವುದೇ ದೊಡ್ಡ ಕೆಲಸ ನಡೆದಿಲ್ಲ. ಸರ್ಕಾರದ ಹೆಸರು ಹೇಳಿಕೊಂಡು ಹಣ ವಸೂಲಿ ಮಾಡುವುದೇ ಅವರ ಕೆಲಸವಾಗಿದೆ. ಬಿಬಿಎಂಪಿಯನ್ನು ಹಾಳು ಮಾಡುತ್ತಿರುವುದೇ ಆ ವ್ಯಕ್ತಿ. ಅವರನ್ನು ಅಲ್ಲಿ ಉಳಿಸಿಕೊಳ್ಳುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಅದನ್ನು ನಿರ್ಧರಿಸಲು ನಾನು ಸೂಕ್ತ ವ್ಯಕ್ತಿಯಲ್ಲ' ಎಂದರು.

'ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇದ್ದೇವೆ. ಸ್ವಲ್ಪ ಮೊತ್ತವನ್ನು ಬಿಡುಗಡೆ ಮಾಡಿದ್ದಾರೆ. ಅದರಿಂದ ನಮಗೆ ಸಂಪೂರ್ಣ ಸಮಾಧಾನ ಇಲ್ಲ. ಡಿಸೆಂಬರ್‌ನಲ್ಲಿ ಮತ್ತೆ ಹಣ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುಧಾ, ಮಯೂರ ಓದಿರಿ

ಸದ್ಯಕ್ಕಿಲ್ಲ ನೌಕರರ ವೇತನ ಪರಿಷ್ಕರಣೆ

8 ತಿಂಗಳಿಗೆ ವರದಿ ನೀಡಿದ್ದ 6ನೇ ವೇತನ ಆಯೋಗ

ಹಿಂದೆ ಮುಖ್ಯಮಂತ್ರಿಯಾಗಿದ್ದ (2013-18) ಸಿದ್ದರಾಮಯ್ಯ ಜೂನ್ 1, 2017ರಂದು 6ನೇ ವೇತನ ಆಯೋಗ ರಚಿಸಿದ್ದರು. ವೇತನ ಪರಿಷ್ಕರಣೆ ಕುರಿತು ಆಯೋಗ 8 ತಿಂಗಳಿಗೆ ವರದಿ ಸಲ್ಲಿಸಿತ್ತು (ಮಾರ್ಚ್ 31, 2018). ವಿಧಾನಸಭಾ ಚುನಾವಣೆ ಹತ್ತಿರದಲ್ಲಿದ್ದ ಕಾರಣ ಸರ್ಕಾರ ಅದೇ ವರ್ಷದ ಮಾರ್ಚ್‌ನಲ್ಲಿ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಿತ್ತು. ಅಂದು ವೇತನ ಪರಿಷ್ಕರಣೆಯಿಂದ ಸರ್ಕಾರದ ಬೊಕ್ಕಸಕ್ಕೆ ₹10,500 ಕೋಟಿ ಹೆಚ್ಚುವರಿ ಹೊರೆಯಾಗಿತ್ತು.

ಅಂಕಿ ಅಂಶ

5,12,720 ಕಾರ್ಯನಿರ್ವಹಿಸುತ್ತಿರುವ ನೌಕರರು

₹68 ಸಾವಿರ ಕೋಟಿ 2023–24ನೇ ಸಾಲಿಗೆ ನಿಗದಿಯಾದ ವೇತನ

₹10 ಸಾವಿರ ಕೋಟಿ ನೌಕರರಿಗೆ ಘೋಷಿಸಿದ ಮಧ್ಯಂತರ ಪರಿಹಾರ

₹8 ಸಾವಿರ ಕೋಟಿ ಆಯೋಗ ಶಿಫಾರಸು ಜಾರಿಗೆ ಅಗತ್ಯ ಬೀಳುವ ಮೊತ್ತ

6ನೇ ವೇತನ ಪರಿಷ್ಕರಣೆಯನ್ನು ತ್ವರಿತವಾಗಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ತಿಂಗಳು ವರದಿ ಪಡೆದು, ಶೀಘ್ರ ಜಾರಿಗೊಳಿಸುವ ಭರವಸೆ ಇದೆ

ಸಿ.ಎಸ್‌.ಷಡಾಕ್ಷರಿ,
ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ಒಂದನೇ ಪುಟದಿಂದ

ಮಧ್ಯಮಾವಧಿ ವಿತ್ತೀಯ ಯೋಜನೆ ಪ್ರಕಾರ ವೇತನ ಪರಿಷ್ಕರಣೆಗೆ ವಾರ್ಷಿಕ ₹12 ಸಾವಿರ ಕೋಟಿಯಿಂದ ₹18 ಸಾವಿರ ಕೋಟಿ ಅಗತ್ಯವಿದೆ. ಏಪ್ರಿಲ್ 1ರಿಂದ ಅನ್ವಯವಾಗುವಂತೆ ಮೂಲ ವೇತನದ ಶೇಕಡ 17ರಷ್ಟು ಮಧ್ಯಂತರ ಪರಿಹಾರವನ್ನು ಈಗಾಗಲೇ ನೀಡಿರುವುದರಿಂದ ನೌಕರರಿಗೂ ಹೆಚ್ಚಿನ ಸಮಸ್ಯೆಯಾಗದು. ಅಲ್ಲದೇ, ಬಜೆಟ್‌ನಲ್ಲಿ ನಿರೀಕ್ಷಿಸಿದ್ದ ಆದಾಯ ಸಂಗ್ರಹ ಕಾರ್ಯ ಪ್ರಗತಿಯಲ್ಲಿದ್ದು, ಗುರಿ ತಲುಪಲು ಇನ್ನಷ್ಟು ಸಮಯಬೇಕಿದೆ. ಹಾಗಾಗಿ, ಅವಧಿ ವಿಸ್ತರಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿಗೆ ಸಲ್ಲಿಸಿದ ಪ್ರಸ್ತಾವದಲ್ಲಿ ವಿವರಿಸಲಾಗಿದೆ.

'ಅವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಿದರೆ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಈಗಾಗಲೇ ಶೇ 17ರಷ್ಟು ಮಧ್ಯಂತರ ಪರಿಹಾರ ನೀಡಿರುವ ಕಾರಣ ವಾರ್ಷಿಕ ₹10 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ. ಹಿಂದಿನ ವೇತನ ಆಯೋಗದ ಶಿಫಾರಸು ಜಾರಿಗೊಳಿಸಿದಾಗ ಶೇ 30ರಷ್ಟು ವೇತನ ಹೆಚ್ಚಳ ಮಾಡಲಾಗಿತ್ತು. ಈಗ ಅಷ್ಟೇ ಹೆಚ್ಚಳ ಮಾಡಿದರೂ, ₹8 ಸಾವಿರ ಕೋಟಿ ಹೆಚ್ಚುವರಿ ನೀಡಬೇಕಾಗುತ್ತದೆ. ಹಾಗಾಗಿ, ತಕ್ಷಣ ವರದಿ ಪಡೆದು ಜಾರಿಮಾಡಬೇಕು' ಎನ್ನುವುದು ನೌಕರರ ಒತ್ತಾಯ.

ದಿನಕ್ಕೆ ₹1 ಕೋಟಿ ಆನ್‌ಲೈನ್ ವಂಚನೆ

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ರಾಜ್ಯದಲ್ಲಿ ದಾಖಲಾಗುತ್ತಿರುವ ಒಟ್ಟು ಅಪರಾಧದಲ್ಲಿ ಶೇ 20ರಷ್ಟು ಸೈಬರ್ ಅಪರಾಧವಾಗಿದೆ. ಇದು ಆನ್‌ಲೈನ್ ವಂಚನೆಯ ಅಗಾಧ ವ್ಯಾಪ್ತಿಯನ್ನು ತೋರಿಸುತ್ತದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸಾಮಾಜಿಕ ಜಾಲತಾಣಗಳ ಬಳಕೆದಾರರ ಸುರಕ್ಷತೆ ಮತ್ತು ಯೋಗಕ್ಷೇಮ ಬಲಪಡಿಸಲು ಶನಿವಾರ ಮೆಟಾ ಆಯೋಜಿಸಿದ್ದ ಡಿಜಿಟಲ್ ಸುರಕ್ಷಾ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

2022ರಲ್ಲಿ ರಾಜ್ಯದ ಜನರು ಆನ್‌ಲೈನ್ ವಂಚನೆಯಲ್ಲಿ ₹ 363 ಕೋಟಿ ಕಳೆದುಕೊಂಡಿದ್ದಾರೆ. ಅಂದರೆ ಪ್ರತಿ ದಿನ ₹ 1 ಕೋಟಿಯಂತೆ ವಂಚನೆಯಾಗಿದೆ. ಶೇ 12ರಷ್ಟು ಮಾತ್ರ ಪತ್ತೆ ಹಚ್ಚಲು ಸಾಧ್ಯವಾಗಿದೆ. ಇದು ದಾಖಲಾಗಿರುವ ಪ್ರಕರಣಗಳು. ಇನ್ನು ದಾಖಲಾಗದ ಪ್ರಕರಣಗಳು ದುಪ್ಪಟ್ಟು ಇರಬಹುದು. ಈ ವರ್ಷ ಆನ್‌ಲೈನ್ ವಂಚನೆ ಇನ್ನಷ್ಟು ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.

ಶೇ 90ರಷ್ಟು ಜನರು ಒಂದಲ್ಲ ಒಂದು ವಿಧದಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಇ-ಮೇಲ್, ಬ್ರೌಸಿಂಗ್‌ಗಳನ್ನು ಬಿಟ್ಟು ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ದಿನಕ್ಕೆ 2.36 ಗಂಟೆ ಕಳೆಯುತ್ತಿದ್ದಾರೆ. ಭಾರತ ದೇಶವು ತ್ವರಿತವಾದ ಡಿಜಿಟಲ್ ಅಳವಡಿಕೆಗೆ ಸಾಕ್ಷಿಯಾಗಿದೆ. ಆನ್‌ಲೈನ್‌ನಲ್ಲಿ ಯೋಗಕ್ಷೇಮವನ್ನು ಕಾಪಾಡಲು ಬಳಕೆದಾರರಿಗೆ ಸುಲಭವಾಗಿ ದೊರಕಬಹುದಾದ ಟೂಲ್ ಮತ್ತು ಸಂಪನ್ಮೂಲಗಳನ್ನು ಒದಗಿಸಬೇಕಾಗಿದೆ. ಕರ್ನಾಟಕ ಸರ್ಕಾರವು ಕ್ರಿಯಾಶೀಲವಾದ ಮತ್ತು ಒಳಗೊಳ್ಳುವಿಕೆಯ ಅಂತರ್‌ಜಾಲ ಪರಿಸರವನ್ನು ರಚಿಸಲು ವಿವಿಧ ಪಾಲುದಾರರು ಮತ್ತು ತಜ್ಞರೊಂದಿಗೆ ಕೆಲಸ ಮಾಡಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರು ಮತ್ತು ಯುವಜನರನ್ನು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿಡಲು ಮೆಟಾದಂತಹ ಕಂಪನಿಗಳು ಸರ್ಕಾರದ ದೃಷ್ಟಿಕೋನಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೆಟಾ ಇಂಡಿಯಾದ ಉಪಾಧ್ಯಕ್ಷೆ ಸಂಧ್ಯಾ ದೇವನಾಥನ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಸಾರ್ವಜನಿಕ ನೀತಿ ವಿಭಾಗದ ಮುಖ್ಯಸ್ಥೆ ನತಾಶ ಜೋಗ್ ಶೃಂಗಸಭೆಯಲ್ಲಿ ಉಪಸ್ಥಿತರಿದ್ದರು.

ಅಕ್ಷರ ದಾಸೋಹ ನೌಕರರ ಸಂಘ ಎಚ್ಚರಿಕೆ

'ಬಿಸಿಯೂಟ ತಯಾರಿಕೆ ಸ್ಥಗಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಶನಿವಾರ ಪಾಲ್ಗೊಂಡಿದ್ದ ಬಿಸಿಯೂಟ ತಯಾರಿಕೆ ಮಹಿಳೆಯರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕೆಲಸ ಕಾಯಂಗೊಳಿಸಬೇಕು' ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆ ಆಗ್ರಹಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಶನಿವಾರ ಐದನೇ ದಿನ ಪೂರೈಸಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ (ಅ. 30) ಆರಂಭವಾಗಿರುವ ಧರಣಿಯಲ್ಲಿ ರಾಜ್ಯ ಎಲ್ಲ ಜಿಲ್ಲೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

'ಬಿಸಿಯೂಟ ತಯಾರಿಸುವ ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳ ನಿವಾರಣೆಗಾಗಿ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದು, ನಮ್ಮ ಬೇಡಿಕೆಗಳು ಪೂರ್ಣ ಪ್ರಮಾಣದಲ್ಲಿ ಈಡೇರುತ್ತಿಲ್ಲ. ಹೀಗಾಗಿ, ಈ ಬಾರಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಗಿದೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ಹೇಳಿದರು.

'ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ನವೆಂಬರ್ 10ರವರೆಗೂ ಧರಣಿ ನಡೆಸಲಾಗುವುದು. ನಂತರ, ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ಕಾಲಾವಕಾಶ ನೀಡಲಾಗುವುದು. ಬೇಡಿಕೆ ಈಡೇರಿಸದಿದ್ದರೆ, ನ. 16ರ ನಂತರ ಬಿಸಿಯೂಟ ತಯಾರಿಕೆ ಸ್ಥಗಿತಗೊಳಿಸಿ ಪುನಃ ಧರಣಿ ಆರಂಭಿಸಲಾಗುವುದು' ಎಂದು ಅವರು ಎಚ್ಚರಿಸಿದರು.

'ರಾಜ್ಯದ ಮಕ್ಕಳಿಗೆ ಬಿಸಿಯೂಟ ತಯಾರಿಸುತ್ತಿರುವ ಮಹಿಳೆಯರಿಗೆ ಸೇವಾ ಭದ್ರತೆ ನೀಡಬೇಕು. ನಿವೃತ್ತಿಯಾದ ನೌಕರರಿಗೆ ₹1 ಲಕ್ಷ ಇಡುಗಂಟು ನೀಡಬೇಕು. ಕೆಲಸದ ಸ್ಥಳಗಳಲ್ಲಿ ಮರಣ ಹೊಂದಿದರೆ ₹25 ಲಕ್ಷ ಪರಿಹಾರ ಘೋಷಿಸಬೇಕು' ಎಂದು ಅವರು ಆಗ್ರಹಿಸಿದರು.

ಜಿಲ್ಲಾವಾರು ಪ್ರತಿನಿಧಿಗಳು ಭಾಗಿ: ರಾಜ್ಯದ ಹಲವು ಜಿಲ್ಲೆಗಳ ಬಿಸಿಯೂಟ ತಯಾರಿಕೆ ಮಹಿಳೆಯರು ಸರದಿ ಪ್ರಕಾರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶನಿವಾರ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಯ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/2023-24/37641-45 ದಿನಾಂಕ: 03.11.2023
ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)
ಪಿಸಿ-1276: ಗು.ವಿ.ಸ.ಕಂ.ನಿ ಯ ತಾಂತ್ರಿಕ ನಿರ್ದಿಷ್ಟತೆಯಂತೆ 11ಕೆವಿ ಕರೆಂಟ್ ಟ್ರಾನ್ಸ್‌ಫಾರ್ಮರ್ಸ್ (ಬ್ಯಾಂಕ್) 600-300/1-1ಎ, 11ಕೆವಿ ಕರೆಂಟ್ ಟ್ರಾನ್ಸ್‌ಫಾರ್ಮರ್ಸ್ (ಫೀಡರ್) 200-100/1-1ಎ ಮತ್ತು 11ಕೆವಿ ಪೊಟೆನ್ಶಿಯಲ್ ಟ್ರಾನ್ಸ್‌ಫಾರ್ಮರ್ಸ್ ತಯಾರಿಕೆ ಮತ್ತು ಪೂರೈಕೆ ಮಾಡುವುದು.
ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 06.11.2023 ರಂದು ಅಥವಾ ನಂತರ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 21.11.2023 @ 17:30 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.11.2023 @ 11:00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.11.2023 @ 11:00 ಗಂಟೆಗೆ.
ಟೆಂಡರ್ ಮೊತ್ತ: ರೂ. 132.75 ಲಕ್ಷಗಳು.
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: https://kppp.karnataka.gov.in.
ಸಹಿ/- ಅಧೀಕ್ಷಕ ಅಭಿಯಂತರರು (ವಿ.),
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/429/ಕೆ.ಎಸ್.ಎಂ.ಸಿ.&ಎ/2023-24

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೀದರ
ಉಪನಿರ್ದೇಶಕರವರ ಕಛೇರಿ ಖಾದಿ ಮತ್ತು ಗ್ರಾಮೀಣ ಕೈಗಾರಿಕೆ
ಜಿಲ್ಲಾ ಪಂಚಾಯತ ನೌಬಾದ, ಬೀದರ
ದೂರವಾಣಿ ಸಂಖ್ಯೆ : 08482-233143, ಫ್ಯಾಕ್ಸ್ : 08482-233143
ಸಂ:ಜಿಪಂಬೀ/ಉನಿಖಾಗ್ರಾಕೈ/ಎ1/ಟೆಂಡರ/2023-24 ದಿನಾಂಕ:04-11-2023
ಇ-ಪ್ರಕ್ಯೂರಮೆಂಟ ಟೆಂಡರ ಪ್ರಕಟಣೆ (ತಿದ್ದುಪಡಿ)
2023-24ನೇ ಸಾಲಿನ ಜಿಲ್ಲಾ ಉದ್ಯಮ ಕೇಂದ್ರ ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳ ಸರಬರಾಜು ಯೋಜನೆಗಳ ಅಡಿಯಲ್ಲಿ ಒಟ್ಟು ರೂ, 75.00 ಲಕ್ಷ ಅನುದಾನದಲ್ಲಿ ವಿದ್ಯುತ ಚಾಲಿತ ಹೋಲಿಗೆ ಯಂತ್ರಗಳು, ಧೋಬಿ ಮತ್ತು ಬಡಿಗೆತನ ಸಲಕರಣೆಗಳ (ವಿದ್ಯುತ) ಖರೀದಿಗಾಗಿ ಇ-ಪ್ರಕ್ಯೂರಮೆಂಟ ಪೋರ್ಟಲ್ www.eproc.karnataka.gov.in ಮುಖಾಂತರ ಟೆಂಡರ ಆಹ್ವಾನಿಸಲಾಗಿದ್ದು, ದಿನಾಂಕ: 01-11-2023 ರಂದು ವಿವಿಧ ಪತ್ರಿಕೆಗಳಲ್ಲಿ ತಪ್ಪಾಗಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಪ್ರಕಟಣೆಯಾಗಿರುತ್ತದೆ. ಕಾರಣ ಈ ಕೆಳಗೆ ತೋರಿಸಿದ ಇ-ಪ್ರಕ್ಯೂರಮೆಂಟ ಪೋರ್ಟಲ್ ಆಸಕ್ತ ತಯ್ಯಾರಕರು/ಸರಬರಾಜುದಾರರು ಪೋರ್ಟಲ್ https://kppp.karnataka.gov.in ಟೆಂಡರನಲ್ಲಿ ಭಾಗವಹಿಸಬಹುದು. ಟೆಂಡರ ಮಾಹಿತಿಯನ್ನು ಸದರಿ ಪೋಟರ್ಲ್‌ನಲ್ಲಿ ಪಡೆಯಬಹುದು. ಆನ್‌ಲೈನ್ ಮೂಲಕ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27-11-2023 ಅಪರಾಹ್ನ 5.00 ಗಂಟೆಯ ವರೆಗೆ.
ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂ: 08482-233143 (ಮೊಬೈಲ್ ಸಂ: 9342019169, 9972083170) ಸಂಪರ್ಕಿಸಿ ಕಛೇರಿ ಸಮಯದಲ್ಲಿ ಮಾಹಿತಿ ಪಡೆಯಬಹುದು ಹಾಗೂ ಇ-ಪ್ರಕ್ಯೂರಮೆಂಟ ಪೋರ್ಟಲ್ https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.
ಸಹಿ/-ಉಪನಿರ್ದೇಶಕರು (ಕೆ.ವಿ.ಐ)
ವಾ.ಸಾ.ಸಂ.ಇ/ಬೀದರ/116-1/ಕೆಎಸ್‌ಎಂಸಿ&ಎ/2023-24 ಜಿಲ್ಲಾ ಪಂಚಾಯತ್, ಬೀದರ.

ಕರ್ನಾಟಕ ಸರಕಾರ
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ
(Government of Karnataka, An Autonomous Institution)
Email Id: directoryimsyadgir@gmail.com Ph.no 9481623299
ಸಂಖ್ಯೆ : ಯಿಮ್ಸ್/ಆಡಳಿತ/61/2023-24 ದಿನಾಂಕ: 03-11-2023
:: ಟೆಂಡರ್ ಪ್ರಕಟಣೆ ::
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2023-24ನೇ ಸಾಲಿಗೆ ಕಿಚೆನ್ ಬ್ಲಾಕ್‌ಗೆ (ಅಡುಗೆ ಕೋಣೆ)ಗೆ ಬೇಕಾಗುವ ಯಂತ್ರೋಪಕರಣಗಳು ಹಾಗೂ ಸಾಧನಸಲಕರಣೆಗಳು ಪೂರೈಸಲು ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನದಡಿಯಲ್ಲಿ ವೈದ್ಯಕೀಯ ವಿಧ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಮತ್ತು ಇತರೆ ಸಾಧನ ಸಲಕರಣೆಗಳು ಹಾಗೂ ರಕ್ತ ನಿಧಿ ಕೇಂದ್ರದ ಮರು-ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ ಟೆಂಡರ್ ದ್ವಿ-ಲಕೋಟೆಯಲ್ಲಿ ಆಹ್ವಾನಿಸಿರುವ ಬಗ್ಗೆ.

ಕ್ರ ಸಂ	ಸಂಸ್ಥೆ	ವಿವರ	ಟೆಂಡರ್‌ನ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (2.5%) (ಲಕ್ಷಗಳಲ್ಲಿ)
1	ಡೀನ್& ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	DME/2023-24/IND0301 YIMS KITCHEN INSTRUMENTS AND MATERIAL TENDER	ರೂ. 90.00	ರೂ. 2.25
2		DME/2023-24/IND0300 TENDER FOR SUPPLY OF LAPTOP EQUIPMENT AND INSTRUMENTS-2023-24	ರೂ. 32.00	ರೂ. 0.80
3		DME/2023-24/IND0132/CALL-2 RE-TENDER FOR SUPPLY OF BLOOD BANK EQUIPMENTAND INSTRUMENTS-2023-24	ರೂ. 200.00	ರೂ. 5.00

ಟೆಂಡರ್ ಪ್ರಕ್ರಿಯೆ ವಿವರ: ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿಪಡೆಯಬಹುದು.
ಸಹಿ/- ಡೀನ್ & ನಿರ್ದೇಶಕರು
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/183/ಕ.ರಾ.ಎಂ.ಸಿ.&ಎ/2023-24

"ಕೇಂದ್ರ ಸರಸ್ಕೃತ ಯೋಜನೆ" ಕರ್ನಾಟಕ ಸರ್ಕಾರ
ಪ್ರಧಾನ ಮಂತ್ರಿ ಮೋಷಣೆ ಶಕ್ತಿ ನಿಮಾಣ್ (ಎಂ.ಡಿ.ಎಂ)
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
ಪ.ಸಂ:ಜಿ.ಪಂ.ಚಿ:ಅದಾ:ಹೊ.ಗು.ಸಿ.ಸೇ/01/2023-24 ದಿನಾಂಕ : 31.10.2023
"ಇ-ಟೆಂಡರ್ ಪ್ರಕಟಣೆ"
ಪ್ರಧಾನ ಮಂತ್ರಿ ಘೋಷಣ್ ಶಕ್ತಿ ನಿರ್ಮಾಣ್ (ಎಂ.ಡಿ.ಎಂ) ಕಾರ್ಯಕ್ರಮದಡಿ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅಕ್ಷರ ದಾಸೋಹ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಅಪರೇಟರ್‌ನ್ನು ಆಸಕ್ತ ಏಜೆನ್ಸಿ / ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ (e-procurement) ಮೂಲಕ ಪಡೆಯಲು ಇ-ಟೆಂಡರ್ ಕರೆಯಲಾಗಿದೆ. ಟೆಂ ಸಲ್ಲಿಸಲು ಕೊನೆಯ ದಿನಾಂಕ:16:11:2023 ರ ಸಂಜೆ:5.00 ಗಂಟೆಗೆ.
ಹೆಚ್ಚಿನ ಮಾಹಿತಿಗಾಗಿ kppp.karnataka.gov.in ನಲ್ಲಿ ಪಡೆಯಬಹುದು.
ಸಹಿ/-
ಉಪ ಕಾರ್ಯದರ್ಶಿ (ಆಡಳಿತ)
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್ ದಾವಣಗೆರೆ.
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ.
ಕೊಠಡಿ ಸಂಖ್ಯೆ. 46. ಎರಡನೇ ಮಹಡಿ, ಕರೂರು ಕೈಗಾರಿಕಾ ಪ್ರದೇಶ, ಜಿಲ್ಲಾಡಳಿತ ಭವನ. ದಾವಣಗೆರೆ.
E-mail:dobcmdavanagere@gmail.com, ಫ್ಯಾಕ್ಸ್ ನಂ/ಫೋನ್ ನಂ: 08192-262973
ಸಂ: ಹಿಂವಕಇ/ದಾ/ಹೊ.ಸಿಬ್ಬಂದಿ/ಸಿಆರ್-65/2023-24 ದಿನಾಂಕ:26.10.2023
ಟೆಂಡರ್ ಪ್ರಕಟಣೆ
2023-24ನೇ ಸಾಲಿಗೆ ದಾವಣಗೆರೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿನಿಲಯ, ಆಶ್ರಮ ಶಾಲೆ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ಕಾವಲುಗಾರರು ಸ್ವಚ್ಛತ ಸಿಬ್ಬಂದಿ, ಜವಾನರು ಹಾಗೂ ಜಿಲ್ಲಾ ಕಛೇರಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್‌ಗಳ/ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಪ್ರಯುಕ್ತ ನಿಗದಿತ ಇ-ಟೆಂಡರ್ ಬಿಡ್ ನಮೂನೆಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು http://kppp.karnataka.gov.in ನಿಂದ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಕಛೇರಿ ದೂರವಾಣಿ ಸಂಖ್ಯೆ: 08192-262973.
ಇ-ಟೆಂಡರ್ ಆಹ್ವಾನಿಸಿರುವ ಟೆಂಡರ್ ನಂಬರ್. BCWD/2023-24/SE0011
ವಾಸಾಇ/ಡಿವಿಜಿ/321 /ಕೆಎಸ್‌ಎಂಸಿಎ/2023-24
ಸಹಿ/- ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/13/2023-24 ದಿನಾಂಕ: 03-11-2023
ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ
2022-23 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 13-11-2023 ರಂದು ಸಂಜೆ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ವಾಸಾಸಂಇ/ವಾ.ಪ್ರ/1982/ಅಡ್ವರ್ಟೋ/2023-24 ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ಟೆಂಡರ್ ಆಹ್ವಾನ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂಖ್ಯೆ : 22/2023-24 Dtd : 27.10.2023
ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ ಎನ್ ಆರ್ ಪುರ ಮತ್ತು ಕೊಪ್ಪ ತಾಲ್ಲೂಕಿನ 18 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕನಿಷ್ಠ ಮೊತ್ತ ರೂ. 82.46 ಲಕ್ಷ, ಗರಿಷ್ಠ ಮೊತ್ತ ರೂ. 187.79 ಲಕ್ಷದ ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-3&4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 27.10.2023 ರಿಂದ 09.11.2023 ರವರೆಗೆ ಸಂಜೆ 5.00 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ 10.11.2023 ರಂದು ಸಂಜೆ 05:30ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯುನ್ನು https://kppp.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್

‘ತೀರ್ಪು ರದ್ದು ಅಧಿಕಾರ ಶಾಸಕಾಂಗಕ್ಕಿಲ್ಲ’

ಚಂದ್ರಚೂಡ್

ನವದೆಹಲಿ (ಪಿಟಿಐ): ‘ನ್ಯಾಯಾಲಯಗಳು ನೀಡುವ ತೀರ್ಪಿನಲ್ಲಿನ ನ್ಯೂನತೆ ಸರಿಪಡಿಸುವುದಕ್ಕಾಗಿ ಹೊಸ ಕಾನೂನು ರೂಪಿಸುವ ಅಧಿಕಾರ ಶಾಸಕಾಂಗಕ್ಕೆ ಇಲ್ಲ. ಈ ವಿಷಯದಲ್ಲಿ ನೇರವಾಗಿ ಅಧಿಕಾರ ಚಲಾಯಿಸಲು ಅವಕಾಶವಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಪ್ರತಿಪಾದಿಸಿದ್ದಾರೆ.

ಹಿಂದೂಸ್ಥಾನ್ ಟೈಮ್ಸ್ ಹಮ್ಮಿಕೊಂಡಿದ್ದ ನಾಯಕತ್ವ ಶೃಂಗಸಭೆಯಲ್ಲಿ ಮಾತನಾಡಿದ ಅವರು, ‘ತಾವು ನೀಡಿದ ತೀರ್ಪಿನ ಬಗ್ಗೆ ಸಮಾಜ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬ ಬಗ್ಗೆ ನ್ಯಾಯಮೂರ್ತಿಗಳು ಚಿಂತಿಸುವುದಿಲ್ಲ. ಇದು ಚುನಾಯಿತ ಸರ್ಕಾರ ಹಾಗೂ ನ್ಯಾಯಾಂಗದ ನಡುವೆ ಇರುವ ವ್ಯತ್ಯಾಸವಾಗಿದೆ’ ಎಂದರು.

ನ್ಯಾಯಾಲಯಗಳು ತೀರ್ಪು ಪ್ರಕಟಿಸಿದ ಬಳಿಕ ಶಾಸಕಾಂಗ ಏನನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂಬ ಬಗ್ಗೆ ಸ್ಪಷ್ಟವಾದ ಗೆರೆಯಿದೆ. ನ್ಯಾಯಾಲಯವು ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಗುರುತಿಸುವ ನ್ಯೂನತೆಯನ್ನು ಸರಿಪಡಿಸಲಷ್ಟೇ ಕಾನೂನು ರೂಪಿಸುವ ಅಧಿಕಾರ ಶಾಸಕಾಂಗಕ್ಕೆ ಇದೆ ಎಂದು ಹೇಳಿದರು.

‘ತೀರ್ಪು ತಪ್ಪಾಗಿದೆ ಎಂದು ಸಮರ್ಥಿಸಿಕೊಂಡು ಅದನ್ನು ನೇರವಾಗಿ ರದ್ದುಪಡಿಸುವ ಅಧಿಕಾರ ಶಾಸಕಾಂಗಕ್ಕೆ ಇಲ್ಲ. ಪ್ರಕರಣ ಕುರಿತು ನಿರ್ಣಯ ಕೈಗೊಳ್ಳುವಾಗ ಸಂವಿಧಾನದ ನೀತಿ ನಿಯಮಗಳನ್ನಷ್ಟೇ ನ್ಯಾಯಮೂರ್ತಿಗಳು ಅನುಸರಿಸುತ್ತಾರೆ. ಸಾರ್ವಜನಿಕ ನೀತಿನಿಯಮಗಳನ್ನು ಪರಿಗಣಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ವರ್ಷಾಂತ್ಯಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಕನಿಷ್ಠ 72 ಸಾವಿರ ಪ್ರಕರಣಗಳನ್ನು ವಿಲೇವಾರಿ ಮಾಡಲು ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

ನೋಟಿಸ್ ನೀಡದೆ ಜಾಮೀನು ರದ್ದು ಮಾಡುವಂತಿಲ್ಲ: ಸುಪ್ರೀಂ ಕೋರ್ಟ್

ನವದೆಹಲಿ: ಆರೋಪಿಗೆ ವಿಧಿಸಲಾಗಿದ್ದ ಶಿಕ್ಷೆಯನ್ನು ಅಮಾನತಿನಲ್ಲಿ ಇಟ್ಟು ನೀಡಿರುವ ಜಾಮೀನನ್ನು ವಕೀಲರ ಗೈರು ಹಾಜರಿಯಲ್ಲಿ ಮತ್ತು ನೋಟಿಸ್ ನೀಡದೆ ಹೈಕೋರ್ಟ್ ರದ್ದು ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 389ರ ಸಬ್ ಸೆಕ್ಷನ್ 1ರ ಅಡಿಯಲ್ಲಿ ಜಾಮೀನು ಮಂಜೂರು ಮಾಡಿದ್ದಲ್ಲಿ, ಆರೋಪಿಗೆ ವಿಚಾರಣೆಯಲ್ಲಿ ಪಾಲ್ಗೊಳ್ಳಲು ಸರಿಯಾದ ಅವಕಾಶ ನೀಡದೆಯೇ ಜಾಮೀನು ರದ್ದು ಮಾಡುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ನ್ಯಾಯಪೀಠ ತಿಳಿಸಿತು.

ಪೋಕ್ಸೊ ಕಾಯ್ದೆ ಪ್ರಕರಣದ ಆರೋಪಿಯ ಪರ ವಕೀಲರು ನಾಲ್ಕು ವಾರಗಳ ಜಾಮೀನು ವಿಸ್ತರಣೆ ಕೋರಿದ ಕಾರಣ ಜಾಮೀನು ರದ್ದು ಮಾಡಿದ ಮದ್ರಾಸ್ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತು. ಈ ಸಂದರ್ಭದಲ್ಲಿ ಕಾನೂನಿನಲ್ಲಿ ಇರುವ ಅವಕಾಶಗಳ ಕುರಿತು ಮೇಲಿನ ವಿವರಣೆ ನೀಡಿತು.

ಈ ವರ್ಷ ಜುಲೈ 7ರಂದು ಮದ್ರಾಸ್ ಹೈಕೋರ್ಟ್ ಈ ಪ್ರಕರಣದಲ್ಲಿ ಆರೋಪಿಗೆ ನೀಡಿದ್ದ ಜಾಮೀನು ರದ್ದು ಮಾಡಿ ತೀರ್ಪು ನೀಡಿತ್ತು.

ಮಾನನಷ್ಟ ಪ್ರಕರಣ: ‘ಸುಪ್ರೀಂ’ ಮೆಟ್ಟಿಲೇರಿದ ತೇಜಸ್ವಿ ಯಾದವ್

ಅಹಮದಾಬಾದ್ (ಪಿಟಿಐ): ತಮ್ಮ ವಿರುದ್ಧ ದಾಖಲಾಗಿರುವ ಮಾನನಷ್ಟ ಪ್ರಕರಣವನ್ನು ವರ್ಗಾಯಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ ಎಂದು ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು ವಿಚಾರಣಾ ನ್ಯಾಯಾಲಯಕ್ಕೆ ಶನಿವಾರ ಮಾಹಿತಿ ನೀಡಿದರು.

ಸುಪ್ರೀಂ ಕೋರ್ಟ್ ನ.6ರಂದು ಈ ಬಗ್ಗೆ ವಿಚಾರಣೆ ನಡೆಸುವ ಸಾಧ್ಯತೆ ಇದೆ ಎಂದೂ ತಿಳಿಸಿದರು.

‘ಗುಜರಾತಿನವರು ಮಾತ್ರ ಕೊಲೆಗಡುಕರು’ ಎಂಬ ಹೇಳಿಕೆಗೆ ಸಂಬಂಧಿಸಿದಂತೆ ದಾಖಲಾದ ಮಾನನಷ್ಟ ಪ್ರಕರಣದ ವಿಚಾರಣೆಗೆ ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಡಿ.ಜೆ.ಪಾರ್ಮರ್ ಎದುರು ಹಾಜರಾಗುವಂತೆ ಸಮನ್ಸ್ ಜಾರಿ ಮಾಡಲಾಗಿತ್ತು. ಯಾದವ್ ಇದರಿಂದ ವಿನಾಯಿತಿ ಕೋರಿದ್ದರು. ಹೀಗಾಗಿ, ಕೋರ್ಟ್ ವಿಚಾರಣೆಯನ್ನು ಡಿಸೆಂಬರ್ 2ಕ್ಕೆ ಮುಂದೂಡಿದೆ.

ದೂರುದಾರರ ಪರ ವಕೀಲ ಹರೀಶ್ ಮೆಹ್ತಾ, ಸುಪ್ರೀಂ ಕೋರ್ಟ್ ಪ್ರಕರಣವನ್ನು ಕೈಗೆತ್ತಿಕೊಂಡಿಲ್ಲ. ಈ ಕುರಿತು ಯಾವುದೇ ನಿರ್ದೇಶನವನ್ನೂ ನೀಡಿಲ್ಲ. ಹೀಗಾಗಿ ನ್ಯಾಯಾಲಯವು ಯಾದವ್ ಅವರ ಗೈರಿನಲ್ಲೂ ವಿಚಾರಣೆ ಮುಂದುವರಿಸಬೇಕು ಎಂದು ವಾದಿಸಿದರು.

ವಿದ್ಯಾರ್ಥಿನಿಯೊಬ್ಬರಿಗೆ ಕಿರುಕುಳ ನೀಡಿದ ಪ್ರಕರಣ ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ಆವರಣದಲ್ಲಿ ಭದ್ರತೆಯನ್ನು ಹೆಚ್ಚಿಸುವಂತೆ ಆಗ್ರಹಿಸಿ ವಾರಾಣಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಬಿಜೆಪಿ ಮುಖಂಡನ ವಿರುದ್ಧದ ವಂಚನೆ ಪ್ರಕರಣ ಕೈಬಿಡಲು ಒಪ್ಪದ ಕೋರ್ಟ್

ಮುಂಬೈ (ಪಿಟಿಐ): ನಕಲಿ ದಾಖಲೆಗಳನ್ನು ಸಲ್ಲಿಸುವ ಮೂಲಕ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ₹103 ಕೋಟಿ ವಂಚನೆ ಎಸಗಿದ್ದ ಪ್ರಕರಣದ ಆರೋಪಿಗಳಾದ ಬಿಜೆಪಿ ಮುಖಂಡ ಮೋಹಿತ್ ಕಂಬೋಜ್ ಸೇರಿ ಇತರರ ವಿರುದ್ಧದ ಪ್ರಕರಣ ಕೈಬಿಡುವಂತೆ ಕೋರಿ ಸಲ್ಲಿಸಿದ್ದ ಕೇಂದ್ರೀಯ ತನಿಖಾ ದಳದ (ಸಿಬಿಐ) ವರದಿಯನ್ನು ಇಲ್ಲಿನ ನ್ಯಾಯಾಲಯ ತಿರಸ್ಕರಿಸಿದೆ. ಅಲ್ಲದೆ ಈ ಪ್ರಕರಣದ ಬಗ್ಗೆ ಮತ್ತೊಮ್ಮೆ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದೆ.

ಟೆನೆಟ್ ಎಕ್ಸಿಂ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಕಂಬೋಜ್ ಹಾಗೂ ಇತರರು ನಕಲಿ ದಾಖಲೆಗಳನ್ನು ಸಲ್ಲಿಸಿ, ಸಾಲ ಪಡೆದು ಬ್ಯಾಂಕ್‌ಗೆ ₹103 ಕೋಟಿ ವಂಚಿಸಿದ್ದರು ಎಂಬುದು ಆರೋಪ.

ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸುವ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಾಗುತ್ತಿಲ್ಲ. ಹೀಗಾಗಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಅವಕಾಶ ನೀಡಬೇಕು ಎಂದು ಕೋರಿ ಸಿಬಿಐ ವರದಿ ಸಲ್ಲಿಸಿತ್ತು.

ಈ ಬಗ್ಗೆ ಅಕ್ಟೋಬರ್ 23ರಂದು ವಿಚಾರಣೆ ನಡೆಸಿದ್ದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಜಯಂತ್ ಯಾದವ್, ‘ಮೇಲ್ನೋಟಕ್ಕೆ ಈ ಪ್ರಕರಣವು ಕ್ರಿಮಿನಲ್ ಪಿತೂರಿ ಎಂಬಂತೆ ಕಂಡುಬರುತ್ತಿದೆ. ನಾಲ್ವರು ಆರೋಪಿಗಳು ಸಹಿಯನ್ನು ನಕಲು ಮಾಡುವ ಮೂಲಕ ವಂಚಿಸಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಆದರೆ, ಈ ಪ್ರಕರಣದಲ್ಲಿ ತನಿಖೆ ಸಮರ್ಪಕವಾಗಿ ನಡೆದಿಲ್ಲ’ ಎನ್ನುವ ಮೂಲಕ ಈ ವರದಿಯನ್ನು ತಿರಸ್ಕರಿಸಿದೆ.

ನ್ಯಾಯಾಲಯದ ಈ ಆದೇಶದ ಪ್ರತಿಯು ಶನಿವಾರ ಲಭ್ಯವಾಗಿದೆ.

ಅಕ್ರಮವಾಗಿ ಅಂಗಡಿ ನೆಲಸಮ ನಾಲ್ವರು ಪೊಲೀಸರ ಅಮಾನತು

ಬಾರಾಬಂಕಿ (ಪಿಟಿಐ): ಕಂದಾಯ ಇಲಾಖೆ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅಂಗಡಿಯೊಂದನ್ನು ನೆಲಸಮಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿ ಉತ್ತರ ಪ್ರದೇಶದ ಜೈದ್‌ಪುರ ಪೊಲೀಸ್ ಠಾಣೆಯ ಠಾಣಾಧಿಕಾರಿ ಸೇರಿ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ. ಅಲ್ಲದೆ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಬಾರಾಬಂಕಿ ಪೊಲೀಸ್ ವರಿಷ್ಠಾಧಿಕಾರಿ ಶನಿವಾರ ತಿಳಿಸಿದ್ದಾರೆ.

ಇಮಾಂಬಾಡ ಮಾರುಕಟ್ಟೆಯಲ್ಲಿ ಬಟ್ಟೆ ಅಂಗಡಿ ಹೊಂದಿದ್ದ ಜಲೀಲ್ ಅಹ್ಮದ್ ಎಂಬವರು, ಅಕ್ಟೋಬರ್ 14ರಂದು ತಮ್ಮ ಅಂಗಡಿಯನ್ನು ಜೈದ್‌ಪುರ ಪೊಲೀಸರು ಅಕ್ರಮವಾಗಿ ನೆಲಸಮ ಮಾಡಿದ್ದಾರೆ ಎಂದು ಆರೋಪಿಸಿ ಹೈಕೋರ್ಟ್ ಮೊರೆ ಹೋಗಿದ್ದರು.

ಈ ಕುರಿತು ವಿಚಾರಣೆ ನಡೆಸಿದ್ದ ಹೈಕೋರ್ಟ್, ಕಂದಾಯ ಇಲಾಖೆ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ನೆಲಸಮಗೊಳಿಸಿರುವುದು ಕಾನೂನುಬಾಹಿರ. ಈ ಘಟನೆಗೆ ಕಾರಣರಾದ ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಾರಾಬಂಕಿ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿತ್ತು. ಆ ಬಳಿಕ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಅಂಬಾನಿಗೆ ಬೆದರಿಕೆ ಇಬ್ಬರ ಬಂಧನ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರಿಗೆ ಇ–ಮೇಲ್ ಮೂಲಕ ಹಣ ನೀಡುವಂತೆ ಬೆದರಿಕೆ ಹಾಕಿದ ಪ್ರಕರಣದ ತನಿಖೆ ನಡೆಸುತ್ತಿರುವ ಮುಂಬೈ ಪೊಲೀಸರು, ತೆಲಂಗಾಣ ಮತ್ತು ಗುಜರಾತ್‌ನಲ್ಲಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ತೆಲಂಗಾಣದ ಗಣೇಶ ರಮೇಶ್ ವಾನರಪತಿ (19) ಮತ್ತು ಗುಜರಾತ್‌ನ ರಾಜ್‌ವೀರ್ ಜಗತ್ ಸಿಂಗ್ ಕಾಂತ್ (20) ಬಂಧಿತರು.

ಸುಧಾ ಓದಿರಿ...

ಗುಜರಾತ್‌ನ ‘ದ ರಿವರ್ ಸ್ಕೂಲ್’ಗೆ ವಿಶ್ವದ ಅತ್ಯುತ್ತಮ ಶಾಲೆ ಗೌರವ

ಲಂಡನ್ (ಪಿಟಿಐ): ಶಿಕ್ಷಣದಲ್ಲಿ ವಿದ್ಯಾರ್ಥಿ ಕೇಂದ್ರಿತ ಕ್ರಮಗಳನ್ನು ಅಳವಡಿಸಿಕೊಂಡಿರುವುದಕ್ಕಾಗಿ ಗುಜರಾತ್‌ನ ಅಹಮದಾಬಾದ್‌ನ ಅಂತರರಾಷ್ಟ್ರೀಯ ‘ದ ರಿವರ್‌ಸೈಡ್ ಸ್ಕೂಲ್’, 2023ನೇ ಸಾಲಿಗೆ ವಿಶ್ವದ ಅತ್ಯುತ್ತಮ ಶಾಲೆ ಪ್ರಶಸ್ತಿಗೆ ಭಾಜನವಾಗಿದೆ.

ನಾವೀನ್ಯತೆ ವಿಭಾಗದಲ್ಲಿ ಈ ಶಾಲೆಯು ಅತ್ಯುತ್ತಮ ಶಾಲೆ ಪ್ರಶಸ್ತಿಗೆ ಆಯ್ಕೆಯಾಗಿದೆ. ಬಹುಮಾನದ ಮೊತ್ತವಾಗಿ ₹ 41.58 ಲಕ್ಷ (50 ಸಾವಿರ ಡಾಲರ್) ಪಡೆಯಲಿದೆ. ಲಂಡನ್‌ನ ಎಕ್ಸ್‌ಪರ್ಟ್ ಜಡ್ಜಿಂಗ್ ಅಕಾಡೆಮಿಯು ವಿಜೇತ ಶಾಲೆಗಳನ್ನು ಆಯ್ಕೆ ಮಾಡಿತು.

‘ಭಾರತದ ‘ದ ರಿವರ್‌ಸೈಡ್ ಸ್ಕೂಲ್’ಗೆ ಹಾರ್ದಿಕ ಅಭಿನಂದನೆ ಗಳು. ಜಗತ್ತಿನ ಶಿಕ್ಷಣ ಪರಿಣತರು, ಒಂದು ಮಾದರಿಯಾಗಿ ನಿಮ್ಮ ಶಾಲೆಯನ್ನು ಗಮನಿಸಬಹುದು’ ಎಂದು ಟಿ4 ಎಜುಕೇಶನ್ ಸಂಸ್ಥೆ ಮತ್ತು ಬಹುಮಾನದ ಸ್ಥಾಪಕರಾದ ವಿಕಾಸ್ ಪೋಟ ಪ್ರತಿಕ್ರಿಯಿಸಿದ್ದಾರೆ.

‘ಇಂದಿನ ಬಹುತೇಕ ಸವಾಲುಗಳಿಗೆ ಉತ್ತರವಾಗಿಯೂ ಸರ್ಕಾರ ನಿಮ್ಮ ಸ್ಕೂಲ್‌ನ ಸಾಧನೆ ಗಮನಿಸಬಹುದು. ನಿಮ್ಮ ನಾಯಕತ್ವ, ದೂರದೃಷ್ಟಿ, ನಿಮ್ಮ ಶಾಲೆಯಲ್ಲಿನ ಸಂಸ್ಕೃತಿಯಿಂದ ಇದು ಸಾಧ್ಯವಾಗಿದೆ’ ಎಂದು ಅವರು ಶ್ಲಾಘಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಥಳಿಸಿದ ಆರೋಪ ಬಿಜೆಪಿ ನಾಯಕಿಯ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ಮಹಾನಗರ ಸಾರಿಗೆ ನಿಗಮದ (ಎಂಟಿಸಿ) ಬಸ್‌ನ ಸಿಬ್ಬಂದಿಯನ್ನು ನಿಂದಿಸಿದ ಹಾಗೂ ಬಸ್‌ನ ಬಾಗಿಲಲ್ಲಿ ನಿಂತು ಪ್ರಯಾಣಿಸುತ್ತಿದ್ದ ವಿದ್ಯಾರ್ಥಿಗಳನ್ನು ಥಳಿಸಿದ ಆರೋಪದ ಮೇಲೆ ಬಿಜೆಪಿಯ ಪದಾಧಿಕಾರಿ ರಂಜನಾ ನಾಚಿಯಾರ್ ಅವರನ್ನು ತಮಿಳುನಾಡು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕೆಲವು ತಮಿಳು ಚಿತ್ರಗಳಲ್ಲಿ ನಟಿಸಿರುವ ಇವರು ಬಿಜೆಪಿಯ ಕಲಾ ಮತ್ತು ಸಂಸ್ಕೃತಿ ವಿಭಾಗದ ಕಾರ್ಯದರ್ಶಿಯಾಗಿದ್ದಾರೆ.

ಗುರುವಾರ ಸಂಜೆ ನಗರದ ಹೊರವಲಯ ಕುಂದ್ರಾತೂರ್‌ನಿಂದ ಸೈದಾಪೇಟೆ ನಡುವೆ ಸಂಚರಿಸುತ್ತಿದ್ದ ಬಸ್‌ನ ಬಾಗಿಲಲ್ಲಿ ವಿದ್ಯಾರ್ಥಿಗಳು ನಿಂತು ಪ್ರಯಾಣಿಸುವುದನ್ನು ನೋಡಿದ ರಂಜನಾ, ತನ್ನ ಕಾರನ್ನು ವೇಗವಾಗಿ ಚಲಾಯಿಸಿ ಬಸ್ ಮುಂಭಾಗ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದರು.

‘ಫುಟ್‌ಬೋರ್ಡ್‌ನಲ್ಲಿ ನಿಂತು ಪ್ರಯಾಣಿಸಲು ಹೇಗೆ ಅವಕಾಶ ಕೊಟ್ಟಿದ್ದೀರಿ?’ ಎಂದು ರಂಜನಾ ಬಸ್‌ನ ಚಾಲಕನ ಜೊತೆ ವಾಗ್ವಾದ ನಡೆಸುತ್ತಿರುವ ವಿಡಿಯೊವನ್ನು ಪೋರೂರು ಸಿಗ್ನಲ್ ಬಳಿ ಚಿತ್ರೀಕರಿಸಲಾಗಿದೆ. ನಿರ್ವಾಹಕನ ಜೊತೆಯೂ ಜಗಳ ತೆಗೆದು, ‘ಬಾಗಿಲಲ್ಲಿ ನಿಂತು ಪ್ರಯಾಣಿಸುವವರಿಗೆ ಚಪ್ಪಲಿಯಲ್ಲಿ ಹೊಡೆಯಿರಿ’ ಎಂದಿದ್ದಾರೆ. ಕೆಲವೇ ಕ್ಷಣದಲ್ಲಿ ವಿದ್ಯಾರ್ಥಿಗಳನ್ನು ಥಳಿಸಿದ್ದಾರೆ. ಶಾಲಾ ಮಕ್ಕಳನ್ನು ನಿಂದಿರಿಸಿರುವುದು ಸಹ ಈ ವಿಡಿಯೊದಲ್ಲಿದೆ.

ಬಸ್ ಚಾಲಕ ಆರ್.ಶರವಣನ್ ನೀಡಿದ ದೂರಿನ ಆಧಾರದಲ್ಲಿ ಪೊಲೀಸರು ಶನಿವಾರ ರಂಜನಾ ಅವರನ್ನು ಬಂಧಿಸಿದ್ದಾರೆ. ರಂಜನಾ ಕರ್ತವ್ಯಕ್ಕೆ ಅಡ್ಡಿಪಡಿಸುವ ಜೊತೆಗೆ ಸಾರ್ವಜನಿಕವಾಗಿ ನಿಂದಿಸಿದ್ದಾರೆ ಎಂದು ಚಾಲಕ ದೂರಿದ್ದಾರೆ. ಶ್ರೀಪೆರಂಬದೂರಿನ ನ್ಯಾಯಾಲಯ ರಂಜನಾಗೆ ಶನಿವಾರ ಸಂಜೆ ಜಾಮೀನು ಮಂಜೂರು ಮಾಡಿದೆ.

‘ನನ್ನನ್ನು ಬಂಧಿಸಲು ಬಂದಿದ್ದ ಪುರುಷ ಪೊಲೀಸರು, ನಾನು ಬಟ್ಟೆ ಬದಲಿಸುವಾಗ ಕಿಟಕಿಯನ್ನು ತಳ್ಳಲು ಯತ್ನಿಸಿದರು’ ಎಂದು ರಂಜನಾ ದೂರಿದ್ದಾರೆ.

‘ಉಪಾಹಾರ ಸಭೆ’ಯಲ್ಲಿ ಸಿದ್ದರಾಮಯ್ಯ ಸೂಚನೆ • ಪರಾಜಿತ ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳ ಮೇಲೆ ಕಣ್ಣು

ಸೋತವರ ಸೆಳೆಯಲು ‘ಆಪರೇಷನ್ ಹಸ್ತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ಗೆಲ್ಲಿಸಿಕೊಡಬೇಕೆಂದು ಪಣ ತೊಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭೆ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಸೋಲು ಕಂಡಿರುವ ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳನ್ನು ಕಾಂಗ್ರೆಸ್‌ಗೆ ಕರೆ ತರುವಂತೆ ಸಚಿವರಿಗೆ ಗುರಿ ನೀಡಿದ್ದಾರೆ.

‘ಕಾಂಗ್ರೆಸ್‌ನ 50ಕ್ಕೂ ಹೆಚ್ಚು ಶಾಸಕರು ಸಂಪರ್ಕದಲ್ಲಿದ್ದಾರೆ, ಸರ್ಕಾರ ಸದ್ಯವೇ ಪತನವಾಗಲಿದೆ’ ಎಂದು ಬಿಜೆಪಿ, ಜೆಡಿಎಸ್ ನಾಯಕರು ಪದೇ ಪದೇ ಹೇಳುತ್ತಿದ್ದಾರೆ. ಎದುರಾಳಿ ಪಕ್ಷದ ಶಾಸಕರನ್ನು ಸೆಳೆಯುವ ಬದಲು, ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ ಮಾತ್ರವಲ್ಲದೇ ಲೋಕಸಭಾ ಕ್ಷೇತ್ರಗಳಲ್ಲಿ ಪ್ರಭಾವಿಯಾಗಿರುವ ನಾಯಕರನ್ನು ಸೆಳೆದು ಕಾಂಗ್ರೆಸ್ ಮತ ಭದ್ರಪಡಿಸುವುದು ಸಿದ್ದರಾಮಯ್ಯ ಲೆಕ್ಕಾಚಾರ’ ಎಂದು ಮೂಲಗಳು ಹೇಳಿವೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ 15 ಸಚಿವರನ್ನು ಬೆಳಗ್ಗಿನ ಉಪಾಹಾರ ಕೂಟದ ನೆಪದಲ್ಲಿ ತಮ್ಮ ನಿವಾಸ ‘ಕಾವೇರಿ’ಗೆ ಶನಿವಾರ ಆಹ್ವಾನಿಸಿದ್ದ ಸಿದ್ದರಾಮಯ್ಯ, ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಮತ್ತು ಪಕ್ಷವನ್ನು ಸಜ್ಜುಗೊಳಿಸುವ ಕುರಿತಂತೆ ಚರ್ಚೆ ನಡೆಸಿದರು.

ಪಕ್ಷ ಸಂಘಟನೆಯನ್ನು ಬಲಪಡಿಸುವ ಜೊತೆಗೆ ‘ಆಪರೇಷನ್ ಹಸ್ತ’ದ ವಿಚಾರವನ್ನೂ ಸಚಿವರ ಜೊತೆಗಿನ ಸಭೆಯಲ್ಲಿ ಪ್ರಸ್ತಾಪಿಸಿದ ಅವರು, ‘ಜನವಿರೋಧಿಯಾಗಿರುವ ಬಿಜೆಪಿಯನ್ನು ಮಣಿಸಬೇಕಾದರೆ ಹಲವು ತಂತ್ರಗಳನ್ನು ಹೆಣೆಯಬೇಕಿದೆ. ನಿಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ, ಪ್ರಭಾವಿಯಾಗಿದ್ದರೂ ಸೋತಿರುವ ಬಿಜೆಪಿ, ಜೆಡಿಎಸ್ ನಾಯಕರನ್ನು ಪಕ್ಷಕ್ಕೆ ಕರೆತರಲು ಮುಂದಾಗಿ. ಇದರಿಂದ ಲೋಕಸಭೆ ಚುನಾವಣೆಯಲ್ಲಿ ಗುರಿ ಮುಟ್ಟಲು ಸಾಧ್ಯವೆಂದು ಸೂಚಿಸಿದ್ದಾಗಿ ಮೂಲಗಳು ತಿಳಿಸಿವೆ.

ಲೋಕಸಭೆ ಚುನಾವಣೆಗೆ ಯಾರನ್ನು ಕಣಕ್ಕೆ ಇಳಿಸಿದರೆ ಗೆಲುವು ಸಲೀಸು ಎಂಬ ಬಗ್ಗೆ ಸಚಿವರಿಂದ ವಿವರ ಪಡೆದ ಸಿದ್ದರಾಮಯ್ಯ, ಇನ್ನಷ್ಟು ಮಾಹಿತಿಯೊಂದಿಗೆ ವರದಿಯನ್ನು ನೀಡಿ ಎಂದೂ ಹೇಳಿದರು.

ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಜಾರಿ, ಅವುಗಳ ಮೇಲ್ವಿಚಾರಣೆ ವಿಚಾರವಾಗಿಯೂ ಸಚಿವರ ಜೊತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ಮಾಡಿದರು.

ಸಭೆಯ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಲ್ಲಿ ಮತದಾರರ ಅಭಿಪ್ರಾಯ ಪಡೆಯಲಾಗುವುದು. ಹೀಗಾಗಿ, ತಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುವಂತೆ ಸಚಿವರುಗಳಿಗೆ ಸೂಚನೆ ನೀಡಿದ್ದೆವು. ಕೆಲವು ಸಚಿವರ ಪ್ರವಾಸ ಮಾಡಿಲ್ಲ. ಈ ಬಗ್ಗೆ ಚರ್ಚೆ ಮಾಡಲಾಯಿತು. ಜೊತೆಗೆ, ಗ್ಯಾರಂಟಿ ಯೋಜನೆಗಳ ಜಾರಿ ಮತ್ತು ಅವುಗಳನ್ನು ಜನರಿಗೆ ತಲುಪಿಸುವ ಬಗ್ಗೆ ಪರಿಶೀಲನಾ ಸಭೆ ಮಾಡುವಂತೆ ಸೂಚಿಸಲಾಗಿದೆ’ ಎಂದರು.

‘ಕೇವಲ 15 ಸಚಿವರ ಜತೆ ಚರ್ಚೆ ಮಾಡಿದ್ದೇವೆ. ಉಳಿದವರ ಜತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಲೋಕಸಭೆ ಚುನಾವಣೆ, ಗ್ಯಾರಂಟಿ ಯೋಜನೆ ಜಾರಿ ನಮ್ಮ ಪ್ರಮುಖ ಆದ್ಯತೆ’ ಎಂದರು.

ಲೋಕಸಭೆ ಚುನಾವಣೆಯಲ್ಲಿ ಸಚಿವರಿಗೆ ಗುರಿ ನೀಡಿದ್ದೀರಾ ಎಂದು ಕೇಳಿದಾಗ, ‘ಲೋಕಸಭೆ ಚುನಾವಣೆಯಲ್ಲಿ ಆಯಾ ಸಚಿವರುಗಳಿಗೆ ತಮ್ಮ ಉಸ್ತುವಾರಿ ಜಿಲ್ಲೆಗಳ ಜವಾಬ್ದಾರಿ ನೀಡಲಾಗಿದೆ. ಆದರೆ, ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಆಯಾ ಸಚಿವರಿಗೆ ಆ ಜಿಲ್ಲೆಯ ಜವಾಬ್ದಾರಿ ನೀಡಿಲ್ಲ’ ಎಂದರು.

ಬಿಜೆಪಿ ಬರ ಅಧ್ಯಯನ ಕೈಗೊಂಡಿರುವ ಬಗ್ಗೆ ಕೇಳಿದಾಗ, ‘ಬಿಜೆಪಿ ನಾಯಕರು ಬರ ಪ್ರವಾಸ ಮಾಡಿದರೆ ಮಾಡಲಿ, ನಾವು ಬೇಡ ಎನ್ನುವುದಿಲ್ಲ. ವಾಸ್ತವಾಂಶ ಅಧ್ಯಯನ ಮಾಡಿ ಕೇಂದ್ರ ಸರ್ಕಾರದಿಂದ ಹಣ ಕೊಡಿಸಲಿ. ಕೇವಲ ಖಾಲಿ ಮಾತನಾಡಿದರೆ ಪ್ರಯೋಜನವಿಲ್ಲ’ ಎಂದರು.

‘ಕಾಂತರಾಜ ಆಯೋಗದ ವರದಿ ಬಗ್ಗೆ ಸಭೆಯಲ್ಲಿ ಚರ್ಚೆ ಆಯಿತೇ?’ ಎಂದು ಕೇಳಿದಾಗ, ‘ಈ ವರದಿ ಬಗ್ಗೆ ನಮ್ಮ ಸಮುದಾಯದವರಿಗೆ (ಒಕ್ಕಲಿಗ) ಅನುಮಾನಗಳಿದ್ದು, ಸರ್ಕಾರ ಅವುಗಳನ್ನು ಬಗೆಹರಿಸುತ್ತದೆ. ಈವರೆಗೂ ವರದಿ ಬಗ್ಗೆ ಸರಿಯಾದ ತೀರ್ಮಾನ ಆಗಿಲ್ಲ. ವರದಿ ಇನ್ನೂ ಸಲ್ಲಿಕೆ ಆಗಿಲ್ಲ’ ಎಂದರು.

ಮುಖ್ಯಮಂತ್ರಿಯ ನಿವಾಸ ‘ಕಾವೇರಿ’ಯಲ್ಲಿ ನೂತನವಾಗಿ ನಿರ್ಮಿಸಿರುವ ಸಭಾಂಗಣವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಇದ್ದರು

‘ಅನಗತ್ಯ ಹೇಳಿಕೆ ನೀಡಬಾರದು’

‘ಪಕ್ಷ ಮತ್ತು ಸರ್ಕಾರದ ಆಂತರಿಕ ವಿಚಾರದಲ್ಲಿ ತನ್ನನ್ನೂ ಸೇರಿ ಯಾರೊಬ್ಬರೂ ಅನಗತ್ಯ ಹೇಳಿಕೆ ನೀಡಬಾರದು ಎಂದು ‘ಉಪಾಹಾರ ಸಭೆ’ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರಿಗೆ ನೇರವಾಗಿ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಈ ವಿಷಯ ಹಂಚಿಕೊಂಡ ಶಿವಕುಮಾರ್ ಅವರು, ‘ಮಾಧ್ಯಮದವರು ಪ್ರಶ್ನೆ ಕೇಳಿದರೂ ಪ್ರತಿಕ್ರಿಯೆ ನೀಡಬೇಡಿ. ಮಾಧ್ಯಮಗಳ ರಾಜಕೀಯ ಬಲೆಗೆ ಬೀಳಬೇಡಿ ಎಂದು ಸಚಿವರಿಗೆ ಸೂಚಿಸಿದ್ದೇವೆ’ ಎಂದರು.

‘ಬರ ಪರಿಶೀಲನೆ; ತಾಲ್ಲೂಕುಗಳಿಗೆ ಭೇಟಿ ಕೊಡಿ’

ಬರ ಪರಿಸ್ಥಿತಿಯ ಅಧ್ಯಯನಕ್ಕೆ ಬಿಜೆಪಿ, ಜೆಡಿಎಸ್ ನಾಯಕರು ಪ್ರವಾಸ ತೆರಳುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಉಸ್ತುವಾರಿ ಸಚಿವರು ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡುವ ಜತೆಗೆ, ತಾಲ್ಲೂಕು ಹಂತದಲ್ಲಿ ಸಭೆ ನಡೆಸಿ ಅಧಿಕಾರಿಗಳನ್ನು ಚುರುಕುಗೊಳಿಸುವ ಕೆಲಸ ಮಾಡಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಬರ ಪರಿಸ್ಥಿತಿ ನಿರ್ವಹಣೆಗೆ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸಚಿವರು ನಿಗಾವಹಿಸಿದರೆ ಮಾತ್ರ ಅಧಿಕಾರಿಗಳು ಎಚ್ಚರದಿಂದ ಕೆಲಸ ಮಾಡುತ್ತಾರೆ. ಸಣ್ಣ ವೈಫಲ್ಯವನ್ನೇ ಬಿಜೆಪಿ, ಜೆಡಿಎಸ್ ನಾಯಕರು ದೊಡ್ಡದು ಮಾಡಿ ರಾಜಕೀಯ ಲಾಭ ಮಾಡಿಕೊಳ್ಳಲು ಮುಂದಾಗಿದ್ದಾರೆ. ಇದಕ್ಕೆ ಅವಕಾಶ ಕೊಡದಂತೆ, ಸಚಿವರು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಿ ಎಂದು ನಿರ್ದೇಶನ ನೀಡಿದರು.

ಈ ಕುರಿತು ಪ್ರತ್ಯೇಕ ಟಿಪ್ಪಣಿ ಹೊರಡಿಸಿರುವ ಸಿದ್ದರಾಮಯ್ಯ, ಸ್ಥಳೀಯ ಶಾಸಕರೊಂದಿಗೆ ತಾಲ್ಲೂಕಿಗೆ ಭೇಟಿ ನೀಡಿ ಕುಡಿಯುವ ನೀರು, ಮೇವಿನ ಪರಿಸ್ಥಿತಿ, ಬೆಳೆ ಹಾನಿಯ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಇದೇ 15ರೊಳಗೆ ವರದಿ ನೀಡಬೇಕು ಎಂದು ಕೋರಿದ್ದಾರೆ.

‘ಶಾಸಕ ಇಕ್ಬಾಲ್ ಹುಸೇನ್‌ಗೂ ನೋಟಿಸ್’

‘ನನಗೆ ಸರ್ಕಾರದಲ್ಲಿ ಯಾರ ಶಾಸಕರ ಬೆಂಬಲವೂ ಬೇಡ. ನನ್ನ ಪರವಾಗಿ ಮಾತನಾಡಿರುವ ಶಾಸಕ ಇಕ್ಬಾಲ್ ಹುಸೇನ್‌ಗೂ ನೋಟಿಸ್ ನೀಡುತ್ತೇನೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ನನ್ನ ಮತ್ತು ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪಕ್ಷ ಚುನಾವಣೆ ಎದುರಿಸಿದ್ದು, ರಾಜ್ಯದ ಜನ ನಮಗೆ ಆಶೀರ್ವಾದ ಮಾಡಿದ್ದಾರೆ. ಉತ್ತಮ ಆಡಳಿತ ನೀಡುವುದು ನಮ್ಮ ಗುರಿ. ನನಗೆ ಯಾವುದಕ್ಕೂ ಆತುರವಿಲ್ಲ. ನಾನು ಯಾರಿಗೂ ಬೆಂಬಲ ನೀಡಿಲ್ಲ. ನಮ್ಮ ಹೈಕಮಾಂಡ್ ತೀರ್ಮಾನ ಮಾಡಲಿದೆ. ನಮ್ಮ ಪಕ್ಷದ ನಾಯಕರಿಗೆ ಏನು ಹೇಳಬೇಕೋ ಹೇಳಿದ್ದೇವೆ’ ಎಂದರು.

‘ಸಿದ್ದರಾಮಯ್ಯ ಅವರು ಹೇಳಿದ್ದನ್ನು ಮಾಧ್ಯಮಗಳು ತಿರುಚಿವೆ. ಸಿದ್ದರಾಮಯ್ಯ ನಮ್ಮ ನಾಯಕರು. ನಾವು ಅವರ ನಾಯಕತ್ವ ಒಪ್ಪಿದ್ದೇವೆ. ಪಕ್ಷ ಹೇಳಿದಂತೆ ನಾವು ಕೇಳುತ್ತೇವೆ’ ಎಂದೂ ತಿಳಿಸಿದರು.

‘ಬಿ ರಿಪೋರ್ಟ್ ಬರೆಯುವ ಕಾಲ ಬರಲಿದೆ’

‘ನನ್ನ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಪ್ರಕರಣ ದಾಖಲಿಸಿರಬಹುದು. ಆದರೆ, ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನ ಎಲ್ಲ ದಾಖಲೆಗಳು ಸಾರ್ವಜನಿಕವಾಗಿವೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಐಟಿ, ಇಡಿ ನೋಟಿಸ್ ಬಂದಿದೆಯೇ?’ ಎಂದು ಕೇಳಿದಾಗ ಪ್ರತಿಕ್ರಿಯಿಸಿದ ಅವರು, ‘ನಾನು ಮತ್ತು ನನ್ನ ಪತ್ನಿ ಇಬ್ಬರೂ ತೆರಿಗೆ ಪಾವತಿದಾರರು. ನಾನು ಹೆಚ್ಚಿಗೆ ಆಸ್ತಿ ಗಳಿಸಿದ್ದೇನೆಂಬ ವಿಚಾರ ಸಿಬಿಐಗೆ ನೀಡುವ ಪ್ರಕರಣವಲ್ಲ ಎಂದು ಅಡ್ವೋಕೇಟ್ ಜನರಲ್ ಹೇಳಿದ್ದರೂ, ಯಡಿಯೂರಪ್ಪ ಅವರ ಸರ್ಕಾರದ ಅವಧಿಯಲ್ಲಿ ಸಿಬಿಐಗೆ ನೀಡಿದ್ದಾರೆ. ನೋಟಿಸ್ ಕೊಟ್ಟರೆ ಉತ್ತರ ನೀಡುತ್ತೇನೆ. ಬಿ ರಿಪೋರ್ಟ್ ಬರೆಯುವ ಕಾಲ ಬರುತ್ತದೆ’ ಎಂದರು.

ಸುದ್ದಿ 2 ನಿಮಿಷ

ರೈತರು ಕಷ್ಟದಲ್ಲಿದ್ದಾರೆ, ಸಿ.ಎಂ ಡಾನ್ಸ್ ಮಾಡುತ್ತಿದ್ದಾರೆ: ಶ್ರೀರಾಮುಲು

ಗದಗ: ‘ರಾಜ್ಯದ ರೈತರು ಬರದ ಸಂಕಷ್ಟದಲ್ಲಿ ಬೇಯುತ್ತಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಣಿದು ಕುಪ್ಪಳಿಸುತ್ತಿದ್ದಾರೆ’ ಎಂದು ಮಾಜಿ ಸಚಿವ ಶ್ರೀರಾಮುಲು ಕಿಡಿಕಾರಿದರು.

ಹಂಪಿಯಲ್ಲಿ ಈಚೆಗೆ ನಡೆದ ‘ಕರ್ನಾಟಕ ಸಂಭ್ರಮ–50’ರ ಕಾರ್ಯಕ್ರಮದಲ್ಲಿ ಸಿ.ಎಂ ಸಿದ್ದರಾಮಯ್ಯ ಹೆಜ್ಜೆ ಹಾಕಿದ್ದಕ್ಕೆ ಅವರು ಶನಿವಾರ ನಗರದಲ್ಲಿ ಈ ರೀತಿ ಲೇವಡಿ ಮಾಡಿದರು.

‘ಬರದ ಕಾರಣ ಬೆಳೆಹಾನಿಯಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕೆಲಸವಿಲ್ಲದೇ ಗುಳೆ ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಏನೂ ಆಗಿಲ್ಲ ಎಂಬ ಸಂತೋಷದಲ್ಲಿ ಇದ್ದಾರೆ. ಈ ಸರ್ಕಾರದ ಬಗ್ಗೆ ಏನು ಹೇಳಬೇಕೋ ತಿಳಿಯುತ್ತಿಲ್ಲ’ ಎಂದು ಹರಿಹಾಯ್ದರು.

‘ಒಂದು ವೇಳೆ ಬೇರೆ ಪಕ್ಷದ ಮುಖ್ಯಮಂತ್ರಿ ಅಥವಾ ಸಚಿವರು ಈ ರೀತಿ ಕುಣಿದು ಕುಪ್ಪಳಿಸಿದ್ದರೆ ಸಿದ್ದರಾಮಯ್ಯ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಳ್ಳುತ್ತಿದ್ದರು’ ಎಂದು ಟೀಕಿಸಿದರು.

ಕಾಂಗ್ರೆಸ್ ಒಳ ಜಗಳ ಇನ್ನಷ್ಟು ತೀವ್ರ: ವಿಜಯೇಂದ್ರ ಭವಿಷ್ಯ

ಶಿವಮೊಗ್ಗ: ‘ಮುಖ್ಯಮಂತ್ರಿ ಕುರ್ಚಿಗಾಗಿ ಕಾಂಗ್ರೆಸ್ ನಾಯಕರ ನಡುವೆ ನಡೆಯುತ್ತಿರುವ ಶೀತಲ ಸಮರ ಇನ್ನಷ್ಟು ತೀವ್ರಗೊಳ್ಳಲಿದೆ’ ಎಂದು ಶಿಕಾರಿಪುರ ಶಾಸಕ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದರು.

‘ಪಾಂಡವರು–ಕೌರವರ ನಡುವೆ ಗದಾಯುದ್ಧ ನಡೆದಿದ್ದರ ಬಗ್ಗೆ ಕೇಳಿದ್ದೆವು. ಈಗ ಕಾಂಗ್ರೆಸ್‌ನೊಳಗೆ ಮಹಾಯುದ್ಧವಾಗಲಿದೆ. ರಾಜ್ಯದ ಜನ ಸರ್ಕಾರದ ವಿರುದ್ಧ ಸಿಡಿದೇಳಲಿದ್ದಾರೆ’ ಎಂದು ಶನಿವಾರ ತಿಳಿಸಿದರು.

‘ಕಾಂಗ್ರೆಸ್ ನಾಯಕರ ಕಿತ್ತಾಟದಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗಲಿದೆ. ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿರಬಹುದು. ಆದರೆ ಬಿಜೆಪಿ ಮತ್ತೆ ಗೆದ್ದು ಬರಲಿದೆ’ ಎಂದು ಹೇಳಿದರು.

‘ಡಿಕೆಶಿ ಸಿ.ಎಂ ಆಗುವುದಾದರೆ ಬೆಂಬಲ’

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಹೇಳಿಕೆ • ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದಾದರೆ ಜೆಡಿಎಸ್‌ನ 19 ಶಾಸಕರ ಬೆಂಬಲವನ್ನು ನಾಳೆಯೇ ನೀಡಲಾಗುವುದು’ ಎಂದು ಎಚ್‌.ಡಿ.ಕುಮಾರಸ್ವಾಮಿ ಅವರು ಹೇಳಿದರು.

‘ರಾಜ್ಯದ ಜನರು ಸಂಕಷ್ಟದಲ್ಲಿ ಇರುವಾಗ ಇವರು ಮುಖ್ಯಮಂತ್ರಿ ಕುರ್ಚಿಗಾಗಿ ಬೀದಿಯಲ್ಲಿ ಕಿತ್ತಾಡುತ್ತಿದ್ದಾರೆ. 136 ಶಾಸಕರು ಇರುವ ಸರ್ಕಾರಕ್ಕೆ ಐದೇ ತಿಂಗಳಲ್ಲಿ ಅಭದ್ರತೆ ಕಾಡುತ್ತಿದೆ. ಅದಕ್ಕಾಗಿ ಬಿಜೆಪಿ, ಜೆಡಿಎಸ್ ಶಾಸಕರ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಜಿ.ಟಿ.ದೇವೇಗೌಡರಿಗೆ ಮಂತ್ರಿ, ಅವರ ಮಗನಿಗೆ ಇನ್ನೇನೋ ಮಾಡುತ್ತೇನೆ ಎಂದು ಆಮಿಷ ಒಡ್ಡುತ್ತಿದ್ದಾರೆ. ತಮ್ಮ ಕ್ಷೇತ್ರದ ಕೆಲಸಕ್ಕೆ ಕರೆಮ್ಮ ನಾಯಕ್ ಹೋದರೆ ‘ಬನ್ನಿ ಅಕ್ಕ ನಮ್ಮ ಪಕ್ಷಕ್ಕೆ’ ಅಂತಾರೆ. ಅವರ ಶಾಸಕರಿಗೆ ಅನುದಾನ ನೀಡುವುದಕ್ಕೆ ಸರ್ಕಾರಕ್ಕೆ ಗತಿ ಇಲ್ಲ. ಇತರೆ ಪಕ್ಷಗಳ ಶಾಸಕರಿಗೆ ಆಮಿಷ ಒಡ್ಡುತ್ತಾರೆ. ಇಂತಹ ಕೆಲಸ ಮಾಡುವುದನ್ನು ಬಿಟ್ಟು ನಾಳೆಯೇ ಮುಖ್ಯಮಂತ್ರಿಯಾಗಲಿ, ಬೆಂಬಲ ನೀಡುತ್ತೇವೆ’ ಎಂದರು.

ಟಿಸಿಎಂ, ಡಿಸಿಎಂ ಸರ್ಕಾರ: ರಾಜ್ಯದಲ್ಲಿರುವುದು ಟಿಸಿಎಂ (ಟೆಂಪರರಿ ಮುಖ್ಯಮಂತ್ರಿ), ಡಿಸಿಎಂ (ಡೂಪ್ಲಿಕೇಟ್ ಮುಖ್ಯಮಂತ್ರಿ) ಸರ್ಕಾರ. ಐದು ವರ್ಷಗಳಲ್ಲಿ ಎಷ್ಟು ಜನ ಮುಖ್ಯಮಂತ್ರಿಗಳಾಗುವರೋ ಗೊತ್ತಿಲ್ಲ. ಕಾಂಗ್ರೆಸ್‌ನಲ್ಲಿ ಅಷ್ಟೊಂದು ಸ್ಪರ್ಧೆ ಇದೆ ಎಂದು ಕುಮಾರಸ್ವಾಮಿ ಹೇಳಿದರು.

ಎನ್‌ಡಿಎ ಕೂಟ ಬಿಟ್ಟುಬಂದು ಮಾತನಾಡಲಿ: ಡಿಕೆಶಿ

ಬೆಂಗಳೂರು: ‘ಎನ್‌ಡಿಎ ಮೈತ್ರಿಕೂಟದಿಂದ ಕುಮಾರಸ್ವಾಮಿ ಹೊರಬಂದು ನನಗೆ ಬೆಂಬಲ ನೀಡುವ ಬಗ್ಗೆ ಮಾತನಾಡಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಬೆಂಬಲ ನೀಡಬೇಕಾದ ಕಾಲದಲ್ಲೇ ಕುಮಾರಸ್ವಾಮಿ ಬೆಂಬಲ ನೀಡಲಿಲ್ಲ. ಈಗೇನು ಬೆಂಬಲ ನೀಡುತ್ತಾರೆ’ ಎಂದು ತಿರುಗೇಟು ನೀಡಿದರು.

‘ಕುಮಾರಸ್ವಾಮಿ ಮಾತು ಕೇಳಿ ಬಹಳ ಸಂತೋಷವಾಗಿದೆ. ರಾಜ್ಯದ ಜನತೆ ನಮಗೆ 136 ಸೀಟು ಕೊಟ್ಟು ಅಧಿಕಾರ ಕೊಟ್ಟಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ ಅವರು ಸರ್ಕಾರವನ್ನು ಟೀಕೆ ಮಾಡುವುದನ್ನು ಬಿಟ್ಟು, ತಿದ್ದುವ ಕೆಲಸ ಮಾಡಲಿ’ ಎಂದು ಸಲಹೆ ನೀಡಿದರು.

‘ಕುಮಾರಸ್ವಾಮಿ ಅವರು ನಿಮ್ಮ ಬಗ್ಗೆ ಪ್ರೀತಿ ತೋರಿದ್ದಾರೆ’ ಎಂದು ಸುದ್ದಿಗಾರರ ಹೇಳಿದಾಗ, ‘ಅವರಿಗೆ ನನ್ನ ಮೇಲೆ ಎಷ್ಟು ಪ್ರೀತಿಯಿದೆ, ದೆಹಲಿಯಲ್ಲಿ ಏನು ಮಾತನಾಡಿದ್ದಾರೆ, ಯಾರ್‍ಯಾರ ಬಳಿ ಏನೇನು ಮಾತನಾಡಿದ್ದಾರೆ, ನನ್ನ ವಿಚಾರದಲ್ಲಿ ಏನೇನು ದೊಡ್ಡ ತಂತ್ರಗಳು ನಡೆಯುತ್ತಿವೆ ಎಂಬ ಮಾಹಿತಿಯನ್ನು ಅವರ ಜೊತೆಯಲ್ಲಿದ್ದವರೇ ನನಗೆ ನೀಡಿದ್ದಾರೆ. ನಿಜಕ್ಕೂ ಕುಮಾರಸ್ವಾಮಿಗೆ ನನ್ನ ಮೇಲೆ ಪ್ರೀತಿ ಇದ್ದರೆ ಮೈತ್ರಿ ಸರ್ಕಾರ ಬಿದ್ದ ನಂತರ ನಡೆದ ಘಟನೆಗಳು, ಅವರು ಆಡಿರುವ ಮಾತುಗಳನ್ನು ನೆನಪು ಮಾಡಿಕೊಂಡು, ತಮ್ಮ ಆತ್ಮಸಾಕ್ಷಿಗೆ ಉತ್ತರ ನೀಡಲಿ’ ಎಂದರು.

‘ಕುಮಾರಸ್ವಾಮಿ ಅವರನ್ನು ಕಾಂಗ್ರೆಸ್ ಹಾಗೂ ಬಿಜೆಪಿ ತಲಾ ಒಂದೊಂದು ಬಾರಿ ಮುಖ್ಯಮಂತ್ರಿ ಮಾಡಿವೆ. ಅವರ ತಂದೆಯವರನ್ನು ಕಾಂಗ್ರೆಸ್ ಪಕ್ಷ ಪ್ರಧಾನಮಂತ್ರಿ ಮಾಡಿದೆ. ಅವರಿಗಿರುವ ಅಪಾರ ಅನುಭವದ ಮೂಲಕ ನಮಗೆ ಮಾರ್ಗದರ್ಶನ ನೀಡಲಿ’ ಎಂದರು.

ಬಿ. ಎಲ್. ಶಂಕರ್ ಅಭಿಪ್ರಾಯ ‘ಬದಲಾದ ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲತಃ ಸಮಾಜವಾದಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಧ್ವನಿ ಇಂದು ಬದಲಾಗಿದೆ. ಸುತ್ತಲೂ ಇರುವವರಿಂದ ಅವರು ಪ್ರಭಾವಿತರಾಗಿರಬಹುದು ಎಂದು ಕಾಂಗ್ರೆಸ್ ನಾಯಕ ಬಿ.ಎಲ್. ಶಂಕರ್ ಹೇಳಿದರು.

ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್ (ಎಚ್‌ಎಂಕೆಪಿ) ಅಧ್ಯಕ್ಷ ಮೈಕಲ್ ಫರ್ನಾಂಡೀಸ್ ಅವರ ಜನ್ಮ ದಿನದ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ‘ಮೈಕಲ್–90’ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಅವರು, ‘ರೈತ ನಾಯಕ ಎಂ.ಡಿ. ನಂಜುಂಡಸ್ವಾಮಿ, ಫರ್ನಾಂಡಿಸ್ ಅವರ ಗರಡಿಯಲ್ಲಿ ಬೆಳೆದ ಸಿದ್ದರಾಮಯ್ಯನವರು ಸಮಾಜವಾದಿ ಹಿನ್ನೆಲೆಯಲ್ಲೇ ರಾಜಕೀಯ ನೆಲೆ ಕಂಡುಕೊಂಡವರು. ಈಗ ಅವರ ಮಾತು ಮೊದಲಿನಂತಿಲ್ಲ. ರಾಜಕೀಯ ಎಲ್ಲವನ್ನೂ ಕಲಿಸಿದೆ. ಸ್ಪಂದನೆ ಇಲ್ಲದ ಸ್ಥಿತಿಗೆ ತಲುಪಿದ್ದಾರೆ’ ಎಂದರು.

‘ಆಂತರಿಕ ಪ್ರಜಾಪ್ರಭುತ್ವ ಮಾಯ’

ಕಾಂಗ್ರೆಸ್ ಸೇರಿದಂತೆ ಯಾವ ರಾಜಕೀಯ ಪಕ್ಷಗಳಲ್ಲೂ ಆಂತರಿಕ ಪ್ರಜಾಪ್ರಭುತ್ವ ಇಲ್ಲ ಎಂದು ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಹೇಳಿದರು.

ಪಕ್ಷಗಳ ಹೈಕಮಾಂಡ್ ಒಂದು ರೀತಿ ಸರ್ವಾಧಿಕಾರಿ ಮನಃಸ್ಥಿತಿ ರೂಢಿಸಿಕೊಂಡಿದೆ. ಪಕ್ಷದ ಇತರೆ ನಾಯಕರ, ಜನಪ್ರತಿನಿಧಿಗಳ ಮಾತಿಗೆ ಮನ್ನಣೆ ಸಿಗುತ್ತಿಲ್ಲ ಎಂದರು. ಸಮಾಜವಾದಿಗಳಿಗೆ ಸ್ವಂತ ಹಿತಾಸಕ್ತಿ ಇಲ್ಲ. ಸಮಾಜದ ಜನರ ಏಳಿಗೆಗಾಗಿ ಇಡೀ ಜೀವನ ಶ್ರಮಿಸುತ್ತಾರೆ. ಇತರೆ ಪಕ್ಷಗಳಲ್ಲಿ ಸ್ವಾರ್ಥತೆಯೇ ತುಂಬಿದೆ. ಅಂತಹ ಪಕ್ಷಗಳು ನಡೆಸುವ ಸರ್ಕಾರದ ಅಂಗಗಳಲ್ಲೂ ಸತ್ವ ಇಲ್ಲವಾಗಿದೆ ಎಂದು ಹೇಳಿದರು.

‘ಪಿಂಜಾರರ ಕುಲಶಾಸ್ತ್ರೀಯ ಅಧ್ಯಯನ ಶೀಘ್ರ’

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ನದಾಫ್ ಹಾಗೂ ಪಿಂಜಾರ ಸಮುದಾಯದ ಅಭಿವೃದ್ಧಿಗೆ ಕುಲಶಾಸ್ತ್ರೀಯ ಅಧ್ಯಯನ ಅಗತ್ಯವಿದ್ದು, ಈ ಕುರಿತು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗಿದೆ. ಅತಿ ಶೀಘ್ರದಲ್ಲೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಆರಂಭವಾಗಲಿದೆ’ ಎಂದು ಹಿಂದುಳಿದ ವರ್ಗಗಳ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ರಾಜ್ಯ ನದಾಫ್, ಪಿಂಜಾರ ಸಂಘದಿಂದ ಶನಿವಾರ ನಡೆದ 31ನೇ ವರ್ಷದ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಣ್ಣ ಸಮಾಜಗಳ ಸ್ಥಿತಿಗತಿ ತಿಳಿದು ಅವುಗಳ ಏಳಿಗೆಗಾಗಿ ಕಾಂತರಾಜು ವರದಿ ಜಾರಿಗೆ ನಿರ್ಧರಿಸಿದ್ದಾರೆ. ಆದರೆ, ಅದಕ್ಕೆ ಕೆಲವರು ರಾಜಕೀಯ ಬಣ್ಣ ಹಚ್ಚುತ್ತಿದ್ದಾರೆ. ಈ ವರದಿಯಿಂದ ನದಾಫ್, ಪಿಂಜಾರ ಸೇರಿ ಹಲವು ಸಮಾಜಗಳಿಗೆ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಮನ್ನಣೆ ಸಿಗುತ್ತದೆ’ ಎಂದರು.

ಕೆಲವೇ ದಿನಗಳಲ್ಲಿ ಈ ಸಮುದಾಯಗಳ ನಿಗಮ ಮಂಡಳಿ ರಚನೆಯಾಗಲಿದೆ ಎಂದು ಅವರು ಭರವಸೆ ನೀಡಿದರು.

ದತ್ತಮಾಲಾ: ಶೋಭಾಯಾತ್ರೆ ಇಂದು

ಚಿಕ್ಕಮಗಳೂರು: ಶ್ರೀರಾಮ ಸೇನೆ ನಡೆಸುತ್ತಿರುವ ದತ್ತಮಾಲಾ ಅಭಿಯಾನದ ಭಾಗವಾಗಿ ಭಾನುವಾರ ಶೋಭಾಯಾತ್ರೆ ನಡೆಯಲಿದ್ದು, ಪೊಲೀಸ್ ಇಲಾಖೆ ಹೆಚ್ಚಿನ ಬಂದೋಬಸ್ತ್ ಕೈಗೊಂಡಿದೆ.

ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಭಾಗವಹಿಸಲಿದ್ದು, ನಗರದಲ್ಲಿ ಶೋಭಾಯಾತ್ರೆ ನಡೆಸಿ ನಂತರ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ಮಾಲಾಧಾರಿಗಳು ತೆರಳಲಿದ್ದಾರೆ. ಅಲ್ಲಿ ಪಾದುಕೆ ದರ್ಶನ ಪಡೆದು ದತ್ತಹೋಮ ನಡೆಸಲಿದ್ದಾರೆ.

ಡಿ.ಸಿ ಹೋಮ: ವಿರೋಧ

ಪ್ರಜಾವಾಣಿ ವಾರ್ತೆ

ಹಾಸನ: ‘ಜಿಲ್ಲಾಧಿಕಾರಿ ಸಿ. ಸತ್ಯಭಾಮಾ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದು, ಹಾಸನಾಂಬ ಹಾಗೂ ಸಿದ್ದೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳಲ್ಲಿ ಇಲ್ಲಿನ ಶಾಸಕರನ್ನು ಕಡೆಗಣಿಸಿ ಅಗೌರವ ತೋರಿದ್ದಾರೆ’ ಎಂದು ಆರೋಪಿಸಿ ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಹಾಸನಾಂಬ ದೇವಾಲಯದ ಎದುರು ಶನಿವಾರ ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ಶಾಸಕ ಸ್ವರೂಪ್ ಪ್ರಕಾಶ್, ‘ಜಿಲ್ಲಾಧಿಕಾರಿ ಶಿಷ್ಟಾಚಾರ ಉಲ್ಲಂಘಿಸಿದ್ದು, ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ನನ್ನನ್ನು ಕಡೆಗಣಿಸಿದ್ದಾರೆ. ನಾನು ಜನರಿಗೆ ಉತ್ತರಿಸಬೇಕಾಗಿದೆ’ ಎಂದರು.

‘ದೇವಾಲಯದ ನೂತನ ಕಳಸ ಪ್ರತಿಷ್ಠಾಪನೆಗೂ ಆಹ್ವಾನಿಸಿಲ್ಲ. ದೇವಾಲಯದಲ್ಲಿ ಜಿಲ್ಲಾಧಿಕಾರಿ ಪತಿಯೊಂದಿಗೆ ಹೋಮ– ಹವನ ಮಾಡಿದ್ದು, ಸಂಬಂಧಿಕರನ್ನು ಕರೆದು ದೇವಾಲಯದಲ್ಲಿ ವಿಶೇಷ ಕಾರ್ಯಕ್ರಮ ಮಾಡುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

‘ಹೆಲಿಟೂರಿಸಂ ಉದ್ಘಾಟನೆ, ಪ್ಯಾರಾ ಸೇಲಿಂಗ್ ಹಾಗೂ ಇತರ ಕಾರ್ಯಕ್ರಮಗಳಿಗೆ ನನ್ನನ್ನು ಕರೆದಿಲ್ಲ. ಬರಗಾಲದಂಥ ಪರಿಸ್ಥಿತಿಯಲ್ಲಿ ಹೆಲಿಟೂರಿಸಂಗೆ ಒಬ್ಬರಿಗೆ ₹4,300 ಶುಲ್ಕ ನಿಗದಿಪಡಿಸಿದ್ದಾರೆ. ಇಷ್ಟೊಂದು ಹಣ ಏಕೆ ನಿಗದಿಪಡಿಸಿದ್ದೀರಿ ಎಂದು ಕೇಳಿದರೆ, ಜಿಲ್ಲಾಧಿಕಾರಿ ಹಾರಿಕೆಯ ಉತ್ತರ ನೀಡುತ್ತಾರೆ’ ಎಂದು ದೂರಿದರು.

ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿಯನ್ನು ಸ್ವರೂಪ್ ಪ್ರಕಾಶ್ ಹಾಗೂ ಜೆಡಿಎಸ್ ಮುಖಂಡರು ತರಾಟೆಗೆ ತೆಗೆದುಕೊಂಡರು. ‘ಬರಗಾಲದಂತಹ ಸಂದರ್ಭದಲ್ಲಿ ಕಚೇರಿಯಲ್ಲಿದ್ದುಕೊಂಡು ಜನರ ಸಮಸ್ಯೆ ಆಲಿಸಬೇಕಾದ ನೀವು ಕುಟುಂಬದ ಸದಸ್ಯರೊಂದಿಗೆ ಹೋಮ–ಹವನ ಕಾರ್ಯಕ್ರಮ ಮಾಡಿರುವುದು ಖಂಡನಾರ್ಹ’ ಎಂದರು.

‘ದೇವಾಲಯದ ಕಾರ್ಯಕ್ರಮಕ್ಕೆ ನನ್ನನ್ನು ಕರೆದಿಲ್ಲವೇಕೆ, ಅದನ್ನು ಹೇಳಿ’ ಎಂದ ಸ್ವರೂಪ್, ‘ನಾನು ಶಾಸಕನಾಗಿ ದನ ಕಾಯಲು ಇರೋದಾ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ‘ಕಳಸ ಪ್ರತಿಷ್ಠಾಪನೆ ಸಂಬಂಧ ಧಾರ್ಮಿಕ ದತ್ತಿ ಇಲಾಖೆಗೆ ಪತ್ರ ಬರೆಯಲಾಗಿತ್ತು. ಇಲಾಖೆಯ ಆಗಮಿಕರು ಹೇಳಿದಂತೆ ಮಾಡಲಾಗಿದೆ’ ಎಂದರು.

ಇದಕ್ಕೆ ಒಪ್ಪದ ಸ್ವರೂಪ್, ‘ಕಳಸ ಪ್ರತಿಷ್ಠಾಪನೆಯನ್ನು ಶಾಸ್ತ್ರೋಕ್ತವಾಗಿ ಮಾಡಬೇಕು. ಶೃಂಗೇರಿ ಶ್ರೀಗಳನ್ನು ಕರೆಸಿ, ಹೋಮ– ಹವನ ನಡೆಸಬೇಕು’ ಎಂದು ತಮ್ಮ ತಂದೆ ಎಚ್‌.ಎಸ್. ಪ್ರಕಾಶ್ ಅವರ ಕಾಲದಲ್ಲಿ ನಡೆದಿದ್ದ ಕಳಸ ಪ್ರತಿಷ್ಠಾಪನೆಯ ಚಿತ್ರಗಳನ್ನು ಪ್ರದರ್ಶಿಸಿದರು.

ಸ್ವರೂಪ್ ಜೊತೆಗಿದ್ದ ನಗರಸಭೆ ಸದಸ್ಯರು, ಜೆಡಿಎಸ್ ಮುಖಂಡರು, ಜಿಲ್ಲಾಧಿಕಾರಿ ಜೊತೆ ವಾಗ್ವಾದಕ್ಕೆ ಮುಂದಾದರು. ಇದರಿಂದ ಬೇಸತ್ತ ಜಿಲ್ಲಾಧಿಕಾರಿ ಸತ್ಯಭಾಮಾ ದೇಗುಲದ ಆವರಣದಿಂದ ಹೊರನಡೆದರು.

ಜೆಡಿಎಸ್ ಕಾರ್ಯಕರ್ತರು ಜಿಲ್ಲಾಧಿಕಾರಿ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಹಾಸನದ ಹಾಸನಾಂಬ ದೇಗುಲದ ಬಳಿ ಶನಿವಾರ ಬೆಳಿಗ್ಗೆ ಪ್ರತಿಭಟನೆ ನಡೆಸುತ್ತಿದ್ದ ಶಾಸಕ ಸ್ವರೂಪ್ ಪ್ರಕಾಶ್ ಮತ್ತು ಬೆಂಬಲಿಗರ ಜೊತೆ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಮಾತುಕತೆ ನಡೆಸಿದರು

ಹರಿದಾಡಿದ ವಿಡಿಯೊ

ದೇಗುಲದ ಕಳಸ ಪ್ರತಿಷ್ಠಾಪನೆಯನಿಮಿತ್ತ ಶುಕ್ರವಾರ ಸಂಜೆ ದೇಗುಲದಲ್ಲಿ ಹೋಮ–ಹವನ ನಡೆದಿದ್ದು, ಜಿಲ್ಲಾಧಿಕಾರಿ ಸಿ. ಸತ್ಯಭಾಮಾ, ಅವರ ಪತಿ ಹಾಗೂ ಕುಟುಂಬದವರು ಪಾಲ್ಗೊಂಡಿರುವ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ದೀಪಾವಳಿ: 2000ಕ್ಕೂ ಅಧಿಕ ವಿಶೇಷ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಮತ್ತು ವಾರಾಂತ್ಯದ ದಿನಗಳು ಒಟ್ಟೊಟ್ಟಿಗೆ ಬಂದಿವೆ. ಹೀಗಾಗಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಒಮ್ಮೆಲೇ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2000ಕ್ಕೂ ಅಧಿಕ ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ನ.10ರಿಂದ 15ರವರೆಗೆ ಈ ವಿಶೇಷ ಸಾರಿಗೆ ಇರಲಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ನ.10ರಿಂದ 12ರವರೆಗೆ ಹೊರಡಲಿವೆ. ವಿವಿಧ ಕಡೆಗಳಿಂದ ನ.14 ಮತ್ತು 15ರಂದು ಬೆಂಗಳೂರಿಗೆ ವಿಶೇಷ ಬಸ್‌ಗಳು ಬರಲಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಹೊರರಾಜ್ಯಗಳ ಮದುರೆ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್, ತಿರುಚ್ಚಿ, ಪಾಲಕ್ಕಾಡ್, ತ್ರಿಶೂರ್, ಎರ್ನಾಕುಲಂ, ತಿರುಪತಿ, ವಿಜಯವಾಡ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ.

ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. www.ksrtc.karnataka.gov.in ವೆಬ್‌ಸೈಟ್ ಮೂಲಕ ಇ-ಟಿಕೆಟ್ ಬುಕಿಂಗ್ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಕಾಯ್ದಿರಿಸಿದಲ್ಲಿ ಶೇ 5 ರಿಯಾಯಿತಿ ಸಿಗಲಿದೆ. ಹೋಗುವ, ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದರೆ ವಾಪಸ್ಸಾಗುವ ದರದಲ್ಲಿ ಶೇ 10 ರಿಯಾಯಿತಿ ದೊರೆಯಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದ್ದಾರೆ.

ಜೋ ಲಾಲಿ... ಬಳ್ಳಾರಿಯ ಡಿಡಿಪಿಐ ಕಚೇರಿಯಲ್ಲಿ ಶನಿವಾರ ನಡೆದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸ್ಥಳ ನಿಯುಕ್ತಿ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಬಂದಿದ್ದ ಅಭ್ಯರ್ಥಿಗಳು ಕಂಕುಳಲ್ಲಿ ತಂದಿದ್ದ ಪುಟ್ಟ ಕೂಸುಗಳನ್ನು ಮಲಗಿಸಿ ತೂಗಲು ಮರಗಳಿಗೆ ಜೋಳಿಗೆ ಕಟ್ಟಿದ್ದರು –ಪ್ರಜಾವಾಣಿ ಚಿತ್ರ

ಕಲಬುರಗಿ: ತಾಳಿಯನ್ನೂ ತೆಗೆಸಿ ಪರೀಕ್ಷೆ ಬರೆಸಿದರು

ಪ್ರಜಾವಾಣಿ ವಾರ್ತೆ

ಕಲಬುರಗಿ: ವಾರದ ಹಿಂದೆ ನಡೆದಿದ್ದ ಕೆಇಎ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ಐವರು ಅಭ್ಯರ್ಥಿಗಳು ಸಿಕ್ಕಿಬಿದ್ದ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನಿಂದ ತಪಾಸಣೆ ನಡೆಸಿದ ಪೊಲೀಸರು, ಲೆಕ್ಕ ಸಹಾಯಕರ ಹುದ್ದೆಗೆ ಕೆಪಿಎಸ್‌ಸಿ ಶನಿವಾರ ನಡೆಸಿದ ನೇಮಕಾತಿ ಪರೀಕ್ಷೆ ಬರೆಯಲು ಬಂದಿದ್ದ ಮಹಿಳೆಯರಿಂದ ತಾಳಿಯನ್ನೂ ತೆಗೆದ ಬಳಿಕವೇ ಪರೀಕ್ಷಾ ಕೇಂದ್ರದೊಳಗೆ ಹೋಗಲು ಬಿಟ್ಟಿದ್ದಾರೆ.

ನಗರದ ಸರ್ಕಾರಿ ಪಿಯು ಬಾಲಕಿಯರ ಕಾಲೇಜಿನಲ್ಲಿ ತೆರೆಯಲಾಗಿದ್ದ ಕೇಂದ್ರದಲ್ಲಿ ಮಹಿಳೆಯರು ತಾಳಿ, ಕವಿಯೋಲೆ ತೆಗೆದಿಟ್ಟು ಹೋಗುತ್ತಿದ್ದ ದೃಶ್ಯ ಕಂಡುಬಂತು. ಈ ಬಗ್ಗೆ ಮಹಿಳಾ ಅಭ್ಯರ್ಥಿಗಳು, ಅವರ ಪೋಷಕರಿಂದ ಆಕ್ಷೇಪ ವ್ಯಕ್ತವಾಗಿದೆ.

ಪೊಲೀಸ್, ಶಿಕ್ಷಕಿ ದಂಪತಿ ಪುತ್ರ ಪ್ರಮುಖ ಆರೋಪಿ

‘ಡಾನ್’ ಆಗುವ ಹುಚ್ಚು: ಬಾಲಕನ ಹತ್ಯೆ

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಪೇಟೆಚಾಮನಹಳ್ಳಿ ಬಡಾವಣೆಯಲ್ಲಿ 17 ವರ್ಷದ ಬಾಲಕನನ್ನು ಶುಕ್ರವಾರ ರಾತ್ರಿ ಬರ್ಬರವಾಗಿ ಕೊಲೆ ಮಾಡಲಾಗಿದೆ.

ಕಾರ್ತಿಕ್ ಸಿಂಗ್

ಇದೇ ಬಡಾವಣೆಯ ಅರುಣ್ ಸಿಂಗ್ ಮತ್ತು ಸುಶೀಲಾ ದಂಪತಿ ಪುತ್ರ ಕಾರ್ತಿಕ್ ಸಿಂಗ್ ಕೊಲೆಯಾದ ಬಾಲಕ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೊಲೆ ಮಾಡಿರುವ ಆರೋಪಿಗಳೆಲ್ಲರೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಎಂಬುದು ಗೊತ್ತಾಗಿದ್ದು, ತಲೆಮರೆಸಿಕೊಂಡಿದ್ದಾರೆ.

‘ಆರೋಪಿಗಳ ಸ್ನೇಹಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ. ಪ್ರಕರಣ ದಾಖಲಿಸಿದ್ದು, ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದೇವೆ. ತಂಡ ಕೂಡ ರಚಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಡಾನ್’ ಆಗುವ ಹುಚ್ಚು: ‘ಐವರ ಗ್ಯಾಂಗ್ ಹತ್ಯೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಇವರಲ್ಲಿ ಪ್ರಮುಖ ಆರೋಪಿಯ ತಂದೆ ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದು, ತಾಯಿ ಶಿಕ್ಷಕಿ. ಪುತ್ರನಿಂದ ಪೋಷಕರು ದೂರವಿದ್ದಾರೆ. ಡಾನ್ ಆಗಬೇಕೆಂಬ ಹುಚ್ಚಿನಲ್ಲಿ ಈ ಕೃತ್ಯ ಎಸಗಿದ್ದಾನೆ. ಹಿಂದೆಯೂ ಅಪರಾಧ ಕೃತ್ಯಗಳಲ್ಲಿ ಆತ ಭಾಗಿಯಾಗಿದ್ದ’ ಎಂದು ಪೊಲೀಸರೊಬ್ಬರು ಮಾಹಿತಿ ನೀಡಿದ್ದಾರೆ.

ಕೋಲಾರದ ಬೈಪಾಸ್ ರಸ್ತೆಯಲ್ಲಿರುವ ಎಸ್‌ಡಿಸಿ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದ ಕಾರ್ತಿಕ್‌ನನ್ನು ಆರೋಪಿಗಳು ಶುಕ್ರವಾರ ರಾತ್ರಿ 8 ಗಂಟೆ ಹೊತ್ತಿಗೆ ಪೇಟೆಚಾಮನಹಳ್ಳಿ ಬಡಾವಣೆಯ ಶಾಲೆ ಆವರಣಕ್ಕೆ ಕರೆಸಿಕೊಂಡು ಹತ್ಯೆ ಮಾಡಿದ್ದಾರೆ. ಹತ್ಯೆಗೂ ಮುನ್ನ ಬಾಲಕನಿಗೆ ಚಿತ್ರಹಿಂಸೆ ಕೊಟ್ಟಿದ್ದಾರೆ. ಬಟ್ಟೆ ಬಿಚ್ಚಿಸಿ ಮೈ ಕೈಗೆ ಗಾಜು, ಚಾಕು, ಬ್ಲೇಡ್‌ನಿಂದ ಕುಯ್ದಿದ್ದಾರೆ. ಇದನ್ನು ವಿಡಿಯೊ ಕೂಡ ಮಾಡಿದ್ದಾರೆ.

‘ನನ್ನ ಪುತ್ರ ಶುಕ್ರವಾರ ಹೊಟ್ಟೆ ನೋವು ಎಂದು ಕಾಲೇಜಿಗೆ ಹೋಗಿರಲಿಲ್ಲ. ಮಧ್ಯಾಹ್ನದವರೆಗೆ ಮನೆಯಲ್ಲೇ ಮಲಗಿಕೊಂಡಿದ್ದ. ಸಂಜೆ ಎಲ್ಲೋ ಹೋಗಿದ್ದ. ಕರೆ ಮಾಡಿದಾಗ ಫೋನ್ ಸ್ವಿಚ್ಡ್ ಆಫ್ ಆಗಿತ್ತು. ಆತನ ಕೊಲೆಯಾಗಿರುವ ಬಗ್ಗೆ ರಾತ್ರಿ 8.30ರ ಸುಮಾರಿಗೆ ಸಂಬಂಧಿಯೊಬ್ಬರು ಹೇಳಿದರು. ಪುತ್ರನ ಜೊತೆ ಇರುತ್ತಿದ್ದ ವ್ಯಕ್ತಿಯೇ ಕೊಲೆ ಮಾಡಿರುವ ಶಂಕೆ ಇದ್ದು, ಆತನಿಗೆ ಶಿಕ್ಷೆ ಕೊಡಿ’ ಎಂದು ಕಾರ್ತಿಕ್ ತಾಯಿ ಸುಶೀಲಾ ಗೋಳು ತೋಡಿಕೊಂಡರು.

ಈ ಹಿಂದೆಯೂ ಹಲ್ಲೆ

ಇಬ್ಬರು ಬಾಲಕರ ಮೇಲೆ ಲಾಂಗ್‌ನಿಂದ ಹಲ್ಲೆ ನಡೆಸಿದ್ದ ಸಂಬಂಧ ಈ ಗ್ಯಾಂಗ್‌ನ ಕೆಲವರ ಮೇಲೆ ನಗರದ ಮಹಿಳಾ ಠಾಣೆಯಲ್ಲಿ ಫೆಬ್ರುವರಿ 26ರಂದು ಪ್ರಕರಣ ದಾಖಲಾಗಿತ್ತು. ಅಲ್ಲದೇ, ಕೊಲೆಯಾದ ಕಾರ್ತಿಕ್ ಸಿಂಗ್‌ಗೆ ಹಿಂದೆಯೂ ಈ ಗ್ಯಾಂಗ್ ಕಿರುಕುಳ ನೀಡಿರುವುದು ಗೊತ್ತಾಗಿದೆ.

‘ಕೆಲ ಯುವಕರು ಗಾಂಜಾ ವ್ಯಸನಿಗಳಾಗಿದ್ದು, ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ರಾತ್ರಿ ಹೊತ್ತಿನಲ್ಲಿ ಜೋರಾಗಿ ಹಾರನ್ ಮಾಡುತ್ತಾ ಬೈಕ್‌ಗಳಲ್ಲಿ ತಿರುಗಾಡುತ್ತಿರುತ್ತಾರೆ. ಪೊಲೀಸರು ನಿಗಾ ಇಟ್ಟು ಕ್ರಮ ಕೈಗೊಳ್ಳಬೇಕು’ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಜಾಜರ್‌ಕೋಟ್, ರುಕುಂ ಜಿಲ್ಲೆಯಲ್ಲಿ ಹಾನಿ, ರಕ್ಷಣಾ ಕಾರ್ಯ ಚುರುಕು

ನೂರಾರು ಮನೆಗಳು ನೆಲಸಮ

ಕಠ್ಮಂಡು (ಪಿಟಿಐ/ರಾಯಿಟರ್ಸ್): ಪ್ರಬಲ ಭೂಕಂಪಕ್ಕೆ ನೇಪಾಳದ ಪಶ್ಚಿಮ ಭಾಗ ತತ್ತರಿಸಿದೆ. ನೂರಾರು ಜನರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ರಾಷ್ಟ್ರೀಯ ಭೂಕಂಪ ಮೇಲ್ವಿಚಾರಣೆ ಮತ್ತು ಸಂಶೋಧನಾ ಕೇಂದ್ರದ ಪ್ರಕಾರ, ಕಠ್ಮಂಡುವಿನ ಪಶ್ಚಿಮಕ್ಕೆ 500 ಕಿ.ಮೀ ದೂರದಲ್ಲಿರುವ ಜಾಜರ್‌ಕೋಟ್ ಜಿಲ್ಲೆಯಲ್ಲಿ ಭೂಕಂಪನವು ರಾತ್ರಿ 11:47ಕ್ಕೆ ದಾಖಲಾಗಿದೆ.

ಮೊದಲಿಗೆ ಸಂಭವಿಸಿದ ಪ್ರಬಲ ಭೂಕಂಪದ ಬಳಿಕ ಸುಮಾರು 159 ಬಾರಿ ಭೂಮಿ ಕಂಪಿಸಿರುವುದು ದಾಖಲಾಗಿವೆ ಎಂದು ರಾಷ್ಟ್ರೀಯ ಭೂಕಂಪ ಮೇಲ್ವಿಚಾರಣೆ ಮತ್ತು ಸಂಶೋಧನಾ ಕೇಂದ್ರ ವರದಿ ಮಾಡಿದೆ.

ಶುಕ್ರವಾರ ರಾತ್ರಿ ಭೂಕಂಪವಾಗಿದ್ದರೂ ರಕ್ಷಣಾ ಕಾರ್ಯಕರ್ತರು ಅಲ್ಲಿಗೆ ಶನಿವಾರ ಬೆಳಿಗ್ಗೆಯಷ್ಟೇ ತಲುಪಿದ್ದಾರೆ. ಹಾಗಾಗಿ, ಸಾವಿನ ಸಂಖ್ಯೆಯು ಇನ್ನಷ್ಟು ಹೆಚ್ಚಬಹುದು ಎಂಬ ಆತಂಕವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಭೂಕಂಪ ಉಂಟಾದ ಸ್ಥಳವು ಅತ್ಯಂತ ದುರ್ಗಮವಾದುದಾಗಿದೆ.

ಜಾಜರ್‌ಕೋಟ್ ಮತ್ತು ರುಕುಂ ಜಿಲ್ಲೆಗಳು ಹೆಚ್ಚು ಹಾನಿಗೆ ಒಳಗಾಗಿವೆ. ಮನೆಗಳು, ಕಟ್ಟಡಗಳು ಧರೆಗುರುಳಿವೆ. ಸೇನಾ ಸಿಬ್ಬಂದಿ ಮತ್ತು ರಕ್ಷಣಾ ತಂಡಗಳು, ಕುಸಿದ ಮನೆಗಳ ಅವಶೇಷಗಳಲ್ಲಿ ಹೂತು ಹೋಗಿರುವವರ ಹುಡುಕಾಟ ನಡೆಸಿದ್ದಾರೆ. ಶೋಧ ಮತ್ತು ರಕ್ಷಣಾ ಕಾರ್ಯ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ.

ಗಾಯಾಳುಗಳನ್ನು ಬೆಟ್ಟದ ತಪ್ಪಲಿನಲ್ಲಿರುವ ಅನೇಕ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಮತ್ತೆ ಕೆಲವರನ್ನು ಭಾರತಕ್ಕೆ ವಿಮಾನದಲ್ಲಿ ಕರೆದೊಯ್ಯುವ ಸಾಧ್ಯತೆ ಇದೆ. ಮೃತರಲ್ಲಿ ಜಾಜರ್‌ಕೋಟ್‌ನ ನಲ್ಗಡ್ ಪುರಸಭೆಯ ಉಪ ಮೇಯರ್ ಸರಿತಾ ಸಿಂಗ್ ಸಹ ಸೇರಿದ್ದಾರೆ. ರಸ್ತೆ ಸಂಪರ್ಕ ಕಡಿತ ಹಾಗೂ ಸೇತುವೆಗಳು ಹಾನಿ ಆಗಿರುವುದರಿಂದ ಘಟನಾ ಸ್ಥಳದಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಗಾಯಾಳುಗಳ ಪೈಕಿ ಕೆಲ ವರನ್ನು ಕಠ್ಮಂಡುವಿಗೆ ಮತ್ತು ಮತ್ತೆ ಕೆಲವರನ್ನು ಲಖನೌ (ಭಾರತ)ಗೆ ಕಳುಹಿಸಬಹುದು. ಗಾಯಾಳುಗಳನ್ನು ಏರ್‌ಲಿಫ್ಟ್ ಮಾಡುವ ಬಗ್ಗೆ ಯೋಜಿಸುತ್ತಿದ್ದೇವೆ' ಎಂದು ಸ್ಥಳೀಯ ಮೇಯರ್ ಪ್ರಶಾಂತ್ ಬಿಷ್ತಾ ಹೇಳಿದರು.

ಮನೆಗಳು ಕುಸಿದು ಬೀಳುವ ಭೀತಿಯಿಂದ ಜನರು ರಾತ್ರಿಯಿಡೀ ಬಯಲಿನಲ್ಲೇ ಕಾಲ ಕಳೆದರು. ಕಟ್ಟಡಗಳ ಅವಶೇಷಗಳಲ್ಲಿ ಸಿಲುಕಿಕೊಂಡವರನ್ನು ರಕ್ಷಿಸುವ ಕಾರ್ಯ ಕತ್ತಲೆಯಲ್ಲಿಯೂ ನಡೆಯಿತು. ಭಾರತ, ಚೀನಾ ಸೇರಿದಂತೆ ಹಲವು ದೇಶಗಳು ನೆರವಿಗೆ ಧಾವಿಸಿವೆ.

ಭೂಕಂಪ ಸಂಭವಿಸಿದ ಜಾಜರ್‌ಕೋಟ್ ಪ್ರದೇಶದಲ್ಲಿ ಮನೆಗಳು ಕುಸಿದು ಬಿದ್ದಿವೆ ಎಎಫ್‌ಪಿ ಚಿತ್ರ

> **ನೇಪಾಳ ಭೂಕಂಪದಿಂದ ಉಂಟಾದ ಜೀವ ಹಾನಿಯಿಂದ ತೀವ್ರ ದುಃಖಿತನಾಗಿದ್ದೇನೆ. ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಲು ಭಾರತ ಸಿದ್ಧವಾಗಿದೆ.**
> **ನರೇಂದ್ರ ಮೋದಿ,** ಭಾರತ ಪ್ರಧಾನಿ

> **ಬಿಕ್ಕಟ್ಟಿನ ಈ ಗಳಿಗೆಯಲ್ಲಿ ಭಾರತೀಯರು ನೇಪಾಳದೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುತ್ತಾರೆ. ಸಂತ್ರಸ್ತ ಕುಟುಂಬಗಳ ದುಃಖದಲ್ಲಿ ನಾವೂ ಭಾಗಿಯಾದ್ದೇವೆ**
> **ಮಲ್ಲಿಕಾರ್ಜುನ ಖರ್ಗೆ** ಕಾಂಗ್ರೆಸ್ ಅಧ್ಯಕ್ಷ

'ಮನೆಗಳು ಬಿರುಕು ಬಿಟ್ಟಿರುವ ಕಾರಣ ನಿವಾಸಿಗಳು ಮನೆಗಳಿಗೆ ಹೋಗಲು ಭಯಪಡುತ್ತಿದ್ದಾರೆ' ಎಂದು ಜಾಜರ್‌ಕೋಟ್ ಜಿಲ್ಲೆಯ ಅಧಿಕಾರಿ ಹರೀಶ್ ಚಂದ್ರ ಶರ್ಮಾ ಹೇಳಿದರು.

ಪ್ರಧಾನಿ ಪುಷ್ಪ ಕಮಲ್ ದಹಾಲ್ ಪ್ರಚಂಡ ಶನಿವಾರ ಬೆಳಿಗ್ಗೆ ವೈದ್ಯಕೀಯ ತಂಡದೊಂದಿಗೆ ಭೂಕಂಪ ಉಂಟಾದ ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ನಂತರ, ಅವರು ಗಾಯಗೊಂಡ ಏಳು ಜನರು ಮತ್ತು ಅವರ ಕುಟುಂಬ ಸದಸ್ಯರೊಂದಿಗೆ ಜಾಜರ್‌ಕೋಟ್‌ನಿಂದ ಸುರ್ಖೇತ್‌ಗೆ ಮರಳಿದರು.

ಭೂಕಂಪದಲ್ಲಿ ಜೀವಹಾನಿ ಮತ್ತು ಆಸ್ತಿ ನಷ್ಟದ ಬಗ್ಗೆ ನೇಪಾಳದ ಅಧ್ಯಕ್ಷ ರಾಮಚಂದ್ರ ಪೌಡೆಲ್ ದುಃಖ ವ್ಯಕ್ತಪಡಿಸಿದ್ದಾರೆ.

2015ರ ಬಳಿಕ ದೇಶದಲ್ಲಿ ಸಂಭವಿಸಿದ ಅತ್ಯಂತ ಪ್ರಬಲ ಭೂಕಂಪ ಇದಾಗಿದೆ. ಆಗ ಸುಮಾರು 9,000 ಜನರು ಮೃತಪಟ್ಟು, 22 ಸಾವಿರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಬಿಹಾರ, ಜಾರ್ಖಂಡ್‌ನಲ್ಲೂ ಕಂಪಿಸಿದ ಭೂಮಿ

ಪಟ್ನಾ/ರಾಂಚಿ (ಪಿಟಿಐ): ಬಿಹಾರ ಮತ್ತು ಜಾರ್ಖಂಡ್‌ನ ಹಲವು ಜಿಲ್ಲೆಗಳಲ್ಲೂ ಶುಕ್ರವಾರ ರಾತ್ರಿ ಕಂಪನದ ಅನುಭವವಾಗಿದೆ.

ಜಾರ್ಖಂಡ್‌ನ ಕೆಲವು ಜಿಲ್ಲೆಗಳಲ್ಲಿ ಲಘು ಕಂಪನದ ಅನುಭವವಾಗಿದ್ದರೆ, ಬಿಹಾರದ ಪೂರ್ವ ಚಂಪಾರಣ್, ಪಟ್ನಾ, ದರ್ಭಾಂಗ, ಮುಜಾಫ್ಫರ್‌ಪುರ ಸೇರಿದಂತೆ ಭಾರತ–ನೇಪಾಳ ಗಡಿಯ ಜಿಲ್ಲೆಗಳಲ್ಲಿ ತೀವ್ರ ಭೂಕಂಪನ ಉಂಟಾಗಿದೆ. ಆದರೆ ಎರಡೂ ರಾಜ್ಯಗಳಲ್ಲಿ ಯಾವುದೇ ಪ್ರಾಣ ಹಾನಿ ಅಥವಾ ಆಸ್ತಿ ಹಾನಿ ವರದಿಯಾಗಿಲ್ಲ.

ಉತ್ತರ ಭಾರತದ ಕೆಲವೆಡೆಯೂ ಭೂಮಿ ಕಂಪಿಸಿದ ಅನುಭವ ಆಗಿದೆ.

ಪಶ್ಚಿಮ ನೇಪಾಳಕ್ಕೆ ಏಕೆ ಭಾರಿ ಅಪಾಯ?

ಕಠ್ಮಂಡು (ಪಿಟಿಐ): ಹಿಮಾಲಯದ ಭೂಕಂಪ ವಲಯದ ವ್ಯಾಪ್ತಿಯಲ್ಲಿ ಇರುವ ನೇಪಾಳವು ಹೆಚ್ಚು ಭೂಕಂಪ ಸಂಭವಿಸುವ ಪ್ರವೃತ್ತಿ ಹೊಂದಿರುವ ರಾಷ್ಟ್ರ. ಇದರ ಪಶ್ಚಿಮಭಾಗದ ಪರ್ವತ ಪ್ರದೇಶದಲ್ಲಿ ಭಾರಿ ಭೂಕಂಪದ ಅಪಾಯ ಸಾಧ್ಯತೆ ಇದ್ದೇ ಇದೆ ಎಂದು ಭೂಕಂಪಶಾಸ್ತ್ರಜ್ಞರು ಹೇಳುತ್ತಾರೆ.

ವಿಕೋಪ ನಂತರದ ಅವಶ್ಯಕತೆಗಳ ಅಂದಾಜು (ಪಿಡಿಎನ್‌ಎ) ವರದಿ ಪ್ರಕಾರ, ವಿಶ್ವದಲ್ಲಿ ನೇಪಾಳವು ಅತಿ ಹೆಚ್ಚು ಭೂಕಂಪ ಸಂಭವಿಸುವ ಸಾಧ್ಯತೆ ಇರುವ 11ನೇ ದೇಶ ಆಗಿದೆ.

ಶುಕ್ರವಾರ ರಾತ್ರಿ ಪಶ್ಚಿಮದ ಪರ್ವತ ಪ್ರದೇಶದಲ್ಲಿ ಸಂಭವಿಸಿದ ಪ್ರಬಲ ಭೂಕಂಪವು ಈ ದೇಶದಲ್ಲಿ 2023ರಲ್ಲಿ ಸಂಭವಿಸಿದ ಸುಮಾರು 70 ಕಂಪನಗಳ ದೀರ್ಘ ಪಟ್ಟಿಯಲ್ಲಿ ಇತ್ತೀಚಿನದ್ದು ಎಂದು ಅಧಿಕೃತ ಅಂಕಿ ಅಂಶಗಳು ಸೂಚಿಸುತ್ತವೆ.

'ಭಾರತ ಮತ್ತು ಯೂರೇಷಿಯಾದ ಭೂಮಿಯ ತಳಭಾಗದ ಶಿಲಾಪದರಗಳು ಚಲಿಸುತ್ತಿರುವಾಗ ಪರಸ್ಪರ ಘರ್ಷಣೆಗೆ ಒಳಪಡುತ್ತದೆ. ಆಗ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಒತ್ತಡ ಸೃಷ್ಟಿಯಾಗಿ ಭಾರಿ ಪ್ರಮಾಣದ ಶಕ್ತಿ ಕ್ರೋಡೀಕರಣವಾಗಿರುತ್ತದೆ' ಎಂದು ನೇಪಾಳದ ರಾಷ್ಟ್ರೀಯ ಭೂಕಂಪ ಮೇಲ್ವಿಚಾರಣೆ ಮತ್ತು ಸಂಶೋಧನಾ ಕೇಂದ್ರದ ಹಿರಿಯ ಭೂಕಂಪಶಾಸ್ತ್ರಜ್ಞ ಭರತ್ ಕೊಯಿರಾಲಾ ತಿಳಿಸಿದ್ದಾರೆ.

ಈ ಎರಡು ಶಿಲಾಪದರಗಳ ಗಡಿಯಲ್ಲಿ ನೇಪಾಳ ಇದೆ. ಹೀಗಾಗಿ ಇದು ತೀವ್ರ ಭೂಕಂಪ ಸಂಭವಿಸುವ ಪ್ರದೇಶದಲ್ಲಿದೆ.

'ನೇಪಾಳದ ಪಶ್ಚಿಮ ಭಾಗವು ಪ್ರಬಲ ಭೂಕಂಪದ ಅಪಾಯವಿರುವ ಪ್ರದೇಶ. ಕಳೆದ ಕೆಲವು ವರ್ಷಗಳಲ್ಲಿ ಈ ಭಾಗದಲ್ಲಿ ಹೇಳಿಕೊಳ್ಳುವಂತಹ ದೊಡ್ಡ ಭೂಕಂಪ ಸಂಭವಿಸಿಲ್ಲ. ಆದ್ದರಿಂದ ಭಾರಿ ಪ್ರಮಾಣದ ಶಕ್ತಿ ಭೂಪದರಗಳಲ್ಲಿ ಸಂಗ್ರಹವಾಗಿದೆ. ಇದು ಹೊರಹೊಮ್ಮಲು ಇರುವ ಏಕೈಕ ಮಾರ್ಗ ಭೂಕಂಪ' ಎಂದು ವಿವರಿಸುತ್ತಾರೆ.

'ಗೂರ್ಖಾ ಜಿಲ್ಲೆಯಿಂದ ಭಾರತದ ಡೆಹ್ರಾಡೂನ್‌ವರೆಗೆ ಭೂಮಿಯ ಪದರಗಳ ಚಲನೆಯಿಂದಾಗಿ ಭಾರಿ ಪ್ರಮಾಣದಲ್ಲಿ ಶಕ್ತಿಯು ಸಂಗ್ರಹವಾಗಿರುತ್ತದೆ. ಇದರಿಂದ ಈ ಪ್ರದೇಶಗಳಲ್ಲಿ ಲಘು ಅಥವಾ ಪ್ರಬಲ ಭೂಕಂಪಗಳು ಸಂಭವಿಸುವುದು ಸಹಜ.' ಎಂದಿದ್ದಾರೆ.

'ಕಳೆದ 2–3 ದಶಕಗಳಿಂದ ಜಾಜರ್‌ಕೋಟ್‌ನಲ್ಲಿ ಯಾವುದೇ ಭಾರಿ ಅಥವಾ ಮಧ್ಯಮ ಪ್ರಮಾಣದ ಭೂಕಂಪ ಸಂಭವಿಸಿಲ್ಲ. ಆದರೆ ಯಾವಾಗ, ಎಷ್ಟು ದೊಡ್ಡ ಪ್ರಮಾಣದ ಭೂಕಂಪ ಆಗುವುದು ಎಂಬುದನ್ನು ಹೇಳಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಶತಮಾನಗಳಿಂದ ಪ್ರತಿದಿನದ ಅನುಭವ

ಈ ವರ್ಷದ ಜನವರಿಯಿಂದ ಈವರೆಗೆ ನೇಪಾಳದಲ್ಲಿ ಒಟ್ಟು 70 ಭೂಕಂಪಗಳು ಸಂಭವಿಸಿವೆ. ಇವುಗಳ ತೀವ್ರತೆಯು ರಿಕ್ಟರ್ ಮಾಪನದಲ್ಲಿ 4.0 ಮತ್ತು ಅದಕ್ಕಿಂತ ಹೆಚ್ಚು ಇದೆ. ಈ ಪೈಕಿ 13 ಭೂಕಂಪಗಳ ತೀವ್ರತೆಯು 5 ಮತ್ತು 6 ರ ನಡುವೆ ಇದ್ದರೆ ಮೂರು ಭೂಕಂಪಗಳ ತೀವ್ರತೆಯು 6ಕ್ಕಿಂತ ಹೆಚ್ಚಿದೆ ಎಂದು ಭೂಕಂಪದ ಮೇಲ್ವಿಚಾರಣೆ ಮತ್ತು ಸಂಶೋಧನಾ ಕೇಂದ್ರದ ಅಂಕಿಅಂಶಗಳು ತಿಳಿಸುತ್ತವೆ.

ಶತಮಾನಗಳಿಂದಲೂ ಇಲ್ಲಿ ಪ್ರತಿದಿನ 2 ಅಥವಾ 3 ತೀವ್ರತೆಯ ಭೂಕಂಪಗಳು ಸಂಭವಿಸುತ್ತಿರುತ್ತವೆ.

ಕಠ್ಮಂಡು ಬಳಿಯ ಧಡಿಂಗ್ ಜಿಲ್ಲೆಯಲ್ಲಿ ಅ.22ರಂದು 6.1 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿ 20 ಮನೆಗಳು ಹಾನಿಗೊಳಗಾಗಿದ್ದವು.

ಪಶ್ಚಿಮ ನೇಪಾಳದ ಬಜ್ಹಂಗ್ ಜಿಲ್ಲೆಯಲ್ಲಿ ಅಕ್ಟೋಬರ್ 3ರಂದು 6.3 ತೀವ್ರತೆಯ ಪ್ರಬಲ ಭೂಕಂಪ ಅಲ್ಲದೆ 4–5 ತೀವ್ರತೆಯ ಇತರ ಹತ್ತು ಭೂಕಂಪಗಳು ವರದಿಯಾಗಿದ್ದವು. ಆದರೆ ಹೆಚ್ಚಿನ ಹಾನಿ ಆಗಿರಲಿಲ್ಲ.

ಪ್ರವೀಣ್ ಸಿಬಿಐ ಜಂಟಿ ನಿರ್ದೇಶಕ

ನವದೆಹಲಿ (ಪಿಟಿಐ): ಕರ್ನಾಟಕ ಕೇಡರ್‌ನ ಹಿರಿಯ ಐಪಿಎಸ್ ಅಧಿಕಾರಿ ಪ್ರವೀಣ್ ಮಧುಕರ್ ಪವಾರ್ ಅವರನ್ನು ಕೇಂದ್ರೀಯ ತನಿಖಾ ದಳದ (ಸಿಬಿಐ) ಜಂಟಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಪ್ರವೀಣ್ ಮಧುಕರ್ ಪವಾರ್

ಐದು ವರ್ಷ ಅವರು ಈ ಹುದ್ದೆಯಲ್ಲಿ ಇರಲಿದ್ದಾರೆ ಎಂದು ಸಿಬ್ಬಂದಿ ಸಚಿವಾಲಯದ ಆದೇಶದಲ್ಲಿ ತಿಳಿಸಲಾಗಿದೆ. ಪವಾರ್ ಅವರು 2003ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ.

ಕರ್ನಾಟಕದ ಪೊಲೀಸ್ ಮಹಾ ನಿರ್ದೇಶಕರಾಗಿದ್ದ ಪ್ರವೀಣ್ ಸೂದ್ ಅವರು ಈ ವರ್ಷದ ಮೇ ತಿಂಗಳಿನಲ್ಲಿ ಸಿಬಿಐ ನಿರ್ದೇಶಕರಾಗಿ ನೇಮಕವಾಗಿದ್ದರು.

ಪಾಕ್ ವಾಯುಪಡೆ ಮೇಲೆ ಉಗ್ರರ ದಾಳಿ: 9 ಭಯೋತ್ಪಾದಕರ ಹತ್ಯೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ವಾಯುಪಡೆಯ ಪಂಜಾಬ್ ಪ್ರಾಂತ್ಯದಲ್ಲಿನ ತರಬೇತಿ ನೆಲೆ ಮೇಲೆ ಭಾರಿ ಶಸ್ತ್ರಾಸ್ತ್ರಗಳೊಂದಿಗೆ ಭಯೋತ್ಪಾದಕರು ಶನಿವಾರ ನಸುಕಿನಲ್ಲಿ ದಾಳಿ ನಡೆಸಿದ್ದು, ಸೇನೆ ನಡೆಸಿದ ಕಾರ್ಯಾಚರಣೆಯಲ್ಲಿ ಒಂಬತ್ತು ಮಂದಿ ಭಯೋತ್ಪಾದಕರು ಹತರಾಗಿದ್ದಾರೆ.

ದೇಶದಲ್ಲಿ ಭಯೋತ್ಪಾದಕ ದಾಳಿಯ ಮೂರು ಪ್ರತ್ಯೇಕ ಘಟನೆಗಳಲ್ಲಿ 17 ಸೈನಿಕರು ಹತರಾದ ಬೆನ್ನಲ್ಲೇ ವಾಯು ಪಡೆಯ ಮಿಯಾನ್‌ವಾಲಿ ತರಬೇತಿ ನೆಲೆ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ. ವಾಯು ಪಡೆಯ ಕಾರ್ಯಾಚರಣೆಯಲ್ಲಿರುವ ಯಾವುದೇ ಸ್ವತ್ತುಗಳಿಗೆ ಹಾನಿಯಾಗಿಲ್ಲ. ಈಗಾಗಲೇ ಕಾರ್ಯಾಚರಣೆಯಿಂದ ಕೈಬಿಡಲಾಗಿದ್ದ ಮೂರು ಯುದ್ಧ ವಿಮಾನಗಳು ಸ್ವಲ್ಪ ಹಾನಿಗೀಡಾಗಿವೆ ಎಂದು ಪಾಕ್ ಸೇನೆಯು ತಿಳಿಸಿದೆ.

'ಮಿಯಾನ್‌ವಾಲಿ ವಾಯುನೆಲೆ ಮೇಲೆ ದಾಳಿ ನಡೆಸಿದ ಎಲ್ಲ ಒಂಬತ್ತು ಮಂದಿ ಭಯೋತ್ಪಾದಕರನ್ನು ಕೊಲ್ಲಲಾಗಿದ್ದು, ಭಯೋತ್ಪಾದಕರ ವಿರುದ್ಧ ನಡೆಸಿದ ಕಾರ್ಯಾಚರಣೆ ಕೊನೆಗೊಂಡಿದೆ' ಎಂದು ಸೇನೆಯು ಖಚಿತಪಡಿಸಿದೆ.

ಈ ದಾಳಿಯ ಹೊಣೆಯನ್ನು ದೇಶದಲ್ಲಿ ಹೊಸದಾಗಿ ತಲೆಎತ್ತಿರುವ, ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಸಂಘಟನೆಯ ಜತೆ ಗುರುತಿಸಿಕೊಂಡಿರುವ ತೆಹ್ರೀಕ್-ಎ-ಜಿಹಾದ್ ಪಾಕಿಸ್ತಾನ್ (ಟಿಜೆಪಿ) ಹೊತ್ತುಕೊಂಡಿದೆ. ಈ ಸಂಬಂಧ ಮಾಧ್ಯಮಗಳಿಗೆ ಅದು ಹೇಳಿಕೆ ಬಿಡುಗಡೆ ಮಾಡಿದೆ.

ಭಯೋತ್ಪಾದಕ ದಾಳಿಯನ್ನು ಖಂಡಿಸಿದ ಹಂಗಾಮಿ ಪ್ರಧಾನಿ ಅನ್ವಾರುಲ್ ಹಕ್ ಕಾಕರ್, 'ನಮ್ಮ ಭದ್ರತೆಯನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ಹಿಮ್ಮೆಟ್ಟಿಸುತ್ತೇವೆ' ಎಂದು ಹೇಳಿದ್ದಾರೆ.

ನೌಕಾಪಡೆ ನಾವಿಕ ಸಾವು

ಕೊಚ್ಚಿ (ಪಿಟಿಐ): ಇಲ್ಲಿರುವ ನೌಕಾಪಡೆಯ ವಾಯು ನೆಲೆಯಲ್ಲಿ ಶನಿವಾರ ನಡೆದ ಚೇತಕ್ ಹೆಲಿಕಾಪ್ಟರ್‌ನ ಅಪಘಾತದಿಂದಾಗಿ ಕರ್ತವ್ಯದಲ್ಲಿದ್ದ ನೌಕಾಪಡೆಯ ನಾವಿಕರೊಬ್ಬರು ಮೃತಪಟ್ಟಿದ್ದಾರೆ ಎಂದು ಭಾರತೀಯ ನೌಕಾಪಡೆ ತಿಳಿಸಿದೆ.

ಈ ಘಟನೆಯ ಬಗ್ಗೆ ನೌಕಾಪಡೆಯು ತನಿಖೆಗೆ ಆದೇಶಿಸಿದೆ. ದಕ್ಷಿಣ ನೌಕಾ ಕಮಾಂಡ್‌ನ ಐಎನ್‌ಎಸ್ ಗರುಡಾದಲ್ಲಿ ದೈನಂದಿನ ತಪಾಸಣೆ ವೇಳೆ ಈ ಘಟನೆ ಸಂಭವಿಸಿದೆ. ಮೃತಪಟ್ಟ ನಾವಿಕ ಮಧ್ಯಪ್ರದೇಶದ ಯೋಗೇಂದ್ರ ಸಿಂಗ್. ಇವರು ಲೀಡಿಂಗ್ ಏರ್ ಮೆಕ್ಯಾನಿಕ್ (ಎಲ್‌ಎಎಂ) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ನೌಕಾಪಡೆ ಅಧಿಕಾರಿಗಳು ತಿಳಿಸಿದ್ದಾರೆ.

ನಾವಿಕ ಮೃತಪಟ್ಟಿರುವುದಕ್ಕೆ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ತೀವ್ರ ಸಂತಾಪ ವ್ಯಕ್ತಪಡಿಸಿರುವುದಾಗಿ ನೌಕಾಪಡೆಯ ವಕ್ತಾರರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಪಿಎಂ 2.5' ಮಟ್ಟ ಸರಾಸರಿ ಮಿತಿಗಿಂತ 80 ಪಟ್ಟು ಹೆಚ್ಚು

ದೆಹಲಿ ವಾಯುಮಾಲಿನ್ಯ ಸ್ವಲ್ಪ ಇಳಿಕೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ವಾಯುಮಾಲಿನ್ಯವು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಆದರೆ, ಮಾಲಿನ್ಯಕಾರಕ 'ಪಿಎಂ 2.5' ಕಣಗಳ ಪ್ರಮಾಣವು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ನಿಗದಿ ಮಾಡಿರುವ ಸರಾಸರಿ ಮಿತಿಗಿಂತ 80 ಪಟ್ಟು ಹೆಚ್ಚು ಇದೆ.

ಸತತ ಐದನೇ ದಿನವಾದ ಶನಿವಾರವೂ ದಟ್ಟ ಮತ್ತು ಕಪ್ಪು ಹೊಗೆ ರಾಜಧಾನಿಯ ವಾತಾವರಣವನ್ನು ಆವರಿಸಿತ್ತು.

ಪಿಎಂ 2.5 ಕಣಗಳ ಸರಾಸರಿ ಮಟ್ಟವು ಒಂದು ಘನ ಮೀಟರ್‌ಗೆ 5 ಮೈಕ್ರೊ ಗ್ರಾಮ್‌ಗಳಷ್ಟಿರಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳುತ್ತದೆ. ಆದರೆ, ದೆಹಲಿಯಲ್ಲಿ ಪಿಎಂ 2.5 ಪ್ರಮಾಣ ಸರಾಸರಿ ಮಿತಿಗಿಂತ 80–100 ಪಟ್ಟು ಹೆಚ್ಚಾಗಿದೆ.

ನವದೆಹಲಿಯ ಇಂಡಿಯಾ ಗೇಟ್ ಬಳಿ ಶನಿವಾರ ನಸುಕಿನಲ್ಲಿ ಕಂಡುಬಂದ ಚಿತ್ರಣ

ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಪ್ರಕಾರ ಅ.27 ರಿಂದ ನವೆಂಬರ್ 3ರವರೆಗೆ ದೆಹಲಿಯ ವಾಯು ಗುಣಮಟ್ಟ ಸೂಚ್ಯಂಕವು ಬಹಳ ಸುಧಾರಿಸಿತ್ತು. ಆದರೆ, ಶುಕ್ರವಾರ ಸರಾಸರಿ ವಾಯು ಗುಣಮಟ್ಟ ಸೂಚ್ಯಂಕವು 468ಕ್ಕೆ ಏರಿಕೆಯಾಗಿ ಗಂಭೀರ ಹಂತ ತಲುಪಿತ್ತು. ಶನಿವಾರ ಮುಂಜಾನೆ 6 ಗಂಟೆಗೆ ಸ್ವಲ್ಪಮಟ್ಟಿಗೆ ಸುಧಾರಿಸಿ 413ಕ್ಕೆ ಇಳಿಕೆಯಾಗಿತ್ತು.

ವೈದ್ಯರ ಕಳವಳ: ವಾಯು ಮಾಲಿನ್ಯದಿಂದ ಮಕ್ಕಳು ಮತ್ತು ವಯೋವೃದ್ಧರಲ್ಲಿ ಉಸಿರಾಟ ಮತ್ತು ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳಬಹುದು ಎಂದು ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ದೆಹಲಿ- ಎನ್‌ಸಿಆರ್ ಪ್ರದೇಶದಲ್ಲಿ ತಾಪಮಾನ ತೀವ್ರವಾಗಿ ಕುಸಿದಿದ್ದರಿಂದ ಮತ್ತು ಪಂಜಾಬ್, ಹರಿಯಾಣದ ಕೆಲವೆಡೆ ಕೃಷಿ ತ್ಯಾಜ್ಯ ಸುಟ್ಟದ್ದರಿಂದ ವಾಯುಗುಣಮಟ್ಟ ತೀವ್ರವಾಗಿ ಹಾಳಾಗಿದೆ.

ಈ ನಡುವೆ ನ.1ರಿಂದ 15ರವರೆಗೆ ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ಮಾಲಿನ್ಯ ಪ್ರಮಾಣವು ಹೆಚ್ಚಿರಲಿದೆ ಎಂದು ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ–577501
ದೂ. ಸಂಖ್ಯೆ:08194 222733 E-mail:apmcchitradurga@rediffmail.com
ಸಂಖ್ಯೆ: ಕೃಮಾಇ /ಕೃಉಮಾಸ(ಚಿ):913/2023–24 ದಿನಾಂಕ: 02–11–2023

ಇ–ಟೆಂಡರ್ ಪ್ರಕಟಣೆ

ಚಿತ್ರದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ಹಣವನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಇ-ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

Auction Notice Number:-APMC/2023-24/AUCTION36

ಸಹಿ/– ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ.
ಸಹಿ/– ಆಡಳಿತಾಧಿಕಾರಿಗಳು ಕೃ. ಉ. ಮಾ. ಸ., ಚಿತ್ರದುರ್ಗ.
RO.No.309:DIPR/CTA/KSMCA/2023-24

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ/2023–24/2909
ದಿನಾಂಕ:02.11.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2022–23 ನೇ ಸಾಲಿನ 15 ನೇ ಹಣಕಾಸು ಯೋಜನೆಯಲ್ಲಿ 01 ಕಾಮಗಾರಿ ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯುರಮೆಂಟ್ ಸ್ಟಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in)ನಲ್ಲಿ ಪ್ರಕಟಿಸಲಾಗಿದೆ.
1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15–11–2023

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/258/ಕೆಎಸ್‌ಎಂಸಿಎ/2023–24

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ.
ಇ.ಮೇಲ್ ಸಂದೇಶ ಐಡಿನಂ.: dcfsagar123@gmail.com
ಸಂಖ್ಯೆ: ಎ2/ಬಿಜಿಟಿ/ಸಿಪಿಟಿ/ಸಿಆರ್/60/2023–24 ದಿ: 03.11.2023

ಅಲ್ಪಾವಧಿ ಇ–ಟೆಂಡರ್ ಮರು ಪ್ರಕಟಣೆ (ಪರಿಶಿಷ್ಟಪಂಗಡ–ST)
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2023–24ನೇ ಸಾಲಿನಲ್ಲಿ ಸಾಗರ ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಜಾನುವಾರು ನಿರೋಧಕ ಕಂದಕ ತೆಗೆಯುವ ಕಾಮಗಾರಿಯನ್ನು ನಿರ್ವಹಿಸಲು ಪರಿಶಿಷ್ಟ ಪಂಗಡದ ಆಸಕ್ತ ಗುತ್ತಿಗೆದಾರರುಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: 30.10.2023 ರಂದು ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ ದೋಷದಿಂದಾಗಿ ಟೆಂಡರ್‌ನ್ನು ರದ್ದುಪಡಿಸಿ, ಮರು ಟೆಂಡರ್ ದಿನಾಂಕ: 09.11.2023 ಸಂಜೆ 4–30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– (ಸಂತೋಷ್ ಕುಮಾರ್ ಕೆಂಚಪ್ಪನವರ್, ಭಾಅಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/19/11/23–24/724

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ. eepredkpl@gmail.com,
ಸಂ.ಪಂರಾಇಂ/ ವಿಕೊ/ತಾ.ಶಾ/ಕಿ.ಇಂ/ಕೊಟೇಶನ್/2023–24/1429
ದಿನಾಂಕ: 03.11.2023

ಕೋಟೇಶನ್ ಆಹ್ವಾನಿಸುವ ಕುರಿತು

2022–23/2023–24ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಮೆಗಾ – ಮ್ಯಾಕ್ರೋ ಯೋಜನೆಯಡಿ ಮಂಜೂರಾದ ಸರಕಾರಿ ಪ್ರಥಮದರ್ಜೆ ಕಾಲೇಜುಗಳು ಹಾಗೂ ಸರಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳಿಗೆ ಕೋಟೇಶನ್ ಗಳನ್ನು ಆಹ್ವಾನಿಸಿದ್ದು, ಆಸಕ್ತ ಏಜೆನ್ಸಿಯವರು ದಿನಾಂಕ 13.11.2023 ರೊಳಗಾಗಿ ವಿವಿಧ ಸಾಮಗ್ರಿಗಳ ಕೊಟೇಶನ್‌ಗಳನ್ನು ಈ ಕಚೇರಿಗೆ ಹಾಜರಾಗಿ ವಿಶಿಷ್ಟ ವಿವರಣೆಗಳ ಮಾಹಿತಿಯನ್ನು ಈ ಕಚೇರಿ ವೇಳೆಯಲ್ಲಿ ಪಡೆದು ದಿನಾಂಕ 15.11.2023 ಮದ್ಯಾಹ್ನ 4:30 ರೊಳಗಾಗಿ ಈ ಕಚೇರಿಗೆ ಮುಚ್ಚಿದ ಲಕೋಟೆಯಲ್ಲಿ ಒದಗಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಹಾಗೂ ಸಹಾಯ ದೂರವಾಣಿ ಮೊಬೈಲ್ ಸಂಖ್ಯೆ: 9480736641 ರಿಂದ ಪಡೆಯಬಹುದು.
ಷರತ್ತುಗಳು : ಯಾವುದೇ ಕೋಟೇಶನ್‌ಗಳನ್ನು ಯಾವುದೇ ಕಾರಣವಿಲ್ಲದೆ ಯಾವುದೇ ಹಂತದಲ್ಲಿ ತಿರಸ್ಕರಿಸುವ ಅಥವಾ ಹಿಂತೆಗೆದುಕೊಳ್ಳುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ.ವಿಭಾಗ,ಕೊಪ್ಪಳ
ಡಿಐಪಿಆರ್/ಕೊಪ್ಪಳ/220/ಕೆಎಸ್‌ಎಂಸಿಎ/2023–24

Government of Karnataka
KARNATAKA FOREST DEPARTMENT
HALIYAL DIVISION, HALIYAL

AS PER GOVERNMENT NOTIFICATION No. FEE./168/FDP 2017, BANGALORE DATED: 14-11-2017, AS PER GOVERNMENT NOTIFICATION No. FEE./168/FDP 2017, BANGALORE DATED: 27-02-2018, AS PER APCCF (FRM) BENGALURU OFFICE LETTER NO APCCF (FRM)/B3/SALES/CR-06/2022-23. DATE:- 05-10-2023

KARNATAKA FOREST CODE, 1976
APPENDIX XVIII A (Rule 64)

DETAILED NOTIFICATION FOR e-TENDER CUM AUCTION OF TIMBER AND OTHER FOREST PRODUCE IN GTD DANDELI, BHAGAWATI, JAGALBET AND KULGI DEPOT OF HALIYAL DIVISION, HALIYAL

No: B5/DTS/July/Agust-2023/MSTC/CR- 05/2023-24 Date: 06-10-2023

It is hereby notified for the general information of the public that, the following kinds and quantity of Timber and other forest produce stocked and lotted in the **GTD Dandeli, Bhagawati, Jagalbet And Kulgi**, Government Timber Depots of **Haliyal Division Haliyal** will be sold through the public e-tender cum auction method in one or more sessions from **20-11-2023 to 22-11-2023** (All Four Sessions) and **23-11-2023,** (I II & III Sessions) GTD Dandeli Depot, **23-11-2023** (IV Session) in Jagalbet Depot, **24-11-2023** (I II & III Sessions) in Bhagawati Depot & **27-11-2023** (I II & III Sessions)) in Kulgi Depot from **10.00 A.M.** till the bidding for all lots is completed. The Sale Conducting Officer will be the Deputy Conservator of Forests, Haliyal Division Haliyal.

For any clarifications, you can contact:
Assistant Conservator of Forests, Govt. Timber Depot, Dandeli: **acfgtd.dandeli@gmail.com, Phone No: 08284-231237**
Range Forest Officer, Virnoli (Kulgi Depot): **virnolirfo96@gmail.com Phone No: 08284-258050**
Range Forest Officer, Bhagawati: **bgtirfo97@gmail.com Phone No: 08284-267818**
Range Forest Officer, Jagalbet: **rfojbt93@gmail.com Phone No: 08383-252767**
Deputy Conservator of Forests,Haliyal: **dcfhalyal@gmail.com Phone No: 08284-220128**
Sri. Damodhar, Manager, MSTC Limited Bangalore Mob No: 9841002253

Sd/- (BALACHANDRA. H.C., IFS.)
Deputy Conservator of Forests, Haliyal Division, Haliyal
DIPR/ADK/KSMCA/328/23-24 Dt.03.11.2023

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2023–24/4313 ದಿನಾಂಕ:31.10.2023

–: ಟೆಂಡರ ಅಧಿಸೂಚನೆ (ಇ–ಪ್ರೊಕ್ಯೂರಮೆಂಟ್‌ನಲ್ಲಿ):–

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1, 2, 3 & 4 ರಲ್ಲಿ ಲೆಕ್ಕ ಶೀರ್ಷಿಕೆ: 3054–ರಾಜ್ಯ ಹೆದ್ದಾರಿ ನಿರ್ವಹಣೆ ,3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 8443–ಠೇವಣಿ ವಂತಿಕೆ, 2059 ಇಲಾಖಾ ಕಟ್ಟಡಗಳ ನಿರ್ವಹಣೆ, 4059– ಇಲಾಖಾ ಕಟ್ಟಡಗಳು, 5054–ಜಿಲ್ಲಾ ಮುಖ್ಯ ರಸ್ತೆ/ಸೇತುವೆ ಸುಧಾರಣೆ, ಮತ್ತು 2216 ವಸತಿ ಕಟ್ಟಡಗಳ ನಿರ್ವಹಣೆ ಅಡಿಯಲ್ಲಿ ಒಟ್ಟು 18 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ 246.00 ಲಕ್ಷಗಳು ಹಾಗೂ 9.02 ಲಕ್ಷಗಳು ಇದ್ದು, ಮುಂಗಡ ಮೊತ್ತವು ಅನುಕ್ರಮವಾಗಿ ರೂ 369000/– ಹಾಗೂ 11300/– ಇರುತ್ತದೆ. ಭಾಗ–1: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 07.11.2023 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರಗಳನ್ನು ತೆರೆಯುವ ದಿನಾಂಕ 08–11–2023 ರ ಸಂಜೆ 4.45 ಘಂಟೆ ನಂತರ ಮತ್ತು ಭಾಗ–2: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 10.11.2023 ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 11.11.2023 ರ ಸಂಜೆ 4.45 ಘಂಟೆ, & ಭಾಗ–3: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 18.11.2023 ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 20.11.2023 ರ ಸಂಜೆ 4.45 ಘಂಟೆ, ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 31–10–2023 ರ ನಂತರ ಪಡೆಯಬಹುದು.(ಒಂದು ವೇಳೆ ಬೀಡ್ ಸ್ವೀಕೃತವಾಗದಿದಲ್ಲಿ 3 ದಿನಗಳ ಸಂಯಮ ಚಾಲೀತ ಸಕ್ರೀಯಗೊಳಿಸಲಾಗಿದೆ)

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-585/KSMCA/2023-24

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಸಂ.ಕಕರಸಾ/ಕೇಕ/ಲೆಪ/ಬಿಎಸ್/2149/2023–24 ದಿ.: 04–11–2023

ಟೆಂಡರ್ ವಿಸ್ತರಣೆ ಸೂಚನೆ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಛೇರಿ, ಕಲಬುರಗಿ, 2023–24ನೇ ಸಾಲಿನಲ್ಲಿ 34 ಹೊಸ ಸ್ಲೀಪರ್ ವಾಹನಗಳ ಖರೀದಿಗಾಗಿ **ರೂ. 15.50 ಕೋಟಿಗಳ** ಅವಧಿ ಸಾಲವನ್ನು ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ವಾಣಿಜ್ಯ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆಯಲು ಟೆಂಡರ್ ಅಧಿಸೂಚನೆ ಸಂ.ಕಕರಸಾ/ಕೇಕ/ಲೆಪ/ಬಿಎಸ್/1786/2022–23 ದಿನಾಂಕ: 27–09–2023 ರನ್ವಯ ದಿನಾಂಕ:03–11–2023 ರಂದು 17.00 ಗಂಟೆಗೆ ನಿಗದಿಪಡಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದ ಸದರಿ ದಿನಾಂಕವನ್ನು **05–12–2023** ಕ್ಕೆ ಮುಂದೂಡಲಾಗಿದೆ. ಸದರಿ ದಿನದಂದು ಮಧ್ಯಾಹ್ನ ಸಮಯ 12.30 ಗಂಟೆಗೆ ಟೆಂಡರ್‌ನ್ನು ತೆರೆಯಲಾಗುವುದು. ಇನ್ನುಳಿದಂತೆ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆಸಕ್ತರು ಹೆಚ್ಚಿನ / ಅವಶ್ಯಕ ಮಾಹಿತಿಗಾಗಿ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ ದೂ. ಸಂ:7760992005 ಹಾಗೂ ಉಪ ಮುಖ್ಯ ಲೆಕ್ಕಾಧಿಕಾರಿ ದೂ. ಸಂ:7760992006 ರವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ವಾ.ಸಾ.ಸಂ.ಇ/ಕಲಬುರಗಿ/435/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರ್ಕಾರ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
ನಂ. ಎಫ್‌ಡಿ 03 ಬಿಎಂಬಿ 2023 ದಿನಾಂಕ: 02.11.2023

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿಗಳು)

1. ಅಂದಾಜು ಮೊತ್ತ : ಒಟ್ಟು ರೂ.3000 ಕೋಟಿಗಳು (10 ವರ್ಷಗಳಿಗೆ)
2. ನೀಡುವ ವಿಧಾನ : ಪಿಡಿಓ, ಆರ್‌ಬಿಐ, ಮುಂಬಯಿ (ಪೋರ್ಟ್) ಮೂಲಕ ಹರಾಜು
3. ಹರಾಜು ದಿನಾಂಕ : ನವೆಂಬರ್ 07, 2023

ಕರ್ನಾಟಕ ಸರ್ಕಾರವು ಮೇಲ್ಕಂಡ ಸೆಕ್ಯೂರಿಟಿಗಳಿಗೆ ಚಂದಾ ಆಹ್ವಾನಿಸುತ್ತಿದೆ. ನೋಟಿಫಿಕೇಷನ್ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಓ, ಆರ್.ಬಿ.ಐ, ಬೆಂಗಳೂರು ಇವರಿಂದ ಪಡೆದುಕೊಳ್ಳಬಹುದು. ರಿಟೇಲ್ ಹೂಡಿಕೆದಾರರನ್ನು ಪ್ರೋತ್ಸಾಹಿಸಲು ಆರ್‌ಬಿಐ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಕಲ್ಪಿಸಿದೆ. ಪ್ರಕಟಣೆಯಲ್ಲಿ ತಿಳಿಸಿದ ಕರ್ನಾಟಕ ಸರ್ಕಾರದ ಸ್ಟಾಕ್ ಮೊತ್ತದ ಶೇಕಡ 10 ರಷ್ಟು ಮೊತ್ತದ ಸ್ಟಾಕ್‌ಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆಯ ಮಾಹಿತಿಯು ವೆಬ್‌ಸೈಟ್ **www.rbi.org.in** ನಲ್ಲಿ ಲಭ್ಯವಿದೆ.

ವಾಸಾಸಂಇ/ಉನಿ-ಸಿ.ಪಿ/1946/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–1/JJM/Ten.Nofi/2023–24/1496
ದಿನಾಂಕ: 03.11.2023

ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ –2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಸಂಡೂರು ಮತ್ತು ಬಳ್ಳಾರಿ ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:04–11–2023** ರಿಂದ **15–11–2023** ರಂದು ಸಂಜೆ **4.00** ರವರೆಗೆ ಸಲ್ಲಿಸಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ: 16–11–2023 ರಂದು ಸಂಜೆ 5.00** ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ: 09–11–2023** ರಂದು **ಬೆಳಗ್ಗೆ 11.00** ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಸ್ಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ: **09–11–2023** ರ ಸಂಜೆ **4.00** ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರ್‌ಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/397/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನಾ ವಿಭಾಗ,
ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು – 560 092.
ಸಂಖ್ಯೆ: ಬೃಬೆಂಮಪಾ/ಯಹ/ಕಾಪಾಅ(ಯೋಜನೆ)/ಟೆಂಡರ್/08/2023–24 ದಿನಾಂಕ: 03.11.2023

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ ವಿಭಾಗ), ಯಲಹಂಕ ವಲಯ, ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ /ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಗಳ ಹೆಸರು	ಟೆಂಡರಿಗಿಟ್ಟ ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ
1.	ಯಲಹಂಕ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ನಡಿಗೆದಾರಿ, ವ್ಯಾಯಾಮ ಶಾಲೆ, ಮಕ್ಕಳ ಆಟದ ಉಪಕರಣಗಳು, ಗಜೇಬೋ, ತಂತಿಬೇಲಿಗಳ ದುರಸ್ಥಿ, ಬದಲಾವಣೆ, ಒದಗಿಸುವಿಕೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	91.30	1.83 ಲಕ್ಷಗಳು
2.	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಉದ್ಯಾನ –ವನಗಳಲ್ಲಿ ನಡಿಗೆದಾರಿ, ವ್ಯಾಯಾಮ ಶಾಲೆ, ಮಕ್ಕಳ ಆಟದ ಉಪಕರಣಗಳು, ಗಜೇಬೋ, ತಂತಿಬೇಲಿಗಳ ದುರಸ್ಥಿ, ಬದಲಾವಣೆ, ಒದಗಿಸುವಿಕೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	95.70	1.91 ಲಕ್ಷಗಳು

ಟೆಂಡರ್ ವೇಳಾಪಟ್ಟಿ: (1) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ (ಆನ್‌ಲೈನ್ ಮೂಲಕ ಮಾತ್ರ) **29.11.2023**ರ ಮಧ್ಯಾಹ್ನ **3:00** ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **29.11.2023**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **02.12.2023**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **04.12.2023**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ **06.12.2023**ರ ಸಂಜೆ **4:00** ಗಂಟೆಗೆ ಸಾಧ್ಯವಾದಲ್ಲಿ ತೆರೆಯಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in.** ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಯಲಹಂಕ ವಲಯ

ಪ್ರಾಣಿ | ಪರಿಚ್ಛೇದ | ಸೆಕ್ಷನ್ | ಶಿಕ್ಷೆ ಹಾಗೂ ದಂಡ

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ ಶಿಕ್ಷೆ ಹಾಗೂ ದಂಡದ ವಿವರ

● ಹುಲಿ ಬೇಟೆ, ಉಗುರು, ಚರ್ಮ, ಮೀಸೆ, ಅದರ ಟ್ರೋಫಿ ಅಥವಾ ಸಂಸ್ಕರಿಸದಿರುವ ಟ್ರೋಫಿ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹25 ಸಾವಿರ ದಂಡ



● ಚಿರತೆ ಬೇಟೆ, ಉಗುರು, ಚರ್ಮ, ಮೀಸೆ, ಟ್ರೋಫಿ ಅಥವಾ ಸಂಸ್ಕರಿಸದಿರುವ ಟ್ರೋಫಿ ● 1(ಭಾಗ-ಎ) ● 51(1 ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಆನೆ ಬೇಟೆ, ದಂತ, ಕೂದಲು ಇತ್ಯಾದಿ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಕೃಷ್ಣಮೃಗ ಬೇಟೆ, ಮಾಂಸ, ಚರ್ಮ, ಕೊಂಬು ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಕೊಂಡುಕುರಿ ಬೇಟೆ; ಮಾಂಸ, ಚರ್ಮ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಕರಡಿ ಬೇಟೆ, ಚರ್ಮ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಬೂದು ತೋಳ ಬೇಟೆ, ಚರ್ಮ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಕಾಡು ಬೆಕ್ಕು ಬೇಟೆ, ಚರ್ಮ, ಮಾಂಸ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಮುಂಗುಸಿ ಬೇಟೆ, ಚರ್ಮ, ಬಾಲ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಚಿಪ್ಪುಹಂದಿ ಬೇಟೆ; ಮಾಂಸ, ಚಿಪ್ಪುಗಳ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಮುಳ್ಳುಹಂದಿ ಬೇಟೆ, ಮಾಂಸ ಸಂಗ್ರಹ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ ₹ 25 ಸಾವಿರ ದಂಡ

● ಮಲಬಾರ್ ಅಳಿಲು ಬೇಟೆ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ ,₹ 25 ಸಾವಿರ ದಂಡ

● ನವಿಲು ಬೇಟೆ, ಸೆರೆ ● 1(ಭಾಗ-ಬಿ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ಮಣ್ಣುಮುಕ್ಕ (ರೆಡ್ ಸ್ಯಾಂಡ್ ಬೋವಾ) ಸೆರೆ ಹಿಡಿಯುವುದು, ಮಾರಾಟ ● 1(ಭಾಗ-ಸಿ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

● ನಾಗರಹಾವು ಸೇರಿದಂತೆ ಎಲ್ಲಾ ತರಹದ ಹಾವುಗಳನ್ನು ಸೆರೆ ಹಿಡಿಯುವುದು, ವಿಷ ಸಂಗ್ರಹ ಮಾರಾಟ ● 1(ಭಾಗ-ಸಿ) ● 44(ಸಿ) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

ಎರಡನೇ ಬಾರಿಗೆ ನಿಯಮ ಉಲ್ಲಂಘಿಸಿ ಕೃತ್ಯ ಎಸಗಿದ ಅಪರಾಧಿಗಳಿಗೆ ಮೂರು ವರ್ಷಕ್ಕೆ ಕಡಿಮೆ ಇಲ್ಲದಂತೆ ಏಳು ವರ್ಷದವರೆಗೆ ಶಿಕ್ಷೆ ಹಾಗೂ ₹ 1ಲಕ್ಷ ದಂಡ ವಿಧಿಸಲು ಅವಕಾಶವಿದೆ



● ಬಾವಲಿ ಬೇಟೆ, ಅವಯವ ಸಂಗ್ರಹ ● 2(ಭಾಗ-ಎ) ● 9 ● 3ರಿಂದ 7 ವರ್ಷ ಸಜೆ ಹಾಗೂ ₹ 25 ಸಾವಿರ ದಂಡ

● ಚುಕ್ಕಿ ಜಿಂಕೆ ಬೇಟೆ, ಮಾಂಸ, ಕೊಂಬು, ಚರ್ಮ ಸಂಗ್ರಹ ● 2(ಭಾಗ-ಎ) ● 9 ● 3ರಿಂದ 7 ವರ್ಷ ಸಜೆ ಹಾಗೂ ₹ 25 ಸಾವಿರ ದಂಡ

● ಮೊಲ ಬೇಟೆ, ಮಾಂಸ, ಚರ್ಮ ಸಂಗ್ರಹ ● 2(ಭಾಗ-ಎ) ● 9 ● 3ರಿಂದ 7 ವರ್ಷ ಸಜೆ ಹಾಗೂ ₹ 25 ಸಾವಿರ ದಂಡ



● ಕಾಡು ಹಂದಿ ಬೇಟೆ, ಮಾಂಸ ಸಂಗ್ರಹ ● 2(ಭಾಗ-ಎ) ● 9 ● 3ರಿಂದ 7 ವರ್ಷ ಸಜೆ ಹಾಗೂ ₹ 25 ಸಾವಿರ ದಂಡ

● ವನ್ಯಜೀವಿಧಾಮಗಳು, ರಾಷ್ಟ್ರೀಯ ಉದ್ಯಾನಗಳ ಒಳಗೆ ಹಾಗೂ ಹೊರಭಾಗದ ಪ್ರದೇಶದಲ್ಲಿ ಪ್ರಾಣಿಗಳ ಬೇಟೆ ನಿಷೇಧ ● 1(ಭಾಗ-ಎ) ● 51(1) ● 3ರಿಂದ 7 ವರ್ಷ ಸಜೆ, ₹ 25 ಸಾವಿರ ದಂಡ

ಕಾನೂನಿದೆ ರಕ್ಷಣೆ ಇಲ್ಲ

ವಶಪಡಿಸಿಕೊಂಡಿರುವ ಆನೆ ದಂತ

ಒಂದನೇ ಪುಟದಿಂದ...

ಇದೇ ಸೆಕ್ಷನ್‌ನ 2ಎ ಅನ್ವಯ ಪ್ರಮಾಣ ಪತ್ರ ಹೊಂದಿರುವ ವ್ಯಕ್ತಿ ಹೊರತುಪಡಿಸಿ ಉಳಿದವರು ವನ್ಯಜೀವಿ ಟ್ರೋಫಿಗಳನ್ನು ಸಂಗ್ರಹಿಸುವುದಕ್ಕೆ ನಿರ್ಬಂಧ ಹೇರಲಾಗಿದೆ. ಅಂತಹ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಲು ಸಹಾಯಕ ಅರಣ್ಯಾಧಿಕಾರಿ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಗೆ ಸೆಕ್ಷನ್ 41ರ ಅಡಿ ಅವಕಾಶ ಕಲ್ಪಿಸಲಾಗಿದೆ. ಆದರೆ, ವಿಚಾರಣೆ ಹಾಗೂ ತಪಾಸಣೆಗೂ ಮೊದಲು ಸಂಬಂಧಪಟ್ಟವರಿಗೆ ಮೊದಲು ನೋಟಿಸ್ ನೀಡಬೇಕಿದೆ ಎಂದು ಕಾಯ್ದೆ ಹೇಳುತ್ತದೆ.

ಸಂತೋಷ್ ಹಾಗೂ ಅರ್ಚಕರ ಬಂಧನ ಪ್ರಕರಣದಲ್ಲಿ ಅರಣ್ಯ ಅಧಿಕಾರಿಗಳು ತಳೆದ ಇಬ್ಬಗೆಯ ನೀತಿಯು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ. ಸೆಲೆಬ್ರಿಟಿ ಮತ್ತು ಪ್ರಭಾವಿಗಳಾದ ನಟ ದರ್ಶನ್, ಜಗ್ಗೇಶ್, ನಿಖಿಲ್ ಕುಮಾರಸ್ವಾಮಿ, ಮೃಣಾಲ್ ಹೆಬ್ಬಾಳಕರ ವಿರುದ್ಧ ತಕ್ಷಣ ಬಂಧನದಂತಹ ಕಾನೂನು ಕ್ರಮಕ್ಕೆ ಮುಂದಾಗದಿರುವ ಅಧಿಕಾರಿಗಳ ಹಿಂಜರಿಕೆ ಹಿಂದೆ ರಾಜಕಾರಣಗಳ ಒತ್ತಡವಿರುವ ಸಾಧ್ಯತೆಯಿದೆ ಎಂಬುದು ಜನರ ಆರೋಪ.

ವನ್ಯಜೀವಿಗಳ ಟ್ರೋಫಿ ಇರಿಸಿಕೊಳ್ಳಲು ಅರಣ್ಯ ಇಲಾಖೆಯ ಪರವಾನಗಿ ಖಂಡಿತವಾಗಿಯೂ ಬೇಕಾಗುತ್ತದೆ. 'ಯಾವುದೇ ವ್ಯಕ್ತಿಯ ಮನೆಯಲ್ಲಿ ವನ್ಯಜೀವಿ ಟ್ರೋಫಿಗಳನ್ನು ಸಂಗ್ರಹಿಸಿ ಇರಿಸಿಕೊಳ್ಳುವುದು ಕಾನೂನುಬಾಹಿರವಾಗಲಿದೆ. ಪೂರ್ವಿಕರಿಂದ ಪಡೆದಿದ್ದರೂ ಅಂತಹ ಟ್ರೋಫಿಗಳಿಗೆ ಸೆಕ್ಷನ್ 42ರ ಅನ್ವಯ ಒಡೆತನದ ಪ್ರಮಾಣಪತ್ರ ಇರಬೇಕು' ಎನ್ನುತ್ತಾರೆ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯ ಮಲ್ಲೇಶಪ್ಪ.

ದೇಶದಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ 1,800ಕ್ಕೂ ಹೆಚ್ಚು ಪ್ರಾಣಿಗಳು, ಸಸ್ಯಗಳು, ಪಕ್ಷಿಗಳು, ಜಲಚರಗಳು, ಉಭಯವಾಸಿಗಳು, ಸರೀಸೃಪಗಳ ಬೇಟೆ ಹಾಗೂ ಮಾರಾಟಕ್ಕೆ ನಿಷೇಧ ಹೇರಲಾಗಿದೆ.

ಜಾಗತಿಕ ಮಟ್ಟದ ಅಕ್ರಮ ವ್ಯಾಪಾರದಲ್ಲಿ ಮಾದಕ ವಸ್ತುಗಳ ಕಳ್ಳಸಾಗಣೆಗೆ ಅಗ್ರಸ್ಥಾನವಿದೆ. ಎರಡನೇ ಸ್ಥಾನದಲ್ಲಿ ಶಸ್ತ್ರಾಸ್ತ್ರಗಳ ಮಾರಾಟ ದಂಧೆಯಿದೆ. ನಂತರದ್ದು ವನ್ಯಜೀವಿಗಳ ವ್ಯಾಪಾರವಾಗಿದೆ. ವನ್ಯಜೀವಿಗಳ ಅಪರಾಧ ಮತ್ತು ವ್ಯಾಪಾರ ತಡೆಗೆ ಶ್ರಮಿಸುತ್ತಿರುವ 'ಟ್ರಾಫಿಕ್' ಸಂಸ್ಥೆಯ ವರದಿ ಪ್ರಕಾರ ಜಾಗತಿಕವಾಗಿ ವನ್ಯಜೀವಿ ವ್ಯಾಪಾರದ ವಾರ್ಷಿಕ ವಹಿವಾಟು ₹1.90 ಲಕ್ಷ ಕೋಟಿಯಷ್ಟಿದೆ. ಇದಕ್ಕೆ ಚೀನಾವೇ ಅತಿದೊಡ್ಡ ಮಾರುಕಟ್ಟೆ.

ಚೀನಿಯರು ಸಾಂಪ್ರದಾಯಿಕ ಔಷಧ ಪ್ರಿಯರು. ಕಾಡುಪ್ರಾಣಿಗಳ ಅವಯವಗಳಿಂದ ತಯಾರಿಸಿದ ಔಷಧ ಸೇವಿಸುತ್ತಾರೆ. ಹುಲಿಯ ಮೂಳೆಗಳಿಗೆ ಸಂಧಿವಾತ ಗುಣಪಡಿಸುವ ಶಕ್ತಿಯಿದೆ ಎಂಬುದು ಅವರ ನಂಬಿಕೆ. ಅದರ ಬಾಲವನ್ನು ಚರ್ಮವ್ಯಾಧಿ ಔಷಧ ತಯಾರಿಕೆಗೆ ಬಳಸುತ್ತಾರೆ.

ಗೃಹ ಅಲಂಕಾರಿಕ ವಸ್ತುಗಳ ತಯಾರಿಕೆಯಲ್ಲಿ ಆನೆಗಳ ದಂತಗಳನ್ನು ಬಳಸಲಾಗುತ್ತಿದೆ. ಅವುಗಳಿಂದ ತಯಾರಿಸಿದ ದೇವರ ಮೂರ್ತಿ, ನೆಕ್ಲೆಸ್, ಬ್ರಾಸ್‌ಲೆಟ್, ಕಿವಿಯೋಲೆ ಹಾಗೂ ಕಲಾಕೃತಿಗಳಿಗೆ ಅಪಾರ ಬೇಡಿಕೆಯಿದೆ. ಜಪಾನ್‌ನಲ್ಲಿ ಭಾರತೀಯರಂತೆ ಪೆನ್ ಬಳಸಿ ಸಹಿ ಹಾಕುವುದಿಲ್ಲ. ಅಲ್ಲಿನವರು ತಮ್ಮದೇ ಆದ 'ಸಹಿ ಮುದ್ರೆ' ಹೊಂದಿರುತ್ತಾರೆ. ಸಿರಿವಂತರ ಮನೆಗಳಲ್ಲಿ ದಂತಗಳಿಂದ ತಯಾರಿಸಿದ ಠಸ್ಸೆಗಳಿರುತ್ತವೆ.

ಚಿರತೆಯ ಚರ್ಮ, ಹಲ್ಲುಗಳು, ಕರಡಿಯ ಪಿತ್ತಕೋಶವನ್ನು ಸಾಂಪ್ರದಾಯಿಕ ಔಷಧ ತಯಾರಿಕೆಗೆ ಬಳಲಾಗುತ್ತದೆ. ಜಿಂಕೆಯ ಕೊಂಬುಗಳನ್ನು ಪ್ರತಿಷ್ಠಿತರ ಮನೆಗಳಲ್ಲಿ ಅಲಂಕಾರಿಕವಾಗಿ ಬಳಸಲಾಗುತ್ತದೆ. ಒಂಟಿಕೊಂಬಿನ ಘೇಂಡಾಮೃಗಗಳ ಬದುಕಿಗೂ ನೆಮ್ಮದಿ ಇಲ್ಲ. ಅವುಗಳ ಕೊಂಬಿನಿಂದ ತಯಾರಿಸಿದ ವಸ್ತುಗಳಿಗೆ ಬೇಡಿಕೆ ಇರುವುದರಿಂದ ಎಗ್ಗಿಲ್ಲದೆ ಹತ್ಯೆ ನಡೆದಿದೆ. ಕುಂಚ ತಯಾರಿಕೆಗಾಗಿ ಮುಂಗುಸಿಗಳ ಬಾಲ ಬಳಸಲಾಗುತ್ತದೆ.

ಈಗ ಬೆಳಕಿನ ಹಬ್ಬ ದೀಪಾವಳಿ ಸಮೀಪಿಸುತ್ತಿದೆ. ಈ ವೇಳೆ ಗೂಬೆ ಬಲಿ ಕೊಟ್ಟರೆ ಸಂಪತ್ತು ವೃದ್ಧಿಸುತ್ತದೆ ಎಂಬ ಮೌಢ್ಯವು ಉತ್ತರ ಭಾರತದ ಹಲವೆಡೆ ಚಾಲ್ತಿಯಲ್ಲಿದೆ. ಪೂಜೆ ವೇಳೆ ಅವುಗಳ ತಲೆಬುರುಡೆ, ಪುಕ್ಕ, ಹೃದಯ, ರಕ್ತ ಇತ್ಯಾದಿ ಇಡುತ್ತಾರೆ.

ಕಣಜ ಗೂಬೆ, ಮೀನು ಗೂಬೆ, ಕಂದು ಗಿಡುಗ ಗೂಬೆ, ಕಂದು ಕಾಡುಗೂಬೆ ಸೇರಿದಂತೆ 16 ಪ್ರಭೇದಕ್ಕೆ ಸೇರಿದ ಗೂಬೆಗಳು ವನ್ಯಜೀವಿ ಮಾರಾಟ ಜಾಲಕ್ಕೆ ಸಿಲುಕಿರುವುದು ಟ್ರಾಫಿಕ್ ಹಾಗೂ ವರ್ಲ್ಡ್‌ವೈಡ್ ಲೈಫ್ ಫಂಡ್ ನಡೆಸಿದ ಅಧ್ಯಯನಗಳಿಂದ ಬಹಿರಂಗಗೊಂಡಿದೆ.

ಹುಲಿ ಬೇಟೆ ಮತ್ತು ಸಂಸಾರ್ ಚಂದ್: ಹರಿಯಾಣದ ಬವಾರಿಯಾ ಹಾಗೂ ಮಧ್ಯಪ್ರದೇಶದ ಕಟ್ನಿ ಬುಡಕಟ್ಟು ಜನರು ಹುಲಿಗಳ ಕಳ್ಳಬೇಟೆಯಲ್ಲಿ ನಿಷ್ಣಾತರು. ಪ್ಲಾಸ್ಟಿಕ್ ಹೂಗಳ ಮಾರಾಟದ ನೆಪದಲ್ಲಿ ಇವರು ಅರಣ್ಯದ ಅಂಚಿನ ಗ್ರಾಮಗಳ ಹೊರವಲಯದಲ್ಲಿ ಟೆಂಟ್ ಹಾಕುತ್ತಾರೆ. ಬಳಿಕ ರಾತ್ರಿವೇಳೆ ಅರಣ್ಯ ಪ್ರವೇಶಿಸಿ ಜಾ ಟ್ರಾಪ್ ಅಳವಡಿಸಿ ಅಲ್ಲಿನ ಗುಹೆಗಳು, ಕಲ್ಲಿನ ಪೊಟರೆಗಳಲ್ಲಿಯೇ ತಂಗುತ್ತಾರೆ.

ಹುಲಿಯು ಜಾ ಟ್ರಾಪ್‌ಗೆ ಸಿಲುಕಿದ ತಕ್ಷಣವೇ ಅದರ ಕಣ್ಣುಗಳಿಗೆ ಚೂಪಾದ ಭರ್ಜಿಯಿಂದ ಚುಚ್ಚುತ್ತಾರೆ. ಬಳಿಕ ಅದರ ತಲೆಗೆ ದೊಣ್ಣೆಗಳಿಂದ ಹೊಡೆದು ಸಾಯಿಸುತ್ತಾರೆ. ಬಳಿಕ ಅದರ ಅವಯವಗಳನ್ನು ಬೇರ್ಪಡಿಸಿ ಕಳ್ಳಸಾಗಣೆದಾರರಿಗೆ ತಲುಪಿಸುವಲ್ಲಿ ಸಿದ್ಧಹಸ್ತರು.

ದೇಶದ ಕುಖ್ಯಾತ ವನ್ಯಜೀವಿ ಕಳ್ಳಸಾಗಣೆದಾರನಾಗಿದ್ದ ಸಂಸಾರ್ ಚಂದ್ (ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾನೆ) ನಡೆಸುತ್ತಿದ್ದ ವ್ಯಾಪಾರಕ್ಕೆ ಬುಡಕಟ್ಟು ಜನರೇ ದಾಳವಾಗಿದ್ದರು. ಅವರಿಗೆ ಹಣ ನೀಡಿ ಹುಲಿಗಳ ಹತ್ಯೆಗಾಗಿ ವಿವಿಧ ರಾಜ್ಯಗಳ ಸಂರಕ್ಷಿತ ಪ್ರದೇಶಕ್ಕೆ ಕಳುಹಿಸುತ್ತಿದ್ದ. ಈತ ಕಳ್ಳಬೇಟೆಯಲ್ಲಿ ಪರಿಣತರಾಗಿದ್ದ. ಅರಣ್ಯದ ಒಳಗಿರುವ ಹಾಗೂ ಅದರ ಅಂಚಿನ ಜನರಿಗೂ ಆಮಿಷವೊಡ್ಡಿ ಪ್ರಾಣಿಗಳ ಹತ್ಯೆಗೆ ಪ್ರಚೋದಿಸುತ್ತಿದ್ದ. ಆತನ ಪತ್ನಿ ರಾಣಿ ಹಾಗೂ ಪುತ್ರ ಆಕಾಶನದ್ದೂ ಇದೇ ವೃತ್ತಿ. ಇಂತಹ ಕಳ್ಳಸಾಗಣೆದಾರರ ಮೂಲಕವೇ ವನ್ಯಜೀವಿ ಉತ್ಪನ್ನಗಳು ಸುಲಭವಾಗಿ ಭಾರತದ ಗಡಿ ದಾಟಿ ಚೀನಿಯರ ಮನೆಗಳನ್ನು ಸೇರುತ್ತವೆ ಎನ್ನುತ್ತಾರೆ ವನ್ಯಜೀವಿ ತಜ್ಞರು.

ಮಾರಾಟ ಜಾಲ ಸಕ್ರಿಯ: ರಾಜ್ಯದಲ್ಲೇ ಅತಿಹೆಚ್ಚಿನ ಸಂಖ್ಯೆಯ ಹುಲಿಗಳು, ಆನೆಗಳಿಗೆ ಆಶ್ರಯ ನೀಡಿರುವ ಹಿರಿಮೆಯು ಚಾಮರಾಜನಗರ, ಮೈಸೂರು ಮತ್ತು ಕೊಡಗು ವ್ಯಾಪ್ತಿಯ ಅರಣ್ಯ ಪ್ರದೇಶಕ್ಕೆ ಸಲ್ಲುತ್ತದೆ. ಇಲ್ಲಿ ಕಳ್ಳಬೇಟೆಗೆ ಇತ್ತೀಚಿನ ವರ್ಷಗಳಲ್ಲಿ ಕಡಿವಾಣ ಬಿದ್ದಿದ್ದರೂ, ಪ್ರಾಣಿಗಳ ಆಯವಯ ಸಂಗ್ರಹ, ಮಾರಾಟ, ಕಳ್ಳಸಾಗಣೆ ಜಾಲ ಸಕ್ರಿಯವಾಗಿದೆ.

ಕೊಡಗಿನಲ್ಲಿ ಹುಲಿ ಉಗುರು, ಮೀಸೆ, ಚರ್ಮ ಹಾಗೂ ಆನೆ ದಂತ ಮಾರಾಟ ಪ್ರಕರಣಗಳು ವರದಿಯಾಗುತ್ತಲೇ ಇವೆ. ಕಳೆದ ಜನವರಿಯಲ್ಲಿ ಚಾಮರಾಜನಗರ ಜಿಲ್ಲೆಯ ಪಿ.ಜಿ. ಪಾಳ್ಯದ ಬಳಿ ಹುಲಿಯ 40 ಉಗುರು, ಎರಡು ಹಲ್ಲುಗಳ ಸಾಗಣೆಗೆ ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳು ಅರಣ್ಯ ಸಂಚಾರ ದಳದ ಕೈಗೆ ಸಿಕ್ಕಿಬಿದ್ದಿದ್ದು, ಇದಕ್ಕೆ ನಿದರ್ಶನ.

2022ರ ನವೆಂಬರ್‌ನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಎಚ್‌.ಡಿ. ಕೋಟೆ ತಾಲ್ಲೂಕಿನ ತಾರಕ ಗ್ರಾಮದ ಕೃಷಿ ಜಮೀನೊಂದರಲ್ಲಿ ಹಾಕಿದ್ದ ಉರುಳಿಗೆ ಸಿಲುಕಿ ಹುಲಿ ಮೃತಪಟ್ಟಿತ್ತು. ಅದೇ ವರ್ಷದ ಡಿಸೆಂಬರ್‌ನಲ್ಲಿ ನಾಗರಹೊಳೆ ಸಿಂಗನೂರು ಗಸ್ತಿನಲ್ಲಿ ಎಂಟು ವರ್ಷದ ಕಾಡುಕೋಣ ಗುಂಡೇಟಿಗೆ ಬಲಿಯಾಗಿತ್ತು.

ಈ ವರ್ಷದ ಅಕ್ಟೋಬರ್‌ನಲ್ಲೂ ಕಚುವಿನಹಳ್ಳಿ ಮೀಸಲು ಅರಣ್ಯದಲ್ಲಿ ಕಾಟಿ ಬೇಟೆಯಾಡಿ ಮಾಂಸಕ್ಕಾಗಿ ದೇಹದ ಭಾಗಗಳನ್ನು ಕತ್ತರಿಸಿಕೊಂಡು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿತ್ತು.

'ಕಾನನದಲ್ಲಿರುವ ಬುಡಕಟ್ಟು ಜನರಿಗೆ ಕಾಡಿನ ಬಗ್ಗೆ ಅಪಾರ ಜ್ಞಾನ ಇರುತ್ತದೆ. ಕಾಡಂಚಿನ ಜನರಿಗೂ ವನ್ಯಪ್ರಾಣಿಗಳ ಬಗ್ಗೆ ಅರಿವಿರುತ್ತದೆ. ಬೇಟೆಯಾಡುವುದು ಅವರಿಗೆ ಸುಲಭ. ಸಂಘಟಿತ ವನ್ಯಜೀವಿ ವ್ಯಾಪಾರ ಜಾಲದ ಬಲೆಗೆ ಇಂತಹ ಜನರು ಸುಲಭವಾಗಿ ಬೀಳುತ್ತಾರೆ. ದುಡ್ಡಿನ ಆಸೆ ತೋರಿಸಿ ಪ್ರಾಣಿಗಳ ಹತ್ಯೆಗೆ ಪ್ರಚೋದಿಸುವ ಸಾಧ್ಯತೆ ಹೆಚ್ಚಿರುತ್ತದೆ' ಎನ್ನುತ್ತಾರೆ ಅಧಿಕಾರಿಗಳು.

ಕೃತಕ ಉಗುರು: ಹುಲಿಯನ್ನು ಹತ್ಯೆಗೈದು ಅದರ ಉಗುರು ಸಂಗ್ರಹಿಸಲಾಗುತ್ತದೆ. ಅರಣ್ಯದಲ್ಲಿ ಸಹಜವಾಗಿ ಮೃತಪಟ್ಟಾಗಲೂ ಉಗುರು ಸಂಗ್ರಹಿಸುವ ಬೇಟೆಗಾರರು ಇದ್ದಾರೆ. ಕರ್ನಾಟಕದಲ್ಲಿ ದನದ ಕೊಂಬುಗಳನ್ನು ಬಳಸಿ ಹುಲಿ ಉಗುರಿನ ಮಾದರಿ ತಯಾರಿಸುವ ಕೆಲವು ಬುಡಕಟ್ಟು ಸಮುದಾಯಗಳು ಇವೆ. ಅವರ ಮಾತಿನ ಮೋಡಿಗೆ ಸಿಲುಕಿ, ಖರೀದಿಸಿ ಮೋಸ ಹೋಗುವವರೂ ಇದ್ದಾರೆ. ರಾಮನಗರ, ಮಡಿಕೇರಿ, ಮೈಸೂರು ಭಾಗದಲ್ಲಿ ಇಂತಹವರು ಹೆಚ್ಚಾಗಿ ಸಕ್ರಿಯರಾಗಿದ್ದಾರೆ.

ತಮಿಳುನಾಡಿನ ಬೇಟೆಗಾರರ ಹಾವಳಿ: ಚಾಮರಾಜನಗರದ ಗಡಿಕ್ಕೆ ಹೊಂದಿಕೊಂಡಿರುವ ತಮಿಳುನಾಡಿಗೆ ಸೇರಿದ ಗ್ರಾಮಗಳಲ್ಲಿ ನಾಡ ಬಂದೂಕು ಸಿದ್ಧಪಡಿಸುವವರು ಇದ್ದಾರೆ. ಹಳೆಯ ಬ್ಯಾಟರಿಗಳಲ್ಲಿರುವ ಲೋಹ ಕರಗಿಸಿ ಮಾಡುವ ಗುಂಡುಗಳನ್ನು ಇವುಗಳಲ್ಲಿ ಬಳಸುತ್ತಾರೆ. 2015ರಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ 15 ಬಂದೂಕುಗಳನ್ನು ವಶಪಡಿಸಿಕೊಂಡಿದ್ದರು. ಹಾಗಾಗಿಯೇ, ಮಲೆಮಹದೇಶ್ವರ ವನ್ಯಧಾಮ ಮತ್ತು ಕಾವೇರಿ ವನ್ಯಧಾಮದಲ್ಲಿ ಆಗಾಗ್ಗೆ ಬೇಟೆ ಪ್ರಕರಣಗಳು ವರದಿಯಾಗುತ್ತಿವೆ.

'ಕಾವೇರಿ ನದಿ ದಾಟಿ ಅರಣ್ಯ ಪ್ರವೇಶಿಸುವ ಇವರು ಜಿಂಕೆ, ಮೊಲ, ಕಾಟ ಸೇರಿದಂತೆ ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಬೇಟೆಯ ಬಳಿಕ ಬಂದೂಕುಗಳನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಕಾಡಂಚಿನ ಪ್ರದೇಶಗಳಲ್ಲಿ ಪ್ಲಾಸ್ಟಿಕ್‌ನಿಂದ ಸುತ್ತಿ ಮಣ್ಣಿನಲ್ಲಿ ಹೂತಿಡುತ್ತಾರೆ. ಬೇಟೆಗೆ ಹೋಗುವಾಗ ಇವುಗಳನ್ನು ತೆಗೆದುಕೊಂಡು ಹೋಗುತ್ತಾರೆ' ಎನ್ನುತ್ತಾರೆ ಪರಿಸರವಾದಿಗಳು.

ಈ ಎರಡೂ ವನ್ಯಜೀವಿ ಧಾಮಗಳಲ್ಲಿ ಅರಣ್ಯ ಸಿಬ್ಬಂದಿ ಹಾಗೂ ಬೇಟೆಗಾರರ ನಡುವೆ ಗುಂಡಿನ ಚಕಮಕಿ ನಡೆದ ಹಲವು ದೃಷ್ಟಾಂತಗಳಿವೆ. ಕೆಲವು ತಿಂಗಳ ಹಿಂದೆ ಅರಣ್ಯ ಸಿಬ್ಬಂದಿಯ ಗುಂಡಿನ ದಾಳಿಯಿಂದ ತಪ್ಪಿಸಿಕೊಳ್ಳುವ ಭರದಲ್ಲಿ ಬೇಟೆಗಾರನೊಬ್ಬ ಕಾವೇರಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದ. ಕೊಡಗು ಜಿಲ್ಲೆಯಲ್ಲಿ ವನ್ಯಜೀವಿ ಅಪರಾಧ ಚಟುವಟಿಕೆಗಳಲ್ಲಿ ಹೊಸಬರು ಭಾಗಿಯಾಗುತ್ತಿರುವುದು ಅರಣ್ಯ ಇಲಾಖೆಯ ತನಿಖೆಯಿಂದ ಬಹಿರಂಗಗೊಂಡಿದೆ.

ಇಲಾಖೆಯಲ್ಲಿ ದಾಖಲಾಗಿರುವ ಅಂಕಿಅಂಶ ಗಮನಿಸಿದರೆ ಜಿಂಕೆ, ಕಡವೆ, ಕಾಟ, ಮೊಲ, ಕಾಡು ಬೆಕ್ಕು, ಉಡ, ಅಪರೂಪದ ಅಳಿಲುಗಳು ಬೇಟೆಗಾರರ ಹಸಿವೆಗೆ 'ಆಹಾರ'ವಾಗುತ್ತಿವೆ.

ರಕ್ತಚಂದನ ಕಳ್ಳಸಾಗಣೆ: ಕಾಯ್ದೆಯ ಸೆಕ್ಷನ್ 17ಎ ಪ್ರಕಾರ ಕೇಂದ್ರ ಸರ್ಕಾರ ಅಧಿಸೂಚನೆ ಮೂಲಕ ಗುರುತು ಮಾಡಿದ ಯಾವುದೇ ಪ್ರದೇಶ ಹಾಗೂ ಅರಣ್ಯ ಪ್ರದೇಶದಿಂದ ಯಾವುದೇ ನಿರ್ದಿಷ್ಟಪಡಿಸಿದ ಸಸ್ಯಗಳನ್ನು ಕೀಳುವಂತಿಲ್ಲ. ನಾಶ ಹಾಗೂ ಸ್ವಾಧೀನಪಡಿಸಿಕೊಳ್ಳುವಂತಿಲ್ಲ. ಆದರೆ, ಅಮೂಲ್ಯ ಮರಗಳು, ಔಷಧೀಯ ಸಸ್ಯಗಳ ಕಳ್ಳಸಾಗಣೆ ನಿರಂತರವಾಗಿ ನಡೆಯುತ್ತಿದೆ. ಆಂಧ್ರಪ್ರದೇಶದ ಜೊತೆ ಗಡಿ ಹಂಚಿಕೊಂಡಿರುವ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಕ್ತಚಂದನ ಕಳ್ಳಸಾಗಣೆ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಿವೆ.

ಕೋಲಾರದಲ್ಲಿ 2022ರ ಆಗಸ್ಟ್‌ನಲ್ಲಿ 870 ಕೆ.ಜಿ ರಕ್ತಚಂದನ ವಶಕ್ಕೆ ಪಡೆಯಲಾಗಿತ್ತು. ಚಿಕ್ಕಬಳ್ಳಾಪುರದ ಪೆರೇಸಂದ್ರ ಸಮೀಪದ ಸಾದಲಿ ಕ್ರಾಸ್‌ನಲ್ಲಿ ಇತ್ತೀಚೆಗೆ ಇನೊವಾ ಪಲ್ಟಿ ಆಗಿತ್ತು. ಅದರಲ್ಲಿ ರಕ್ತಚಂದನದ 24 ತುಂಡುಗಳು ಪತ್ತೆಯಾಗಿದ್ದವು. ಇದೇ ರೀತಿ ರಾಜ್ಯದಲ್ಲೂ ಮರಗಳ್ಳತನ ಮಲೆನಾಡಿನಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಬೇಡಿಕೆ ಇರುವವರೆಗೆ ಮರಗಳ್ಳತನ, ಕಾಡುಪ್ರಾಣಿ ಹತ್ಯೆ ನಡೆಯುತ್ತಿರುತ್ತದೆ. ಬೇಡಿಕೆಯೇ ಇಲ್ಲವಾದರೆ ಇದು ನಿಲ್ಲುತ್ತದೆ. ಎಲ್ಲಾ ಉಗುರಿನಲ್ಲಿ ಇರುವುದು ಕೆರಾಟಿನ್. ಹುಲಿಯ ಉಗುರು ಧರಿಸಿದ ಮಾತ್ರಕ್ಕೆ ಹುಲಿ ಆಗುವುದಿಲ್ಲ ಎನ್ನುವ ಸಾಮಾನ್ಯ ಜ್ಞಾನ ಶ್ರೀಸಾಮಾನ್ಯರಿಂದ ಸೆಲೆಬ್ರಿಟಿವರೆಗೆ ಹರಡಿದರೆ ಮಾತ್ರ ಕಾಡುಪ್ರಾಣಿಗಳಿಗೆ ರಕ್ಷಣೆ ಸಿಗುತ್ತದೆ.

ಉದುರಿದ ನವಿಲು ಗರಿ ಸಂಗ್ರಹಕ್ಕೆ ಅವಕಾಶ

ನವಿಲುಗಳು ಸಹಜವಾಗಿ ಉದುರಿಸುವ ಗರಿಗಳ ಸಂಗ್ರಹ, ಅವುಗಳಿಂದ ಕಲಾಕೃತಿ ರಚಿಸಲು ಮತ್ತು ಅವುಗಳನ್ನು ದೇಶದ ಗಡಿಯೊಳಗಷ್ಟೇ ಮಾರಾಟ ಮಾಡಲು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ ಅವಕಾಶ ಕಲ್ಪಿಸಲಾಗಿದೆ.

ಕಾಯ್ದೆಗೆ 1991ರಲ್ಲಿ ತರಲಾದ ತಿದ್ದುಪಡಿಯಲ್ಲಿ ಈ ಅಂಶಗಳನ್ನು ಸೇರಿಸಲಾಗಿತ್ತು. ಆದರೆ, ಈ ವಿನಾಯಿತಿಯನ್ನು ದುರ್ಬಳಕೆ ಮಾಡಿಕೊಂಡು, ರಾಷ್ಟ್ರ ಪಕ್ಷಿಯನ್ನು ಕೊಂದು ಗರಿ ಸಂಗ್ರಹಿಸುವ ಕೃತ್ಯವನ್ನು ಸರ್ಕಾರ ಗುರುತಿಸಿತ್ತು. 2014ರ ವೇಳೆಗೆ ಅಂತಹ ಕೃತ್ಯಗಳು ಹೆಚ್ಚು ವರದಿಯಾದವು. ಹಾಗಾಗಿ, ಕೇಂದ್ರ ಅರಣ್ಯ ಸಚಿವಾಲಯವು ಅದೇ ವರ್ಷದ ಮೇ 7ರಂದು ವಿಸ್ತೃತ ಅಧಿಸೂಚನೆ ಹೊರಡಿಸಿತು.

'ನವಿಲನ್ನು ಪರಿಚ್ಛೇದ-1ರಲ್ಲಿ ಪಟ್ಟಿ ಮಾಡಲಾಗಿದೆ. ಆದರೂ, ದೇಶದ ಗಡಿಯೊಳಗೆ ನವಿಲು ಗರಿ ಸಾಗಣೆ, ವರ್ಗಾವಣೆ ಮತ್ತು ವ್ಯಾಪಾರಕ್ಕೆ ಈ ಕಾಯ್ದೆಯ 43, 44(4) ಮತ್ತು 49(ಎ) ಸೆಕ್ಷನ್‌ಗಳ ಅಡಿಯಲ್ಲಿ ವಿನಾಯಿತಿ ನೀಡಲಾಗಿದೆ. ದೇಶದಾದ್ಯಂತ ಹಲವೆಡೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಉದ್ದೇಶಗಳಿಗೆ ನವಿಲು ಗರಿಯನ್ನು ಬಳಸಲಾಗುತ್ತದೆ ಮತ್ತು ದೇಶದೊಳಗೆ ಮುಕ್ತವಾಗಿ ವ್ಯಾಪಾರಕ್ಕೆ ಅವಕಾಶವಿದೆ' ಎಂದು ವಿಸ್ತೃತ ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಈ ಅಧಿಸೂಚನೆಯ 5ನೇ ಸೆಕ್ಷನ್‌ನಲ್ಲಿ 'ಜೀವಂತ ನವಿಲಿನಿಂದ ಗರಿಗಳನ್ನು ಕೀಳುವುದು ಮತ್ತು ನವಿಲನ್ನು ಕೊಂದು ಆನಂತರ ಗರಿಗಳನ್ನು ಕೀಳುವುದು ಕಾನೂನುಬಾಹಿರವಾಗಿದೆ' ಎಂದು ವಿವರಿಸಲಾಗಿದೆ.

ನಾಗರಹೊಳೆಯಲ್ಲಿ ಈ ವರ್ಷ ಕಾಟಿ ಬೇಟೆ ಪ್ರಕರಣ ಹೊರತುಪಡಿಸಿದರೆ ಇತರೆ ವನ್ಯಜೀವಿ ಹತ್ಯೆ ನಡೆದಿಲ್ಲ. ಅಪರಾಧದ ಮೇಲೆ ನಿಗಾ ಇಡಲಾಗಿದೆ
ಹರ್ಷಕುಮಾರ್ ಚಿಕ್ಕನರಗುಂದ, ನಿರ್ದೇಶಕ, ನಾಗರಹೊಳೆ

ಬಂಡೀಪುರದಲ್ಲಿ ವಿಶೇಷ ಹುಲಿ ಸಂರಕ್ಷಣಾ ಪಡೆ ರಚನೆಯಾದ ಬಳಿಕ ಹುಲಿಗಳ ಅಸಹಜ ಸಾವಿನ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ
ಪಿ. ರಮೇಶ್‌ಕುಮಾರ್ ನಿರ್ದೇಶಕ, ಬಂಡೀಪುರ

ಕೊಡಗು ಜಿಲ್ಲೆಯಲ್ಲಿ ವನ್ಯಜೀವಿ ಮಾಫಿಯಾ ಸಕ್ರಿಯವಾಗಿದೆ. ಈ ಬಗ್ಗೆ ಗುಪ್ತಚರ ವಿಭಾಗದವರು ಹೆಚ್ಚು ಜಾಗ್ರತೆವಹಿಸಬೇಕು
ಕರ್ನಲ್ ಸಿ.ಪಿ. ಮುತ್ತಣ್ಣ ಪರಿಸರವಾದಿ, ಕೊಡಗು

ವನ್ಯಜೀವಿ ಕಾಯ್ದೆಯ ಯಶಸ್ವಿ ಅನುಷ್ಠಾನಕ್ಕೆ ತಳಮಟ್ಟದಲ್ಲಿ ವನ್ಯಜೀವಿ ತಜ್ಞರ ಕೊರತೆ ಇದೆ. ಜಿಲ್ಲಾಮಟ್ಟದಲ್ಲಿ ವನ್ಯಜೀವಿ ಅಪರಾಧ ತಡೆ ದಳ ರಚಿಸಬೇಕು
ಕೇಶವ ಎಚ್‌. ಕೊರ್ಸೆ, ಪರಿಸರ ತಜ್ಞ

ಪೂರಕ ಮಾಹಿತಿ: ಸೂರ್ಯನಾರಾಯಣ ವಿ., ಕೆ.ಎಸ್. ಗಿರೀಶ, ಮೋಹನ್ ಕುಮಾರ್, ಕೆ. ಓಂಕಾರಮೂರ್ತಿ, ಡಿ.ಎಂ. ಕುರ್ಕೆ ಪ್ರಶಾಂತ, ಗಣಪತಿ ಹೆಗಡೆ, ಬಿ.ಜಿ. ಧನ್ಯಪ್ರಸಾದ್

ಆಧಾರ: ರಾಜ್ಯ ಅರಣ್ಯ ಇಲಾಖೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ, 5-11-1998

● **'ಮಾಹಿತಿ ತಂತ್ರಜ್ಞಾನ ಪ್ರಗತಿ: ಆಂಧ್ರ ಮೀರಿಸಿದ ಕರ್ನಾಟಕ'**

ಹೈದರಾಬಾದ್, ನ. 4 (ಯುಎನ್‌ಐ)– ಮಾಹಿತಿ ತಂತ್ರಜ್ಞಾನದಲ್ಲಿ ವಿಶ್ವದ 10 ಅಗ್ರಮಾನ್ಯ ನಗರಗಳಲ್ಲಿ ಒಂದಾಗಿರುವ ಬೆಂಗಳೂರಿಗೆ ಹೋಲಿಸಿದರೆ, ಹೈದರಾಬಾದ್‌ಅನ್ನು 'ಸೈಬರ್ ಬಾದ್' ಎಂದು ಪರಿವರ್ತಿಸುವ ಚಂದ್ರಬಾಬು ನಾಯ್ಡು ಅವರ ಯತ್ನ ಪ್ರಚಾರಕ್ಕಾಗಿ ಮಾಡಿದ ಕಸರತ್ತು' ಎಂದು ಕಾಂಗ್ರೆಸ್ ವಕ್ತಾರ ಜಿ. ಮುದ್ದುಕೃಷ್ಣ ಆರೋಪಿಸಿದ್ದಾರೆ. 'ವಿಶ್ವದ 10 ಪ್ರಮುಖ ಮಾಹಿತಿ ತಂತ್ರಜ್ಞಾನ ನಗರಗಳಲ್ಲಿ ಒಂದಾಗಿರುವ ಬೆಂಗಳೂರು ಈ ರಂಗದಲ್ಲಿ ರೂ. 2,500 ಕೋಟಿಯಿಂದ ರೂ. 3,000 ಕೋಟಿಗೆ ಸಾಫ್ಟ್‌ವೇರ್ ರಫ್ತು ವಹಿವಾಟನ್ನು ಹೊಂದಿದೆ' ಎಂದಿದ್ದಾರೆ.

50 ವರ್ಷಗಳ ಹಿಂದೆ
ಸೋಮವಾರ, 5-11-1973

● **ಸ್ಯಾಂ ಕ್ಷಿಪಣಿಗೆ ಪ್ರತ್ಯಸ್ತ್ರ 'ಜಾಣ ಬಾಂಬ್'**

ನವದೆಹಲಿ, ನ. 4– ಟೆಲಿವಿಜನ್ ರೀತಿಯಲ್ಲಿ ಶಬ್ದ ಹಾಗೂ ಬೆಳಕಿನ ತರಂಗಗಳ ಹತೋಟಿಯಿಂದ ಗುರಿಯತ್ತ ಕರಾರುವಾಕ್ ಚಲನಸಾಧ್ಯವಾಗುವ 'ಜಾಣ ಬಾಂಬ್'ಗಳನ್ನು ಇಸ್ರೇಲಿಗೆ ಅಮೆರಿಕ ಕೊಡಲಿದೆಯೆಂದು ಫ್ರೆಂಚ್ ಪತ್ರಿಕೆಯೊಂದು ಪ್ರಕಟಿಸಿದೆ.

ಬೆಳಕು ಹಾಗೂ ಲೇಸರ್ ಕಿರಣಗಳ ದೂರ ಹತೋಟಿಯಿಂದ ಗುರಿ ಮುಟ್ಟುವ ನಾಲ್ಕು ವಿಧದ 'ಜಾಣ ಬಾಂಬ್'ಗಳು, ಯಾವ ಕ್ಷಿಪಣಿ ನೆಲೆಯನ್ನಾದರೂ ಭೇದಿಸಬಲ್ಲ ಸಾಮರ್ಥ್ಯ ಪಡೆದಿವೆ ಎಂದು ಹೇಳಲಾಗಿದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ
ಭಾನುವಾರ ನವೆಂಬರ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಅಷ್ಟಮಿ ಗಂ. 27-19 ನಕ್ಷತ್ರ: ಪುಷ್ಯ ಗಂ. 10-29 ಯೋಗ: ಶುಭ ಗಂ 13-36 ಕರಣ: ಬಾಲವ ಗಂ. 14-07, ತುಲಾ ಮಾಸದ 19 ನೇ ದಿನ, ಮಳೆನಕ್ಷತ್ರ: ಸ್ವಾತಿ 4.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-29 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 20 ರಬಿಯುಸ್ಸಾನಿ, ದಿನ ವಿಶೇಷ : ಕಾಲಾಷ್ಟಮಿ
ಅದೃಷ್ಟ ಸಂಖ್ಯೆ : 8, 10

ಮೇಷ: ಸಂತೋಷದ ಮನೋಭಾವದಲ್ಲಿರುವ ನೀವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಸಂಶೋಧಕರಿಗೆ ಈ ದಿನ ಬಹಳಷ್ಟು ಮಹತ್ವಪೂರ್ಣವಾದದ್ದು ಎಂದೆನಿಸಲಿದೆ. ಧಾರ್ಮಿಕವಾದ ಮನಸ್ಥಿತಿ ಇರುವುದು.

ವೃಷಭ: ಬಹಳ ದಿನಗಳ ನಿಮ್ಮ ಕನಸನ್ನು ನನಸು ಮಾಡುವಂತಹ ಅವಕಾಶಗಳು ಈ ದಿನ ಲಭಿಸಲಿವೆ. ಯಾವುದೇ ಆಡಂಬರವಿಲ್ಲದೆ ಸರಳ ರೀತಿಯಲ್ಲಿ ಬದುಕು ನಡೆಸುವುದು ಇಷ್ಟವಾಗುವುದು. ಕೆಲಸಗಳು ಸಲೀಸಾಗಿ ಸಾಗಲಿವೆ.

ಮಿಥುನ: ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಯೊಂದಿಗೆ ಮಾತುಕತೆ ನಡೆಸುವ ಪ್ರಯತ್ನ ಮಾಡಿ. ಗುತ್ತಿಗೆದಾರರಿಗೆ ಹೆಚ್ಚಿನ ಅವಕಾಶಗಳು ಹರಿದು ಬರಲಿದೆ. ತಂದೆಯಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನವಾದ ಪ್ರಯೋಗಗಳಲ್ಲಿ ಆಸಕ್ತಿ ಹೊಂದುವಿರಿ. ಸಕಾರಾತ್ಮಕ ಮನೋಭಾವದಿಂದ ಎಲ್ಲರ ಮನಸ್ಸನ್ನೂ ಗೆಲ್ಲುವಿರಿ. ಮಕ್ಕಳಿಗಾಗಿ ವಸ್ತುಗಳನ್ನು ಖರೀದಿಸುವಿರಿ.

ಸಿಂಹ: ದೈವಾನುಗ್ರಹದಿಂದ ಸಂತಾನ ಭಾಗ್ಯದ ಸುದ್ದಿ ಕೇಳುವಿರಿ, ಅದರ ಫಲವಾಗಿ ಮನೆಯಲ್ಲಿ ಸಂಭ್ರಮದ ವಾತಾವರಣ ಸೃಷ್ಟಿಯಾಗಲಿದೆ. ವೃತ್ತಿಯಲ್ಲಿ ಅನ್ಯರ ಸಹಾಯವಿಲ್ಲದೆ ಸ್ವ ಸಾಮರ್ಥ್ಯದಿಂದ ಕೆಲಸ ಗಿಟ್ಟಿಸಿಕೊಳ್ಳುವಿರಿ.

ಕನ್ಯಾ: ಆಸಕ್ತಿಕರ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ನಿಮ್ಮ ಹೊಸ ಯೋಜನೆಗಳಿಗೆ ಅತ್ಯಂತ ಸಹಕಾರಿಯಾಗಲಿದೆ. ಇಂದು ನಿಮ್ಮ ಭಾವನೆಗಳನ್ನು ಯಾವುದೇ ಕಾರಣಕ್ಕೂ ಇತರರ ಮುಂದೆ ಹಂಚಿಕೊಳ್ಳುವುದು ಸರಿಯಲ್ಲ.

ತುಲಾ: ಕರಾರು ಇನ್ನಿತರ ಒಪ್ಪಂದಗಳನ್ನು ಪರಿಶೀಲಿಸಿ ಒಪ್ಪಿಕೊಳ್ಳುವುದು ಉತ್ತಮ. ಸಾಂಸಾರಿಕವಾಗಿ ಎಲ್ಲರೊಡನೆ ನೇರವಾಗಿ ವ್ಯವಹರಿಸಿ. ನಿಮ್ಮ ಸಂತೋಷಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಅವಕಾಶ ಸಿಗುವುದು.

ವೃಶ್ಚಿಕ: ಈ ದಿನದ ಕಾರ್ಯ ಕಲಾಪಗಳು ನಿಮ್ಮ ಯೋಚನೆಯಂತೆ ಸುಗಮವಾಗಿ ಸಾಗುವುದು. ಹಲವು ದಿನಗಳಿಂದ ಬರಬೇಕಾಗಿರುವ ಹಣ ಸಂಜೆಯ ವೇಳೆಗೆ ಕೈ ಸೇರುವುದು. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ.

ಧನು: ಕಳೆದುಹೋದ ದಿನಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವುದರಿಂದ ನಿಮ್ಮ ಅನೇಕ ಪ್ರಶ್ನೆಗಳಿಗೆ ಉತ್ತರ ದೊರಕಲಿದೆ. ಮಗನ ದುಂದು ವೆಚ್ಚ ಅಥವಾ ದೈನಂದಿನ ಬದುಕಿನ ಬಗ್ಗೆ ಪೋಷಕರಿಗೆ ಅಸಮಾಧಾನ ಆಗುವುದು.

ಮಕರ: ಲಾಭ ನಷ್ಟಗಳ ಲೆಕ್ಕಾಚಾರದಲ್ಲೇ ಮುಳುಗಿರುವುದಕ್ಕಿಂತ ಸೌಲಭ್ಯಗಳ ಕಡೆಗೆ ಗಮನಹರಿಸಿ ಮನೆಯ ರಿಪೇರಿಯ ಬಗ್ಗೆ ಆಲೋಚಿಸಿ. ನೀವು ಯೋಚಿಸಿಯೇ ಇರದ ಸನ್ನಿವೇಶಗಳು ಎದುರಾಗಿ ಅಚ್ಚರಿಯನ್ನು ಮೂಡಿಸಲಿವೆ.

ಕುಂಭ: ವಿಭಿನ್ನ ಜನರನ್ನು ಭೇಟಿಯಾಗಲಿರುವುದರಿಂದ ವೃತ್ತಿ ಬದುಕು, ಸಾಮಾಜಿಕ ಬದುಕಿನಲ್ಲಿ ಬದಲಾವಣೆಯ ಗಾಳಿ ಬೀಸಲಿದೆ. ತುರ್ತು ವಿಷಯಗಳ ಬಗ್ಗೆ ಗಮನ ಹೆಚ್ಚಿನ ಹರಿಸಿ. ಕೌಟುಂಬಿಕ ಸಂಬಂಧಗಳು ಸದೃಢಗೊಳ್ಳಲಿವೆ.

ಮೀನ: ಕೌಟುಂಬಿಕ ವಿಚಾರದಲ್ಲಿ ಹೆಚ್ಚಿನ ಜವಾಬ್ದಾರಿಯುತ ಸ್ಥಾನದಲ್ಲಿರುವಂತೆ ಭಾಸವಾಗಲಿದೆ. ಈ ದಿನದ ಕೆಲ ಅಂಶಗಳ ಬಗ್ಗೆ ಗಂಭೀರವಾದ ನಿಲುವು ತೆಗೆದುಕೊಳ್ಳಬೇಕಾಗುವುದು. ಪ್ರವಾಸಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿದೆ.

ಪದಬಂಧ 5491
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಇದು ಮನುಷ್ಯ ಶಕ್ತಿಗೆ ಮೀರಿದುದು (5)
4.ಅಕ್ಕ ಕಲಿಸಿದ ಗಣಿತ ಸಮಸ್ಯೆ (2)
5.ಎರಡು ಹಗಲುಗಳ ನಡುವಣ ಅವಧಿ (2)
6.ನಿಯಮಿತವಾಗಿ ಕಾಣಿಸುವ ಸ್ತ್ರೀ (3)
7.ಬಾಯಿಯ ಕೊನೆ (4)
8.ಏನೂ ಬೆಳೆಯದ ಬಂಜರು ನೆಲವಿದು (5)
11.ಪದ ಹೇಳಿ ಅಧಿಕಾರ ಕಳೆದುಕೊಳ್ಳುವಿಕೆ! (4)
12.ಅಕ್ಕನ ಗಂಡನಿಂದ ಮೂಡಿರುವ ಕಲ್ಪನೆ (3)
13.ವರನಿಗೆ ಕೇಳಿದ ಧ್ವನಿ (2)
14.ಮುನಿ ಇಲ್ಲಿದ್ದಾನೆ (2)
15.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ
1.ಆವರಣವನ್ನು ತೆಗೆಯುವುದು (5)
2.ಲೆಕ್ಕ ಕಲಿಸಿದ ಹಿರಿಯ ಸಹೋದರಿ! (2)
3.ಷರಾ ಬರೆದ ಗಂಡಸು ತೊಟ್ಟಿರುವ ಉಡುಪು (3)
4.ಬೋಳುಶಿರ ಉಲ್ಟಾಪಲ್ಟಾ ಕಾಣುತ್ತಿದೆಯಲ್ಲಾ? (4)
7.ಕರದಲ್ಲಿ ಹಿಡಿದಿರುವ ಕಚ್ಚಾಪ್ರತಿ (5)
9.ಕಡಿಮೆ ಮಾತನಾಡುವವನು (4)
10.ಮಧುರವಾದ ಸ್ಮರಣೆ (5)
11.ವನದ ಬಳಿ ಬೀಸಿದ ಗಾಳಿ (3)
14.ಸಾಲ ಅಥವಾ ಹಂಗು (2)



5490ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಾಲಕ 4.ಸರ್ವಜ್ಞ
5.ವರಾತ 6.ವೀಕ್ಷಣೆ
7.ತಕಲಿ 9.ಹತ್ತಿ
10.ಆಟ 12.ಸಲುಗೆ
14.ಮನುಜ 15.ಆಪಾಕ
16.ಪ್ರಭೃತಿ 17.ರಸಕವಳ

ಮೇಲಿಂದ ಕೆಳಕ್ಕೆ:
1.ಅನಿರುದ್ಧ 2.ಪಾಶವೀವೃತ್ತಿ
3.ಕವಣೆ 4.ಸತತ
8.ಕವಾಟ 9.ಹಗಲು
10.ಆಮ್ಲಜನಕ 11.ಅಂತರಾಳ
13.ಗೆಳತಿ 14.ಮಕರ

ಸುಡೊಕು 5877

		4		5			9	
	2		1		9	6		5
	9	5		3			1	
					4	1		9
9		1	5	8			4	
4				1		3		7
			3		7			1
	6			9	1	7		
				2			6	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5876 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಬಿಸಿ ಪ್ರಧಾನಿಗೆ ಕಾಂಗ್ರೆಸ್ ನಿಂದನೆ: ಮೋದಿ

ದುರ್ಗ್ (ಪಿಟಿಐ): ಇತರ ಹಿಂದುಳಿದ ವರ್ಗಗಳಿಂದ (ಒಬಿಸಿ) ಬಂದಿರುವ ಪ್ರಧಾನಿ ಮತ್ತು ಇಡೀ ಒಬಿಸಿ ವರ್ಗವನ್ನು ಕಾಂಗ್ರೆಸ್ ನಿಂದಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಆರೋಪಿಸಿದರು.

ಛತ್ತೀಸಗಢದ ದುರ್ಗ್ ಕ್ಷೇತ್ರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಒಬಿಸಿ ಸಮುದಾಯವನ್ನು ಕಾಂಗ್ರೆಸ್ ಅವಹೇಳನ ಮಾಡಿದ್ದು ಏಕೆ? ಸಾಹು ಸಮುದಾಯದವರನ್ನು (ಛತ್ತೀಸಗಢದ ಪ್ರಭಾವಿ ಒಬಿಸಿ ಸಮುದಾಯ) ಕಳ್ಳರು ಎಂದು ಕರೆದಿದ್ದು ಏಕೆ? ಎಂದು ಅವರು ಪ್ರಶ್ನಿಸಿದರು. ಕಾಂಗ್ರೆಸ್‌ಗೆ ಬಡವರ ಕಲ್ಯಾಣದ ಬಗ್ಗೆ ಕಾಳಜಿ ಇಲ್ಲ. ಅವರ ಸ್ಥಿತಿಗತಿ ಸುಧಾರಿಸುವುದು ಬೇಕಿಲ್ಲ ಎಂದು ಆರೋಪಿಸಿದರು.

'ಮಹದೇವ್ ಆ್ಯಪ್ ಹಗರಣದಲ್ಲಿನ ಹಣ ರಾಜ್ಯದ ಬಡವರು ಮತ್ತು ಯುವಕರಿಂದ ಜೂಜುಕೋರರು ದೋಚಿರುವ ಹಣ. ಇದನ್ನು ಕಾಂಗ್ರೆಸ್ ನಾಯಕರು ತಮ್ಮ ಮನೆಗಳಲ್ಲಿ ತುಂಬಿಕೊಳ್ಳುತ್ತಿದ್ದಾರೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ' ಎಂದರು.

'ದೇಶದ ಅತಿದೊಡ್ಡ ಜಾತಿ ಎಂದರೆ 'ಬಡವರು'. ನಾನು ಅವರ ಸೇವಕ. ಆದರೆ, ಬಡವರಲ್ಲಿ ಒಡಕು ಮೂಡಿಸಲು ಕಾಂಗ್ರೆಸ್ ಸಂಚು ರೂಪಿಸುತ್ತಿದೆ ಮತ್ತು ಜಾತೀಯತೆಯ ವಿಷವನ್ನು ಪಸರಿಸುತ್ತಿದೆ' ಎಂದು ಮೋದಿ ಹೇಳಿದರು.

ರಾಹುಲ್ ಪ್ರಶ್ನೆ: 'ಬಡವರ'ನ್ನು ದೇಶದ ಏಕೈಕ ಜಾತಿ ಎಂದು ಭಾವಿಸುವ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ಏಕೆ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ವ್ಯಕ್ತಿ ಎಂದು ಗುರುತಿಸಿಕೊಳ್ಳುತ್ತಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೋದಿ ಅವರಿಗೆ ತಿರುಗೇಟು ನೀಡಿದ್ದಾರೆ.

ಛತ್ತೀಸಗಢದ ಜಗ್ದಲಪುರದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ಈ ದೇಶದಲ್ಲಿ ದಲಿತರು, ಆದಿವಾಸಿ ಮತ್ತು ಹಿಂದುಳಿದ ವರ್ಗಗಳು ಇವೆ ಎಂದು ನಮಗೆಲ್ಲ ತಿಳಿದಿದೆ. ದೇಶದಲ್ಲಿರುವುದು ಒಂದೇ ಜಾತಿ ಎಂದಾದರೆ ಮೋದಿ ಏಕೆ ತಮ್ಮ ಜಾತಿ ಹಿನ್ನೆಲೆ ಹೇಳಿಕೊಳ್ಳುತ್ತಾರೆ' ಎಂದು ಪ್ರಶ್ನಿಸಿದರು.

ಬುಡಕಟ್ಟು ಸಮುದಾಯವನ್ನು 'ಆದಿವಾಸಿ' ಎಂದು ಕರೆಯದೇ 'ವನವಾಸಿ' ಎಂದು ಕರೆಯುವ ಮೂಲಕ ಬಿಜೆಪಿಯು ಆ ಸಮುದಾಯಕ್ಕೆ ಅವಮಾನ ಮಾಡುತ್ತಿದೆ. ತಮ್ಮ ಪಕ್ಷವು ವನವಾಸಿ ಎಂಬ ಪದವನ್ನು ದೇಶದಿಂದಲೇ ಕಿತ್ತೊಗೆಯಲಿದೆ ಎಂದರು.

ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ಶನಿವಾರ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರ ಕಡೆ ಕೈಬೀಸಿದರು –ಪಿಟಿಐ ಚಿತ್ರ

'ಬಡವರಿಗೆ ಆಹಾರ ಧಾನ್ಯ ವಿತರಣೆ 5 ವರ್ಷಗಳಿಗೆ ವಿಸ್ತರಣೆ'

ರತ್ಲಾಮ್ (ಪಿಟಿಐ): ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿ ದೇಶದ 80 ಕೋಟಿ ಜನರಿಗೆ ಆಹಾರ ಧಾನ್ಯ ಒದಗಿಸುವ ಕಾರ್ಯಕ್ರಮವನ್ನು ಇನ್ನೂ ಐದು ವರ್ಷಗಳಿಗೆ ಮುಂದುವರೆಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಭರವಸೆ ನೀಡಿದರು.

ಮಧ್ಯಪ್ರದೇಶದ ರತ್ಲಾಮ್‌ನಲ್ಲಿ ಸಾರ್ವಜನಿಕ ಸಭೆ ನಡೆಸಿದ ಅವರು, 'ಕೋವಿಡ್ ಸಾಂಕ್ರಾಮಿಕದ ವೇಳೆ ತಮ್ಮ ಮಕ್ಕಳಿಗೆ ಆಹಾರ ಒದಗಿಸುವುದು ಬಡವರಿಗೆ ದೊಡ್ಡ ಸವಾಲಾಗಿತ್ತು. ಯಾರೂ ಹಸಿದು ಮಲಗಬಾರದು ಎಂದು ನಾನು ಈ ಯೋಜನೆ ಜಾರಿಗೆ ತಂದೆ' ಎಂದು ಹೇಳಿದರು.

ಈ ಯೋಜನೆ ಅಡಿ ಬಡ ಕುಟುಂಬಗಳಿಗೆ ಪ್ರತಿ ತಿಂಗಳು 5 ಕೆ.ಜಿ. ಆಹಾರ ಧಾನ್ಯ ವಿತರಿಸಲಾಗುತ್ತದೆ.

ಮಧ್ಯಪ್ರದೇಶ ಸರ್ಕಾರವು ಮಹಿಳೆಯರಿಗಾಗಿ ರೂಪಿಸಿರುವ ಪ್ರಮುಖ ಯೋಜನೆಗಳಾದ ಲಾಡ್ಲಿ ಬೆಹನಾ ಮತ್ತು ಲಾಡ್ಲಿ ಲಕ್ಷ್ಮಿ ಯೋಜನೆಗಳನ್ನು ಇಡೀ ದೇಶವೇ ಕೊಂಡಾಡುತ್ತಿದೆ ಎಂದರು.

'ಮಧ್ಯಪ್ರದೇಶದಲ್ಲಿ ಮುಖ್ಯಮಂತ್ರಿ ಖುರ್ಚಿಗಾಗಿ ಹೋರಾಟ ನಡೆಯುತ್ತಿಲ್ಲ. ಬದಲಾಗಿ, ಮುಂದಿನ ದಿನಗಳಲ್ಲಿ ರಾಜ್ಯ ಕಾಂಗ್ರೆಸ್ ನಾಯಕತ್ವವು ಯಾರ ಮಕ್ಕಳ ಕೈಲಿರಬೇಕು ಎಂಬ ನಿಟ್ಟಿನಲ್ಲಿ ಹೋರಾಟ ನಡೆಯುತ್ತಿದೆ' ಎಂದರು. ಕಾಂಗ್ರೆಸ್ ವಂಶಾಡಳಿತ ರಾಜಕೀಯ ಮಾಡುತ್ತಿದೆ. ಕಾಂಗ್ರೆಸ್ ನಾಯಕರ ಮಾತುಗಳು ಮತ್ತು ಭರವಸೆಗಳು ಸಿನಿಮೀಯವಾಗಿವೆ. ಅವರ ವ್ಯಕ್ತಿತ್ವವೂ ಸಿನಿಮೀಯವಾಗಿದೆ. ಹೀಗಾಗಿ ಚುನಾವಣೆಯ ಸನ್ನಿವೇಶಗಳೂ ಸಿನಿಮೀಯವಾಗಿವೆ ಎಂದರು.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ ಮತ್ತು ಪಕ್ಷದ ರಾಜ್ಯಸಭೆ ಸದಸ್ಯ ದಿಗ್ವಿಜಯ್ ಸಿಂಗ್ ಅವರ ನಡುವಿನ ತಿಕ್ಕಾಟವನ್ನು ಉಲ್ಲೇಖಿಸಿ ವ್ಯಂಗ್ಯವಾಡಿದ ಅವರು, 'ಕಾಂಗ್ರೆಸ್‌ನ ಇಬ್ಬರು ನಾಯಕರ ಮಧ್ಯೆ ಬಟ್ಟೆ ಹರಿದುಕೊಳ್ಳುವ ಸ್ಪರ್ಧೆ ನಡೆಯುತ್ತಿದೆ. ಇದು ಕೇವಲ ಟ್ರೇಲರ್. ಚುನಾವಣೆಯಲ್ಲಿ ಬಿಜೆಪಿ ಜಯಸಾಧಿಸಿದ ಬಳಿಕ ಕಾಂಗ್ರೆಸ್‌ನ ಬಂಡವಾಳ ಬಯಲಾಗಲಿದೆ. ಆ ಪಕ್ಷದ ಆಂತರಿಕ ಕಚ್ಚಾಟ ಜನರೆದುರು ಬಹಿರಂಗವಾಗಲಿದೆ' ಎಂದರು. ಕಾಂಗ್ರೆಸ್‌ಗೆ ಅವಕಾಶ ಸಿಕ್ಕರೆ ಅವರು ಸಾರ್ವಜನಿಕರ ಬಟ್ಟೆಯನ್ನೂ ಹರಿಯುತ್ತಾರೆ ಎಂದು ಕುಹಕವಾಡಿದರು.

ಛತ್ತೀಸಗಢ ಬಾಲಕಿಗೆ ಪ್ರಧಾನಿ ಮೋದಿ ಪತ್ರ

ಪ್ರಧಾನಿ ನರೇಂದ್ರ ಮೋದಿ ಅವರು ಛತ್ತೀಸಗಢದ ಆಕಾಂಕ್ಷಾ ಎಂಬ ಬಾಲಕಿಗೆ ಪತ್ರ ಬರೆದಿದ್ದಾರೆ. 'ಹೆಣ್ಣು ಮಕ್ಕಳು ಈ ದೇಶದ ಉಜ್ವಲ ಭವಿಷ್ಯ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಛತ್ತೀಸಗಢದ ಕಾಂಕೇರ್‌ನಲ್ಲಿ ಗುರುವಾರ ನಡೆದ ಬಿಜೆಪಿಯ ಸಾರ್ವಜನಿಕ ಸಭೆಯ ವೇಳೆ ಆಕಾಂಕ್ಷಾ ತಾನು ರಚಿಸಿದ್ದ ಮೋದಿ ಅವರ ರೇಖಾಚಿತ್ರವನ್ನು ಅವರಿಗೆ ನೀಡಿದ್ದಳು.

ಪತ್ರ ಬರೆದು ಅವಳಿಗೆ ಧನ್ಯವಾದ ಹೇಳಿರುವ ಮೋದಿ, 'ನಿನ್ನಂಥ ಯುವ ಸ್ನೇಹಿತರು ಮತ್ತು ದೇಶದ ದೃಷ್ಟಿಯಿಂದ ಮುಂದಿನ 25 ವರ್ಷಗಳು ಮಹತ್ವ ಪಡೆದಿದೆ. ಈ ಕಾಲಘಟ್ಟದಲ್ಲಿ ದೇಶದ ಯುವಜನರು ಅದರಲ್ಲೂ ನಿನ್ನಂಥ ಹೆಣ್ಣು ಮಕ್ಕಳು ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವುದಲ್ಲದೇ, ದೇಶಕ್ಕೆ ಹೊಸ ದಿಕ್ಕನ್ನು ತೋರುತ್ತೀರಿ' ಎಂದಿದ್ದಾರೆ.

ಉತ್ತಮ ರೀತಿಯಲ್ಲಿ ವ್ಯಾಸಂಗ ನಡೆಸಿ ಕುಟುಂಬಕ್ಕೆ ಮತ್ತು ದೇಶಕ್ಕೆ ಕೀರ್ತಿ ತರುವಂತೆ ಆಕಾಂಕ್ಷಾಗೆ ಹಾರೈಸಿದ್ದಾರೆ.

ನುಡಿ-ಕಿಡಿ

ದೆಹಲಿ ಅಬಕಾರಿ ಹಗರಣದಲ್ಲಿ ಕವಿತಾಜಿ ಹೆಸರು ನಮೂದಾಗಿದೆ. ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮತ್ತು ರಾಜ್ಯಸಭಾ ಸದಸ್ಯರನ್ನೇ (ಮನೀಶ್ ಸಿಸೋಡಿಯಾ ಮತ್ತು ಸಂಜಯ್‌ಸಿಂಗ್) ಬಿಟ್ಟಿಲ್ಲ. ಮುಖ್ಯಮಂತ್ರಿಗೂ (ಕೇಜ್ರಿವಾಲ್) ನೋಟಿಸ್ ನೀಡಲಾಗಿದೆ. ಕವಿತಾಗೆ ಕೂಡ ಇಂತಹ ದಿನಗಳು ದೂರವಿಲ್ಲ.

ಅನುರಾಗ್ ಠಾಕೂರ್, ಕೇಂದ್ರ ವಾರ್ತಾ ಸಚಿವ

ಯಾವುದೇ ಭಾಷೆ, ಧರ್ಮ, ಜಾತಿ, ಮತ, ಪ್ರದೇಶ ಮತ್ತು ಸಂಸ್ಕೃತಿ ಇದ್ದರೂ ಎಲ್ಲರೂ ಸಮಾನರು ಎಂಬ ಭಾರತದ ಚಿಂತನೆಯು ನಮ್ಮ ಹಕ್ಕು ಕೂಡ. ಸಂವಿಧಾನದಲ್ಲಿಯೂ ಇದನ್ನು ಹೇಳಲಾಗಿದೆ. ಆದರೆ ಈಗ ಇದು ಅಪಾಯದಲ್ಲಿದೆ. ಅನೇಕ ಕಾರಣಗಳಿಗಾಗಿ ವಿಧಾನಸಭೆ ಚುನಾವಣೆಗಳು ಲೋಕಸಭೆ ಚುನಾವಣೆಗೆ 'ಅಂತಿಮ ತಾಲೀಮು' ಇದ್ದಂತೆ ಆಗಿದೆ.

ಶಶಿ ತರೂರು, ಕಾಂಗ್ರೆಸ್ ನಾಯಕ

ನಾನು ಇದನ್ನು ಎಲ್ಲರಿಗೂ ಸ್ಪಷ್ಟಪಡಿಸಬೇಕಿದೆ. ಎಲ್ಲಿಗೂ ನಾನು ಹೋಗುವುದಿಲ್ಲ. ಝಾಲರಾಪಾಟಣ್ ಕ್ಷೇತ್ರದಿಂದ ಸ್ಪರ್ಧಿಸಲು ಈಗಷ್ಟೆ ಝಾಲಾವಾಡ್‌ನಲ್ಲಿ ನಾಮಪತ್ರ ಸಲ್ಲಿಸಿದ್ದೇನೆ. ಹಾಗಾಗಿ ನನ್ನ ನಿವೃತ್ತಿಯ ಬಗ್ಗೆ ಆಲೋಚಿಸಬೇಡಿ.

ವಸುಂಧರಾ ರಾಜೇ, ಬಿಜೆಪಿ ನಾಯಕಿ

ಚುನಾವಣಾ ಕಣದಲ್ಲಿ

- **100 ನಾಮಪತ್ರ:** ತೆಲಂಗಾಣ ವಿಧಾನಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಮೊದಲ ದಿನ ಒಟ್ಟು 100 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಈ ಪೈಕಿ ತೆಲಂಗಾಣ ಪಿಸಿಸಿ ಅಧ್ಯಕ್ಷ ರೇವಂತ್ ರೆಡ್ಡಿ ಮತ್ತು ಟಿ. ನಾಗೇಶ್ವರ ರಾವ್ ಪ್ರಮುಖರು. ಮತದಾನ ನವೆಂಬರ್ 30ರಂದು ನಡೆಯಲಿದೆ.
- **ಉಚ್ಚಾಟನೆ:** ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಕಣಕ್ಕಿಳಿದಿರುವ 39 ನಾಯಕರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳವರೆಗೆ ಉಚ್ಚಾಟಿಸಲಾಗಿದೆ ಎಂದು ಕಾಂಗ್ರೆಸ್‌ನ ರಾಜ್ಯ ಘಟಕದ ಉಪಾಧ್ಯಕ್ಷ ರಾಜೀವ್ ಸಿಂಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.
- **ತನಿಖೆಗೆ ಒತ್ತಾಯ:** ಕಾಲೇಶ್ವರ ಏತ ನೀರಾವರಿ ಯೋಜನೆಯ ಬ್ಯಾರೇಜ್‌ಗಳು ಹಾನಿಗೊಳಗಾಗಿರುವ ಬಗ್ಗೆ ಬೇರೆ ರಾಜ್ಯಗಳ ತಜ್ಞರ ಸಮಿತಿಯಿಂದ ತನಿಖೆ ನಡೆಸಬೇಕು ಎಂದು ತೆಲಂಗಾಣ ಪಿಸಿಸಿ ಅಧ್ಯಕ್ಷ ರೇವಂತ್ ರೆಡ್ಡಿ ಒತ್ತಾಯಿಸಿದ್ದಾರೆ.
- **ಕನ್ಹಯ್ಯ ಲಾಲ್ ಹತ್ಯೆ ಮುನ್ನೆಲೆಗೆ:** ಟೇಲರ್ ಕನ್ಹಯ್ಯ ಲಾಲ್ ಹತ್ಯೆಯು ಈಗ ರಾಜಕೀಯ ವಿಷಯವಾಗಿ ಬದಲಾಗಿದ್ದು, ತಮ್ಮ ತಂದೆಯ ಹಂತಕರಿಗೆ ಶಿಕ್ಷೆ ವಿಧಿಸುವವರೆಗೆ ಚಪ್ಪಲಿ ಹಾಕುವುದಿಲ್ಲ, ಕೂದಲು ಕತ್ತರಿಸುವುದಿಲ್ಲ ಎಂದು ಅವರ ಮಗ ಶಪಥಗೈದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಇಸ್ಲಾಂ ವಿರೋಧಿ ಪೋಸ್ಟೊಂದಕ್ಕೆ ಪ್ರತಿಕ್ರಿಯಿಸಿದ್ದ ಕಾರಣ ಮೂಲಭೂತವಾದಿಗಳು ಅವರನ್ನು ಕಳೆದ ವರ್ಷ ಹತ್ಯೆಗೈದಿದ್ದರು ಎನ್ನಲಾಗಿದೆ.

'ಇಂಡಿಯಾ' ಮೈತ್ರಿಕೂಟವು ಕಾಂಗ್ರೆಸ್‌ಗೆ ಮಹತ್ವದ್ದಾಗಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇಂಡಿಯಾ' ಮೈತ್ರಿಕೂಟವು ಕಾಂಗ್ರೆಸ್‌ಗೆ ಮಹತ್ವದ್ದಾಗಿದೆ. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಹೋರಾಡುವ ದಿಸೆಯಲ್ಲಿ ಮೈತ್ರಿಕೂಟವನ್ನು ಮುನ್ನಡೆಸಿಕೊಂಡು ಹೋಗಲು ಕಾಂಗ್ರೆಸ್ ಬದ್ಧವಾಗಿದೆ ಎಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಮೈತ್ರಿಕೂಟದ ಕಡೆಗೆ ಕಾಂಗ್ರೆಸ್ ಗಮನ ಕಡಿಮೆಯಾಗುತ್ತಿದೆ ಎಂದು ನಿತೀಶ್ ಹೇಳಿದ್ದರು. ನಿತೀಶ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡಿರುವ ಖರ್ಗೆ ಅವರು, ವಿಧಾನಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ಇದೆ. ಕಾಂಗ್ರೆಸ್ ಸದ್ಯ ವಿಧಾನಸಭೆ ಚುನಾವಣೆ ಮೇಲೆ ದೃಷ್ಟಿ ನೆಟ್ಟಿದೆ ಎಂದಿದ್ದಾರೆ.

'ಬಿಜೆಪಿ ವಿರುದ್ಧ ಕಾಂಗ್ರೆಸ್ ತನ್ನೆಲ್ಲಾ ಶಕ್ತಿ ಒಗ್ಗೂಡಿಸಿ ಹೋರಾಡಲಿ. ಆದರೆ ಮುಂದಿರುವ ದೊಡ್ಡ ಗುರಿಯಿಂದ ವಿಮುಖವಾಗದೇ ಇರಲಿ' ಎಂದು ನಿತೀಶ್ ಅವರು ಖರ್ಗೆ ಅವರಿಗೆ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಇಂಡಿಯಾ' ಮೈತ್ರಿಕೂಟದ ಸದಸ್ಯ ಪಕ್ಷಗಳಿಗೆ ಕಾಂಗ್ರೆಸ್ ಬಗ್ಗೆ ಇರುವ ಅಸಮಾಧಾನವನ್ನೂ ಖರ್ಗೆ ಅವರಿಗೆ ನಿತೀಶ್ ಮನವರಿಕೆ ಮಾಡಿಕೊಟ್ಟಿದ್ದಾರೆ. ವಿಧಾನಸಭೆ ಚುನಾವಣೆಗಳ ವಿಚಾರದಲ್ಲಿ ಕಾಂಗ್ರೆಸ್ ನಡೆದುಕೊಂಡ ರೀತಿಯು ಕೆಲ ತಿಂಗಳುಗಳಿಂದ ಮೈತ್ರಿಕೂಟ ಪಡೆದುಕೊಂಡಿದ್ದ ವೇಗಕ್ಕೆ ಹಿನ್ನಡೆಯಾಗುವಂತಿದೆ ಎಂದಿದ್ದಾರೆ.

ತೆಲಂಗಾಣಕ್ಕೆ ರಾಜ್ಯ ನಾಯಕರು

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಕಾಂಗ್ರೆಸ್ ಶನಿವಾರ ಕರ್ನಾಟಕದ 58 ಹಿರಿಯ ನಾಯಕರು, ಹತ್ತು ಸಚಿವರು, 35 ಶಾಸಕರು ಮತ್ತು ವಿಧಾನ ಪರಿಷತ್‌ನ 13 ಸದಸ್ಯರನ್ನು ನೇಮಿಸಿದೆ.

ಕಳೆದ ಒಂದು ವಾರದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚುನಾವಣೆ ನಡೆಯಲಿರುವ ರಾಜ್ಯಗಳ ಕೆಲವು ಭಾಗಗಳಲ್ಲಿ ಪ್ರಚಾರ ನಡೆಸಿದ್ದಾರೆ. ಸಚಿವರಾದ ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಎಂ.ಸಿ.ಸುಧಾಕರ್, ಶರಣ ಪ್ರಕಾಶ ಪಾಟೀಲ್, ಕೆ.ಎಚ್.ಮುನಿಯಪ್ಪ, ಕೃಷ್ಣ ಬೈರೇಗೌಡ, ಶಿವರಾಜ್ ಎಸ್.ತಂಗಡಗಿ, ಜಮೀರ್ ಅಹ್ಮದ್ ಖಾನ್, ಈಶ್ವರ ಖಂಡ್ರೆ, ಬಿ.ನಾಗೇಂದ್ರ ಅವರು ಎಐಸಿಸಿ ಕ್ಲಸ್ಟರ್ ಉಸ್ತುವಾರಿಗಳಾಗಿದ್ದಾರೆ.

ಮಹದೇವ್ ಆ್ಯಪ್ ಪ್ರವರ್ತಕರಿಂದ ಭೂಪೇಶ್‌ಗೆ ₹508 ಕೋಟಿ: ಆರೋಪ

ಕಾಂಗ್ರೆಸ್–ಬಿಜೆಪಿ ನಾಯಕರ ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಬೆಟ್ಟಿಂಗ್ ಆ್ಯಪ್ ಕಂಪನಿಯಿಂದ ₹508 ಕೋಟಿ ಪಡೆದಿದ್ದಾರೆ ಎಂಬ ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿಕೆಯು ಶನಿವಾರ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ವಾಕ್ಸಮರಕ್ಕೆ ಕಾರಣವಾಗಿದೆ. ಇದು ಸಿ.ಎಂ ವರ್ಚಸ್ಸು ಹಾಳು ಮಾಡುವ ಪಿತೂರಿ ಎಂದು ಕಾಂಗ್ರೆಸ್ ಟೀಕಿಸಿದರೆ, ಹವಾಲಾ ಮೂಲಕ ಸಾಗಿಸಲಾದ ಅಕ್ರಮ ಹಣವನ್ನು ಚುನಾವಣಾ ವೆಚ್ಚಗಳಿಗೆ ಬಳಸಲಾಗುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಛತ್ತೀಸಗಢದಲ್ಲಿ ಮೊದಲ ಹಂತದ ಮತದಾನಕ್ಕೆ ಕೇವಲ ನಾಲ್ಕು ದಿನ ಇರುವಾಗ ಬಘೇಲ್ ಕುರಿತು ಇ.ಡಿ ನೀಡಿರುವ ಹೇಳಿಕೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ನಾಯಕರು ವಾಕ್ಸಮರದಲ್ಲಿ ತೊಡಗಿದ್ದಾರೆ.

ತನಿಖಾ ಸಂಸ್ಥೆ ವಶದಲ್ಲಿರುವ 'ಕ್ಯಾಶ್ ಕೊರಿಯರ್' ನ ಹೇಳಿಕೆ ಕುರಿತು ತನಿಖೆ ನಡೆಸದೆ ಬಘೇಲ್ ಹಣ ಪಡೆದಿದ್ದಾರೆ ಎಂಬ ಇ.ಡಿ. ಹೇಳಿಕೆ ವಿರುದ್ಧ ಕಾಂಗ್ರೆಸ್ ಸೋಮವಾರ ಚುನಾವಣಾ ಆಯೋಗವನ್ನು ಭೇಟಿ ಮಾಡುವ ಸಾಧ್ಯತೆಯಿದೆ.

ಜನರನ್ನು ಲೂಟಿ ಮಾಡುವ ಮೂಲಕ ದುಬೈನಿಂದ ಬಂದ ಹಣವನ್ನು ಕಾಂಗ್ರೆಸ್ ಚುನಾವಣೆಗೆ ಬಳಸಿದೆ ಎಂಬುದಕ್ಕೆ ಪುರಾವೆಗಳು ಸಿಕ್ಕಿವೆ ಎಂದು ಬಿಜೆಪಿ ಹೇಳಿದರೆ, ಕಳೆದ 18 ತಿಂಗಳಲ್ಲಿ ರಾಜ್ಯ ಪೊಲೀಸರು 450 ಜನರನ್ನು ಬಂಧಿಸಿದ್ದಾರೆ ಮತ್ತು ಆಗಸ್ಟ್‌ನಲ್ಲಿ ಬಘೇಲ್ ಒತ್ತಾಯಿಸಿದ್ದರೂ ಕೇಂದ್ರವು ಬೆಟ್ಟಿಂಗ್ ಆ್ಯಪ್ ಪ್ರವರ್ತಕರ ವಿರುದ್ಧ ಲುಕ್ ಔಟ್ ನೋಟಿಸ್ ಏಕೆ ಹೊರಡಿಸುತ್ತಿಲ್ಲ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಛತ್ತೀಸಗಢದ ದುರ್ಗ್‌ನಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಮಾತನಾಡಿದ ಮೋದಿ, 'ಹಣವು ಜೂಜುಕೋರರಿಗೆ ಸೇರಿದೆ ಎಂದು ಜನರು ಹೇಳುತ್ತಾರೆ. ಲೂಟಿ ಹಣ ಕಾಂಗ್ರೆಸ್ ನಾಯಕರ ಮನೆ ತುಂಬುತ್ತಿದೆ. ದುಬೈನಲ್ಲಿ ಇರುವವರೊಂದಿಗೆ ಯಾವ ಸಂಬಂಧವಿದೆ ಎಂದು ಮುಖ್ಯಮಂತ್ರಿ ಜನರಿಗೆ ತಿಳಿಸಬೇಕು' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಬಿಜೆಪಿಯ ಸೋಲು ಖಚಿತವಾಗುತ್ತಿದ್ದಂತೆ ಇ.ಡಿಯನ್ನು ಬಳಸಲಾಗುತ್ತಿದೆ. ಮುಖ್ಯಮಂತ್ರಿ ವರ್ಚಸ್ಸಿಗೆ ಧಕ್ಕೆ ತರುವುದು ಇದರ ಉದ್ದೇಶ. ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.

ಕಾಂಗ್ರೆಸ್ ನಾಯಕ ಅಭಿಷೇಕ್ ಸಿಂಗ್ವಿ, ಛತ್ತೀಸಗಢ ಪೊಲೀಸರು ಕಳೆದ 18 ತಿಂಗಳಲ್ಲಿ ತನಿಖೆ ನಡೆಸಿ, 449 ಜನರನ್ನು ಬಂಧಿಸಿ, ₹16.41 ಕೋಟಿ ನಗದು, ಬ್ಯಾಂಕ್ ಖಾತೆ, ₹1.5 ಕೋಟಿ ಆಸ್ತಿ, 191 ಲ್ಯಾಪ್‌ಟಾಪ್, 865 ಮೊಬೈಲ್ ಫೋನ್ ಮತ್ತು 200 ಎಟಿಎಂ ಕಾರ್ಡ್‌ಗಳನ್ನು ಜಪ್ತಿ ಮಾಡಿದ್ದಾರೆ ಎಂದರು.

ಪ್ರವರ್ತಕರನ್ನು ಬಂಧಿಸಿಲ್ಲ ಏಕೆ: ಬಘೇಲ್

ರಾಯಪುರ (ಪಿಟಿಐ): ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರವರ್ತಕರ ವಿರುದ್ಧ ಏಕೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ರಾಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಟ್ಟಿಂಗ್ ಆ್ಯಪ್‌ನಲ್ಲಿ ಹಣ ಅಕ್ರಮ ವರ್ಗಾವಣೆ ತನಿಖೆಯ ಬಗ್ಗೆ ಜಾರಿ ನಿರ್ದೇಶನಾಲಯ ಶುಕ್ರವಾರ ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯನ್ನು ಬಿಜೆಪಿಯ ಎರಡನೇ ಚುನಾವಣಾ ಪ್ರಣಾಳಿಕೆ ಎಂದು ಬಣ್ಣಿಸಿದರು.

'ಈ (ಬಿಜೆಪಿ) ಜನರು ನೇರವಾಗಿ ಹೋರಾಡಲು ಸಾಧ್ಯವಿಲ್ಲ. ಆದ್ದರಿಂದ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಇ.ಡಿ ಮತ್ತು ಐ.ಟಿ ಆಶ್ರಯಿಸಿದ್ದಾರೆ. ಶುಕ್ರವಾರ ಬಿಜೆಪಿಯ ಎರಡು ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಲಾಗಿದೆ. ಮೊದಲನೆಯದು ಬಿಜೆಪಿಯ ಲೆಟರ್‌ಹೆಡ್‌ನಲ್ಲಿ ಹಿಂದಿಯಲ್ಲಿದ್ದರೆ, ಇನ್ನೊಂದು ಇ.ಡಿಯ ಲೆಟರ್‌ಹೆಡ್ ಇಂಗ್ಲಿಷ್‌ನಲ್ಲಿತ್ತು' ಎಂದು ಬೆಟ್ಟಿಂಗ್ ಆ್ಯಪ್ ಪ್ರಕರಣದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದರು. ಮಹದೇವ್ ಆ್ಯಪ್ ಪ್ರವರ್ತಕರ ವಿರುದ್ಧ ಲುಕ್‌ಔಟ್ ಹೊರಡಿಸಲಾಗಿದ್ದರೂ, ಅವರನ್ನು ಬಂಧಿಸಲಾಗಿಲ್ಲ. ಯಾವುದೇ ತನಿಖೆ ನಡೆಸದೆ ನನ್ನ ವಿರುದ್ಧ ಆರೋಪಗಳನ್ನು ಮಾಡಲಾಗಿದೆ. ಚುನಾವಣಾ ಆಯೋಗ ಏನು ಮಾಡುತ್ತಿದೆ? ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

ಭೂಪೇಶ್ ಬಘೇಲ್ ಸರ್ಕಾರವು ಜನರನ್ನು ಲೂಟಿ ಮಾಡಲು ಯಾವುದೇ ಅವಕಾಶವನ್ನು ಬಿಡುತ್ತಿಲ್ಲ. ಅದು ಮಹದೇವ್ (ಭಗವಾನ್ ಶಿವ) ಹೆಸರನ್ನು ಸಹ ಬಿಡಲಿಲ್ಲ.

ನರೇಂದ್ರ ಮೋದಿ, ಪ್ರಧಾನಿ

ಇ.ಡಿ ಕ್ರಮಗಳು ಕಾರ್ಯಕರ್ತರ ನೈತಿಕ ಸ್ಥೈರ್ಯ ಕುಗ್ಗಿಸುವ ಗುರಿ ಹೊಂದಿವೆ. ಬಿಜೆಪಿ ಭಯ ಹುಟ್ಟಿಸಲು ಪ್ರಯತ್ನಿಸುತ್ತಿದೆ. ಕಾಂಗ್ರೆಸ್ ಅನ್ನು ದುರ್ಬಲಗೊಳಿಸಲು ಮೋದಿ ಬಯಸಿದ್ದಾರೆ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಛತ್ತೀಸಗಢ: ನಕ್ಸಲರಿಂದ ಬಿಜೆಪಿ ನಾಯಕನ ಹತ್ಯೆ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ಶನಿವಾರ ನಕ್ಸಲರು ಬಿಜೆಪಿ ನಾಯಕರೊಬ್ಬರನ್ನು ಹತ್ಯೆ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆ ಪ್ರಚಾರದ ವೇಳೆ ಬಿಜೆಪಿಯ ನಾರಾಯಣಪುರ ಜಿಲ್ಲಾ ಘಟಕದ ಉಪಾಧ್ಯಕ್ಷ ರತನ್ ದುಬೆ ಅವರನ್ನು ಕೌಶಲನಗರ ಗ್ರಾಮದ ಮಾರುಕಟ್ಟೆಯಲ್ಲಿ ಹರಿತವಾದ ಆಯುಧದಿಂದ ಕೊಚ್ಚಿ ಕೊಲೆ ಮಾಡಲಾಗಿದೆ. ಪೊಲೀಸರು ಸ್ಥಳಕ್ಕೆ ಧಾವಿಸಿದ್ದು, ಆರೋಪಿಗಳನ್ನು ಬಂಧಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸಂತಾಪ ಸೂಚಿಸಿರುವ ಬಿಜೆಪಿ ನಾಯಕ ಓಂ ಮಾಥುರ್, 'ರತನ್ ದುಬೆ ಅವರನ್ನು ಪ್ರಚಾರದ ಸಮಯದಲ್ಲಿ ನಕ್ಸಲರು ಕ್ರೂರವಾಗಿ ಹತ್ಯೆ ಮಾಡಿದ್ದಾರೆ. ಈ ಹೇಡಿತನದ ಘಟನೆಯನ್ನು ಇಡೀ ಪಕ್ಷ ಖಂಡಿಸುತ್ತದೆ' ಎಂದು ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಚುನಾವಣೆಗೆ ಮುನ್ನ ತನ್ನ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು ಹತ್ಯೆ ಮಾಡಲಾಗುತ್ತಿದೆ ಎಂದು ಪ್ರತಿಪಕ್ಷ ಬಿಜೆಪಿ ಆರೋಪ ಮಾಡಿದ ಸಂದರ್ಭದಲ್ಲೇ ಈ ಘಟನೆ ನಡೆದಿದೆ. ನ.7 ರಂದು ಚುನಾವಣೆ ನಡೆಯ ಲಿರುವ 20 ವಿಧಾನಸಭಾ ಸ್ಥಾನಗಳಲ್ಲಿ ನಾರಾಯಣಪುರವೂ ಒಂದು. 90 ಸದಸ್ಯರ ವಿಧಾನಸಭೆಗೆ 2ನೇ ಹಂತದ ಚುನಾವಣೆ ನ. 17 ರಂದು ನಡೆಯಲಿದೆ.

ನಾಳೆಯಿಂದ ಮತ್ತೆ ಚುನಾವಣಾ ಬಾಂಡ್ ಮಾರಾಟಕ್ಕೆ ಅವಕಾಶ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವ ಬೆನ್ನಲ್ಲೇ ಕೇಂದ್ರ ಸರ್ಕಾರ 29ನೇ ಆವೃತ್ತಿಯ ಚುನಾವಣಾ ಬಾಂಡ್‌ಗಳ ಮಾರಾಟಕ್ಕೆ ಶನಿವಾರ ಅನುಮೋದನೆ ನೀಡಿದ್ದು, ಇದೇ ಸೋಮವಾರದಿಂದ ಈ ಪ್ರಕ್ರಿಯೆ ಆರಂಭವಾಗಲಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಚುನಾವಣಾ ಬಾಂಡ್‌ಗಳನ್ನು ನೀಡುವ ಅಧಿಕೃತ ಬ್ಯಾಂಕ್ ಆಗಿದ್ದು, ಇದರ 29 ಅಧಿಕೃತ ಶಾಖೆಗಳಲ್ಲಿ ಇದೇ 6ರಿಂದ 20ರವರೆಗೆ ಮಾರಾಟ ನಡೆಯಲಿದೆ ಎಂದು ಹಣಕಾಸು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಖರೀದಿಸಿದ 15 ದಿನಗಳವರೆಗೆ ಮಾತ್ರ ಚುನಾವಣಾ ಬಾಂಡ್‌ಗಳು ಮಾನ್ಯವಾಗಿರುತ್ತವೆ. ಅವಧಿ ಮುಗಿದ ಬಳಿಕ ಬಾಂಡ್‌ಗಳನ್ನು ಠೇವಣಿ ಮಾಡಿದರೆ ಯಾವುದೇ ರಾಜಕೀಯ ಪಕ್ಷಕ್ಕೆ ಹಣ ಪಾವತಿ ಆಗುವುದಿಲ್ಲ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಚುನಾವಣಾ ಬಾಂಡ್‌ನ ಮೊದಲ ಆವೃತ್ತಿಯ ಮಾರಾಟವು 2018ರ ಮಾರ್ಚ್‌ನಲ್ಲಿ ನಡೆದಿತ್ತು. ಭಾರತದ ಪೌರರಿಗೆ ಹಾಗೂ ಸಂಸ್ಥೆಗಳಿಗೆ ಇವುಗಳನ್ನು ಖರೀದಿ ಮಾಡಲು ಅವಕಾಶವಿದೆ. ರಾಜಕೀಯ ಪಕ್ಷಗಳಿಗೆ ಸಿಗುವ ದೇಣಿಗೆಯನ್ನು ಪಾರದರ್ಶಕವಾಗಿಸುವ ಸಲುವಾಗಿ ನಗದು ದೇಣಿಗೆಯ ಬದಲಾಗಿ ಚುನಾವಣಾ ಬಾಂಡ್‌ಗಳನ್ನು ಪರಿಚಯಿಸಲಾಗಿದೆ. ಮಿಜೋರಾಂ, ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢ ಮತ್ತು ತೆಲಂಗಾಣ ರಾಜ್ಯಗಳಲ್ಲಿ ನ. 7ರಿಂದ 30ರವರೆಗೆ ಚುನಾವಣೆ ನಡೆಯಲಿದೆ. ಮತ ಎಣಿಕೆ ಡಿ. 3ರಂದು ನಡೆಯಲಿದೆ.

ಆತ್ಮಕಥೆ ಪ್ರಕಟ ನಿರ್ಧಾರ ಕೈಬಿಟ್ಟ ಸೋಮನಾಥ್

ತಿರುವನಂತಪುರ (ಪಿಟಿಐ): 'ಆತ್ಮಕಥೆ ಪ್ರಕಟಿಸುವ ನಿರ್ಧಾರವನ್ನು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಕೈಬಿಟ್ಟಿದ್ದಾರೆ. ಹಿಂದಿನ ಅಧ್ಯಕ್ಷ ಕೆ.ಶಿವನ್ ಕುರಿತು ಆತ್ಮಕಥೆಯಲ್ಲಿ ಉಲ್ಲೇಖಿಸಿದ್ದ ಕೆಲಅಂಶಗಳು ವಿವಾದಾಸ್ಪದವಾದ್ದರಿಂದ ಈ ನಿರ್ಧಾರ ಕೈಗೊಂಡಿದ್ದಾರೆ.

'ನಿಲಾವ್ ಕುಡಿಚ್ಚ ಸಿಂಹಗಳ್' (ಬೆಳದಿಂಗಳು ಕುಡಿದ ಸಿಂಹಗಳು) ಶೀರ್ಷಿಕೆಯಡಿ ಪ್ರಕಟಿಸಲು ಉದ್ದೇಶಿಸಿದ್ದ ಆತ್ಮಕಥೆಯನ್ನು ಪ್ರಕಟಿಸುವ ತೀರ್ಮಾನವನ್ನು ಕೈಬಿಟ್ಟಿದ್ದೇನೆ' ಎಂದು ಸೋಮನಾಥ್ ಅವರು ದೃಢಪಡಿಸಿದರು.

ಸುದ್ದಿಸಂಸ್ಥೆಯ ಜೊತೆಗೆ ಮಾತನಾಡಿದ ಅವರು, 'ಯಾವುದೇ ಒಂದು ಸಂಸ್ಥೆಯಲ್ಲಿ ಉನ್ನತ ಸ್ಥಾನವನ್ನು ತಲುಪಲು ಪ್ರತಿಯೊಬ್ಬರು ಸವಾಲಿನ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಆ ನಿರ್ದಿಷ್ಟ ಸ್ಥಾನಕ್ಕೆ ಹಲವರು ಅರ್ಹರಿರಬಹುದು. ನಾನು ಆ ಅಂಶವನ್ನೇ ಆತ್ಮಕಥೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲು ಬಯಸಿದ್ದೆ. ವ್ಯಕ್ತಿಗತವಾಗಿ ಯಾರನ್ನೂ ಗುರಿಯಾಗಿಸಿ ಅಭಿಪ್ರಾಯವನ್ನು ದಾಖಲಿಸಿರಲಿಲ್ಲ' ಎಂದು ಸ್ಪಷ್ಟಪಡಿಸಿದರು.

ಚಂದ್ರಯಾನ–2 ಯೋಜನೆಯ ವೈಫಲ್ಯದ ನಿರ್ಧಾರ ಪ್ರಕಟಿಸುವಾಗ ಸ್ಪಷ್ಟತೆಯ ಕೊರತೆ ಇತ್ತು ಎಂಬ ಅಂಶವನ್ನು ನನ್ನ ಅಪ್ರಕಟಿತ ಆತ್ಮಕಥೆಯಲ್ಲಿ ಉಲ್ಲೇಖಿಸಿದ್ದೆ ಎಂದು ಒಪ್ಪಿಕೊಂಡರು.

'ಯಾರನ್ನೂ ಟೀಕಿಸಿದೆ ಎದುರಾಗುವ ಸವಾಲು, ತೊಡಕುಗಳನ್ನು ದಾಟಿ ಗುರಿಯನ್ನು ತಲುಪಲು ಓದುಗರಿಗೆ ಪ್ರೇರೇಪಣೆ ಆಗುವುದೇ ನನ್ನ ಆತ್ಮಕಥೆಯ ಉದ್ದೇಶವಾಗಿತ್ತು' ಎಂದು ಹೇಳಿದರು.

ಇಸ್ರೇಲ್ ದಾಳಿಗೆ ಹಿಜ್ಬುಲ್ಲಾ ಬಂಡುಕೋರರ ಪ್ರತಿದಾಳಿ

ಗಾಜಾ: ಆಹಾರ, ನೀರಿಗೆ ಹಾಹಾಕಾರ

ಜೆರುಸಲೇಂ (ಎಪಿ): ಇಸ್ರೇಲ್ ದಾಳಿಗೆ ಸಿಲುಕಿ ನಲುಗಿ ಹೋಗಿರುವ ಗಾಜಾ ಪಟ್ಟಿಯಲ್ಲಿ ಈಗ ಕುಡಿಯುವ ನೀರು ಹಾಗೂ ಆಹಾರಕ್ಕೆ ತೀವ್ರ ಅಭಾವ ತಲೆದೋರಿದೆ.

ಯುದ್ಧದಿಂದ ತತ್ತರಿಸಿರುವ ಗಾಜಾ ಪಟ್ಟಿಯ ಜನರು ಎರಡು ತುಣುಕು ಬ್ರೆಡ್ ಸೇವಿಸಿ ದಿನದೂಡುವಂತಾಗಿದೆ ಎಂದು ಪ್ಯಾಲೆಸ್ಟೀನ್‌ನಲ್ಲಿ ನೆರವು ಕಲ್ಪಿಸಲು ಶ್ರಮಿಸುತ್ತಿರುವ ವಿಶ್ವಸಂಸ್ಥೆಯ ಪರಿಹಾರ ಕಾರ್ಯಪಡೆಯ ಏಜೆನ್ಸಿ ಹೇಳಿದೆ.

'ಗಾಜಾ ಪಟ್ಟಿಯಲ್ಲಿ ಸುರಕ್ಷಿತ ಸ್ಥಳ ಎಂಬುದಿಲ್ಲ. ಜನರು ಭಯದಿಂದ ಬದುಕುತ್ತಿದ್ದಾರೆ. ಕುಟುಂಬದ ಪೋಷಣೆಗೂ ಸಂಕಷ್ಟಪಡುತ್ತಿದ್ದಾರೆ' ಎಂದು ಏಜೆನ್ಸಿ ನಿರ್ದೇಶಕ ಥಾಮಸ್ ವೈಟ್ ಹೇಳಿದ್ದಾರೆ.

ಏಜೆನ್ಸಿಯು 89ಕ್ಕೂ ಹೆಚ್ಚು ಬೇಕರಿಗಳಿಗೆ ಬ್ರೆಡ್ ಪೂರೈಸುತ್ತಿದೆ. ವಿಶ್ವಸಂಸ್ಥೆಯಿಂದ ತಯಾರಿಸಿ ನೀಡುತ್ತಿರುವ ಬ್ರೆಡ್‌ಗಳನ್ನೇ ಪ್ರತಿದಿನ ಜನರು ಎದುರು ನೋಡುತ್ತಿದ್ದಾರೆ. ಕುಡಿಯುವ ನೀರಿಗೂ ಪರದಾಡುತ್ತಿದ್ದಾರೆ. ಹಲವೆಡೆ ಕ್ಷಾರಯುಕ್ತ ನೀರನ್ನೇ ಕುಡಿಯುವಂತಾಗಿದೆ ಎಂದು ತಿಳಿಸಿದ್ದಾರೆ.

ಸಾವಿನ ಸಂಖ್ಯೆ 9,227ಕ್ಕೆ ಏರಿಕೆ: ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧವು ಶನಿವಾರ 29ನೇ ದಿನಕ್ಕೆ ಕಾಲಿಟ್ಟಿದ್ದು, ದಕ್ಷಿಣ ಭಾಗ ಸೇರಿದಂತೆ ಗಾಜಾ ಪಟ್ಟಿಯ ಮೇಲೆ ಇಸ್ರೇಲ್‌ನ ವಾಯುದಾಳಿ ಮತ್ತಷ್ಟು ಹೆಚ್ಚಿದೆ.

ಮೃತಪಟ್ಟ ಪ್ಯಾಲೆಸ್ಟೀನ್ ಜನರ ಸಂಖ್ಯೆ 9,227ಕ್ಕೆ ಏರಿದೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯ ಹೇಳಿದೆ. ಇವರಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿದ್ದ ವಿಶ್ವಸಂಸ್ಥೆಯ 72 ಸಿಬ್ಬಂದಿಯೂ ಸೇರಿದ್ದಾರೆ.

ಹಿಜ್ಬುಲ್ಲಾ ಬಂಡುಕೋರರ ಪ್ರತಿದಾಳಿ: ಇಸ್ರೇಲ್ ಸೇನಾ ಪಡೆಗಳ ದಾಳಿಗೆ, ಹಮಾಸ್ ಪರ ಇರುವ ಹಿಜ್ಬುಲ್ಲಾ ಬಂಡುಕೋರರು ಕೂಡ ಪ್ರತಿದಾಳಿ ನಡೆಸಿದ್ದಾರೆ. ಇದರಿಂದ ಲೆಬನಾನ್–ಇಸ್ರೇಲ್ ಗಡಿ ಪ್ರದೇಶದಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರಿದೆ.

ಲೆಬನಾನ್ ಗಡಿಯಲ್ಲಿ ಇಸ್ರೇಲ್‌ನ ಯುದ್ಧ ವಿಮಾನಗಳು ವಾಯುದಾಳಿ ನಡೆಸಿವೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸೇನಾ ಯೋಧರು ಇರುವ ಆರು ಸ್ಥಳಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ದಾಳಿ ನಡೆಸಿದೆ.



ಕೇಂದ್ರ ಗಾಜಾ ಪಟ್ಟಿಯಲ್ಲಿರುವ ನುಸೆರಾತ್ ಶಿಬಿರದ ಬಳಿ ಬ್ರೆಡ್ ಪಡೆಯಲು ಪ್ಯಾಲೆಸ್ಟೀನ್ ಮಹಿಳೆಯರು ಶನಿವಾರ ಸಾಲುಗಟ್ಟಿ ನಿಂತಿದ್ದರು (ಎಡಚಿತ್ರ). ಬ್ರೆಡ್ ಪಡೆದುಕೊಂಡು ಹೊರಟ ಬೈಸಿಕಲ್ ಸವಾರ –ಎಎಫ್‌ಪಿ ಚಿತ್ರಗಳು

ಮುಖ್ಯಾಂಶಗಳು..

- ಉತ್ತರ ಗಾಜಾ ಪಟ್ಟಿಯಲ್ಲಿ ವಿಶ್ವಸಂಸ್ಥೆ ನಡೆಸುತ್ತಿರುವ ಶಿಬಿರದ ಮೇಲೆ ನಡೆದ ವಾಯುದಾಳಿಗೆ 15 ಮಂದಿ ಮೃತಪಟ್ಟಿದ್ದಾರೆ. ಇವರೆಲ್ಲರೂ ಜಬಾಲಿಯಾ ಶಿಬಿರದಿಂದ ಸ್ಥಳಾಂತರಗೊಂಡವರಾಗಿದ್ದಾರೆ.
- ದಕ್ಷಿಣ ಗಾಜಾದ ಖಾನ್ ಯೂನಸ್ ನಗರದಲ್ಲಿ ಗುರುವಾರ ನಡೆದ ದಾಳಿಯಲ್ಲಿ ಪ್ಯಾಲೆಸ್ಟೀನ್‌ನ ಟಿ.ವಿ ವರದಿಗಾರ ಮೊಹಮ್ಮದ್ ಅಬು ಹತಾಬ್ ಎಂಬುವರು ಸೇರಿದಂತೆ ಆತನ ಕುಟುಂಬದ 11 ಸದಸ್ಯರು ಮೃತಪಟ್ಟಿದ್ದಾರೆ

ಅರಬ್ ರಾಷ್ಟ್ರಗಳಿಗೆ ಬ್ಲಿಂಕನ್ ಮೊರೆ

ಅಮ್ಮನ್ (ಜೋರ್ಡನ್) (ಎಪಿ): ಗಾಜಾ ಪಟ್ಟಿ ಬಿಕ್ಕಟ್ಟಿನ ಉಪಶಮನಕ್ಕೆ ಹೆಜ್ಜೆ ಇಟ್ಟಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು, ಅರಬ್ ರಾಷ್ಟ್ರಗಳ ನಾಯಕರ ಮನವೊಲಿಕೆಗೆ ಮುಂದಾಗಿದ್ದಾರೆ.

ಮಾನವೀಯ ದೃಷ್ಟಿಯಿಂದ ಯುದ್ಧಕ್ಕೆ ವಿರಾಮ ಘೋಷಿಸಬೇಕೆಂದು ಜಾಗತಿಕ ಮಟ್ಟದಲ್ಲಿ ಒತ್ತಡ ಹೆಚ್ಚುತ್ತಿದೆ. ಈ ನಡುವೆಯೇ ಇಸ್ರೇಲ್ ಪ್ರಧಾನಿ ನೆತನ್ಯಾಹು ಕದನ ವಿರಾಮ ಘೋಷಣೆಗೆ ನಿರಾಕರಿಸಿದ್ದಾರೆ. ಹಾಗಾಗಿ, ಯುದ್ಧದಿಂದ ತತ್ತರಿಸಿರುವ ಗಾಜಾ ಪಟ್ಟಿಗೆ ನೆರವು ಕಲ್ಪಿಸುವುದು ಸವಾಲಾಗಿದೆ. ಹಾಗಾಗಿ, ಬ್ಲಿಂಕನ್ ಅವರು ಅರಬ್ ರಾಷ್ಟ್ರಗಳ ಮೊರೆ ಹೋಗಿದ್ದಾರೆ.

ಲೆಬನಾನ್‌ಗೆ ತೆರಳಿದ ಅವರು ಮೊದಲಿಗೆ ಪ್ರಧಾನಿ ನಜೀಬ್ ಮಿಕಾತಿ ಅವರೊಟ್ಟಿಗೆ ಮಾತುಕತೆ ನಡೆಸಿದರು. ಬಳಿಕ ಪ್ಯಾಲೆಸ್ಟೀನ್ ಜನರ ನೆರವಿನ ಉಸ್ತುವಾರಿ ಹೊತ್ತಿರುವ ವಿಶ್ವಸಂಸ್ಥೆಯ ಕಾರ್ಯಪಡೆಯ ಕಮಿಷನರ್-ಜನರಲ್ ಫಿಲಿಪ್ ಲಾಝುರಿನಿ ಜತೆಗೆ ಚರ್ಚಿಸಿದರು.

ಕತಾರ್, ಜೋರ್ಡನ್, ಈಜಿಪ್ಟ್, ಸೌದಿ ಅರೇಬಿಯಾ, ಯುಎಇ ದೇಶಗಳ ವಿದೇಶಾಂಗ ಸಚಿವರ ಜತೆಗೂ ಅವರು ಜಂಟಿ ಮಾತುಕತೆ ನಡೆಸಲಿದ್ದಾರೆ. ಈ ವೇಳೆ ಜೋರ್ಡನ್ ದೊರೆ ಅಬ್ದುಲ್ಲಾ ಅವರನ್ನು ಭೇಟಿ ಮಾಡುವ ನಿರೀಕ್ಷೆ ಇದೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿಕೆ

ರಷ್ಯಾ ಜತೆಗಿನ ಯುದ್ಧ ಸ್ಥಗಿತಗೊಂಡಿಲ್ಲ

ವೊಲೊಡಿಮಿರ್ ಝೆಲೆನ್‌ಸ್ಕಿ

ಕೀವ್ (ಉಕ್ರೇನ್) (ಎಎಫ್‌ಪಿ): ರಷ್ಯಾ ಜತೆಗಿನ ಉಕ್ರೇನ್ ಯುದ್ಧವು ಮುಂದಕ್ಕೆ ಸಾಗದ ಸ್ಥಿತಿ ತಲುಪಿದೆ ಎನ್ನುವುದನ್ನು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಶನಿವಾರ ಅಲ್ಲಗಳೆದಿದ್ದಾರೆ.

'ಸಮಯ ಕಳೆದಿದೆ, ಜನರು ದಣಿದಿದ್ದಾರೆ. ಆದರೆ, ಇದು ಯುದ್ಧ ಸ್ಥಗಿತವಲ್ಲ' ಎಂದು ಝೆಲೆನ್‌ಸ್ಕಿ ಅವರು ಕೀವ್‌ನಲ್ಲಿ ಐರೋಪ್ಯ ಒಕ್ಕೂಟ ಆಯೋಗದ ಮುಖ್ಯಸ್ಥೆ ಉರ್ಸುಲಾ ವಾನ್ ಡೆರ್ ಲೆಯೆನ್ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶಾಂತಿ ಮಾತುಕತೆಗಾಗಿ ಲಾಬಿ ನಡೆಸುತ್ತಿರುವ ಪಶ್ಚಿಮದ ರಾಷ್ಟ್ರಗಳ ನಾಯಕರು ಈ ನಿಟ್ಟಿನಲ್ಲಿ ಮಾತುಕತೆಗೆ ಕುಳಿತುಕೊಳ್ಳುವಂತೆ ಉಕ್ರೇನ್ ಅಧ್ಯಕ್ಷರಿಗೆ ಸಲಹೆ ನೀಡಿದ್ದಾರೆ ಎನ್ನುವುದನ್ನೂ ಝೆಲೆನ್‌ಸ್ಕಿ ತಳ್ಳಿಹಾಕಿದ್ದಾರೆ. 'ನಮ್ಮ ಪಾಲುದಾರ ರಾಷ್ಟ್ರಗಳಲ್ಲಿ ಯಾರೂ ಸಹ ರಷ್ಯಾದೊಂದಿಗೆ ಮಾತುಕತೆ ನಡೆಸಲು ಒತ್ತಡ ಹೇರುತ್ತಿಲ್ಲ' ಎಂದೂ ಸ್ಪಷ್ಟಪಡಿಸಿದರು.

ಶಾಂತಿ ಮಾತುಕತೆಗಳ ಕುರಿತು ಅಮೆರಿಕ ಮತ್ತು ಯುರೋಪ್ ಒಕ್ಕೂಟದ ಅಧಿಕಾರಿಗಳು ಉಕ್ರೇನ್ ಅಧ್ಯಕ್ಷರ ಜತೆ ಮಾತನಾಡಿದ್ದಾರೆ ಎನ್ನುವ ವರದಿಗಳು ಕೇಳಿ ಬರುತ್ತಿರುವ ನಡುವೆಯೇ ಝೆಲೆನ್‌ಸ್ಕಿ ಈ ಹೇಳಿಕೆ ನೀಡಿದ್ದಾರೆ.

'ಉಕ್ರೇನ್ ಸಂಘರ್ಷದ ಮೇಲಿನ ಗಮನ ಈಗ ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದ ಕಡೆಗೆ ಹರಿದಿರುವುದು ಸ್ಪಷ್ಟ. ಇದೇ 'ರಷ್ಯಾದ ಗುರಿ'ಯೂ ಆಗಿತ್ತು. ನಾವು ಈಗಾಗಲೇ ಬಹಳಷ್ಟು ಕಷ್ಟಕರ ಸನ್ನಿವೇಶದಲ್ಲಿ ಇದ್ದೇವೆ. ಈ ಸವಾಲನ್ನು ನಾವು ಖಂಡಿತವಾಗಿಯೂ ಜಯಿಸುತ್ತೇವೆ' ಎಂದು ಝೆಲೆನ್‌ಸ್ಕಿ ಹೇಳಿದರು.

ಯುದ್ಧವು 20ನೇ ತಿಂಗಳಿಗೆ ಕಾಲಿಟ್ಟಿರುವಾಗ, ಮುಂಚೂಣಿಯಲ್ಲಿ ಕಾದಾಡುತ್ತಿರುವ ಎರಡೂ ಕಡೆಯ ಪಡೆಗಳು ಸುಮಾರು ಒಂದು ವರ್ಷದಿಂದ ಇದ್ದ ಸ್ಥಳದಿಂದ ಆಚೀಚೆ ಕದಲಲಿಲ್ಲ. ಈ ವಾರ ಉಭಯ ದೇಶಗಳ ಸೇನಾಪಡೆಗಳ ನಡುವೆ ಸಂಘರ್ಷ ಸ್ಥಗಿತಗೊಂಡಿದೆ ಎಂದು ಉಕ್ರೇನಿನ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಉಕ್ರೇನ್ ಪಡೆಗಳು, ರಷ್ಯಾದ ಮೇಲೆ ಪ್ರತಿದಾಳಿ ನಡೆಸಿ, ಕಳೆದುಕೊಂಡಿರುವ ನೆಲವನ್ನು ಪುನಃ ವಶಕ್ಕೆ ಪಡೆಯಲು ಹೆಣಗಾಡುತ್ತಿದೆ.

ರಷ್ಯಾ ಸೋಲಿಸಲು ಉಕ್ರೇನ್ ಎಷ್ಟು ಸಮಯ ತೆಗೆದುಕೊಳ್ಳುತ್ತದೆಯೋ ಅಲ್ಲಿಯವರೆಗೂ ಆ ದೇಶಕ್ಕೆ ಮಿಲಿಟರಿ ಮತ್ತು ಆರ್ಥಿಕ ನೆರವು ನೀಡಲು ಸಿದ್ಧವೆಂದು ಅಮೆರಿಕ ಸೇರಿದಂತೆ ಉಕ್ರೇನ್ ಬೆಂಬಲಿಗ ದೇಶಗಳು ಹೇಳಿವೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹910 (910)
ಸೂರ್ಯಕಾಂತಿ (ರಿಫೈನ್ಡ್)	₹915 (910)
ಪಾಮೋಲಿನ್	₹815 (818)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹565
12 ಮೊಟ್ಟೆಗೆ	₹73

ಮೈಸೂರು

100 ಮೊಟ್ಟೆಗೆ	₹570

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹257-496

ದ್ವಿತಳಿ (ಬಿ.ವಿ) ₹183-611

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹142.50
ಗುಡ್ ಲಾಟ್	₹131.50

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	570
ಬಂಟ್ವಾಳ	
ಕೋಕ	15000-275000
ಹೊಸತು	43500-48500
ಹಳತು	37000-39000
ಸಿದ್ದಾಪುರ	
ಬಿಳಿಗೋಟು	31599-34299
ಕೋಕ	30019-32599
ಚಾಲಿ	37809-40299
ರಾಶಿ	45099-46359
ಶಿರಸಿ	
ಬೆಟ್ಟೆ	43860-43299
ಬಿಳಿಗೋಟು	28610-35508
ಚಾಲಿ	36899-41099
ರಾಶಿ	45419-47018
ಸೊರಬ	
ಬಿಳಿಗೋಟು	30100-30100
ಚಾಲಿ	37899-38199
ಕೋಕ	18899-30390
ಕೆಂಪುಗೋಟು	32396-35709
ರಾಶಿ	42199-47199
ಸಿಪ್ಪೆಗೋಟು	20313-20313
ಕಾರ್ಕಳ	
ಹಳತು	30000-48500
ಪುತ್ತೂರು	
ಹೊಸತು	34000-43500
ತುಮಕೂರು	
ರಾಶಿ	45100-46600

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11250	11200	--	170.90 ಸೆಂಟ್ಸ್
ಎಸಿ	6440	6300	--	
ಆರ್‌ಪಿ	9800	10000	--	ಲಂಡನ್
ಆರ್‌ಸಿ	5960	238 on OT	--	2372 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

04-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	870 (875)
ಪಾಮ್ ವಾರದ ಡೆಲಿವರಿ	815 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,900 (61,000)
ಬೆಳ್ಳಿ ಕೆ.ಜಿ 72,000 (71,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವೇದಾಂತ ನಷ್ಟ ₹1,783 ಕೋಟಿ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಗರ್ವಾಲ್ ಒಡೆತನದ ವೇದಾಂತ ಲಿಮಿಟೆಡ್, ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1,783 ಕೋಟಿ ನಷ್ಟ ಅನುಭವಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹1,808 ಕೋಟಿಯಷ್ಟು ಲಾಭ ಆಗಿತ್ತು. ಒಟ್ಟು ವರಮಾನವು ₹37,351 ಕೋಟಿಯಿಂದ ₹39,585 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

2022-23ನೇ ಹಣಕಾಸು ವರ್ಷದಿಂದ ಹೊಸ ತೆರಿಗೆ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದೇ ನಷ್ಟಕ್ಕೆ ಕಾರಣ ಎಂದು ಕಂಪನಿ ಹೇಳಿದೆ. ಸೆಪ್ಟೆಂಬರ್ 30ರ ಅಂತ್ಯಕ್ಕೆ ಸರಾಸರಿ ಸಾಲದ ಮೊತ್ತ ₹74,473 ಕೋಟಿಯಷ್ಟು ಇದೆ.

ಬೆಳೆಗಾರರ ರಕ್ಷಣೆಗೆ ಒತ್ತಾಯ • ರಾಷ್ಟ್ರ ಮಟ್ಟದ ದುಂಡು ಮೇಜಿನ ಸಭೆ

‘ಕೊಬ್ಬರಿ ಬೆಂಬಲ ಬೆಲೆ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು): ತೆಂಗು ಬೆಳೆಗಾರರ ರಕ್ಷಣೆಗೆ ಸರ್ಕಾರ ತುರ್ತು ಕ್ರಮ ಮತ್ತು ಕೊಬ್ಬರಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳ ಸೇರಿದಂತೆ ಒಂಬತ್ತು ಬೇಡಿಕೆ ಈಡೇರಿಸುವಂತೆ ರೈತ ಮುಖಂಡರು, ತಜ್ಞರು ಭಾಗವಹಿಸಿದ್ದ ರಾಷ್ಟ್ರ ಮಟ್ಟದ ದುಂಡು ಮೇಜಿನ ಸಭೆಯಲ್ಲಿ ಒತ್ತಾಯಿಸಲಾಯಿತು.

ತಾಲ್ಲೂಕಿನ ಬಿದರೆಗುಡಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಶನಿವಾರ ಕರ್ನಾಟಕ ರಾಜ್ಯ ರೈತ ಸಂಘ (ಸಾಮೂಹಿಕ ನಾಯಕತ್ವ) ಹಾಗೂ ಭಾರತೀಯ ತೆಂಗು ಸಮುದಾಯದ ಸಹಯೋಗದೊಂದಿಗೆ ಸಭೆ ನಡೆಯಿತು.

ತೆಂಗು ಬೆಳೆಯುವ ಕೇರಳ, ತಮಿಳುನಾಡು ರಾಜ್ಯಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಕೇಂದ್ರ, ರಾಜ್ಯ ಸರ್ಕಾರಗಳಿಗೆ ಸಲ್ಲಿಸಿ ಹೋರಾಟ ರೂಪಿಸಲು ನಿರ್ಧರಿಸಲಾಯಿತು.

ಕೊಬ್ಬರಿ ಬೆಲೆ ತೀವ್ರವಾಗಿ ಕುಸಿತ ಕಂಡಿದ್ದು, ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ವರ್ಷದ ಹಿಂದೆ ಕ್ವಿಂಟಲ್‌ಗೆ ₹18 ಸಾವಿರ ಇದ್ದ ಬೆಲೆಯು ಇದೀಗ ₹8 ಸಾವಿರಕ್ಕೆ ಕುಸಿತ ಕಂಡಿದೆ. ಬೆಂಬಲ ಬೆಲೆ ಹೆಚ್ಚಿಸುವುದರ ಜತೆಗೆ ರೈತರ ಬಳಿ ಇರುವ ಎಲ್ಲಾ ಕೊಬ್ಬರಿಯನ್ನು ಯಾವುದೇ ಷರತ್ತು ವಿಧಿಸದೆ ತಕ್ಷಣ ಖರೀದಿಸಬೇಕು ಎಂದು ಆಗ್ರಹಿಸಲಾಯಿತು.

ಮಾರುಕಟ್ಟೆಯಲ್ಲಿ ತೆಂಗಿನ ಎಣ್ಣೆಯ ಬೆಲೆಯಲ್ಲಿ ಸ್ಥಿರತೆ ಕಾಪಾಡಲು ಕ್ರಮ ವಹಿಸಬೇಕು. ಈಗಾಗಲೇ ನಾಫೆಡ್ ಮೂಲಕ ಖರೀದಿಸಿ, ಸಂಗ್ರಹಿಸಿ ಇಟ್ಟುಕೊಂಡಿರುವ ಕೊಬ್ಬರಿಯನ್ನು ಗ್ರಾಹಕರಿಗೆ ತಲುಪುವಂತೆ ಮಾಡಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮೂಲಕ ಜನರಿಗೆ ತಲುಪಿಸಬೇಕು ಎಂದು ಒತ್ತಾಯಿಸಲಾಯಿತು.

ಬೇಡಿಕೆಗಳು ಹೀಗಿವೆ...

- ತೆಂಗು ಉತ್ಪಾದನೆಗೆ ತಗಲುವ ವೆಚ್ಚವನ್ನು ಪಾರದರ್ಶಕವಾಗಿ ಮೌಲ್ಯಮಾಪನ ಮಾಡಿ, ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು
- ವ್ಯಾಪಾರ ನೀತಿ ಪುನರ್ ಪರಿಶೀಲಿಸಿ, ಪರಿಷ್ಕರಿಸಬೇಕು. ದೇಶೀಯವಾಗಿ ಉತ್ಪಾದನೆ ಹೆಚ್ಚಳ, ರಕ್ಷಣೆ ಜತೆಗೆ ಜಾಗತಿಕ ಮಾರುಕಟ್ಟೆಯಲ್ಲಿ ಭಾರತ ಸ್ಪರ್ಧೆಗೆ ಸಹಕಾರಿಯಾಗುವಂತಹ ನೀತಿ ರೂಪಿಸಬೇಕು
- ನ್ಯಾಯಯುತ ವ್ಯಾಪಾರ ವ್ಯವಸ್ಥೆ ಜಾರಿಯಾಗುವಂತೆ ನೋಡಿಕೊಳ್ಳಬೇಕು
- ತೆಂಗು ಹಾಗೂ ಅದರ ಉತ್ಪನ್ನಗಳು ಜನರಿಗೆ ನ್ಯಾಯಯುತ ಬೆಲೆಯಲ್ಲಿ ಸಿಗುವಂತಾಗಬೇಕು
- ರೈತ ಸಂಘಟನೆ ನೇತೃತ್ವದಲ್ಲಿ ಮುಕ್ತ ವ್ಯಾಪಾರ ನಿರ್ವಹಣಾ ಘಟಕ ಆರಂಭಿಸಬೇಕು
- ತೆಂಗು ಬೆಳೆಗಾರರಿಗೆ ಮೀಸಲಿಟ್ಟ ಸಬ್ಸಿಡಿ ದುರ್ಬಳಕೆ ತಡೆಗಟ್ಟಬೇಕು
- ‘ಸುರಿ ವಿರೋಧಿ ಕಾಯ್ದೆ’ ಜಾರಿಯಿಂದ ಆಮದು ತಗ್ಗಿ, ದೇಶೀಯವಾಗಿ ಕೊಬ್ಬರಿ ವಹಿವಾಟು ಚೇತರಿಸಿಕೊಳ್ಳಲಿದೆ. ರೈತರಿಗೆ ಉತ್ತಮ ಬೆಲೆ ಸಿಗಲು ಸಹಕಾರಿ

ಅಮೆರಿಕದ ಬಾಂಡ್‌ಗೆ ವಿದೇಶಿ ಹೂಡಿಕೆದಾರರ ಆಸಕ್ತಿ

ಎಫ್‌ಪಿಐ ಹೊರಹರಿವು ಅಬಾಧಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ನವೆಂಬರ್‌ನಲ್ಲಿಯೂ ಭಾರತದಿಂದ ಬಂಡವಾಳ ಹಿಂತೆಗೆತ ಮುಂದುವರಿಸಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ನವೆಂಬರ್ 1ರಿಂದ 3ರವರೆಗೆ ನಡೆದಿರುವ ವಹಿವಾಟಿನಲ್ಲಿ ₹3,090 ಕೋಟಿ ಮೌಲ್ಯದ ಷೇರುಗಳನ್ನು ಎಫ್‌ಪಿಐ ಮಾರಾಟ ಮಾಡಿದ್ದಾರೆ. ಇದಕ್ಕೂ ಹಿಂದೆ ಸೆಪ್ಟೆಂಬರ್‌ನಲ್ಲಿ ₹14,767 ಕೋಟಿ ಮತ್ತು ಅಕ್ಟೋಬರ್‌ನಲ್ಲಿ ₹20,300 ಕೋಟಿ ಬಂಡವಾಳವನ್ನು ಹಿಂದಕ್ಕೆ ಪಡೆದಿದ್ದಾರೆ.

‘ಎಫ್‌ಪಿಐ ಮಾರಾಟವು ಮುಂದಿನ ದಿನಗಳಲ್ಲಿ ಕಡಿಮೆ ಆಗಬಹುದು. ಭಾರತದ ಮಾರುಕಟ್ಟೆಗಳಲ್ಲಿ ಆಗಲಿರುವ ಏರಿಕೆಯ ಲಾಭ ಪಡೆದುಕೊಳ್ಳಲು ಹೂಡಿಕೆಯನ್ನೂ ಮಾಡುವ ಸಾಧ್ಯತೆ ಇದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಚೇತರಿಕೆ ಸೂಚನೆ: ಗುರುವಾರ ಮತ್ತು ಶುಕ್ರವಾರ ನಡೆದ ವಹಿವಾಟಿನಿಂದಾಗಿ ಷೇರುಪೇಟೆಗಳು ಮತ್ತೆ ಚೇತರಿಕೆ ಕಂಡುಕೊಳ್ಳುವ ಸೂಚನೆ ದೊರೆತಿದೆ. ಇನ್ನಷ್ಟು ಬಡ್ಡಿದರ ಹೆಚ್ಚಳ ಇಲ್ಲ ಎನ್ನುವ ಸುಳಿವನ್ನು ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ನೀಡಿದೆ. ಇದು ಭಾರತವನ್ನೂ ಒಳಗೊಂಡು ಜಾಗತಿಕ ಮಾರುಕಟ್ಟೆಗಳಲ್ಲಿ ಹೊಸ ಉತ್ಸಾಹ ಮೂಡಿಸಿದೆ ಎಂದು ಹೇಳಿದ್ದಾರೆ.

ಅಮೆರಿಕದ 10 ವರ್ಷಗಳ ಬಾಂಡ್ ಮೇಲಿನ ಗಳಿಕೆ ಪ್ರಮಾಣವು ಕಡಿಮೆ ಆಗುತ್ತಿದೆ. ಏಜೆನ್ಸಿಗಳಲ್ಲಿ ಇರುವ ಮಾಹಿತಿಯ ಪ್ರಕಾರ, ಅಕ್ಟೋಬರ್ 19ರಂದು ಶೇ 5ರ ಗರಿಷ್ಠ ಮಟ್ಟದಲ್ಲಿ ಇದ್ದ ಬಾಂಡ್ ಗಳಿಕೆಯು ನವೆಂಬರ್ 3ರಂದು ಶೇ 4.66ಕ್ಕೆ ಇಳಿಕೆ ಕಂಡಿದೆ.

ಬೈಜುಸ್ ವರಮಾನ ಹೆಚ್ಚಳ, ನಷ್ಟ ಇಳಿಕೆ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಬೈಜುಸ್ ಸಂಸ್ಥೆಯು 2021-22ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದ ತನ್ನ ಆರ್ಥಿಕ ಫಲಿತಾಂಶವನ್ನು ಶನಿವಾರ ಪ್ರಕಟಿಸಿದೆ. ವರಮಾನದಲ್ಲಿ 2.5ಪಟ್ಟು ಏರಿಕೆ ಕಂಡಿದ್ದರೆ ಕಾರ್ಯಾಚರಣಾ ನಷ್ಟವು ಶೇ 6ರಷ್ಟು ಇಳಿಕೆ ಆಗಿದೆ.

2021-22ರಲ್ಲಿ ಕಾರ್ಯಾಚರಣಾ ನಷ್ಟವು ಶೇ 6ರಷ್ಟು ಇಳಿಕೆ ಕಂಡು ₹2,253 ಕೋಟಿಗೆ ತಲುಪಿದೆ. 2020-21ನೇ ಹಣಕಾಸು ವರ್ಷದಲ್ಲಿ ಕಾರ್ಯಾಚರಣಾ ನಷ್ಟವು ₹2,406 ಕೋಟಿ ಇತ್ತು ಎಂದು ಸಂಸ್ಥೆಯು ತಿಳಿಸಿದೆ.

ಟ್ಯೂಷನ್ ಸೆಂಟರ್, 1-12ನೇ ತರಗತಿವರೆಗಿನ ಶಿಕ್ಷಣ ಮತ್ತು ಅಪ್ಲಿಕೇಷನ್ ವಹಿವಾಟುಗಳಿಂದ ಬಂದಿರುವ ವರಮಾನವು 2021-22ರಲ್ಲಿ 2.3ಪಟ್ಟು ಹೆಚ್ಚಾಗಿ ₹3,569 ಕೋಟಿಗೆ ತಲುಪಿದೆ. 2020-21ನೇ ಹಣಕಾಸು ವರ್ಷದಲ್ಲಿ ವರಮಾನವು ₹1,552 ಕೋಟಿಯಷ್ಟು ಇತ್ತು ಎಂದಿದೆ. ಸಂಸ್ಥೆಯು ಸ್ವಾಧೀನಪಡಿಸಿಕೊಂಡ ಕಂಪನಿಗಳ ಆರ್ಥಿಕ ಸಾಧನೆಯನ್ನು ಈ ಹಣಕಾಸು ವರದಿಯು ಒಳಗೊಂಡಿಲ್ಲ ಎಂದು ಬೈಜುಸ್ ಹೇಳಿದೆ.

ಎಸ್‌ಬಿಐ ಲಾಭ ₹16,099 ಕೋಟಿ

ಮುಂಬೈ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹16,099 ಕೋಟಿಯಷ್ಟು ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ಆಗಿದ್ದ ಲಾಭಕ್ಕೆ ಹೋಲಿಸಿದರೆ (₹14,752 ಕೋಟಿ) ಈ ಬಾರಿ ಲಾಭದಲ್ಲಿ ಶೇ 9.13ರಷ್ಟು ಏರಿಕೆ ಕಂಡುಬಂದಿದೆ ಎಂದು ಬ್ಯಾಂಕ್ ತಿಳಿಸಿದೆ. ಸಿಬ್ಬಂದಿ ವೇತನ ಮತ್ತು ಪಿಂಚಣಿಗಾಗಿ ಹೆಚ್ಚಿನ ಹಣವನ್ನು ತೆಗೆದಿಟ್ಟಿದ್ದರಿಂದ ಲಾಭದ ಪ್ರಮಾಣವು ಕಡಿಮೆ ಆಗಿದೆ ಎಂದು ಬ್ಯಾಂಕ್ ಹೇಳಿದೆ.

ನಿವ್ವಳ ಬಡ್ಡಿ ವರಮಾನ ಶೇ 12.27ರಷ್ಟು ಹೆಚ್ಚಾಗಿ ₹39,500 ಕೋಟಿಗೆ ಏರಿಕೆ ಕಂಡಿದೆ. ವೇತನ ಮತ್ತು ಪಿಂಚಣಿಗಾಗಿ ₹5,900 ಕೋಟಿಗೂ ಅಧಿಕ ಮೊತ್ತವನ್ನು ತೆಗೆದಿಡಲಾಗಿದೆ. ಇದರಿಂದಾಗಿ ಕಾರ್ಯಾಚರಣಾ ಲಾಭವು ಶೇ 8ರಷ್ಟು ಇಳಿಕೆ ಕಂಡು ₹19,417 ಕೋಟಿಗೆ ತಲುಪಿದೆ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖರಾ ತಿಳಿಸಿದ್ದಾರೆ.

ಒಟ್ಟು ವರಮಾನವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹88,733 ಕೋಟಿಯಿಂದ ₹1.12 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 3.52 ರಿಂದ ಶೇ 2.55ಕ್ಕೆ ಇಳಿಕೆ ಕಂಡಿದೆ. ಒಟ್ಟು ನಗದು ಲಭ್ಯತೆಯ ಪ್ರಮಾಣ ಶೇ 14.28ರಷ್ಟು ಇದೆ ಎಂದು ಬ್ಯಾಂಕ್ ಮಾಹಿತಿ ನೀಡಿದೆ.

ಬಿಒಬಿ ಲಾಭ ಶೇ 28ರಷ್ಟು ಹೆಚ್ಚಳ

ಮುಂಬೈ/ನವದೆಹಲಿ (ಪಿಟಿಐ/ರಾಯಿಟರ್ಸ್): ಬ್ಯಾಂಕ್ ಆಫ್ ಬರೋಡದ (ಬಿಒಬಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 28ರಷ್ಟು ಹೆಚ್ಚಾಗಿ ₹4,253 ಕೋಟಿಗೆ ತಲುಪಿದೆ.

ಸುಸ್ತಿ ಸಾಲದ ಪ್ರಮಾಣ ಇಳಿಕೆ ಕಂಡಿರುವುದು ಮತ್ತು ಬಡ್ಡಿ ವರಮಾನ ಹೆಚ್ಚಾಗಿರುವುದರಿಂದ ಈ ಬೆಳವಣಿಗೆ ಸಾಧ್ಯವಾಗಿದೆ ಎಂದು ತಿಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹3,313 ಕೋಟಿಯಷ್ಟು ಇತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಎಲ್‌ಎಸ್‌ಇಜಿ ಸಂಸ್ಥೆಯ ಮಾಹಿತಿ ಪ್ರಕಾರ, ಲಾಭವು ₹4 ಸಾವಿರ ಕೋಟಿಯಷ್ಟು ಆಗಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜು ಮಾಡಿದ್ದರು. ಆದರೆ, ಅದಕ್ಕಿಂತಲೂ ಹೆಚ್ಚಿನ ಲಾಭ ಆಗಿದೆ.

ನಿವ್ವಳ ಬಡ್ಡಿ ವರಮಾನವು ₹21,254 ಕೋಟಿಯಿಂದ ₹27,862 ಕೋಟಿಗೆ ಏರಿಕೆ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿ) ಶೇ 5.31 ರಿಂದ ಶೇ 3.32ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 1.16ರಿಂದ ಶೇ 0.76ಕ್ಕೆ ತಗ್ಗಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹1,627 ಕೋಟಿಯಿಂದ ₹2,161 ಕೋಟಿಗೆ ಏರಿಕೆ ಕಂಡಿದೆ. ನಿವ್ವಳ ಬಡ್ಡಿ ಗಳಿಕೆಯು ಶೇ 3.33ರಷ್ಟು ಹೆಚ್ಚಾಗಿದೆ. ಬಂಡವಾಳ ಲಭ್ಯತೆ ಪ್ರಮಾಣವು ಶೇ 15.25 ರಿಂದ ಶೇ 15.30ಕ್ಕೆ ಏರಿಕೆ ಕಂಡಿದೆ ಎಂದು ಬ್ಯಾಂಕ್ ತಿಳಿಸಿದೆ.

ಶ್ರೀಹರಿ, ಧೀನಿಧಿ ಕೂಟ ದಾಖಲೆ

ರಾಷ್ಟ್ರೀಯ ಕ್ರೀಡೆ: ಈಜುಕೊಳದಲ್ಲಿ ಮುಂದುವರಿದ ರಾಜ್ಯದ ಮೇಲುಗೈ

ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ಧೀನಿಧಿ ದೇಸಿಂಗು ಅವರು ಗೋವಾದ ಮಡಗಾಂವ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡೆಗಳ ಈಜು ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 100 ಮೀ. ಫ್ರೀಸ್ಟೈಲ್‌ನಲ್ಲಿ ಕೂಟ ದಾಖಲೆಯೊಡನೆ ಸ್ವರ್ಣ ಗೆದ್ದುಕೊಂಡರು. ಈಜುಕೊಳದಲ್ಲಿ ಶನಿವಾರವೂ ಕರ್ನಾಟಕದ ಪಾರಮ್ಯ ಮುಂದುವರಿದಿದ್ದು, 4x100 ಮೀ. ಮಿಶ್ರ ರಿಲೇಯಲ್ಲೂ ಕರ್ನಾಟಕ ತಂಡ ದಾಖಲೆ ಸ್ಥಾಪಿಸಿತು.

ಅಂತರರಾಷ್ಟ್ರೀಯ ಈಜುಪಟು ಶ್ರೀಹರಿ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯನ್ನು 49.97 ಸೆಕೆಂಡುಗಳಲ್ಲಿ ಪೂರೈಸಿ, ತಮ್ಮದೇ ಹೆಸರಿನಲ್ಲಿದ್ದ ದಾಖಲೆಯನ್ನು (ಕಳೆದ ವರ್ಷ, 50.41 ಸೆ.) ಉತ್ತಮಪಡಿಸಿಕೊಂಡರು. ಸರ್ವಿಸಸ್‌ನ ಆನಂದ್ ಎ.ಎಸ್. (51.37 ಸೆ.) ಮತ್ತು ದೆಹಲಿಯ ವಿಶಾಲ್ ಗ್ರೇವಾಲ್ (51.48 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

ಧೀನಿಧಿ ದೇಸಿಂಗು

ಧೀನಿಧಿ ಮಹಿಳೆಯರ ವಿಭಾಗದಲ್ಲಿ ಇದೇ ಅಂತರವನ್ನು 57.87 ಸೆ.ಗಳಲ್ಲಿ ಪೂರೈಸಿ, ಹರಿಯಾಣದ ಶಿವಾನಿ ಕಟಾರಿಯಾ ಸ್ಥಾಪಿಸಿದ್ದ ದಾಖಲೆಯನ್ನು (2015ರಲ್ಲಿ 58.34 ಸೆ.) ಮುಳುಗಿಸಿದರು. ಅಸ್ಸಾಮ್‌ನ ಶಿವಾಂಗಿ ಶರ್ಮಾ (58.07 ಸೆ.) ಎರಡನೇ ಮತ್ತು ಬಂಗಾಳದ ಜಾಹ್ನವಿ ಚೌಧರಿ (58.37 ಸೆ) ಮೂರನೇ ಸ್ಥಾನ ಪಡೆದರು. ಕರ್ನಾಟಕದ ನೀನಾ ವೆಂಕಟೇಶ್ (59.42 ಸೆ.) ನಾಲ್ಕನೇ ಸ್ಥಾನ ಗಳಿಸಿದರು.

ಶ್ರೀಹರಿ ನಟರಾಜ್, ವಿದಿತ್ ಎಸ್.ಶಂಕರ್, ನೀನಾ ವೆಂಕಟೇಶ್, ಧೀನಿಧಿ ದೇಸಿಂಗು ಅವರಿದ್ದ ತಂಡ 4x100 ಮೀ. ಮಿಶ್ರ ರಿಲೇಯಲ್ಲೂ ಕೂಟ ದಾಖಲೆಯೊಡನೆ (ಕಾಲ: 4ನಿ.03.80ಸೆ.) ಚಿನ್ನ ಗೆದ್ದಿತು. ರಾಜ್‌ಕೋಟ್‌ನಲ್ಲಿ ಕಳೆದ ವರ್ಷ ತಮಿಳುನಾಡು ತಂಡ ಈ ಹಿಂದಿನ ದಾಖಲೆ (4ನಿ.11.08 ಸೆ.) ಸ್ಥಾಪಿಸಿತ್ತು.

100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಕೇರಳದ ಹರ್ಷಿತಾ ಜಯರಾಮ್ 1ನಿ.13.89 ಸೆ.ಗಳಲ್ಲಿ ಅಂತರ ಕ್ರಮಿಸಿ ನೂತನ ದಾಖಲೆ ಸ್ಥಾಪಿಸಿದರು. ಅವರಿಗೆ ತೀವ್ರ ಪೈಪೋಟಿ ನೀಡಿದ ಕರ್ನಾಟಕದ ಲಿನೇಶಾ ಎ.ಕೆ. (1ನಿ.13.99 ಸೆ.) ಬೆಳ್ಳಿಯ ಪದಕ ಗೆದ್ದುಕೊಂಡರು. ಹಳೆಯ ದಾಖಲೆ ಪಂಜಾಬ್‌ನ ಚಾಹತ್ ಅರೋರಾ (2022ರಲ್ಲಿ 1:14.42) ಹೆಸರಿನಲ್ಲಿತ್ತು. ಕರ್ನಾಟಕದ ಮಾನವಿ ವರ್ಮಾ (1:15.38) ನಾಲ್ಕನೇ ಸ್ಥಾನಕ್ಕೆ ಸರಿದರು. ಇದೇ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಕರ್ನಾಟಕದ ಸರ್ವಿಸಸ್‌ನ ಲಿಖಿತ್ ಎಸ್.ಪಿ. (1:02.25) ಚಿನ್ನ ಗೆದ್ದರು. ಕರ್ನಾಟಕದ ವಿದಿತ್ ಎಸ್. ಶಂಕರ್ (1:04.89) ನಾಲ್ಕನೇ ಸ್ಥಾನ ಪಡೆದರು.

ಟೆನಿಸ್: ಡಬಲ್ಸ್ ತಂಡಕ್ಕೆ ಬೆಳ್ಳಿ

ಕರ್ನಾಟಕದ ಆದಿಲ್ ಕಲ್ಯಾಣಪುರ್ ಮತ್ತು ಎಸ್.ಡಿ.ಪ್ರಜ್ವಲ್ ದೇವ್ ಜೋಡಿ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಬೆಳ್ಳಿ ಜಯಿಸಿತು.

ಶನಿವಾರ ನಡೆದ ಫೈನಲ್‌ನಲ್ಲಿ ಕರ್ನಾಟದ ಜೋಡಿಯನ್ನು 7-6, 6-3 ರಿಂದ ಮಣಿಸಿದ ಮಹಾರಾಷ್ಟ್ರದ ಪುರವ್ ರಾಜಾ ಮತ್ತು ಅರ್ಜುನ್ ಖಾಡೆ ಅವರು ಚಿನ್ನದ ಪದಕ ಗೆದ್ದರು.

ಚೆಸ್: ಸ್ಟೆಫಾನೊವಾ ವಿರುದ್ಧ ಗೆದ್ದ ವೈಶಾಲಿ

ಐಲ್ ಆಫ್ ಮ್ಯಾನ್ (ಪಿಟಿಐ): ಮಾಜಿ ವಿಶ್ವ ಮಹಿಳಾ ಚಾಂಪಿಯನ್ ಅಂಟೋನೇಟಾ ಸ್ಟೆಫಾನೊವಾ ಅವರನ್ನು ಸೋಲಿಸಿದ ಭಾರತದ ಆರ್.ವೈಶಾಲಿ, ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಮಹಿಳಾ ವಿಭಾಗದಲ್ಲಿ ಒಂಬತ್ತನೇ ಸುತ್ತಿನ ನಂತರ ಒಂಟಿಯಾಗಿ ಅಗ್ರಸ್ಥಾನಕ್ಕೇರಿದರು. ಚೆನ್ನೈನ ಅವರು ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೆ ಇನ್ನಷ್ಟು ಹತ್ತಿರವಾದರು.

ಅತ್ಯುನ್ನತ ಮಟ್ಟದಲ್ಲಿ ಆಡುತ್ತಿರುವ ವೈಶಾಲಿ, ಮಹತ್ವದ್ದೇನೂ ಅಲ್ಲದ ನಾಲ್ಕನೇ ಜಿಎಂ ನಾರ್ಮ್ ಕೂಡ ಪಡೆದರು. ಅವರಿಗೆ ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೆ ಇನ್ನು ಏಳು ರೇಟಿಂಗ್ ಪಾಯಿಂಟ್ ಅಷ್ಟೇ ಬೇಕಾಗಿದೆ. ಭಾರತದಲ್ಲಿ ಇದುವರೆಗೆ ಇಬ್ಬರು ಆಟಗಾರ್ತಿಯರು ಮಾತ್ರ (ಕೋನೇರು ಹಂಪಿ ಮತ್ತು ದ್ರೋಣವಲ್ಲಿ ಹಾರಿಕಾ) ಗ್ರ್ಯಾಂಡ್‌ಮಾಸ್ಟರ್ ಬಿರುದು ಪಡೆದಿದ್ದಾರೆ.

ಪ್ರಜ್ಞಾನಂದ ಅವರ ಅಕ್ಕ ವೈಶಾಲಿ ಈಗ ಟೂರ್ನಿಯಲ್ಲಿ ಏಳು ಪಾಯಿಂಟ್ಸ್ ಗಳಿಸಿದ್ದಾರೆ. ಅವರು ಹತ್ತನೇ ಸುತ್ತಿನಲ್ಲಿ ಮೊದಲ ಬೋರ್ಡ್‌ನಲ್ಲಿ ಚೀನಾದ ಝೊಂಗ್‌ಯಿ ತಾನ್ ಅವರನ್ನು ಎದುರಿಸಲಿದ್ದಾರೆ. ರಷ್ಯಾದ ಲೆವಾ ಗರಿಫುಲಿನಾ (6) ಎರಡನೇ ಬೋರ್ಡ್‌ನಲ್ಲಿ ಉಕ್ರೇನ್‌ನ ಆನ್ನಾ ಮುಝಿಚೆಕ್ ಜೊತೆ ಡ್ರಾ ಮಾಡಿಕೊಂಡರು. ಫ್ರಾನ್ಸ್‌ನ ಸೋಫಿ ಮಿಲೆಟ್ (5.5) ಇನ್ನೊಂದು ಪಂದ್ಯದಲ್ಲಿ ಚೀನಾದ ತಾನ್ ಝೊಂಗ್‌ಇ (ಚೀನಾ, 6.5) ಅವರಿಗೆ ಮಣಿದರು.

ವಿದಿತ್‌ಗೆ ಜಂಟಿ ಮುನ್ನಡೆ: ಓಪನ್ ವಿಭಾಗದಲ್ಲಿ ಗ್ರ್ಯಾಂಡ್ ಮಾಸ್ಟರ್ ವಿದಿತ್ ಗುಜರಾತಿ ಎರಡನೇ ಬೋರ್ಡ್‌ನಲ್ಲಿ ಆ್ಯಂಡ್ರಿ ಇಸಿಪೆಂಕೊ ಅವರ ಜೊತೆ ಡ್ರಾ ಆಡಿದರು. ಅವರು 6.5 ಪಾಯಿಂಟ್ಸ್ ಸಂಗ್ರಹಿಸಿದ್ದು ಇತರ 5 ಮಂದಿ ಜೊತೆ ಅಗ್ರ ಸ್ಥಾನ ಹಂಚಿಕೊಂಡಿದ್ದಾರೆ. ಅವರು ಹತ್ತನೇ ಸುತ್ತಿನಲ್ಲಿ ಬೊಗ್ದಾನ್ ಡೇನಿಯಲ್ ಡೆಕ್ ಅವರನ್ನು ಎದುರಿಸಲಿದ್ದಾರೆ.

ಅಮೆರಿಕದ ಅನುಭವಿಗಳಾದ ಫ್ಯಾಬಿಯಾನೊ ಕರುವಾನ, ಹಿಕಾರು ನಕಾಮುರಾ, ರುಮೇನಿಯಾದ ಡೇನಿಯಲ್ ಡೆಕ್, ಇರಾನ್‌ನ ಪರ್ಹಾಮ್ ಮಘಸೂಡ್ಲೂ ಮತ್ತು ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಕೂಡ ಆರೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಭಾರತದ ಅರ್ಜುನ್ ಇರಿಗೇಶಿ ಸೇರಿದಂತೆ ಆರು ಆಟಗಾರರು ತಲಾ ಆರು ಪಾಯಿಂಟ್ಸ್ ಸಂಗ್ರಹಿಸಿದ್ದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಅರ್ಜುನ್ ಒಂಬತ್ತನೇ ಸುತ್ತಿನಲ್ಲಿ ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ (6) ಜೊತೆ ಡ್ರಾ ಮಾಡಿಕೊಂಡರು.

ಜೋಹರ್ ಕಪ್: ಪಾಕ್ ಮೇಲೆ ಗೆದ್ದ ಭಾರತಕ್ಕೆ ಕಂಚು

ಜೊಹೋರ್ ಬಹ್ರು (ಮಲೇಷ್ಯಾ), (ಪಿಟಿಐ): ಗೋಲ್‌ಕೀಪರ್ ಎಚ್.ಎಸ್.ಮೋಹಿತ್ ಅವರು ಪೆನಾಲ್ಟಿ ಶೂಟೌಟ್‌ನಲ್ಲಿ ನಿರ್ಣಾಯಕ ತಡೆ ಪ್ರದರ್ಶಿಸಿ ಸುಲ್ತಾನ್ ಆಫ್ ಜೋಹರ್ ಕಪ್ ಹಾಕಿ ಟೂರ್ನಿಯಲ್ಲಿ ಭಾರತ ಜೂನಿಯರ್ ತಂಡ 6-5 ಗೋಲುಗಳಿಂದ ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು ಸೋಲಿಸುವಲ್ಲಿ ನೆರವಾದರು. ಭಾರತ ಈ ಗೆಲುವಿನೊಡನೆ ಕಂಚಿನ ಪದಕ ಪಡೆಯಿತು.

ನಿಗದಿ ಅವಧಿಯ ಆಟದಲ್ಲಿ ಸ್ಕೋರ್ 3-3 ಗೋಲುಗಳಿಂದ ಸಮನಾಗಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ



ಶ್ರೀ ಕೆ. ಪ್ರೇಮಾನಂದ ಶೆಟ್ಟಿ
(ನಿವೃತ್ತ ಔಷಧ ನಿಯಂತ್ರಕರು, ಕರ್ನಾಟಕ ರಾಜ್ಯ)
ಇವರು 30-10-2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸುವ
ಕರ್ನಾಟಕ ಔಷಧ ನಿಯಂತ್ರಣ ಇಲಾಖೆ ಅಮುಲುಜಾರಿ ಅಧಿಕಾರಿಗಳ ಸಂಘ (ನೋಂ)

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ACCOUNTANT WANTED with Minimum One year Experience For Jewellery Shop Basaveswarnagar (Tally Knowledge Must): 9008052173

General

ಬೆಂಗಳೂರಿನಲ್ಲಿರುವ SLV ಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18ರಿಂದ45). ಊಟ ವಸತಿಯೊಂದಿಗೆ ಟ್ರೈನಿಂಗ್ ಕೊಟ್ಟು ಸಂಬಳ 10000/ ರಿಂದ 20000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆ ಮಾಡಿ. 7019869181, 9886922255

ಬೇಕಾಗಿದ್ದಾರೆ: ಮನೆ ಕೆಲಸ, ಆಫೀಸ್ ಕೆಲಸ ಮಾಡಲು ತಾಯಿ ಮಗಳು ಇರುವಂತಹವರು ಬೇಕಾಗಿದ್ದಾರೆ. ಊಟ ವಸತಿ ಉಚಿತ. con: 9663689914

Marketing & Sales

SALES STAFF Wanted with Experience in Retail Jewellery Store Basaveswarnagar Bangalore. More Details Contact: 9008052173

Multiple Vacancy

ವೆಜ್ ಹೋಟೆಲ್ಗೆ ಚೆಫ್, ದೋಸೆ ಮಾಸ್ಟರ್, ಕ್ಯಾಷಿಯರ್, ಟೀ ಮಾಸ್ಟರ್, ಕೌಂಟರ್ ಬಾಯ್ಸ್, ಕ್ಲೀನರ್ ಸಿಬ್ಬಂದಿ ಬೇಕಾಗಿದ್ದಾರೆ. +91 7019299055/ 8861453552

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ತಕ್ಷಣ ಬೇಕಾಗಿದ್ದಾರೆ: ಸರ್ಕಾರಿ ಇಲಾಖೆಯಲ್ಲಿ ಹೊರಗುತ್ತಿಗೆ ಸಂಸ್ಥೆ ಮುಖಾಂತರ ರಾಮನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಾಮರಾಜನಗರ, ಪುತ್ತೂರು ಡಿವಿಷನ್‌ಗಳಲ್ಲಿ ಸಂಪೂರ್ಣವಾಗಿ ಹೊರಗುತ್ತಿಗೆ ಆಧಾರದ ಮೇಲೆ 11ತಿಂಗಳ ಅವಧಿಗೆ ಕರ್ತವ್ಯ ನಿರ್ವಹಿಸಲು ITI/Diploma/Apprenticeship Trainingany tradeಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:- ಎಂಆರ್ ಗ್ರೂಪ್ಸ್, ಎಂಆರ್ ಮ್ಯಾನ್ಷನ್, ನಂ.26. 34/4,ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಕಲಾಗ್ರಾಮ ಎದುರು, ರಿಂಗ್‌ರಸ್ತೆ, HP ಪೆಟ್ರೋಲ್ ಬಂಕ್ ಹತ್ತಿರ, ಬೆಂಗಳೂರು-56, Email:- ksf9hr2@gmail.com, Phone:- 08023183399/ 0802315599

ವಿಜಯನಗರ ಬೆಂಗಳೂರು ಮತ್ತು ಸುತ್ತಮುತ್ತ ಕಚೇರಿ ಸಹಾಯಕರು ಬೇಕಾಗಿದ್ದಾರೆ. ಮಹಿಳೆಯರಿಗೆ ಆದ್ಯತೆ. ಸಂಪರ್ಕಿಸಿ : 9591050749 / 08041158379

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

South

ಬೆಂಗಳೂರು ಮಂಗಳೂರು ಹೆದ್ದಾರಿ NH 75 ನಲ್ಲಿ ಸ್ಪಷ್ಟ ಶೀರ್ಷಿಕೆ ಮತ್ತು ಸುರಕ್ಷಿತದೊಂದಿಗೆ ಅತ್ಯುತ್ತಮವಾದ ಆಸ್ತಿ ಮಾರಾಟಕ್ಕಿದೆ. ಸ್ಥಳವು ಕಂಚಿನಕೋಟೆಯಲ್ಲಿ ಬೆಂಗಳೂರಿನ ಕಡೆಗೆ ಟೋಲ್ ನಂತರ ಎಡಭಾಗದಲ್ಲಿದೆ. NH 75 ನಲ್ಲಿ ಕರಬೈಲು (ಬೇಲೂರು ಕ್ರಾಸ್) ಟೋಲ್ ಬೂತ್‌ನಿಂದ ಕೇವಲ 200 ಮೀ. ಸಂಪೂರ್ಣ ಬೇಲಿಯಿಂದ ಸುತ್ತುವರಿದ ಮತ್ತು ಗೇಟ್ ಮಾಡಿದ ಫಲವತ್ತಾದ ಭೂಮಿ. ವಾಣಿಜ್ಯ ಅಭಿವೃದ್ಧಿ ಮತ್ತು ಹೂಡಿಕೆಯ ಮೇಲಿನ ಆದಾಯಕ್ಕೆ ಸಂಪೂರ್ಣವಾಗಿ ಹೆಚ್ಚಿನ ಸಾಮರ್ಥ್ಯ. ಪ್ರತಿ ಗುಂಟಾ ಬೆಲೆ 3 Cr ಅಥವಾ 10L 8618435353 ನಲ್ಲಿ ಫಿಲಿಪ್ ಅವರೊಂದಿಗೆ ಪತ್ರವ್ಯವಹಾರ ಮಾಡಿ

House

Outskirts

ಮನೆ ಮಾರಾಟಕ್ಕಿದೆ : ಬೆಂಗಳೂರಿನ ಸಮೀಪದ ಬಿಡದಿ ರೈಲ್ವೆ ನಿಲ್ದಾಣದ ಹತ್ತಿರ, 15x45 ಶೀಟಿನ ಮನೆ, ಸಂಪರ್ಕಿಸಿ 9916511475, 8904459329.

Residential/ Commercial

Uttarahalli

NEW 3BHK East face AGS Layout, 2050 Sqft Ready to move. 8971436547

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಸಾಮಾನ್ಯ ಸ ನಾನ್ ಈ ಮೂಲಕ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಇಲ್ಲಿ ಕೆಳಗೆ ಉಲ್ಲೇಖಿಸಲಾಗಿರುವ' ಸ್ವತ್ತನ್ನು ಅದರ ಜಮೀನು. ಮಾಲೀಕರಾದ" ಸ್ರಿ ಶಿವಶಂಕರ್ ವೈ ಕೆ, ವಯಸ್ಸು ಸುಮಾರು 52 ವರ್ಷ, ಬಿನ್ ಶ್ರೀ. ಲೇಟ್ ಕಂಚೇಗೌಡ, ವಿಳಾಸ ನಂ. 119, 2ನೇ ಅಡ್ಡರಸ್ತೆ, ಇ ಸ್ಟ್ರೀಟ್, ಮೈಸೂರು ರಸ್ತೆ, ಹೊಸ "ಗುಡ್ಡದಹಳ್ಳಿ, ಬೆಂಗಳೂರು ದಕ್ಷಿಣ-560026 ತೇರಾಥ್ ಶ್ರೀ. ವೆಂಕಟೇಗೌಡ ಮತ್ತು ಶ್ರೀ. ಕಂಚೇಗೌಡ (ಸಹೋದರ) ವಿಳಾಸ ಯತ್ತಂಬಾಡಿ, ಹಲಗೂರು ಹತ್ತಿರ, ಮಳವಳ್ಳಿ 'ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ 571421 ಅವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾರಿಗಾದರೂ ಆಕ್ಷೇಪಣೆ, ಕ್ಲೇಮ್, ಹಿತಾಸಕ್ತಿ, ತಗಾದೆಗಳಿದ್ದಲ್ಲಿ ಅಂತಹವರು ಈ ಪ್ರಕುನೇಯು ಪ್ರಕಟಗೊಂಡ ದಿನಾಂಕ ದಿಂದ ಏಳು (7) "ದಿನಗಳೊಳಗೆ, ತಮ್ಮ ಆಕ್ಷೇಪಣೆ/ಕ್ಲೇಮ್/ತಗಾದೆಗಳನ್ನು ಸಾಬೀತುಪಡಿಸಬಲ್ಲ ಅಗತ್ಯ ದಾಖಲಾತಿ ಪುರಾವೆಗಳ ಸಮೇತ, ಈ ಕೆಳಗೆ ಸಹಿ ಹಾಕಿರುವವರನ್ನು ಸಂಪರ್ಕಿಸಬೇಕು, ಇಲ್ಲ ವಾದಲ್ಲಿ ಸದರಿ. ಸ್ವತ್ತಿನ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ, ಕೇಮ್, ತಗಾದೆಗಳು ಇರುವುದಿಲ್ಲವೆಂದು ಪರಿಭಾವಿಸುವ ನನ್ನ ಕಕ್ಷಿದಾರರು ಉದ್ದೇಶಿತ ಖರೀದಿ ವಹಾರ ಪರ್ಣ ಗೊಳಿಸಿಕೊಳ್ಳಲು ಮುಂದಾಗುತ್ತಾರೆ ಮತ್ತು ನಿಗದಿತ ಅವಧಿಯ ನಂತರದ ಹಾವುದೇ ಆಕ್ಷೇಪಣೆ/ಕ್ಲೇಮ್/ತಗಾದೆಗಳನ್ನು ಪರಿಗಣಿಸ ಲಾಗುವುದಿಲ್ಲ.
ಷೆಡ್ಯೂಲ್ ಪ್ರಾಪರ್ಟಿ
ಕರ್ನಾಟಕದ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಯತ್ತಂಬಾಡಿ ಗ್ರಾಮದ ಸರ್ವೆ ನಂ. 30/9 ರಲ್ಲಿರುವ 2 ಎಕರೆ ಮತ್ತು 13 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನು ಮತ್ತು ಆದರಲ್ಲಿರು ತೆಂಗಿನ ಮರಗಳು... ಈ ಜಮೀನಿನ ಹಿಭಾಗವು. ಶಿಂಷಾ ನದಿ ತೀರಕ್ಕೆ ಅಂಟಿಕೊಂಡಂತಿದೆ.
ಸಹಿ/-ಶ್ರೀ ಖಾಜಾ ಸಮಿಉಲ್ಲಾ ಹರುನಿ
ಶ್ರೀ ಹರುನಿ ಖಾಜಾ ಸಫಿಉಲ್ಲಾ
ಫೋನ್: +91 8123801142
ಇವರ ಮುಖಾಂತರ
ಸುಗತ ಅಸೋಸಿಯೇಟ್ಸ್ ಮತ್ತು ವಕೀಲರು, ಕೋರಮಂಗಲ, ಬೆಂಗಳೂರು
ದಿನಾಂಕ: 04-11-2023

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಹಿರಿಯೂರು.
ಎಫ್ ಡಿಪಿ ನಂ 06/2013
ಅರ್ಜಿದಾರರು: 1) ಶ್ರೀನಿವಾಸಗುಪ್ತ
-ವಿರುದ್ಧ-
ಎದುರುದಾರರು: ಹೆಚ್.ಎಲ್. ಶ್ರೀದರಗುಪ್ತ ಮತ್ತು ಇತರರು
16ನೇ ಎದುರುದಾರರ ವಿಳಾಸ: ಸೀತಾಲಕ್ಷ್ಮಿ ಕೋಂ ಹೆಚ್ ಎಲ್ ನಾಗರಾಜ್ ಸುಮಾರು 60 ವರ್ಷಗಳು, ವಾಸ ಡೋರ್ ನಂ. 917/5, ಮೊದಲನೇ ಮಹಡಿ, 16ಎ ಮುಖ್ಯ ರಸ್ತೆ, 15ನೇ ತಿರುವು ‘ಎ’ ಸೆಕ್ಟರ್, ಯಲಹಂಕ ಹೊಸಟೌನ್, ಬೆಂಗಳೂರು 560064.
ಸಾರ್ವಜನಿಕ ಪ್ರಕಟಣೆ
ಈ ಕೇಸಿನ ಅರ್ಜಿದಾರರು ಎದುರುದಾರರ ಮೇಲೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಈ ಮೇಲೆ ತಿಳಿಸಿದ 16ನೇ ಎದುರುದಾರರಿಗೆ ಈಗಾಗಲೇ ಹಲವು ಬಾರಿ ಸಮನ್ಸು ನೀಡಿದ್ದರು ಸಹ ಜಾರಿಯಾಗಿರುವುದಿಲ್ಲ. ಆದುದರಿಂದ ನ್ಯಾಯಾಲಯದ ಆದೇಶ 05 ನಿಯಮ 20ರ ಸಿಪಿಸಿ ಅಡಿಯಲ್ಲಿ ಸಲ್ಲಿಸಿದ್ದು ಸದರಿ ಅರ್ಜಿಯ ಆದೇಶದಂತೆ ಈ ವಿಷಯದ ಬಗ್ಗೆ ಈ ಮೇಲಿನ ಎದುರುದಾರರಾಗಲಿ ಅಥವಾ ಅವರ ಪರ ವಾರಸುದಾರರು ಯಾರಾದರು ತಕರಾರು ಸಲ್ಲಿಸುವ ವರಿದ್ದರೆ ಈ ಘನ ನ್ಯಾಯಾಲಯದ ಮುದ್ದತ್ತು ದಿನಾಂಕ 08.12.2023ರಂದು ಬೆ.11:00 ಗಂಟೆಗೆ ಸರಿಯಾಗಿ ಈ ಕೇಸಿನಲ್ಲಿ ಖುದ್ದಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸುವುದು. ತಪ್ಪಿದಲ್ಲಿ ಈ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.
ದಿನಾಂಕ: 03.11.2023 ರಂದು ನೀಡಲಾಗಿದೆ.
ಸಹಿ/- ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹಿರಿಯೂರು.
ಶ್ರೀ ಬಿ ಎನ್ ತಿಪ್ಪೇಸ್ವಾಮಿ, ಅರ್ಜಿದಾರರ ಪರ ವಕೀಲರು.

ಪ್ರವಾಸ

Travel

24.11.2023 ದಾಂಡೇಲಿ, ಗೋವಾ 4 ದಿನಗಳ ಪ್ರವಾಸ. 8-12-2023, 3 ದಿನಗಳ ಪ್ರವಾಸ ನವತಿರುಪತಿ, ತಿರುಪೂರಕುಂಡ್ರಂ, ತಿರುಚೆಂಧೂರ್, ಮದುರೈ, ಅಳಗರ್ ಕೋವಿಲ್, ಪಾಲಮುದಿರ್ರೆಸೋಲೇ, ನಾಮಕಲ್ 7829996723

★23.11.2023 9ದಿನಗಳು★ ಆಂಧ್ರ ಪ್ರವಾಸ,04.12.2023 5ದಿನಗಳು ಶ್ರೀಶೈಲಂ,ಅಹೋಬಲಂ, 12.12.2023 10ದಿನಗಳು ಗುಜರಾತ್,ಉಜ್ಜೈನ್ ಯಾತ್ರಾ, 03.01.2024 11ದಿನಗಳು ರಾಯಲ್ ರಾಜಸ್ಥಾನ, 10.01.2024 4ದಿನಗಳು ಉಜ್ಜೈನ್,ಓಂಕಾರ ಪ್ರವಾಸ, 16.01.2024 12ದಿನಗಳು ಕಾಶಿ-ಯಾತ್ರಾ.ಆರ್.ಗಾಂಧಿ ಟೂರ್ಸ್. 9945445809/ 9902433500

ವೈವಾಹಿಕ

Brides Wanted

Hindu

ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಾಗಿರುವ 40 ವರ್ಷದ ವೀರಶೈವ ಲಿಂಗಾಯಿತ ವರನಿಗೆ 30 ವರ್ಷ ಮೇಲ್ಪಟ್ಟ ವೀರಶೈವ ಲಿಂಗಾಯಿತ ವಧು ಬೇಕಾಗಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9945646919

Second Marriage

ಎರಡನೇ ವಿವಾಹದ ವರನಿಗೆ ವಧು ಬೇಕಾಗಿದೆ. 9019976891

Grooms Wanted

Others

ವರ ಬೇಕಾಗಿದ್ದಾರೆ
26 ವರ್ಷ, 5'3" ಎತ್ತರ, ಬಿಳಿ ಬಣ್ಣ, PUC II ಓದಿರುವ ಹಿಂದೂ ಬ್ರಾಹ್ಮಣ ಬಡ ಯುವತಿಯ ತಂದೆ ದೇವಸ್ಥಾನದಲ್ಲಿ ಪೂಜಾರಿ ಇದ್ದಾರೆ. ತಾಯಿ ಇಲ್ಲ. ಯಾವುದೇ ಜಾತಿಯ ವರ ಬೇಕಾಗಿದ್ದಾರೆ.
83788 79264
84460 68427

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಭಾರತೀಯ ರೈಲ್ವೇಸ್ ಭಾರತ್ ಗೌರವ್ ರೈಲು
ಖಾಸಗಿ ರೈಲು ಸರ್ವಿಸ್
ಗುಜರಾತ್ ಪ್ರವಾಸ
ಥಾಕೂರ್ ದ್ವಾರಕಾ - ಬೆಟ್ ದ್ವಾರಕ
ಸೋಮನಾಥ - ಉದೈಪುರ್ - ನಾಥದ್ವಾರ
ಕಂಕ್ರೋಲಿ ದ್ವಾರಕಾ - ನಿಷ್ಕಳಂಕ ಮಹಾದೇವ್
ಸರ್ದಾರ್ ವಲ್ಲಭಾಯಿ ಪಟೇಲ್ ಏಕತೆ ಪ್ರತಿಮೆ
10DEC|19050|12DAYS
ಖಾಸಗಿ ರೈಲು | ದೃಶ್ಯ ಪ್ರೇಕ್ಷಣ | ಟೂರ್ ಮ್ಯಾನೇಜರ್ ರೂಮ್ಸ್ | ಊಟ ವಸತಿ
9015500200 | RAILTOURISM.COM

ಈಡನ್ ಗಾರ್ಡನ್ಸ್‌ನಲ್ಲಿ ಆತಿಥೇಯರಿಗೆ ದಕ್ಷಿಣ ಆಫ್ರಿಕಾ ಸವಾಲು; ಅಗ್ರಸ್ಥಾನಕ್ಕಾಗಿ ಪೈಪೋಟಿ

ಭಾರತಕ್ಕೆ ತಡೆಯೊಡ್ಡುವುದೇ ತೆಂಬಾ ಪಡೆ?

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಇಡೀ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದೇ ಸೆಮಿಫೈನಲ್ ಪ್ರವೇಶಿಸಿರುವ ಭಾರತದ ತಂಡದ ‘ಓಟ’ಕ್ಕೆ ಕಡಿವಾಣ ಹಾಕುವ ಛಲದಲ್ಲಿ ದಕ್ಷಿಣ ಆಫ್ರಿಕಾ ಇದೆ. ಇನ್ನೊಂದೆಡೆ ಆಡಿದ ಪ್ರತಿ ಪಂದ್ಯದಲ್ಲಿಯೂ ರನ್‌ಗಳ ಹೊಳೆ ಹರಿಸುತ್ತಿರುವ ಹರಿಣಗಳ ಆಟಕ್ಕೆ ಕಡಿವಾಣ ಹಾಕಲು ಆತಿಥೇಯರು ಸುಸಜ್ಜಿತರಾಗಿ ನಿಂತಿದ್ದಾರೆ.

ಈ ಎರಡೂ ತಂಡಗಳು ಈಡನ್ ಗಾರ್ಡನ್ಸ್‌ನಲ್ಲಿ ಭಾನುವಾರ ಮುಖಾಮುಖಿಯಾಗಲಿವೆ. ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಭಾರತ ಮತ್ತು ಎರಡನೇ ಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ತಂಡಗಳು ರೌಂಡ್ ರಾಬಿನ್ ಲೀಗ್‌ನಲ್ಲಿ ಅತ್ಯಂತ ಬಲಾಢ್ಯ ತಂಡಗಳಾಗಿ ಹೊರಹೊಮ್ಮಿವೆ. ಆಡಿದ ಏಳು ಪಂದ್ಯಗಳಲ್ಲಿಯೂ ಭಾರತ ಗೆದ್ದಿದೆ.

ಆದರೆ ಇಷ್ಟೇ ಪಂದ್ಯಗಳನ್ನು ಆಡಿರುವ ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ನೆದರ್ಲೆಂಡ್ಸ್ ವಿರುದ್ಧ ಅನುಭವಿಸಿದ್ದ ಆಘಾತ ಬಿಟ್ಟರೆ ಉಳಿದದ್ದರಲ್ಲಿ ಭರ್ಜರಿ ಜಯ ಸಾಧಿಸಿದೆ. ಅಲ್ಲದೇ ಉಳಿದೆಲ್ಲ ತಂಡಗಳಿಗಿಂತ ಹೆಚ್ಚು ನೆಟ್ ರನ್ ರೇಟ್ ಹೊಂದಿದೆ.

ಆದರೂ ಭಾರತವನ್ನು ಸೋಲಿಸುವುದು ಸುಲಭವಲ್ಲ. ಎಲ್ಲ ವಿಭಾಗಗಳಲ್ಲಿಯೂ ಆಟಗಾರರು ಶ್ರೇಷ್ಠ ಲಯದಲ್ಲಿದ್ದಾರೆ. ನಾಯಕ ರೋಹಿತ್ ಶರ್ಮಾ, ಶುಭಮನ್ ಗಿಲ್ ಉತ್ತಮ ಆರಂಭ ನೀಡುತ್ತಿದ್ದಾರೆ. ಅದರ ಮೇಲೆ ಜಯದ ಸೌಧ ಕಟ್ಟುವಲ್ಲಿ ‘ಚೇಸಿಂಗ್ ಮಾಸ್ಟರ್’ ವಿರಾಟ್ ಕೊಹ್ಲಿ ಯಶಸ್ವಿಯಾಗಿದ್ದಾರೆ. ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್ ಕೂಡ ಲಯಕ್ಕೆ ಮರಳಿದ್ದಾರೆ.

ರವೀಂದ್ರ ಜಡೇಜ ತಮ್ಮ ಆಲ್‌ರೌಂಡ್ ಆಟವನ್ನು ಮುಂದುವರಿಸಿದ್ದಾರೆ.

ಬೌಲಿಂಗ್ ವಿಭಾಗವಂತೂ ಯಶಸ್ಸಿನ ಉತ್ತುಂಗದಲ್ಲಿದೆ. ಆಡಿದ ಮೂರು ಪಂದ್ಯಗಳಲ್ಲಿಯೇ ಎರಡು ಬಾರಿ ಐದು ವಿಕೆಟ್ ಗೊಂಚಲು ಗಳಿಸಿರುವ ಮೊಹಮ್ಮದ್ ಶಮಿ, ಮೊದಲ ಪವರ್ ಪ್ಲೇನಲ್ಲಿಯೇ ಪ್ರತಾಪ ಮೆರೆಯುತ್ತಿರುವ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಮುಂದೆ ಆಫ್ರಿಕಾ ಬ್ಯಾಟರ್‌ಗಳ ಅಬ್ಬರಕ್ಕೆ ತಡೆಯೊಡ್ಡುವ ಸವಾಲು ಇದೆ. ಸ್ಪಿನ್ನರ್ ಕುಲದೀಪ್ ಯಾದವ್ ಅವರ ಸ್ಪಿನ್ ಎಸೆತಗಳ ಸತ್ವ ಪರೀಕ್ಷೆಯೂ ಇಲ್ಲಿ ಆಗಬಹುದು.

ನಾಲ್ಕು ಶತಕ ಗಳಿಸಿರುವ ಕ್ವಿಂಟನ್ ಡಿಕಾಕ್, ಎರಡು ಬಾರಿ ಮೂರಂಕಿ ದಾಟಿರುವ ರೆಸಿ ವ್ಯಾನ್ ಡರ್ ಡಸೆ, ತಲಾ ಒಂದು ಶತಕ ಗಳಿಸಿರುವ ಏಡನ್ ಮರ್ಕರಂ ಮತ್ತು ಹೆನ್ರಿಚ್ ಕ್ಲಾಸನ್ ಅವರನ್ನು ಕಟ್ಟಿಹಾಕುವುದು ಪ್ರಮುಖ ಸವಾಲು. ಇವರಲ್ಲದೇ ಡೇವಿಡ್ ಮಿಲ್ಲರ್ ಕೂಡ ಬೀಸಾಟ ಮಾಡುವ ಬ್ಯಾಟರ್ ಆಗಿದ್ದಾರೆ. ಆದರೆ ನಾಯಕ ಬವುಮಾ ಮಾತ್ರ ಇನ್ನೂ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಂಡಿಲ್ಲ.

ದಕ್ಷಿಣ ಆಫ್ರಿಕಾದ ವೇಗಿ ಮಾರ್ಕೊ ಯಾನ್ಸನ್ ಅವರನ್ನು ಎದುರಿಸುವುದು ಭಾರತದ ಬ್ಯಾಟರ್‌ಗಳಿಗೆ ಇರುವ ಪ್ರಮುಖ ಸವಾಲು. ಸ್ಪಿನ್ನರ್ ಕೇಶವ್ ಮಹಾರಾಜ ಹಾಗೂ ಜೆರಾಲ್ಡ್ ಕೋಜಿ ತಂಡವನ್ನು ಜಯದತ್ತ ಮುನ್ನಡೆಸುವ ಸಮರ್ಥರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ:
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಭಾರತ ತಂಡದ ನಾಯಕ ರೋಹಿತ್ ಶರ್ಮಾ —ಪಿಟಿಐ ಚಿತ್ರ

ಬಲಾಬಲ

ಏಕದಿನ ಕ್ರಿಕೆಟ್	
ಪಂದ್ಯ	90
ಭಾರತ ಜಯ	37
ದ.ಆಫ್ರಿಕಾ ಜಯ	50
ಫಲಿತಾಂಶವಿಲ್ಲ	3
ಏಕದಿನ ವಿಶ್ವಕಪ್	
ಪಂದ್ಯ	5
ಭಾರತ ಜಯ	2
ದಕ್ಷಿಣ ಆಫ್ರಿಕಾ ಜಯ	3

ಪಿಚ್ ಹೇಗಿದೆ?

ಈಡನ್ ಗಾರ್ಡನ್ ಪಿಚ್‌ನಲ್ಲಿ ಆಡುವುದು ಬ್ಯಾಟರ್‌ಗಳಿಗೆ ಸವಾಲೊಡ್ಡುತ್ತದೆ. ಈ ಟೂರ್ನಿಯಲ್ಲಿ ಇಲ್ಲಿ ನಡೆದ ಎರಡೂ ಪಂದ್ಯಗಳಲ್ಲಿ ಬೃಹತ್ ಮೊತ್ತಗಳು ದಾಖಲಾಗಿಲ್ಲ.

ಬೌಲರ್‌ಗಳು ಹೆಚ್ಚು ಯಶಸ್ಸು ಸಾಧಿಸಿದ್ದಾರೆ. ಆ ಎರಡೂ ಪಂದ್ಯಗಳಲ್ಲಿ ಟಾಸ್ ಗೆದ್ದ ತಂಡಗಳೇ ಮೊದಲು ಬ್ಯಾಟಿಂಗ್ ಮಾಡಿದ್ದವು. ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವು ಬಾಂಗ್ಲಾದೇಶಕ್ಕೆ 230 ರನ್‌ಗಳ ಗುರಿಯೊಡ್ಡಿ 87 ರನ್‌ಗಳಿಂದ ಗೆದ್ದಿತ್ತು. ಇನ್ನೊಂದು ಪಂದ್ಯದಲ್ಲಿ ಬಾಂಗ್ಲಾ ತಂಡವು ಪಾಕಿಸ್ತಾನಕ್ಕೆ 204 ರನ್‌ಗಳ ಸಾಧಾರಣ ಗುರಿಯೊಡ್ಡಿ, 7 ವಿಕೆಟ್‌ಗಳಿಂದ ಸೋತಿತ್ತು. ಆದ್ದರಿಂದ ಬ್ಯಾಟರ್‌ಗಳು ಇಲ್ಲಿ ಎಚ್ಚರದಿಂದ ಆಡುವುದು ಮುಖ್ಯವಾಗಲಿದೆ.

ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಮತ್ತು ವೇಗದ ಬೌಲರ್ ಮಾರ್ಕೊ ಯಾನ್ಸನ್ ಅಭ್ಯಾಸ ನಡೆಸಿದರು —ಎಎಫ್‌ಪಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	7	7	0	0	14	2.102
ದಕ್ಷಿಣ ಆಫ್ರಿಕಾ	7	6	1	0	12	2.290
ಆಸ್ಟ್ರೇಲಿಯಾ	7	5	2	0	10	0.924
ನ್ಯೂಜಿಲೆಂಡ್	8	4	4	0	8	0.398
ಪಾಕಿಸ್ತಾನ	8	4	4	0	8	-0.036
ಅಫ್ಗಾನಿಸ್ತಾನ	7	4	3	0	8	-0.330
ಶ್ರೀಲಂಕಾ	7	2	5	0	4	-1.162
ನೆದರ್ಲೆಂಡ್ಸ್	7	2	5	0	4	-1.398
ಬಾಂಗ್ಲಾದೇಶ	7	1	6	0	2	-1.446
ಇಂಗ್ಲೆಂಡ್	7	1	6	0	2	-1.504

ದಾಖಲೆಯತ್ತ ‘ಬರ್ತ್‌ಡೇ ಬಾಯ್’ ಚಿತ್ತ

ಕೋಲ್ಕತ್ತ (ಪಿಟಿಐ): ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ಈಡನ್ ಗಾರ್ಡನ್ ಅದೃಷ್ಟದ ಅಂಗಳ.

ಏಕೆಂದರೆ; ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಅವರು ತಮ್ಮ ಚೊಚ್ಚಲ ಶತಕ ಗಳಿಸಿದ್ದು ಇದೇ ಕ್ರೀಡಾಂಗಣದಲ್ಲಿ. 2009ರ ಡಿಸೆಂಬರ್ ತಿಂಗಳಿನಲ್ಲಿ ಶ್ರೀಲಂಕಾ ಎದುರು ಅವರು ತಮ್ಮ ಶತಕದ ಖಾತೆ ತೆರೆದಿದ್ದರು. ಇದೀಗ ಅವರು ಸಚಿನ್ ತೆಂಡೂಲ್ಕರ್ ಶತಕಗಳ ದಾಖಲೆ (49) ಸಮೀಪ ಬಂದು ನಿಂತಿದ್ದಾರೆ. ಭಾನುವಾರ ಇಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಈ ಸಾಧನೆ ಮಾಡುವರೇ ಎಂಬ ಕುತೂಹಲ ಈಗ ಗರಿಗೆದರಿದೆ. ಅಲ್ಲದೇ ಅವರು ಇದೇ ದಿನ ತಮ್ಮ 35ನೇ ಜನ್ಮದಿನ ಆಚರಿಸಿಕೊಳ್ಳಲಿದ್ದಾರೆ.

ಶ್ರೀಲಂಕಾ ವಿರುದ್ಧದ ಆ ಪಂದ್ಯದಲ್ಲಿ ಗೌತಮ್ ಗಂಭೀರ್ ಕೂಡ ಶತಕ ಗಳಿಸಿದ್ದರು. ಆ ದಿನ ತಮಗೆ ಲಭಿಸಿದ್ದ ಪಂದ್ಯಶ್ರೇಷ್ಠ ಪ್ರಶಸ್ತಿಯ ಚೆಕ್ ಅನ್ನು ವೇದಿಕೆಯ ಮೇಲೆಯೇ ವಿರಾಟ್ ಅವರಿಗೆ ನೀಡಿ ಬೆನ್ನು ತಟ್ಟಿದ್ದರು. ತಮ್ಮದೇ ಊರಿನ (ದೆಹಲಿ) ಯುವ ಆಟಗಾರನನ್ನು ಗೌತಮ್ ಪ್ರೋತ್ಸಾಹಿಸಿದ್ದರು.

ಈ ಟೂರ್ನಿಯಲ್ಲಿ ಅವರು ನಾಲ್ಕು ಅರ್ಧಶತಕ ಮತ್ತು ಒಂದು ಶತಕ ಗಳಿಸಿದ್ದಾರೆ. ಅದರಲ್ಲಿ ಮೂರು ಸಲ 80ಕ್ಕಿಂತ ಹೆಚ್ಚು ರನ್ ಗಳಿಸಿದ್ದಾರೆ. ಆದರೆ ಅವುಗಳನ್ನು ಶತಕವಾಗಿ ಪರಿವರ್ತಿಸಲು ಸಾಧ್ಯವಾಗಿಲ್ಲ.

ಈಡನ್ ಗಾರ್ಡನ್ ಮತ್ತು ವಿರಾಟ್ ನಂಟು ಹಳೆಯದು. 14 ವರ್ಷಗಳ ಹಿಂದೆ ಅವರು ಇದೇ ಕ್ರೀಡಾಂಗಣದಲ್ಲಿ ಮೋಹನ್ ಬಾಗನ್ ಕ್ರಿಕೆಟ್ ತಂಡವು ಪಿ.ಸೇನ್ ಟ್ರೋಫಿ ಜಯಿಸಲೂ ಕಾರಣರಾಗಿದ್ದರು. ಆ ದಿನ ವಿಪರೀತ ಬಿಸಿಲು ಮತ್ತು ಸೆಕೆಯ ವಾತಾವರಣದಲ್ಲಿ ನಡೆದಿದ್ದ ಫೈನಲ್‌ನಲ್ಲಿ ವಿರಾಟ್ 121 ಎಸೆತಗಳಲ್ಲಿ 184 ರನ್ ಗಳಿಸಿದ್ದರು. ಎದುರಾಳಿ ಟೌನ್ ಕ್ಲಬ್ ಬೌಲರ್‌ಗಳ ಬೆವರಿಳಿಸಿದ್ದರು. ಮುಂದೊಂದು ದಿನ ಕ್ರಿಕೆಟ್ ಲೋಕದ ತಾರೆಯಾಗಿ ಬೆಳೆಯಲು ಸಿದ್ಧ ಎಂದು ತೋರಿಸಿದ್ದರು.

ವಿರಾಟ್ ಅವರ ಜನ್ಮದಿನಾಚರಣೆಯನ್ನು ಪಂದ್ಯದ ಸಂದರ್ಭದಲ್ಲಿ ಆಚರಿಸಲು ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಯೋಜಿಸಿತ್ತು. ಆದರೆ ಅದಕ್ಕೆ ಬಿಸಿಸಿಐ ಅನುಮತಿ ದೊರೆಯಲಿಲ್ಲ.

ಕೊಹ್ಲಿಯೇ ನವೆಂಬರ್ 19ರ ಫೈನಲ್ ಮುಗಿದ ನಂತರ ಆಚರಿಸಲು ನಿರ್ಧಾರ ಮಾಡಿದ್ದಾರೆನ್ನಲಾಗಿದೆ.

ವಿರಾಟ್ ಕೊಹ್ಲಿ

ಪಾಂಡ್ಯ ಅಲಭ್ಯ; ಪ್ರಸಿದ್ಧಗೆ ಅವಕಾಶ

ಕೋಲ್ಕತ್ತ (ಪಿಟಿಐ: ಪಾದದ ಗಾಯದಿಂದಾಗಿ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ವಿಶ್ವಕಪ್ ಕ್ರಿಕೆಟ್ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅವರ ಬದಲಿಗೆ ಕನ್ನಡಿಗ, ವೇಗಿ ಪ್ರಸಿದ್ಧ ಕೃಷ್ಣ ಅವರಿಗೆ ತಂಡಕ್ಕೆ ಸೇರ್ಪಡೆ ಮಾಡಲಾಗಿದೆ.

ಪ್ರಸಿದ್ಧ ಕೃಷ್ಣ

ಪುಣೆಯಲ್ಲಿ ನಡೆದ ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಪಾಂಡ್ಯ ಅವರ ಕಾಲು ಉಳುಕಿ ಗಾಯವಾಗಿತ್ತು. ಆದರೆ, ನಂತರ ಚಿಕಿತ್ಸೆಯಲ್ಲಿ ಅವರು ಪೂರ್ಣ ಚೇತರಿಸಿಕೊಂಡಿಲ್ಲ. ಪಾದದಲ್ಲಿ ಉರಿಯೂತ ಕಡಿಮೆಯಾಗದ ಕಾರಣ ಅವರಿಗೆ ದೀರ್ಘ ವಿಶ್ರಾಂತಿಗಾಗಿ ವೈದ್ಯರು ಸಲಹೆ ನೀಡಿದ್ದಾರೆ.

17 ಏಕದಿನ ಪಂದ್ಯಗಳನ್ನು ಆಡಿರುವ ಪ್ರಸಿದ್ಧ ಅವರನ್ನು ತಂಡಕ್ಕೆ ಸೇರಿಸಲಾಗಿದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

‘ಈ ಪರಿಸ್ಥಿತಿಯನ್ನು ಅರಗಿಸಿಕೊಳ್ಳುವುದು ಬಹಳ ಕಷ್ಟವಾಗುತ್ತಿದೆ. ವಿಶ್ವಕಪ್ ಟೂರ್ನಿಯಿಂದ ಹೊರಗುಳಿಯುವುದರಿಂದ ಮನಸ್ಸಿಗೆ ಬಹಳ ನೋವಾಗಿದೆ. ಆದರೆ ನಮ್ಮ ತಂಡದ ಗೆಲುವಿಗಾಗಿ ಸದಾ ಆಶಿಸುತ್ತೇನೆ. ತಂಡದ ಎಲ್ಲರೂ ನನ್ನ ಮೇಲೆ ತೋರಿರುವ ಪ್ರೀತಿ, ವಿಶ್ವಾಸ ಮತ್ತು ಸ್ನೇಹ ಅಮೂಲ್ಯವಾದದ್ದು. ಅವರೆಲ್ಲರಿಗೂ ಕೃತಜ್ಞತೆಗಳು’ ಎಂದು ಹಾರ್ದಿಕ್ ‘ಎಕ್ಸ್’ ಖಾತೆಯಲ್ಲಿ ಸಂದೇಶ ಹಾಕಿದ್ದಾರೆ.

ಅಗ್ರ ಐವರು

ಬ್ಯಾಟಿಂಗ್	
ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	545
ರಚಿನ್ ರವೀಂದ್ರ (ನ್ಯೂಜಿಲೆಂಡ್)	523
ವಿರಾಟ್ ಕೊಹ್ಲಿ (ಭಾರತ)	442
ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)	428
ರೋಹಿತ್ ಶರ್ಮಾ (ಭಾರತ)	402

ಬೌಲಿಂಗ್	
ಆ್ಯಡಂ ಜಂಪಾ (ಆಸ್ಟ್ರೇಲಿಯಾ)	19
ದಿಲ್ಯಾನ್ ಮಧುಶಂಕ (ಶ್ರೀಲಂಕಾ)	18
ಶಹೀನ್ ಶಾ ಅಫ್ರಿದಿ (ಪಾಕಿಸ್ತಾನ)	16
ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ)	16
ಜಸ್‌ಪ್ರೀತ್ ಬೂಮ್ರಾ (ಭಾರತ)	15

ಕುಸಿದ ಗಾಳಿ ಗುಣಮಟ್ಟ: ಲಂಕಾ ಅಭ್ಯಾಸ ರದ್ದು

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿ ವಾಯು ಮಾಲಿನ್ಯ ಗಂಭೀರ ಸ್ಥಿತಿಗೆ ತಲುಪಿರುವ ಕಾರಣ ಇದೀಗ ಶ್ರೀಲಂಕಾ ಕ್ರಿಕೆಟ್ ತಂಡದವರೂ ಶನಿವಾರ ತಮ್ಮ ಅಭ್ಯಾಸದ ಅಧಿವೇಶವನ್ನು ರದ್ದುಗೊಳಿಸುವ ಅನಿವಾರ್ಯತೆಗೆ ಸಿಲುಕಿದರು. ಶುಕ್ರವಾರ ಬಾಂಗ್ಲಾದೇಶ ತಂಡವೂ ತಾಲೀಮು ರದ್ದುಗೊಳಿಸಿತ್ತು. ಸೋಮವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಇವೆರಡು ತಂಡಗಳು ಮುಖಾಮುಖಿಯಾಗಲಿವೆ.

ಶನಿವಾರ ಗಾಳಿಯ ಗುಣಮಟ್ಟ ‘ತೀವ್ರ ಅಪಾಯ’ (ಸಿವಿಯರ್ ಪ್ಲಸ್) ವಿಭಾಗದಲ್ಲಿದೆ. ಗಾಳಿಯ ಗುಣಮಟ್ಟ ಸೂಚ್ಯಂಕ (ಎಕ್ಯೂಐ) ಶನಿವಾರ ಬೆಳಿಗ್ಗೆ 407ಕ್ಕೆ ತಲುಪಿತ್ತು.

ಶ್ರೀಲಂಕಾ ಆಟಗಾರರಿಗೆ ಇಲ್ಲಿನ ಪರಿಸ್ಥಿತಿ ಹೊಸದಲ್ಲ. 2017ರಲ್ಲಿ ಇಲ್ಲಿ ಟೆಸ್ಟ್ ಪಂದ್ಯ ನಡೆದಾಗ ಶ್ರೀಲಂಕಾ ಆಟಗಾರರು ಮಾಸ್ಕ್ ಧರಿಸಿ ಆಟವಾಡಿದ್ದರು.

ಸೆಮಿಫೈನಲ್‌ನತ್ತ ಆಸ್ಟ್ರೇಲಿಯಾ ದಾಪುಗಾಲು: ಲಯಕ್ಕೆ ಮರಳಿದ ಲಾಬುಷೇನ್, ಸ್ಮಿತ್

ಜಂಪಾ ಮೋಡಿಗೆ ಮುಗ್ಗರಿಸಿದ ಇಂಗ್ಲೆಂಡ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್): ಇಂಗ್ಲೆಂಡ್ ತಂಡದ ಮೂವರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಕಬಳಿಸಿದ ಸ್ಪಿನ್ನರ್ ಆ್ಯಡಂ ಜಂಪಾ ಆಸ್ಟ್ರೇಲಿಯಾ ತಂಡಕ್ಕೆ ಜಯದ ಕಾಣಿಕೆ ನೀಡಿದರು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 33 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಸೆಮಿಫೈನಲ್ ಹೊಸ್ತಿಲಿಗೆ ಬಂದು ನಿಂತಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಾರ್ನಸ್ ಲಾಬುಷೇನ್ (71; 83ಎ) ಮತ್ತು ಸ್ಟೀವನ್ ಸ್ಮಿತ್ (44; 52) ಅವರ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡವು 49.3 ಓವರ್‌ಗಳಲ್ಲಿ 286 ರನ್ ಗಳಿಸಿತು. ಇದಕ್ಕುತ್ತರವಾಗಿ ಇಂಗ್ಲೆಂಡ್ ತಂಡವು 48.1 ಓವರ್‌ಗಳಲ್ಲಿ 253 ರನ್ ಗಳಿಸಿ ಆಲೌಟ್ ಆಯಿತು. ಆಸ್ಟ್ರೇಲಿಯಾದ ಆ್ಯಡಂ ಜಂಪಾ (21ಕ್ಕೆ3) ಅವರೊಂದಿಗೆ ವೇಗಿಗಳೂ ಉತ್ತಮ ಬೌಲಿಂಗ್ ಮಾಡಿದರು. ತಂಡಕ್ಕೆ ಟೂರ್ನಿಯಲ್ಲಿ ಐದನೇ ಜಯ ಇದಾಗಿದೆ. ಇನ್ನೂ ಎರಡು ಪಂದ್ಯದಲ್ಲಿ ಆಡಲಿದೆ. ಇಂಗ್ಲೆಂಡ್ ಈಗಾಗಲೇ ಸೆಮಿ ಹಾದಿಯಿಂದ ನಿರ್ಗಮಿಸಿದೆ.

ಆಸ್ಟ್ರೇಲಿಯಾದ ಆ್ಯಡಂ ಜಂಪಾ —ಎಎಫ್‌ಪಿ ಚಿತ್ರ

ಸ್ಮಿತ್–ಮಾರ್ನಸ್ ಜೊತೆಯಾಟ: ಇಂಗ್ಲೆಂಡ್ ತಂಡವು ಆಸ್ಟ್ರೇಲಿಯಾಕ್ಕೆ ಆರಂಭಿಕ ಆಘಾತ ನೀಡಿತು. ಅಮೋಘ ಲಯದಲ್ಲಿರುವ ಟ್ರಾವಿಸ್ ಹೆಡ್ (11 ರನ್) ಮತ್ತು ಡೇವಿಡ್ ವಾರ್ನರ್ (15 ರನ್) ಅವರು ಅಬ್ಬರಿಸದಂತೆ ಕ್ರಿಸ್ ವೋಕ್ಸ್ ನೋಡಿಕೊಂಡರು. ಇದರಿಂದಾಗಿ ತಂಡವು 38 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತ್ತು.

ಈ ಹಂತದಲ್ಲಿ ಜೊತೆಗೂಡಿದ ಸ್ಟೀವನ್ ಸ್ಮಿತ್ (44; 52ಎ, 4X3) ಮತ್ತು ಮಾರ್ನಸ್ ಲಾಬುಷೇನ್ (71; 83ಎ, 4X7) ಅವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 75 ರನ್ ಸೇರಿಸಿದರು. ಇದು ತಂಡಕ್ಕೆ ಆಸರೆಯಾಯಿತು.

ಕಳೆದ ಕೆಲವು ಪಂದ್ಯಗಳಲ್ಲಿ ಫಾರ್ಮ್ ಕಂಡುಕೊಳ್ಳಲು ಸ್ಮಿತ್ ಮತ್ತು ಮಾರ್ನಸ್ ಅವರಿಬ್ಬರೂ ಯಶಸ್ವಿಯಾಗಿರಲಿಲ್ಲ. ಇಲ್ಲಿ ಇಬ್ಬರೂ ಉತ್ತಮವಾಗಿ ಆಡಿದರು. ಈ ಜೊತೆಯಾಟವನ್ನು ಸ್ಪಿನ್ನರ್ ಆದಿಲ್ ರಶೀದ್ 22ನೇ ಓವರ್‌ನಲ್ಲಿ ಮುರಿದರು. ಅವರು ಸ್ಮಿತ್ ವಿಕೆಟ್ ಗಳಿಸಿದರು. ತಮ್ಮದೇ ಇನ್ನೊಂದು ಓವರ್‌ನಲ್ಲಿ ಆದಿಲ್ ಅವರು ಜೋಷ್ ಇಂಗ್ಲಿಸ್ ವಿಕೆಟ್ ಗಳಿಸಿದರು.

ಕ್ರೀಸ್‌ನಲ್ಲಿದ್ದ ಮಾರ್ನಸ್ ಜೊತೆಗೂಡಿದ ಕ್ಯಾಮರಾನ್ ಗ್ರೀನ್ (47; 52ಎ) ಆತಂಕ ದೂರ ಮಾಡಿದರು. 5ನೇ ವಿಕೆಟ್ ಜೊತೆಯಾಟದಲ್ಲಿ 61 ರನ್‌ಗಳನ್ನು ಪೇರಿಸಿದರು. ಕೊನೆ ಹಂತದಲ್ಲಿ ಆ್ಯಡಂ ಜಂಪಾ 19 ಎಸೆತಗಳಲ್ಲಿ 29 ರನ್ ಹೊಡೆದು ತಂಡದ ಮೊತ್ತ ಹೆಚ್ಚಿಸಿದರು.

ಮಲಾನ್, ಸ್ಟೋಕ್ಸ್ ಅರ್ಧಶತಕ: ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡದ ಡೇವಿಡ್ ಮಲಾನ್ (50; 64ಎ, 4X4, 6X1) ಮತ್ತು ಬೆನ್ ಸ್ಟೋಕ್ಸ್ (64; 90ಎ, 4X2, 6X3) ಅರ್ಧಶತಕ ಗಳಿಸಿದರು.ಆದರೆ ನಾಯಕ ಜೋಸ್ ಬಟ್ಲರ್ ಅವರ ವೈಫಲ್ಯ ಮುಂದುವರಿಯಿತು. ಜಾನಿ ಬೆಸ್ಟೊ ಸೊನ್ನೆ ಸುತ್ತಿದರು. ಜೋ ರೂಟ್ ಕೂಡ 13 ರನ್ ಗಳಿಸಿ ನಿರ್ಗಮಿಸಿದರು. ಆದರೆ ಮೋಯಿನ್ ಅಲಿ, ಕ್ರಿಸ್ ವೋಕ್ಸ್, ವಿಲಿ ಮತ್ತು ಆದಿಲ್ ರಶೀದ್ ತಂಡದ ಜಯಕ್ಕೆ ಪ್ರಯತ್ನಿಸಿದರು. ಆದರೆ ಫಲ ಸಿಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 49.3 ಓವರ್‌ಗಳಲ್ಲಿ 286 (ಸ್ಟೀವನ್ ಸ್ಮಿತ್ 44, ಮಾರ್ನಸ್ ಲಾಬುಷೇನ್ 71, ಕ್ಯಾಮರಾನ್ ಗ್ರೀನ್ 47, ಮಾರ್ಕಸ್ ಸ್ಟೊಯಿನಿಸ್ 35, ಆ್ಯಡಂ ಜಂಪಾ 29, ಕ್ರಿಸ್ ವೋಕ್ಸ್ 54ಕ್ಕೆ4, ಮಾರ್ಕ್ ವುಡ್ 70ಕ್ಕೆ2, ಆದಿಲ್ ರಶೀದ್ 38ಕ್ಕೆ2) **ಇಂಗ್ಲೆಂಡ್:** 48.1 ಓವರ್‌ಗಳಲ್ಲಿ 253 (ಡೇವಿಡ್ ಮಲಾನ್ 50, ಬೆನ್ ಸ್ಟೋಕ್ಸ್ 64, ಮೋಯಿನ್ ಅಲಿ 42, ಕ್ರಿಸ್ ವೋಕ್ಸ್ 32, ಡೇವಿಡ್ ವಿಲಿ 15, ಆದಿಲ್ ರಶೀದ್ 20, ಮಿಚೆಲ್ ಸ್ಟಾರ್ಕ್ 66ಕ್ಕೆ2, ಜೋಷ್ ಹ್ಯಾಜಲ್‌ವುಡ್ 49ಕ್ಕೆ2, ಪ್ಯಾಟ್ ಕಮಿನ್ಸ್ 49ಕ್ಕೆ2, ಆ್ಯಡಂ ಜಂಪಾ 21ಕ್ಕೆ3) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 33 ರನ್‌ಗಳ ಜಯ. **ಪಂದ್ಯಶ್ರೇಷ್ಠ:** ಆ್ಯಡಂ ಜಂಪಾ

ಪಾಕಿಸ್ತಾನದ ಸೆಮಿಫೈನಲ್ ಕನಸು ಜೀವಂತ

ಫಕಾರ್ ಜಮಾನ್ ಅಜೇಯ ಶತಕ ● ನ್ಯೂಜಿಲೆಂಡ್‌ಗೆ ನಿರಾಸೆ ● ಫಲ ನೀಡದ ರಚಿನ್ ಶತಕದಾಟ

● ಮಹಮ್ಮದ್ ನೂಮಾನ್

ಬೆಂಗಳೂರು: ಫಕಾರ್ ಜಮಾನ್ ಗಳಿಸಿದ ಅಜೇಯ ಶತಕದ ನೆರವಿನಿಂದ ‘ಮಾಡು–ಮಡಿ’ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿದ ಪಾಕಿಸ್ತಾನ ತಂಡ, ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಮಳೆಯಿಂದ ತೊಂದರೆಗೊಳಗಾದ ಪಂದ್ಯವನ್ನು ಬಾಬರ್ ಅಜಂ ಬಳಗ ಡಕ್ವರ್ಥ್ ಲೂಯಿಸ್ ನಿಯಮದಂತೆ 21 ರನ್‌ಗಳಿಂದ ಗೆದ್ದುಕೊಂಡಿತು. ಸೋತರೂ ಕೇನ್ ವಿಲಿಯಮ್ಸನ್ ಪಡೆಯ ಸೆಮಿ ಕನಸು ಉಳಿದುಕೊಂಡಿದೆ.

81 ಎಸೆತಗಳಲ್ಲಿ 8 ಬೌಂಡರಿ ಹಾಗೂ 11 ಸಿಕ್ಸರ್‌ಗಳ ನೆರವಿನಿಂದ 126 ರನ್ ಗಳಿಸಿದ ಫಕಾರ್ ಮತ್ತು ಅತೀ ಅಗತ್ಯದ ಸಮಯದಲ್ಲಿ ಲಯ ಕಂಡುಕೊಂಡ ಬಾಬರ್ (ಅಜೇಯ 66; 63 ಎ., 4X6, 6X2) ಅವರು ಪಾಕ್ ಗೆಲುವಿನ ರೂವಾರಿಗಳಾದರು.

ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್, ಟೂರ್ನಿಯಲ್ಲಿ ಮೂರನೇ ಶತಕ ಗಳಿಸಿದ ರಚಿನ್ ರವೀಂದ್ರ (108; 94 ಎ., 4X15, 6X1) ಮತ್ತು ನಾಯಕ ವಿಲಿಯಮ್ಸನ್ (95; 79 ಎ., 4X10, 6X2) ಅವರ ಸೊಗಸಾದ ಬ್ಯಾಟಿಂಗ್ ನೆರವಿನಿಂದ 6 ವಿಕೆಟ್‌ಗಳಿಗೆ 401 ರನ್‌ಗಳ ಭಾರಿ ಮೊತ್ತ ಪೇರಿಸಿತು. ಬೆಂಗಳೂರು ಮೂಲದ ರಚಿನ್, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತಾವಾಡಿದ ಮೊದಲ ಪಂದ್ಯವನ್ನು ಸ್ಮರಣೀಯವನ್ನಾಗಿಸಿಕೊಂಡರೂ ಅದು ಗೆಲುವಿಗೆ ಸಾಕಾಗಲಿಲ್ಲ.

ಕಠಿಣ ಸವಾಲಿಗೆ ಉತ್ತರ ನೀಡತೊಡಗಿದ ಪಾಕ್ ತಂಡ, ಅಬ್ದುಲ್ಲಾ ಶಫೀಕ್ (4) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಫಕಾರ್ ಮತ್ತು ಬಾಬರ್ ದಿಟ್ಟವಾಗಿ ಹೋರಾಡಿದರು. ಮಳೆಯ ಆಟದ ನಡುವೆ ಫಕಾರ್ ಅವರು ಸಿಕ್ಸರ್‌ಗಳ ಮಳೆ ಸುರಿಸಿದರು.

ಬಾಬರ್ ಬಳಗ 21.3 ಓವರ್‌ಗಳಲ್ಲಿ 1 ವಿಕೆಟ್‌ಗೆ 160 ರನ್ ಗಳಿಸಿದ್ದಾಗ ಮಳೆಯಿಂದಾಗಿ ಆಟ ನಿಂತಿತು. ಒಂದೂವರೆ ಗಂಟೆಯ ಆಟ ನಷ್ಟವಾದ್ದರಿಂದ ಡಕ್ವರ್ಥ್ ಲೂಯಿಸ್ ನಿಯಮದಂತೆ ಗೆಲುವಿಗೆ 41 ಓವರ್‌ಗಳಲ್ಲಿ 342 ರನ್‌ಗಳ ಪರಿಷ್ಕೃತ ಗುರಿ ನೀಡಿ ಆಟ ಮುಂದುವರಿಸಲಾಯಿತು.

ಆದರೆ ಐದು ಓವರ್‌ಗಳ ಆಟ ನಡೆಯುವಷ್ಟರಲ್ಲಿ ಮತ್ತೆ ಮಳೆ ಬಂತು. ಈ ವೇಳೆ ಪಾಕ್ 25.3 ಓವರ್‌ಗಳಲ್ಲಿ 1 ವಿಕೆಟ್‌ಗೆ 200 ರನ್ ಗಳಿಸಿತ್ತು. ಅಂಪೈರ್‌ಗಳು ರಾತ್ರಿ 7.25ರ ವೇಳೆಗೆ ಪಂದ್ಯ ಮೊಟಕುಗೊಳಿಸಲು ನಿರ್ಧಾರ ತೆಗೆದುಕೊಂಡರು. ಈ ಹಂತದಲ್ಲಿ ಪಾಕ್, ಡಕ್ವರ್ಥ್ ಲೂಯಿಸ್ ನಿಯಮದಂತೆ 21 ರನ್‌ಗಳಿಂದ ಮುಂದಿತ್ತು.

ಈಶ್ ಸೋಧಿ ಬೌಲ್ ಮಾಡಿದ 25ನೇ ಓವರ್‌ನಲ್ಲಿ ಫಕಾರ್ ಮತ್ತು ಬಾಬರ್ ಮೂರು ಸಿಕ್ಸರ್ ಒಳಗೊಂಡಂತೆ 20 ರನ್ ಕಲೆಹಾಕಿದ್ದು ಕಿವೀಸ್‌ಗೆ ಮುಳುವಾಗಿ ಪರಿಣಮಿಸಿತು.

ರಚಿನ್, ವಿಲಿಯಮ್ಸನ್ ಬ್ಯಾಟಿಂಗ್ ಸೊಬಗು: ಇದಕ್ಕೂ ಮುನ್ನ ನ್ಯೂಜಿಲೆಂಡ್ ತಂಡ ಭರ್ಜರಿ ಬ್ಯಾಟಿಂಗ್‌ನ ರಸದೌತಣ ಉಣಬಡಿಸಿತು. ರಚಿನ್ ಮತ್ತು ಡೆವೊನ್ ಕಾನ್ವೆ 10.5 ಓವರ್‌ಗಳಲ್ಲಿ 68 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಕಾನ್ವೆ ಔಟಾದ ಬಳಿಕ ಬಂದ ವಿಲಿಯಮ್ಸನ್ ಅವರು ರಚಿನ್‌ಗೆ ತಕ್ಕ ಸಾಥ್ ನೀಡಿದರು. ಇವರಿಬ್ಬರು ಎರಡನೇ ವಿಕೆಟ್‌ಗೆ 142 ಎಸೆತಗಳಲ್ಲಿ 180 ರನ್ ಸೇರಿಸಿದರು. 51 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ರಚಿನ್, ಬಳಿಕ ಆಟದ ವೇಗ ಹೆಚ್ಚಿಸಿದರು. ಕ್ರೀಡಾಂಗಣದಲ್ಲಿ ನೆರೆದಿದ್ದ 25 ಸಾವಿರಕ್ಕೂ ಅಧಿಕ ಪ್ರೇಕ್ಷಕರನ್ನು ಆಕರ್ಷಕ ಡ್ರೈವ್ ಮತ್ತು ಪುಲ್ ಶಾಟ್‌ಗಳ ಮೂಲಕ ರಂಜಿಸಿದರು.

ಗಾಯದಿಂದ ಚೇತರಿಸಿಕೊಂಡು ಕಣಕ್ಕಿಳಿದ ವಿಲಿಯಮ್ಸನ್ ಕೂಡಾ ಬೀಸಾಟವಾಡಿದ್ದರಿಂದ ಪಾಕ್ ಬೌಲಿಂಗ್‌ನ ದಿಕ್ಕುತಪ್ಪಿತು. ತಾವೆದುರಿಸಿದ 88ನೇ ಎಸೆತದಲ್ಲಿ ರಚಿನ್ ಶತಕ ಪೂರೈಸಿದರು. ಈ ವೇಳೆ ಗ್ಯಾಲರಿಯಿಂದ ರಚಿನ್... ರಚಿನ್... ಎಂಬ ಕೂಗು ಜೋರಾಗಿ ಕೇಳಿಬಂತು.

ವಿಲಿಯಮ್ಸನ್‌ಗೆ ಶತಕ ಗಳಿಸುವ ಅದೃಷ್ಟ ಇರಲಿಲ್ಲ. ಇಫ್ತಿಕಾರ್ ಅಹಮದ್ ಬೌಲಿಂಗ್‌ನಲ್ಲಿ ಸಿಕ್ಸರ್ ಹೊಡೆದು ಶತಕ ಪೂರೈಸುವ ಪ್ರಯತ್ನದಲ್ಲಿ ಲಾಂಗ್ ಆಫ್‌ನಲ್ಲಿ ಜಮಾನ್‌ಗೆ ಕ್ಯಾಚ್ ಕೊಟ್ಟರು.

ಕೊನೆಯ ಓವರ್‌ಗಳಲ್ಲಿ ಮಾರ್ಕ್ ಚಾಪ್ಮನ್ (39; 29 ಎ., 4X7), ಗ್ಲೆನ್ ಫಿಲಿಪ್ಸ್ (41; 25 ಎ., 4X4, 6X2), ಮಿಚೆಲ್ ಸ್ಯಾಂಟ್ನರ್ (ಔಟಾಗದೆ 26; 17 ಎ) ಅವರು ಬೀಸಾಟವಾಡಿದ್ದರಿಂದ ತಂಡದ ಮೊತ್ತ 400ರ ಗಡಿ ದಾಟಿತು.

ಮೊಹಮ್ಮದ್ ವಸೀಂ (60ಕ್ಕೆ 3) ಮತ್ತು ಇಫ್ತಿಕಾರ್ (55ಕ್ಕೆ 1) ಹೊರತುಪಡಿಸಿ ಪಾಕ್ ತಂಡದ ಎಲ್ಲ ಬೌಲರ್‌ಗಳು ಓವರ್‌ವೊಂದಕ್ಕೆ ಸರಾಸರಿ 8ಕ್ಕಿಂತ ಹೆಚ್ಚು ರನ್ ಬಿಟ್ಟುಕೊಟ್ಟರು. ಶಹೀನ್ ಶಾ ಅಫ್ರಿದಿ ಹಾಗೂ ಹ್ಯಾರಿಸ್ ರವೂಫ್ ಅವರ 10 ಓವರ್‌ಗಳಲ್ಲಿ ಕ್ರಮವಾಗಿ 90 ಮತ್ತು 85 ರನ್‌ಗಳು ಸೋರಿಹೋದವು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 401 (ಡೆವೊನ್ ಕಾನ್ವೆ 35, ರಚಿನ್ ರವೀಂದ್ರ 108, ಕೇನ್ ವಿಲಿಯಮ್ಸನ್ 95, ಡೆರಿಲ್ ಮಿಚೆಲ್ 29, ಮಾರ್ಕ್ ಚಾಪ್ಮನ್ 39, ಗ್ಲೆನ್ ಫಿಲಿಪ್ಸ್ 41, ಮಿಚೆಲ್ ಸ್ಯಾಂಟ್ನರ್ 26, ಮೊಹಮ್ಮದ್ ವಸೀಂ 60ಕ್ಕೆ 3, ಇಫ್ತಿಕಾರ್ ಅಹಮದ್ 55ಕ್ಕೆ 1) **ಪಾಕಿಸ್ತಾನ** 25.3 ಓವರ್‌ಗಳಲ್ಲಿ 1 ವಿಕೆಟ್‌ಗೆ 200 (ಫಕಾರ್ ಜಮಾನ್ ಔಟಾಗದೆ 126, ಬಾಬರ್ ಅಜಂ ಔಟಾಗದೆ 66, ಟಿಮ್ ಸೌಥಿ 27ಕ್ಕೆ 1) **ಫಲಿತಾಂಶ:** ಡಕ್ವರ್ಥ್ ಲೂಯಿಸ್ ನಿಯಮದಂತೆ ಪಾಕಿಸ್ತಾನಕ್ಕೆ 21 ರನ್ ಗೆಲುವು **ಪಂದ್ಯಶ್ರೇಷ್ಠ:** ಫಕಾರ್ ಜಮಾನ್

ಶತಕ ಗಳಿಸಿದ ಸಂಭ್ರಮದಲ್ಲಿ ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ (ಎಡಚಿತ್ರ). ಪಾಕ್ ತಂಡದ ಫಕಾರ್ ಜಮಾನ್ ಬ್ಯಾಟಿಂಗ್ ವೈಖರಿ —ಪ್ರಜಾವಾಣಿ ಚಿತ್ರಗಳು/ ರಂಜು ಪಿ

ಚಿನ್ನಸ್ವಾಮಿಯಲ್ಲಿ ಗರಿಷ್ಠ ಮೊತ್ತ

ನ್ಯೂಜಿಲೆಂಡ್ ಕಲೆಹಾಕಿದ 401 ರನ್‌ಗಳು ಏಕದಿನ ಕ್ರಿಕೆಟ್‌ನಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ದಾಖಲಾದ ಗರಿಷ್ಠ ಮೊತ್ತ. 2013ರ ನವೆಂಬರ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ 6 ವಿಕೆಟ್‌ಗಳಿಗೆ 383 ರನ್ ಪೇರಿಸಿದ್ದು ಇದುವರೆಗಿನ ದೊಡ್ಡ ಮೊತ್ತ ಆಗಿತ್ತು. ಆ ಪಂದ್ಯದಲ್ಲಿ ರೋಹಿತ್ ಶರ್ಮಾ (209) ದ್ವಿಶತಕ ಗಳಿಸಿದ್ದರು.

ಸಿಹಿ ಕಹಿ ಚಂದ್ರು ಮತ್ತು ಆದರ್ಶ್ ತತ್ವತಿಯಿಂದ ಸ್ವಾದಿಷ್ಟ ಭಕ್ಷ್ಯಗಳು

ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸಿರುವ ರವಿ ಮಸಾಲೆ ಮತ್ತು ಸ್ಟಾರ್ ಬಜಾರ್ ಸಹಯೋಗದ ‘ದಿ ಕ್ಯುಸಿನ್ಸ್ ಆಫ್ ಕರ್ನಾಟಕ’– ಪ್ರಸಿದ್ಧ ಬಾಣಸಿಗರು ಸಿದ್ಧಪಡಿಸುವ ಸ್ವಾದಿಷ್ಟ ಭಕ್ಷ್ಯಗಳ ಪ್ರದರ್ಶನ. ಈ ಆವೃತ್ತಿಯಲ್ಲಿ ಸೆಲಿಬ್ರಿಟಿ ಶೆಫ್‌ಗಳಾದ ಸಿಹಿ ಕಹಿ ಚಂದ್ರು ಹಾಗೂ ಆದರ್ಶ್ ತತ್ವತಿ ಅವರು ತಯಾರಿಸಿರುವ ಎರಡು ವಿಶೇಷ ಅಡುಗೆಗಳು ಇಲ್ಲಿವೆ.



ಗೋಲಿ ಬಜೆ/ಮಂಗಳೂರು ಬಜ್ಜಿಗೆ ಬೇಕಾದ ಪದಾರ್ಥಗಳು:

ಮೈದಾ 1 ಕಪ್, ಮೊಸರು 3/4 ಕಪ್
ಸಕ್ಕರೆ 1 ಚಮಚ, ಕತ್ತರಿಸಿದ ಹಸಿ ಮೆಣಸಿನಕಾಯಿ 3
ತೆಂಗಿನಕಾಯಿ ತುರಿ 1/4 ಕಪ್
ಕತ್ತರಿಸಿದ ಕೊತ್ತಂಬರಿಸೊಪ್ಪು 1/4 ಪ್
ಕತ್ತರಿಸಿದ ಕರಿಬೇವು 1 ಚಮಚ
ಜೀರಿಗೆ 1/2 ಚಮಚ
ಸೋಡಾ 1/4 ಚಮಚ
ಉಪ್ಪು ರುಚಿಗೆ ತಕ್ಕಷ್ಟು
ಕರಿಯಲು ಬೇಕಾದ ಎಣ್ಣೆ

ಮಾಡುವ ವಿಧಾನ:

ಒಂದು ಮಿಕ್ಸಿಂಗ್ ಬೌಲ್‌ನಲ್ಲಿ ಮೈದಾ ಹಿಟ್ಟು, ಮೊಸರು ಸೇರಿದಂತೆ ಎಲ್ಲ ಇತರ ಪದಾರ್ಥಗಳನ್ನು ತೆಗೆದುಕೊಳ್ಳಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮತ್ತು ಚಿಟಿಕೆ ಸೋಡಾ ಉದುರಿಸಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಸಂಪೂರ್ಣವಾಗಿ ಬೆರೆತ ನಂತರ 5 ನಿಮಿಷ ನಾದುಕೊಳ್ಳಿ. ಕಲಸಿದ ಹಿಟ್ಟನ್ನು ಒಂದು ಗಂಟೆ ಎತ್ತಿಡಿ.

ಕಡಾಯಿಗೆ ಎಣ್ಣೆ ಹಾಕಿ ಬಿಸಿಯಾಗುವುದರೊಳಗೆ ಮತ್ತೊಮ್ಮೆ ಕಲಸಿ. ಕೈಯನ್ನು ಒದ್ದೆ ಮಾಡಿಕೊಂಡು ಹಿಟ್ಟಿನಿಂದ ದೊಡ್ಡ ಗೋಲಿ ಗಾತ್ರದ ಉಂಡೆಗಳನ್ನು ಮಾಡಿ ಎಣ್ಣೆಯಲ್ಲಿ ಬಿಡಿ. ಕಡಿಮೆ ಉರಿಯಲ್ಲಿ ಉಂಡೆಗಳು ಕಂದು ಬಣ್ಣ ಬರುವವರೆಗೆ ಕರಿಯಿರಿ. ಹೊರತೆಗೆದು ಚಟ್ನಿ ಜತೆ ಮಂಗಳೂರು ಬಜ್ಜಿ ಅಥವಾ ಗೋಲಿ ಬಜೆ ತಿನ್ನಲು ಕೊಡಿ.

ವಾಡಿ ಚಿಕನ್ ಬಿರಿಯಾನಿಗೆ ಬೇಕಾದ ಪದಾರ್ಥಗಳು:

ಕೋಳಿ ಮಾಂಸ 500 ಗ್ರಾಂ
ಬಾಸ್ಮತಿ ಅಕ್ಕಿ 500 ಗ್ರಾಂ
ಮಧ್ಯಮ ಗಾತ್ರದ ಟೊಮೆಟೊ 2
ಮಧ್ಯಮ ಗಾತ್ರದ ಈರುಳ್ಳಿ 3
ಮೊಸರು 100 ಗ್ರಾಂ
ಹಾಲು 1 ಸಣ್ಣ ಕಪ್
ಅರಿಶಿನ 1 ಚಮಚ
ಅಚ್ಚ ಖಾರ ಪುಡಿ 2 ಚಮಚ
ದನಿಯಾ ಪುಡಿ 1 ಚಮಚ
ಗರಂ ಮಸಾಲ ಪುಡಿ 1 ಚಮಚ
ನಿಂಬೆಹಣ್ಣು 1, ಪುದೀನ 1 ಸಣ್ಣ ಕಪ್
ಕೊತ್ತಂಬರಿ ಸೊಪ್ಪು 1 ಸಣ್ಣ ಕಪ್
ಶುಂಠಿ-ಬೆಳ್ಳುಳ್ಳಿ ಪೇಸ್ಟ್ 2 ಚಮಚ
ಮಸಾಲೆ ಪದಾರ್ಥಗಳು:
ದಾಲ್ಚಿನ್ನಿ 4 ಚೂರು, ಏಲಕ್ಕಿ 3, ಲವಂಗ 4
ಶಾಹಿ ಜೀರಾ 1 ಚಮಚ, ತುಪ್ಪ 2 ಚಮಚ, ಎಣ್ಣೆ 200 ಮಿ.ಲೀ.
ರುಚಿಗೆ ತಕ್ಕಷ್ಟು ಉಪ್ಪು

ತಯಾರಿಸುವ ವಿಧಾನ:

ಬಾಸ್ಮತಿ ಅಕ್ಕಿಯನ್ನು ತೊಳೆದು ನಂತರ 45 ನಿಮಿಷ ನೀರಲ್ಲಿ ನೆನೆಸಿಡಿ. ಒಂದು ಬೌಲ್‌ನಲ್ಲಿ ಕೋಳಿ ಮಾಂಸ ತೆಗೆದುಕೊಂಡು ಅದರಲ್ಲಿ ಮೊಸರು, ಹಾಲು, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಅಚ್ಚ ಖಾರ ಪುಡಿ, ದನಿಯಾ ಪುಡಿ, ಗರಂ ಮಸಾಲ, ಉಪ್ಪು, ಅರಿಶಿನ ಪುಡಿ, ಕತ್ತರಿಸಿದ ಪುದೀನ ಮತ್ತು ಕೊತ್ತಂಬರಿ ಸೊಪ್ಪು ಹಾಕಿ, ಒಂದು ನಿಂಬೆಹಣ್ಣನ್ನು ಹಿಂಡಿ ಚೆನ್ನಾಗಿ ಕಲಸಿ. 30 ನಿಮಿಷಗಳ ಕಾಲ ಮ್ಯಾರಿನೇಟ್ ಮಾಡಿ.

ಬಿರಿಯಾನಿ ಪಾತ್ರೆ ಅಥವಾ ಇತರ ಪಾತ್ರೆಗೆ ಎಣ್ಣೆ ಹಾಕಿ ಸ್ವಲ್ಪ ಬಿಸಿಯಾದ ನಂತರ ಎಲ್ಲ ಮಸಾಲೆಗಳನ್ನು ಹಾಕಿ ನಂತರ ಕತ್ತರಿಸಿಟ್ಟ ಈರುಳ್ಳಿಯನ್ನು ಸೇರಿಸಿ. ಈರುಳ್ಳಿ ಕಂದು ಬಣ್ಣಕ್ಕೆ ತಿರುಗುವವರೆಗೆ ಹುರಿಯಿರಿ. ಇದರಲ್ಲಿ ಕತ್ತರಿಸಿಟ್ಟ ಟೊಮೆಟೊ ಸೇರಿಸಿ, ಎಣ್ಣೆ ಬೇರ್ಪಡುವವರೆಗೆ ಬೇಯಿಸಿ. ಈಗ ಮ್ಯಾರಿನೇಟ್ ಮಾಡಿದ ಚಿಕನ್ ಸೇರಿಸಿ ಕಲಸಿ. ಕಡಿಮೆ ಉರಿಯಲ್ಲಿ 15 ನಿಮಿಷ ಬೇಯಿಸಿ.

ಇನ್ನೊಂದು ಪಾತ್ರೆಯಲ್ಲಿ ನೆನೆಸಿಟ್ಟ ಅಕ್ಕಿಗೆ ಬೇಕಾದಷ್ಟು ನೀರನ್ನು ಬೆರೆಸಿ. ಒಂದು ಚಮಕ ಉಪ್ಪನ್ನು ಹಾಕಿ, ನೀರು ಕುದಿಯುವವರೆಗೆ ಕಾಯಿರಿ. ಒಮ್ಮೆ ಅಕ್ಕಿ ಪ್ರತಿಶತ 75ರಷ್ಟು ಬೆಂದ ನಂತರ ಚಿಕನ್ ಗ್ರೇವಿಯ ಮೇಲೆ ಹರಡಿ. ಅದರ ಮೇಲೆ ತುಪ್ಪ ಹಾಕಿ, ಮುಚ್ಚಳವನ್ನು ಬಿಗಿಯಾಗಿ ಮುಚ್ಚಿ. ಸಣ್ಣ ಉರಿಯಲ್ಲಿಟ್ಟು, 15 ನಿಮಿಷ ಕಾಲ ಧಮ್ ಕಟ್ಟಿ ಬೇಯಿಸಿ. ನಂತರ ಮುಚ್ಚಳ ತೆಗೆದು ನೋಡಿ. ಬಿಸಿ ಬಿಸಿ ವಾಡಿ ಸ್ಪೆಷಲ್ ಚಿಕನ್ ಬಿರಿಯಾನಿ ರೆಡಿ. ಮೊಸರಿನ ರಾಯಿತ ಜೊತೆ ಸವಿಯಲು ನೀಡಿ.

Freedom Healthy Cooking Oils presents cuisines of karnataka

Associate sponsors Ravi star

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮಹಿಳಾ ಹಾಕಿ: ಪ್ರಶಸ್ತಿಗೆ ಭಾರತ–ಜಪಾನ್ ಸೆಣಸು

ರಾಂಚಿ (ಪಿಟಿಐ): ಹೊಂದಾಣಿಕೆಯ ಆಟವಾಡಿದ ಭಾರತ ತಂಡದವರು ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಆತಿಥೇಯ ತಂಡ 2–0ರಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತು. ಸಲೀಮಾ ಟೇಟೆ (11 ನೇ ನಿ.) ಮತ್ತು ವೈಷ್ಣವಿ ವಿ.ಫಾಲ್ಕೆ (19 ನೇ) ಅವರು ಭಾರತದ ಗೆಲುವಿಗೆ ಕಾರಣರಾದರು.

ಸವಿತಾ ನೇತೃತ್ವದ ತಂಡವು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಜಪಾನ್ ವಿರುದ್ಧ ಹಣಾಹಣಿ ನಡೆಸಲಿದೆ. ದಿನದ ಮತ್ತೊಂದು ನಾಲ್ಕರ ಘಟ್ಟದ ಪಂದ್ಯದಲ್ಲಿ ಜಪಾನ್ 2–1 ರಿಂದ ಚೀನಾ ತಂಡವನ್ನು ಮಣಿಸಿತು.

ಕೊರಿಯಾ ವಿರುದ್ಧ ಆಕ್ರಮಣಕಾರಿ ಆಟವಾಡಿದ ಭಾರತ ವಿರಾಮದ ವೇಳೆಗೆ 2–0 ಗೋಲುಗಳಿಂದ ಮುನ್ನಡೆ ಸಾಧಿಸಿತ್ತು. ಕೊನೆಯ ಎರಡು ಕ್ವಾರ್ಟರ್‌ಗಳಲ್ಲಿ ರಕ್ಷಣೆಗೆ ಒತ್ತು ನೀಡಿತು.

ಕೊನೆಯ ಐದು ನಿಮಿಷಗಳಿರುವಾಗ ಭಾರತ ತಂಡದ ಜ್ಯೋತಿ ಮತ್ತು ವಂದನಾ ಕಟಾರಿಯಾ ರೆಡ್ ಕಾರ್ಡ್ ಪಡೆದು ಹೊರ ನಡೆದರು. ಆದರೂ ಎರಡು ಗೋಲುಗಳ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಳ್ಳಲು ಭಾರತ ಯಶಸ್ವಿಯಾಯಿತು.



ಐಪಿಎಲ್‌ನಲ್ಲಿ ಹೂಡಿಕೆಗೆ ಸೌದಿ ಅರೇಬಿಯಾ ಆಸಕ್ತಿ

ಬೆಂಗಳೂರು (ರಾಯಿಟರ್ಸ್): ವಿಶ್ವದ ಶ್ರೀಮಂತ ಕ್ರಿಕೆಟ್ ಲೀಗ್ ಆಗಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಬಹುಕೋಟಿ ಡಾಲರ್‌ಗಳನ್ನು ಹೂಡಿಕೆ ಮಾಡಿ ಪಾಲುದಾರರಾಗಲು ಸೌದಿ ಅರೇಬಿಯಾ ಆಸಕ್ತಿ ತೋರಿಸಿದೆ.

ಐಪಿಎಲ್‌ನಲ್ಲಿ ಹೂಡಿಕೆ ಮಾಡುವ ಕುರಿತು ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರ ಸಲಹೆಗಾರರು ಭಾರತ ಸರ್ಕಾರದೊಂದಿಗೆ ಚರ್ಚೆ ನಡೆಸಿದ್ದಾರೆನ್ನಲಾಗಿದೆ. ಈ ಕುರಿತು ಬ್ಲೂಮ್‌ಬರ್ಗ್ ನ್ಯೂಸ್ ವರದಿ ಮಾಡಿದೆ.

ಸಲ್ಮಾನ್ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಮಾತುಕತೆ ನಡೆದಿತ್ತು ಎನ್ನಲಾಗಿದೆ.

ಐಪಿಎಲ್ ಅಂದಾಜು ಮೌಲ್ಯವು ₹ 2.49 ಲಕ್ಷ ಕೋಟಿ ಇದೆ. ಅದರಲ್ಲಿ ₹ 42 ಸಾವಿರ ಕೋಟಿ ಹೂಡಿಕೆ ಮಾಡುವ ಕುರಿತು ಆಸಕ್ತಿ ತೋರಿದ್ದಾರೆ.

ಈ ಹೂಡಿಕೆಯೊಂದಿಗೆ ಬೇರೆ ದೇಶಗಳಿಗೂ ಟೂರ್ನಿಯನ್ನು ವಿಸ್ತರಿಸುವ ಉದ್ದೇಶವಿದೆ ಎಂದು ಹೇಳಲಾಗಿದೆ.

ಈ ಕುರಿತು ರಾಯಿಟರ್ಸ್ ಸುದ್ದಿ ಸಂಸ್ಥೆಯು ಪ್ರತಿಕ್ರಿಯೆಗಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯನ್ನು ಸಂಪರ್ಕಿಸಿದೆ. ಆದರೆ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ.



ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಹೈದರಾಬಾದ್: ಬಿಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ಜತೆ 1–1 ಗೋಲಿನಿಂದ ಡ್ರಾ ಸಾಧಿಸಿದರು.

ಶನಿವಾರ ನಡೆದ ಪಂದ್ಯದಲ್ಲಿ ಮೊಹಮ್ಮದ್ ಯಾಸಿರ್ ಅವರು 35ನೇ ನಿಮಿಷದಲ್ಲಿ ಹೈದರಾಬಾದ್ ತಂಡಕ್ಕೆ ಗೋಲು ಗಳಿಸಿದರೆ, ಬಿಎಫ್‌ಸಿಯ ರಯಾನ್ ವಿಲಿಯಮ್ಸ್ 58ನೇ ನಿಮಿಷದಲ್ಲಿ ಸಮಬಲದ ಗೋಲು ತಂದಿತ್ತರು.

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 5 ನವೆಂಬರ್ 2023

ಪರ್ವತದಾಚೆಯ ಬಯಲು 3

ಹುಡುಕಾಟದ ಜೀವದ್ರವ್ಯದ ಪ್ರಯೋಗ 3

ಮಹಾಬಲಿಪುರಂನ ಶಿಲ್ಪ ಸಾಕ್ಷ್ಯ 4

ವನ್ಯಲೋಕದ ಕತ್ತಲ ಕಥನಗಳು

ನಾಗೇಶ ಹೆಗಡೆ

ಹುಲಿ ಉಗುರುಗಳನ್ನು ಬಿಡಿ, ಉಗುರಿನ ಗಾತ್ರದ ಈ ಜೀವಿಯ ಕತೆ ಕೇಳಿ: ಮನುಷ್ಯನ ಉಗುರಿನ ಮೇಲೆ ಸಲೀಸಾಗಿ ಕೂರಬಲ್ಲ ಒಂದು ಪುಟ್ಟ ಕಾಡುಹಲ್ಲಿಯೊಂದು 2005ರಲ್ಲಿ ವೆಸ್ಟ್ ಇಂಡೀಸ್ ಬಳಿಯ ಪುಟ್ಟ ದ್ವೀಪದಲ್ಲಿ ಪತ್ತೆಯಾಯಿತು. ಬರೀ ಅರ್ಧ ಬೆರಳಷ್ಟುದ್ದದ ಈ ಹಲ್ಲಿಯ ಹೆಸರು ದೌಡಿನಿ. ಪೂರ್ತಿ ಹೆಸರು ಗೊನಾಟೋಡಿಸ್ ದೌಡಿನಿ. ಪುಟ್ಟದಿದ್ದರೂ ಹುಲಿಯಷ್ಟೇ ಅಥವಾ ಹುಲಿಗಿಂತ ಚಂದದ ಜೀವಿ. ಅದರ ಮೈಯೆಲ್ಲ ಹವಳ, ಪಚ್ಚೆ, ನೀಲ ನವರತ್ನಗಳ ಖಚಿತ. ಈ ಜೀವಿಯ ಫೋಟೊ ಪ್ರಕಟವಾಗಿದ್ದೇ ತಡ, ಜನ ಅತ್ತ ಲಗ್ಗೆ ಇಟ್ಟರು. ಭೂಪಟದಲ್ಲೂ ಸುಲಭಕ್ಕೆ ಕಾಣದ 'ಸೇಂಟ್ ವಿನ್ಸೆಂಟ್ ಆ್ಯಂಡ್ ದಿ ಗ್ರನೆಡೈನ್ಸ್' ಎಂಬ ಮಾರುದ್ದ ಹೆಸರಿನ ದೇಶದ ಯೂನಿಯನ್ ಐಲ್ಯಾಂಡ್ ಎಂಬ ಚೋಟುದ್ದ ದ್ವೀಪಕ್ಕೆ ಜನ ನುಗ್ಗಿದರು. 'ಜನ' ಅಂದರೆ, ವನ್ಯಪ್ರೇಮಿಗಳು, ವಿಜ್ಞಾನಿಗಳು, ಛಾಯಾಗ್ರಾಹಕರು, ಬೇಟೆಗಾರರು, ಕಳ್ಳ ಸಾಗಣೆದಾರರು ಎಲ್ಲ.

ಪುಟ್ಟ ಪ್ರಾಣಿ, ಪುಟ್ಟ ದ್ವೀಪ. ಪುರಾತನ ದಟ್ಟ ಕಾಡು. ಹೆಜ್ಜೆಹೆಜ್ಜೆಗೂ ಅನೂಹ್ಯ ಜೀವಿಗಳ ಸೊಗಸಿನ ಲೋಕ. ರಕ್ಷಣೆಯ ಹೇಳ ಹೆಸರಿಲ್ಲ. ನೋಡನೋಡುತ್ತ ಈ ಮುದ್ದು ಸರೀಸೃಪದ ಸಂಖ್ಯೆ ಕಡಿಮೆಯಾಗತೊಡಗಿತು. 'ದೌಡಿನಿ ಕಾಣ್ತಾ ಇಲ್ಲ' ಎಂದು ಏಳೆಂಟು ವರ್ಷಗಳಲ್ಲಿ ಮತ್ತೆ ಹುಯಿಲೆಬ್ಬಿತು. ಈ ಬಾರಿ ಸಹಾಯಕ್ಕೆ ಜನ ಬಂದರು. 'ರೀ:ವೈಲ್ಡ್' ಹೆಸರಿನ ಅಂತರರಾಷ್ಟ್ರೀಯ ವನ್ಯರಕ್ಷಣಾ ಸಂಸ್ಥೆ ದೌಡಿನಿಯ ರಕ್ಷಣೆಗೆ ದೌಡಾಯಿಸಿ ಬಂತು (84 ದೇಶಗಳಲ್ಲಿನ ಇದರ 400ಕ್ಕೂ ಹೆಚ್ಚಿನ ಸಂಘಟನೆಗಳಿವೆ). ಅದಕ್ಕೆ ಜೊತೆಯಾಗಿ 'ಫೌನಾ ಆ್ಯಂಡ್ ಫ್ಲೋರಾ' ಹೆಸರಿನ ಇನ್ನೊಂದು ವನ್ಯರಕ್ಷಣಾ ಸಂಸ್ಥೆಯೂ ಕೈಜೋಡಿಸಿತು. ಸ್ಥಳೀಯ ಸರ್ಕಾರದ ಸಹಕಾರ ಪಡೆದು, ವಿವಿಧ ದೇಶಗಳ ತಜ್ಞರ ನೆರವಿನಿಂದ ದ್ವೀಪವಾಸಿಗಳಿಗೆ ಕಾವಲು ತರಬೇತಿ ಕೊಟ್ಟು, ವನ್ಯ ವಾರ್ಡನ್‌ಗಳೆಂದು ನೇಮಕ ಮಾಡಿ, ಗಿಡಮರಗಳಿಗೆ ಕ್ಯಾಮೆರಾ ಹಾಕಿ ಭದ್ರ ಮಾಡಲಾಯಿತು. ಕಳೆದ ನವೆಂಬರಿನಲ್ಲಿ ಸಮೀಕ್ಷೆ ಮಾಡಿದಾಗ ದೌಡಿನಿಯ ಸಂಖ್ಯೆ 18 ಸಾವಿರಕ್ಕೇರಿದೆ ಎಂಬುದು ಗೊತ್ತಾಗಿದೆ.

ಉಗುರು, ಬೆರಳುಗಳ ಕತೆ ಹಾಗಿರಲಿ; ಈಗ ಮೊಣಕೈ ಗಾತ್ರಕ್ಕೆ ಬರೋಣ. ತುಮಕೂರಿನ ಬಳಿಯ ನಾಗವಲ್ಲಿ ಸರ್ಕಾರಿ ಹೈಸ್ಕೂಲಿನ ಮಕ್ಕಳಿಗೆ ಗುಂಡಪ್ಪ ಮೇಷ್ಟ್ರು 'ಅಳಿವಿನಂಚಿನಲ್ಲಿರುವ ಪ್ರಾಣಿಗಳು' ಎಂಬ ಪಾಠವನ್ನು ಓದಿಸುತ್ತಿದ್ದರು. ಪಠ್ಯದಲ್ಲಿರುವ ಅಂಥ ಪ್ರಾಣಿಗಳ ಪಟ್ಟಿಯನ್ನು ಓದುತ್ತಿದ್ದಾಗ ಹುಡುಗನೊಬ್ಬ ಎದ್ದು ನಿಂತು, 'ಸರ್ ಕಾಡುಪಾಪ ಹೆಂಗೆ ಅಳಿವಿನಂಚಿನಲ್ಲಿದೆ? ಇಂದು ಬೆಳಿಗ್ಗೆ ನಾನೇ ಎರಡು ಪಾಪಾಗಳನ್ನ ನೋಡಿ ಬಂದಿದೀನಿ' ಎಂದ. ಅಚ್ಚರಿಗೊಂಡ ಮೇಷ್ಟ್ರು ಮಕ್ಕಳನ್ನು ಎಬ್ಬಿಸಿಕೊಂಡು ಸಮೀಕ್ಷೆಗೆ ಹೊರಟೇಬಿಟ್ಟರು. ಪೊದೆಗಳಲ್ಲಿ ಹಗಲುನಿದ್ದೆಯಲ್ಲಿದ್ದ ಐದು ಕಾಡುಪಾಪಗಳು ಪತ್ತೆಯಾದವು. ಈ ಸಂಗತಿ ತುಮಕೂರಿಗೂ, ನಂತರ ಕೋಲ್ಕತ್ತಕ್ಕೂ ತಲುಪಿ ಅಲ್ಲಿಂದಲೂ ತಜ್ಞರು ಬಂದು ರಾತ್ರಿಸಮೀಕ್ಷೆ ನಡೆಸಿದಾಗ ಮೊಣಕೈ ಉದ್ದದ, ವಾನರಗಳ ಗುಂಪಿಗೆ ಸೇರಿದ 55 'ಸ್ಲೆಂಡರ್ ಲೋರಿಸ್'ಗಳು ಪತ್ತೆಯಾದವು. ಊರವರಿಗೂ ಅವುಗಳ ಮಹತ್ವ ಗೊತ್ತಾಯಿತು. ಗಾಯಗೊಂಡ, ಬೇಟೆಗೆ ಬಲಿಯಾಗಿ ಸಾವಿನಂಚಿಗೆ ಬಂದವುಗಳ ಆರೈಕೆ ವಿಧಾನಗಳು (ಮಿಡತೆಗಳು, ಜಿರಲೆಗಳು ಅವಕ್ಕೆ ಪಂಚಪ್ರಾಣ) ಗೊತ್ತಾದವು. ಒಂದು ನಿಷ್ಪಾಪಿ, 'ನಿರುಪಯುಕ್ತ' ಜೀವಿ ಅಲ್ಲಿನ ಜನಸಮುದಾಯದ ಮಧ್ಯೆಯೇ ಸಹಜೀವನ ನಡೆಸುವುದು ಸಾಧ್ಯವಾಯಿತು.

ಇನ್ನು ಮುಂದಿನದು ಮನುಷ್ಯಗಾತ್ರದ ಜೀವಿಯ ಕತೆ: ಆಫ್ರಿಕಾದ ಸಿಯೆರಾ ಲಿಯೋನ್ ದೇಶದ ಕಾಡಿನಲ್ಲಿ ಚಿಂಪಾಂಜಿಗಳಿಗೆ ಆತ್ಮರಕ್ಷಣೆಯ ಸೂತ್ರವನ್ನು ಕಲಿಸಿದ ಕತೆ ಇದು: ಅಲ್ಲಿ ಮಾಂಸಕ್ಕಾಗಿ ಚಿಂಪಾಂಜಿಗಳಿಗೆ ಗುಂಡೇಟು ಹಾಕಿ ಕೊಲ್ಲಲಾಗುತ್ತಿತ್ತು. ವನ್ಯರಕ್ಷಕರು ಒಂದುಪಾಯ ಮಾಡಿದರು. ಚಿಂಪಾಂಜಿಗಳು ಗುಂಪಾಗಿ ಕೂರುವ ತಾಣದಲ್ಲಿ ಎತ್ತರದ ಮರಗಳ ಮೇಲೆ ಕೊಳವೆಗಳನ್ನು ಕಟ್ಟಿದರು. ಅದರಲ್ಲಿ ಹಣ್ಣುಹಂಪಲು, ಗೆದ್ದಲು-ಮಿಡತೆಗಳನ್ನು ತುಂಬಿಟ್ಟರು. ರಿಮೋಟ್ ಒತ್ತಿದಾಗ ಕೊಳವೆಗಳಿಂದ ಅವು ಕೆಳಕ್ಕೆ ಬೀಳುವಂತೆ ಮಾಡಿದರು. ಕಾವಲುಗಾರ ಬಂದಾಗ ಚಿಂಪಾಂಜಿಗಳೆಲ್ಲ ಒಟ್ಟಾಗಿ ಕೂಗಿದರೆ ಮಾತ್ರ ರಿಮೋಟ್ ಒತ್ತಲಾಗುತ್ತಿತ್ತು. ಕ್ರಮೇಣ ಆ ಕಾಡಿಗೆ ಯಾರೇ ಕಾಲಿಟ್ಟರೂ ಥೈಥೈ ಕುಣಿದು ಅವು ಕೂಗು ಹಾಕುವುದನ್ನು ರೂಢಿಸಿಕೊಂಡವು. ಗನ್ ಹಿಡಿದು ಬೇಟೆಗಾರರು ಬಂದಾಗಲೂ ಅವು ಊಟಕ್ಕಾಗಿ ಕೂಗು ಹಾಕುತ್ತಿದ್ದವು. ಅರಣ್ಯ ರಕ್ಷಕರಿಗೆ ಬೇಟೆಗಾರರ ಸುಳಿವು ಸಿಗುವಂತಾಯಿತು. ಬೇಟೆ ಕ್ರಮೇಣ ಕಡಿಮೆಯಾಗುತ್ತ ಬಂತು.

ಮನುಷ್ಯರಿಗಿಂತ ದೊಡ್ಡ, ಬಲಾಢ್ಯ ಪ್ರಾಣಿಗಳ ಉಳಿವಿಗೂ ನಾನಾ ಉಪಾಯಗಳ ಸಂಶೋಧನೆ ನಡೆಯುತ್ತಿದೆ. ಕೊಂಬುಗಳಿಗಾಗಿ ಪ್ರತಿವರ್ಷ ಆಫ್ರಿಕಾ ಖಂಡದಲ್ಲಿ ಸರಾಸರಿ 500 ಘೇಂಡಾಗಳ ಹತ್ಯೆಯಾಗುತ್ತಿದೆ. ಕೊಂಬು ಎಂದರೆ ಮತ್ತೇನಲ್ಲ; ಕೂದಲುಗಳೇ ಜಡೆಗಟ್ಟಿದಂತೆ ದಟ್ಟಗಟ್ಟಿಯಾಗಿ ಮೂಗಿನ ಮೇಲೆ ಬೆಳೆಯುತ್ತದೆ. ಕೂದಲಿನಲ್ಲಿರುವ ಕೆರಾಟಿನ್ ಎಂಬ ದ್ರವ್ಯವೇ ಎಲ್ಲ ಪ್ರಾಣಿಗಳಲ್ಲೂ ಕೊಂಬು, ಕೂದಲು, ಉಗುರು ಮತ್ತು ಹುರುಪೆಗಳನ್ನು ಸೃಷ್ಟಿಸುತ್ತದೆ. 'ಮನುಷ್ಯನ ಉಗುರು, ಕೂದಲಿನಲ್ಲಿರುವುದೇ ಘೇಂಡಾ, ಹುಲಿ, ಚಿಪ್ಪುಹಂದಿಗಳ ರಕ್ಷಾಸಾಧನವಾಗಿ ಬೆಳೆಯುತ್ತದೆ. ವಿಶೇಷ ಔಷಧೀಯ ದ್ರವ್ಯದ ಲವಲೇಶವೂ ಇರುವುದಿಲ್ಲ' ಎಂದು ವಿಜ್ಞಾನಿಗಳು ಅದೆಷ್ಟು ವಿಧದದಲ್ಲಿ ಹೇಳಿದರೂ ಅಂಧವಿಶ್ವಾಸವನ್ನು ತೊಲಗಿಸಲು ಸಾಧ್ಯವಾಗುತ್ತಿಲ್ಲ. ಕುದುರೆಯ ಕೂದಲಿನ ದಟ್ಟ ಚಟ್ನಿ ಮಾಡಿ, ಒತ್ತಿ ಒಣಗಿಸಿ ಗಟ್ಟಿ ಪೇಸ್ಟ್ ಮಾಡಿ ಅದನ್ನೇ ಥ್ರೀಡೀ ಪ್ರಿಂಟರ್ ಮೂಲಕ ಘೇಂಡಾ ಕೊಂಬಿನ ಆಕಾರದಲ್ಲೇ ರೂಪಿಸಿ ಚೀನಾ ಮತ್ತು ವಿಯೆಟ್ನಾಮ್ ದೇಶಗಳಿಗೆ ಮಾರುವ ಯತ್ನ ನಡೆಯಿತು. ಆದರೆ ಸುಂಕದ ಅಧಿಕಾರಿಗಳಿಗೆ ಅದು ಕೃತಕ ಎಂಬುದು ಗೊತ್ತಾಗಬೇಕಲ್ಲ? ಅವರಿಗೆ ಮಾತ್ರ ಗೊತ್ತಾಗುವಂತೆ ಎಂಥದ್ದೇ ಸೂಕ್ಷ್ಮ ಗುರುತಿನ ಬಿಲ್ಲೆಯನ್ನು ಅಡಗಿಸಿದರೂ ಅದು ಮಾರಾಟಗಾರರಿಗೂ ಗೊತ್ತಾಗಿ ಇಡೀ ಸಾಹಸವೇ ವಿಫಲವಾಯಿತು. ಸರಿ, ಘೇಂಡಾವನ್ನು ಕೊಲ್ಲುವ ಬದಲು ಅದಕ್ಕೆ ನಿದ್ದೆ ಬರಿಸಿ, ಕೊಂಬನ್ನು ಮಾತ್ರ ಕತ್ತರಿಸಿ ಅಧಿಕೃತವಾಗಿ ಮಾರುವ ಯತ್ನಗಳೂ ವಿಫಲವಾದವು. ಏಕೆಂದರೆ ಕಾಳಸಂತೆಯ ಜಾಲಗಾರರಿಗೆ ಅದು ಇಷ್ಟವಿಲ್ಲ. ಅಷ್ಟೇಕೆ, ಕೊಟ್ಟಿಗೆಯಲ್ಲಿ ಸಾಕಿದ ಘೇಂಡಾಗಳ ಕೊಂಬೂ ಅವರಿಗೆ ಬೇಕಾಗಿಲ್ಲ. ಬೇಟೆಗಾರರು, ಕಳ್ಳಸಾಗಣೆದಾರರು, ದಲ್ಲಾಳಿಗಳ ಮತ್ತು ಗ್ರಾಹಕರ ನಡುವಣ ಬಂಧವನ್ನು ಸಡಿಲಿಸಬಲ್ಲ ಯಾವ ವಿಧಾನಗಳೂ ಜಾರಿಗೆ ಬರುವುದು ಅವರಿಗೆ ಇಷ್ಟವಿಲ್ಲ. ಪ್ರಕೃತಿಯಲ್ಲಿ ತಮ್ಮ ಪಾಡಿಗೆ ತಾವಿರುವ ಘೇಂಡಾ, ಆನೆ, ಹುಲಿ, ಹಿಮಚಿರತೆ, ಚಿಪ್ಪುಹಂದಿಗಳೇ ಅವರಿಗೆ ಬೇಕು. ಇಂಥ ಬೇಟೆಯನ್ನು ನಿಯಂತ್ರಿಸಲೆಂದು ವಿಜ್ಞಾನ ತಂತ್ರಜ್ಞಾನದ ಹೊಸ ಹೊಸ ಉಪಾಯಗಳೇನೋ ಜಾರಿಗೆ ಬರುತ್ತಿವೆ, ನಿಜ. ವನ್ಯಲೋಕದ ಸ್ಥಿತಿಗತಿಯನ್ನು ಅರಿಯಲೆಂದು ಕ್ಯಾಮರಾ ಟ್ರ್ಯಾಪ್‌ಗಳಿವೆ. ಕತ್ತಲಲ್ಲಿ ವನ್ಯಮೃಗಗಳ ಜಾಡನ್ನು ತೋರಿಸಬಲ್ಲ ಇನ್‌ಫ್ರಾರೆಡ್ ಟಾರ್ಚ್‌ಗಳು, ದುರ್ಬೀನ್‌ಗಳು, ಕ್ಯಾಮರಾಗಳು ಇವೆ. ಕಾಡಿನ ಜೀವಿಯ ಚಲನವಲನವನ್ನು ಎಸ್ಸೆಮ್ಮೆಸ್ ಮೂಲಕ ಕಾಲಕಾಲಕ್ಕೆ ತಿಳಿಸುವ ರೇಡಿಯೊ ಕಾಲರ್‌ಗಳು ಬಂದಿವೆ. ನಾನಾ ಗಾತ್ರದ ಡ್ರೋನ್‌ಗಳು, ಪಕ್ಷಿಯ ವೇಷದಲ್ಲೇ ಕಾಡಿನಲ್ಲಿ ಸುತ್ತಾಡಬಲ್ಲ ಡ್ರೋನ್‌ಗಳು ಬರುತ್ತಿವೆ. ಸಮಸ್ಯೆ ಏನೆಂದರೆ, ಯಾವ ಹೊಸ ಶಸ್ತ್ರಾಸ್ತ್ರ ಬಂದರೂ ಅವು ಕಳ್ಳಸಾಗಣೆದಾರರ ಬತ್ತಳಿಕೆಗೂ ಬರುತ್ತವೆ.

ಮಂತ್ರವಾದಿಗಳಿಗೆ, ನಾಟಿವೈದ್ಯರಿಗೆ, ಮೂಢನಂಬಿಕೆಗಳಿಗೆ ಜೋತುಬಿದ್ದವರಿಗೆ ಉಗುರು, ದಂತ, ಕೊಂಬು, ನಕ್ಷತ್ರ ಆಮೆ, ಎರಡು ತಲೆಯ ಹಾವು ಇತ್ಯಾದಿ ಬೇಕು. ವಿಶಿಷ್ಟ ವನ್ಯ ಸಂಗ್ರಾಹಕರಿಗೆ ಅಪರೂಪದ ಆರ್ಕಿಡ್ ಹೂ, ಬಣ್ಣದ ಚಿಟ್ಟೆ, ಉಗುರುದ್ದದ ಉಡ ಬೇಕು. ವೆಚ್ಚಕ್ಕೆ ಹೇರಳ ಹೊನ್ನಿರುವ ಲೋಲುಪರಿಗೆ ಜಿಂಕೆ ಮಾಂಸ, ಚಮರೀಮೃಗದ ಶಾಲು, ಶಾರ್ಕ್ ಪಕ್ಕೆಯ ಸೂಪು, ಸೀಲ್ ಪ್ರಾಣಿಯ ತುಪ್ಪಳ, ಮೊಸಳೆ ಚರ್ಮದ ಪಾದರಕ್ಷೆ ಬೇಕು. ಇಂಥ ಕೃತ್ಯಗಳಿಗೆ ಪರೋಕ್ಷ ನೆರವು ನೀಡುವ ಅರಣ್ಯ ಸಿಬ್ಬಂದಿಗೆ ಈ ಲೂಟಿಯಲ್ಲಿ ಪಾಲು ಬೇಕು (ಮೊನ್ನೆ ಅಕ್ಟೋಬರ್ 30ರಂದು ಲೋಕಾಯುಕ್ತ ಬೇಟೆಗೆ ಸಿಕ್ಕವರಲ್ಲಿ ನಾಲ್ವರು ಅರಣ್ಯಾಧಿಕಾರಿಗಳೇ ಇದ್ದರಲ್ಲ).

ಮಾದಕ ದ್ರವ್ಯ ಸಾಗಣೆ, ಮಾನವ ಸಾಗಣೆ, ಶಸ್ತ್ರಾಸ್ತ್ರ ಮಾರಾಟವೇ ಮುಂತಾದ ಕರಾಳ ದಂಧೆಗಳ ಸಾಲಿನಲ್ಲಿ ವನ್ಯಹಂತಕರನ್ನು ಸೇರಿಸಿ ಮರೆತುಬಿಡುತ್ತೇವೆ. ಈ ಹಿಂದೆ ಐದು ಬಾರಿ ಜೀವಸಂಕುಲಗಳ ಸಾಮೂಹಿಕ ಅವಸಾನ ನಡೆದಿವೆಯಾದರೂ ಈಗಿನ ವನ್ಯಜೀವ ಪ್ರಳಯ ಅವೆಲ್ಲಕ್ಕಿಂತ ತ್ವರಿತ ಮತ್ತು ಭೀಕರದ್ದಾಗಿದೆ. ಹೆದ್ದಾರಿ ನಿರ್ಮಾಣ, ಕೃಷಿ ವಿಸ್ತರಣೆ, ಗಣಿಗಾರಿಕೆಯಂಥ ಕಾನೂನುಬದ್ಧ ಚಟುವಟಿಕೆಗಳೇ ವನ್ಯಲೋಕಕ್ಕೆ ಧ್ವಂಸಕಾರಿಯಾಗಿವೆ. ಜೊತೆಗೆ ದುರ್ಬಲ ಕಾನೂನುಗಳಿಂದಾಗಿ ರಾಸಾಯನಿಕ ವಿಷ ಸೇಂಚನ, ಜಲಮಾಲಿನ್ಯ, ಪ್ಲಾಸ್ಟಿಕ್ ಹಾವಳಿ ಹೆಚ್ಚುತ್ತಿದೆ. ವನ್ಯಜೀವಿಗಳ ರಕ್ಷಣೆಗೆಂದೇ ಶೇಕಡಾ 3ರಷ್ಟು ಭೂಭಾಗವನ್ನು ಮೀಸಲಿಟ್ಟರೂ ಅಲ್ಲಿ ಬೇಟೆಗಾರರ ನಿಯಂತ್ರಣ ಕಷ್ಟವಾಗುತ್ತಿದೆ. ಇದರ ಮೇಲೆ, ಜಾಗತಿಕ ಮಟ್ಟದಲ್ಲಿ ಬಿಸಿಪ್ರಳಯದ ಚುರುಕು ತೀವ್ರವಾಗುತ್ತಿದೆ. ರಕ್ಷಿತ ಅರಣ್ಯಗಳಲ್ಲೂ ಕೊಳವೆಬಾವಿಗೆ ಕೊರೆಯಬೇಕಾದ, ಅಥವಾ ಪ್ರವಾಹಕ್ಕೆ ಸಿಕ್ಕ ಘೇಂಡಾಗಳನ್ನು ಹೆಲಿಕಾಪ್ಟರ್ ಮೂಲಕ ರಕ್ಷಿಸಬೇಕಾದ ಪರಿಸ್ಥಿತಿ ಬರುತ್ತಿದೆ. ನಮ್ಮ ಅನುಕೂಲಕ್ಕೆಂದು ನಾವು ಕಟ್ಟಿಕೊಂಡ ಸಂಪರ್ಕ ಸಾಧನಗಳು ಕಾಡಿನ ಬೇಟೆಗಾರರಿಗೂ ಸಿಗುತ್ತಿವೆ. ಅಲ್ಲೆಲ್ಲೋ ನಿಸರ್ಗದಲ್ಲಿ ಅವಿತಿದ್ದ ವೈರಾಣುಗಳು ಇದೇ ಸಾಧನಗಳ ಬೆನ್ನೇರಿ ಹಂದಿಜ್ವರ, ಪಕ್ಷಿಜ್ವರ, ನಿಫಾ, ಹಾಂಟಾ, ಎಬೋಲಾ, ಕೋವಿಡ್‌ಗಳಂಥ ಮಹಾಮಾರಿಗಳಾಗುವುದನ್ನು ನಾವು ನೋಡಿದ್ದೇವೆ. ಆದರೂ ಬೇಟೆ ನಡೆಯುತ್ತಿದೆ. ಯಾರದೋ ತೆವಲಿಗೆ, ಇನ್ಯಾರದೋ ಅಂಧವಿಶ್ವಾಸಕ್ಕೆ ಮುಗ್ಧ ಪ್ರಾಣಿಗಳು ಬಲಿಯಾಗುತ್ತಿವೆ. ಅಂಧಶ್ರದ್ಧೆ ಬೇಡವೆಂದು ಹೇಳುವವರೂ ಗುಂಡಿಗೆ ಬಲಿಯಾಗುತ್ತಾರೆ. ❖

> ವನ್ಯಜೀವಿಗಳ ಕಳ್ಳಸಾಗಣೆಯನ್ನು ತಪ್ಪಿಸಲೆಂದು ಏನೆಲ್ಲ ಸಾಧನಗಳು ಬರುತ್ತಿವೆ. ಆ ಸಾಧನಗಳೇ ವನ್ಯಹಂತಕರ ಬತ್ತಳಿಕೆಗೂ ಸೇರುತ್ತಿವೆ. ಮುಗ್ಧಜೀವಿಗಳ ಉಳಿವು ಅಳಿವಿನ ಈ ಸಮರವನ್ನು ನಾವು ಕೈಕಟ್ಟಿ ನೋಡುತ್ತೇವೆ. ಜೀವಸಂಕುಲ ಅಳಿವಿನಂಚಿಗೆ ಬಂದರೆ ನಮಗೆ ನೆಮ್ಮದಿಯುಂಟೆ?

ಟೆನ್ನಿಸ್ ಬಾಲ್ ಕ್ರಿಕೆಟ್ ಇತಿಹಾಸದ ಫ್ಲಡ್‌ಲೈಟ್ ವರ್ತಮಾನದ ರಿಪೋರ್ಟ್

ದಾವಣಗೆರೆಯಲ್ಲಿ ನಡೆದಿದ್ದ ವೈದ್ಯರ ಕ್ರಿಕೆಟ್ ಪಂದ್ಯಾವಳಿಯ ದೃಶ್ಯ. –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಎಂ. ರಾಘವೇಂದ್ರ

ವಿಶ್ವಕಪ್ ಕ್ರಿಕೆಟ್ ನಡೆಯುತ್ತಿರುವ ಈ ಹೊತ್ತಿನಲ್ಲಿ ಎಂದೋ ಮೂಲೆ ಸೇರಿದ್ದ ಕಿಟ್‌ಗಳೂ ಹೊರಗೆ ಬರುತ್ತಿವೆ. ಟೆನ್ನಿಸ್ ಬಾಲ್ ಕ್ರಿಕೆಟ್ ನಮ್ಮ ರಾಜ್ಯದಲ್ಲಿ ದಶಕಗಳಿಂದ ಎಷ್ಟು ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ, ಅದರ ಬಿಳಲುಗಳು ಹೇಗಿವೆ ಎನ್ನುವುದನ್ನು ಈ ಲೇಖನ ತೆರೆದಿಟ್ಟಿದೆ.

ನವೆಂಬರ್ ಬಂತೆಂದರೆ ರಾಜ್ಯದ ಉದ್ದಗಲಕ್ಕೂ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗಳ ಸುಗ್ಗಿ ಶುರು. ಈ ಟೂರ್ನಿಗಳು ಮೇ ತಿಂಗಳ ಅಂತ್ಯದವರೆಗೂ ನಿರಂತರವಾಗಿ ನಡೆಯುತ್ತವೆ. ಟೆನ್ನಿಸ್ ಬಾಲ್ ಕ್ರಿಕೆಟ್ ಮೂಲಕವೇ ಆಟದ ಅಂಗಳಕ್ಕೆ ಕಾಲಿಟ್ಟು ರಾಜ್ಯ, ರಾಷ್ಟ್ರ ತಂಡವನ್ನು ಪ್ರತಿನಿಧಿಸಿದ ಹಲವು ಆಟಗಾರರೂ ನಮ್ಮಲ್ಲಿ ಇದ್ದಾರೆ.

ಈಗೀಗ ಟೆನ್ನಿಸ್ ಬಾಲ್ ಟೂರ್ನಿಯು ಗಲ್ಫ್ ರಾಷ್ಟ್ರಕ್ಕೂ ಕಾಲಿಟ್ಟಿದ್ದು, ರಾಜ್ಯದ ಆಯ್ದ ಆಟಗಾರರು ಅಲ್ಲಿಗೆ ತೆರಳುತ್ತಾರೆ. ಹೊನಲು ಬೆಳಕಿನಲ್ಲಿ ಬೆಳಗಿನ ಜಾವದವರೆಗೂ ನಡೆಯುವ ಈ ಕ್ರಿಕೆಟ್‌ನ ನೇರ ಪ್ರಸಾರಕ್ಕೆಂದೇ ಹಲವು ಯೂಟ್ಯೂಬ್ ಚಾನೆಲ್‌ಗಳು ಹುಟ್ಟಿಕೊಂಡಿವೆ. ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗಳ ಇತಿಹಾಸ ಹಾಗೂ ಬೆಳವಣಿಗೆ ರೋಚಕವಾಗಿದೆ.

1994ನೇ ಸಾಲಿನ ಮೇ ತಿಂಗಳ ಒಂದು ಭಾನುವಾರ ಸಂಜೆ7ರಸಮಯ.ಶಿವಮೊಗ್ಗದನೆಹರೂಕ್ರೀಡಾಂಗಣದಲ್ಲಿ 10 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಐಡಿಯಲ್ ಕಪ್ 1994ರ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಹೊನಲು ಬೆಳಕಿನ ಫೈನಲ್ ಪಂದ್ಯವನ್ನು ವೀಕ್ಷಿಸಲು ಕಿಕ್ಕಿರಿದು ನೆರೆದಿದ್ದರು. ಟಾಸ್ ಗೆದ್ದ ಬೆಂಗಳೂರಿನ 'ಜೈ ಕರ್ನಾಟಕ' ತಂಡವು ಬೆಂಗಳೂರಿನ ಮತ್ತೊಂದು ತಂಡವಾದ 'ಸಾಯಿ ವಿಂಟರ್ ಇಲೆವೆನ್' ತಂಡವನ್ನು ಮೊದಲು ಬ್ಯಾಟ್ ಮಾಡಲು ಆಹ್ವಾನಿಸಿತು. ನಿಗದಿತ 15 ಓವರ್‌ಗಳಲ್ಲಿ 'ಸಾಯಿ ವಿಂಟರ್ ಇಲೆವೆನ್' ಗಳಿಸಿದ್ದು ಕೇವಲ 48 ರನ್. ಗೆಲುವಿಗೆ 49 ರನ್ ಗಳಿಸಬೇಕಿದ್ದ 'ಜೈ ಕರ್ನಾಟಕ'ದ ತಂಡದ ಆರಂಭ ಉತ್ತಮವಾಗಿದ್ದರೂ 10 ನೇ ಓವರ್ ನಂತರ ವಿಕೆಟ್‌ಗಳು ಪತನವಾಗತೊಡಗಿದವು. ಕೊನೆಯ ಎಸೆತದಲ್ಲಿ 'ಜೈ ಕರ್ನಾಟಕ' ತಂಡಕ್ಕೆ ಗೆಲುವಿಗೆ ಒಂದು ರನ್ ಬೇಕಿತ್ತು. ಎದುರಾಳಿ ತಂಡಕ್ಕೆ ಒಂದು ವಿಕೆಟ್ ಸಾಕಿತ್ತು. ಕ್ರೀಡಾಂಗಣದಲ್ಲಿದ್ದ ಪ್ರೇಕ್ಷಕರಲ್ಲಿ ಹೆಚ್ಚಿನವರು ತಾವು ಕುಳಿತ ಜಾಗದಿಂದ ಎದ್ದು ಬೌಂಡರಿ ಗೆರೆಯ ಸುತ್ತಲೂ ಬಂದು ನೆರೆದಿದ್ದರು. ಪ್ರೇಕ್ಷಕರ ಕಿವಿಗಡಚುವ ಚಪ್ಪಾಳೆ ಸದ್ದಿನ ನಡುವೆ 'ಸಾಯಿ..' ತಂಡದ ಬೌಲರ್ ಕೊನೆಯ ಎಸೆತ ಹಾಕಿದರು. 'ಜೈ ಕರ್ನಾಟಕ'ದ ಬ್ಯಾಟರ್ ಆ ಚೆಂಡನ್ನು ಎದುರಿಸಲು ವಿಫಲರಾದರು. ಆದರೆ, ನಾನ್ ಸ್ಟ್ರೈಕರ್ ಒಂದು ರನ್‌ಗಾಗಿ ಓಡಿಬಂದುಬಿಟ್ಟಿದ್ದರು. ವಿಕೆಟ್ ಕೀಪರ್ ಚೆಂಡನ್ನು ಹಿಡಿದು ಎಸೆದದ್ದೇ ಚೆಂಡು ವಿಕೆಟ್‌ಗೆ ಬಡಿದಿತ್ತು. ರನ್ ಪೂರೈಸಿದ ಸಂಭ್ರಮದಲ್ಲಿ 'ಜೈ ಕರ್ನಾಟಕ' ಗೆದ್ದಾಯಿತು ಎಂದು ಆ ತಂಡದ ಆಟಗಾರರು, ಪ್ರೇಕ್ಷಕರು ಮೈದಾನದ ಒಳಗೆ ನುಗ್ಗಿದರು. ಮತ್ತೊಂದೆಡೆ ಚೆಂಡು ವಿಕೆಟ್‌ಗೆ ಬಡಿದಿದ್ದರಿಂದ 'ಸಾಯಿ ವಿಂಟರ್' ಗೆದ್ದಿದೆ ಎಂದು ಆ ತಂಡದ ಆಟಗಾರರು ಭಾವಿಸಿದ್ದರು. ಅಂತಿಮವಾಗಿ ನಿರ್ಣಾಯಕರು ವೀಕ್ಷಕ ವಿವರಣೆಕಾರರ ಕೊಠಡಿಗೆ ಬಂದು, ವಿಕೆಟ್ ಕೀಪರ್ ಎಸೆದ ಚೆಂಡು ವಿಕೆಟ್‌ಗೆ ಬಡಿದರೂ ಬೇಲ್ಸ್ ಕೆಳಗೆ ಬೀಳದ ಕಾರಣ 'ಜೈ ಕರ್ನಾಟಕ' ಗೆದ್ದಿದೆ ಎಂದು ಘೋಷಿಸಿದಾಗ ಪ್ರೇಕ್ಷಕರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಕೊನೆಗೂ ಅಲ್ಲಿ ಕ್ರಿಕೆಟ್ ಗೆದ್ದಿತ್ತು.

ಟೆನ್ನಿಸ್ ಬಾಲ್ ಕ್ರಿಕೆಟ್ ಇತಿಹಾಸವನ್ನು ಇಣುಕಿದರೆ ಇಂತಹ ಅಸಂಖ್ಯ ರೋಚಕ ಕ್ಷಣಗಳು ಸಿಗುತ್ತವೆ. 90ರ ದಶಕದಲ್ಲಿ ಪ್ರಖ್ಯಾತವಾಗಿದ್ದ ಬೆಂಗಳೂರಿನ ಜೈ ಕರ್ನಾಟಕ, ಚಮಕ್, ರಂಗ ಇಲೆವೆನ್, ಮೈಸೂರಿನ ಲಕ್ಷ್ಮಿಪುರಂ, ಇಂದಿರಾನಗರ, ಕೋಲಾರದ ಪಾಂಡುರಂಗ ಇಲೆವೆನ್, ಶಿವಮೊಗ್ಗದ ಭಾರತ್, ಐಡಿಯಲ್, ಭದ್ರಾವತಿಯ ಪಿ.ಟಿ. ವೈ.ಸಿ.ಟಿ. ಕುಂದಾಪುರದ ಚಕ್ರವರ್ತಿ, ಟಾರ್ಪಡೋಸ್, ಮಂಗಳೂರಿನ ವೀರಕೇಸರಿ, ಶಿರ್ವಾದ ಬ್ಲೂಸ್ಟಾರ್, ಬನ್ನಂಜೆಯ ಪ್ಯಾರಡೈಸ್, ಬೈಂದೂರಿನ ವಿಕ್ರಂ, ಉಡುಪಿಯ ಸನ್ನಿ ಕ್ರಿಕೆಟರ್ಸ್, ದಾವಣಗೆರೆ ಇಲೆವೆನ್, ಸಾಗರದ ಪ್ರೇಮ್ ಕುಮಾರ್ ತಂಡ, ಎಂ.ಜಿ.ಸಿ.ಟಿ. ಎಂ.ಕೆ. ಸಿ.ಟಿ. ಹೀಗೆ ತಂಡಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಭಾನುವಾರದಿಂದ ಭಾನುವಾರದವರೆಗೂ ಎಂಟು ದಿನಗಳ ಕಾಲ ಬೆಂಗಳೂರು, ದಾವಣಗೆರೆ, ಶಿವಮೊಗ್ಗ, ಸಾಗರ, ಕುಂದಾಪುರ, ಉಡುಪಿ, ಮಂಗಳೂರು, ಪಡುಬಿದ್ರೆ, ಬೈಂದೂರು ಮೊದಲಾದ ಸ್ಥಳಗಳಲ್ಲಿ ನಡೆಯುತ್ತಿದ್ದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಪ್ರೇಕ್ಷಕರಲ್ಲಿ ಕ್ರಿಕೆಟ್ ಪ್ರೀತಿಯನ್ನು ಇಮ್ಮಡಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಮರೆಯುವಂತಿಲ್ಲ.

ಟೆನ್ನಿಸ್ ಬಾಲ್ ಕ್ರಿಕೆಟ್ ಮೂಲಕವೇ ರಾಜ್ಯ ಹಾಗೂ ರಾಷ್ಟ್ರ ತಂಡವನ್ನು ಪ್ರತಿನಿಧಿಸಿದ ಆಟಗಾರರು ಇಲ್ಲಿದ್ದಾರೆ. ಡೇವಿಡ್ ಜಾನ್ಸನ್, ದೊಡ್ಡ ಗಣೇಶ್, ಎಸ್.ಅರವಿಂದ್ ಬೆಂಗಳೂರಿನ ಜೈ ಕರ್ನಾಟಕದ ತಂಡದ ಮೂಲಕವೇ ತಮ್ಮ ಕ್ರಿಕೆಟ್ ಕೆರಿಯರ್ ಆರಂಭಿಸಿದ್ದು.

ಶಾಸ್ತ್ರೀಯವೂ ಕಲಾತ್ಮಕವೂ ಆದ ಆಟದ ಜೊತೆಗೆ ಆಯಾ ಕಾಲಕ್ಕೆ ತಕ್ಕಂತಹ ಬದಲಾವಣೆಗಳನ್ನು ಮೈಗೂಡಿಸಿಕೊಂಡಿರುವುದು ಟೆನ್ನಿಸ್ ಬಾಲ್ ಕ್ರಿಕೆಟ್‌ನ ವಿಶೇಷತೆಯಾಗಿದೆ. ಐಪಿಎಲ್ ಜನಪ್ರಿಯವಾದ ನಂತರ ಟೆನ್ನಿಸ್ ಬಾಲ್‌ನಲ್ಲೂ ಪ್ರೀಮಿಯರ್ ಲೀಗ್ ಕ್ರಿಕೆಟ್ ಆರಂಭಗೊಂಡಿದೆ. ಈ ಟೂರ್ನಿಗಳನ್ನು ಪ್ರಸಾರ ಮಾಡುವ ಹಲವು ಯೂಟ್ಯೂಬ್ ಚಾನೆಲ್‌ಗಳಿವೆ.

ಕರ್ನಾಟಕದಲ್ಲಿದ್ದಾಗ ಟೆನ್ನಿಸ್ ಬಾಲ್ ಕ್ರಿಕೆಟ್‌ನಲ್ಲಿ ತೊಡಗಿಕೊಂಡಿದ್ದು, ನಂತರ ಉದ್ಯೋಗ ನಿಮಿತ್ತ ಗಲ್ಫ್ ರಾಷ್ಟ್ರಕ್ಕೆ ತೆರಳಿದ ಕೆಲವರು ಅಲ್ಲಿ ಪಂದ್ಯಾವಳಿಗಳನ್ನು ಸಂಘಟಿಸುತ್ತಿದ್ದಾರೆ. ಅದಕ್ಕೆ ರಾಜ್ಯದ ಆಯ್ದ ಆಟಗಾರರು ಪ್ರತಿವರ್ಷವೂ ತೆರಳುತ್ತಾರೆ. ಹಲವರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆಡುವುದೇ ವೃತ್ತಿಯಾಗಿದೆ. ಈ ಟೂರ್ನಿಗಳ ಮಹತ್ವಕ್ಕೆ ಹಿಡಿದ ಕನ್ನಡಿ ಇದು.

ಕ್ರಿಕೆಟ್‌ನಲ್ಲಿ ಹಣ ಪ್ರಧಾನವಾಗುತ್ತಿರುವ ಬೆಳವಣಿಗೆಯ ಬಿಸಿ ಟೆನ್ನಿಸ್ ಬಾಲ್ ಕ್ರಿಕೆಟ್‌ಗೂ ತಟ್ಟಿದೆ. ಈಚೆಗೆ ಖ್ಯಾತ ಆಟಗಾರರನ್ನು ಹಣ ಕೊಟ್ಟು ಖರೀದಿಸುವ ಪ್ರಕ್ರಿಯೆ ಇಲ್ಲಿಗೂ ಕಾಲಿಟ್ಟಿದೆ. ಇದರ ಪರಿಣಾಮ ಕೆಲವೇ ಪ್ರಬಲ ತಂಡಗಳು ರಾಜ್ಯಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿದ್ದು, ಉಳಿದ ತಂಡಗಳು ಹಿಂದೇಟು ಹಾಕುತ್ತಿವೆ.

2ನೇ ಪುಟಕ್ಕೆ...

ಅಯೋಡಿನ್‌ಯುಕ್ತ ಉಪ್ಪೂ ವಿಜ್ಞಾನಿಯ ಋಣವೂ

ಮಿರ್ಜಾ ಮುಹಮ್ಮದ್ ತಖ್ವಿ ಖಾನ್

ಗುರುರಾಜ್ ಎಸ್. ದಾವಣಗೆರೆ

> ಹೈದರಾಬಾದ್‌ನ ವಿಜ್ಞಾನಿ ಮಿರ್ಜಾ ಮೊಹಮ್ಮದ್ ತಖ್ವಿ ಖಾನ್ ಅಯೋಡಿನ್‌ಯುಕ್ತ ಉಪ್ಪಿನಿಂದ ಗಳಗಂಡ ಕಾಯಿಲೆ ನಿವಾರಿಸಬಹುದು ಎಂದು ಹೇಳಿ ಸುಮ್ಮನಾಗಲಿಲ್ಲ. ಸಮುದ್ರದ ಪಾಚಿಯಿಂದ ಅಯೋಡಿನ್ ತೆಗೆಯುವ ಸಂಶೋಧನೆಯನ್ನೂ ನಡೆಸಿ, ಯಶಸ್ವಿಯಾದರು. ಆರ್‌ಒ ತಂತ್ರಜ್ಞಾನದ ಶುದ್ಧ ಕುಡಿಯುವ ನೀರಿನ ಘಟಕವನ್ನು ದೇಶದಲ್ಲಿ ಮೊದಲು ರೂಪಿಸಿದವರೂ ಅವರೇ.

ನಾಗಾಲ್ಯಾಂಡ್ ಮತ್ತು ಮಿಜೋರಾಂನ ಬುಡಕಟ್ಟುಗಳ ಜನರನ್ನು ಗಾಯಿಟರ್ (ಗಳಗಂಡ) ಕಾಯಿಲೆ ಬಾಧಿಸುತ್ತಿದ್ದ ದಿನಗಳವು. ಅದು ಯಾವುದರಿಂದ ಬರುತ್ತದೆ, ಚಿಕಿತ್ಸೆ ಏನು ಎಂದು ಗೊತ್ತಾಗದೆ ಒದ್ದಾಡುತ್ತಿದ್ದ ಜನರಿಗೆ ವಿಜ್ಞಾನಿಯೊಬ್ಬರು ಅಯೋಡಿನ್‌ಯುಕ್ತ ಉಪ್ಪು ಸೇವಿಸಿದರೆ ಸರಿಹೋಗುತ್ತದೆ ಎಂದರು. ಜನರಿಗೆ ಅದು ಅರ್ಥವಾಗಲಿಲ್ಲ. ವಿಜ್ಞಾನಿಯನ್ನು ಮಿಕಿಮಿಕಿ ನೋಡಿದರು. ಆಗ ವಿಜ್ಞಾನಿಯೇ ಖುದ್ದಾಗಿ ಅಯೋಡಿನ್‌ಯುಕ್ತ ಉಪ್ಪು ತಯಾರಿಸುವುದನ್ನು ಕಲಿಸಿದರು. ಅದನ್ನು ಸೇವಿಸಲು ಶುರುಮಾಡಿದ ನಂತರ ಜನರ ಕಾಯಿಲೆ ಕಳೆಯಿತು. ಕೃತಜ್ಞತಾಪೂರ್ವಕವಾಗಿ ವಿಜ್ಞಾನಿಗೆ ಏನು ಉಡುಗೊರೆ ಕೊಡುವುದೆಂದು ಹೊಳೆಯದ ಮಗ್ಧರು ತಮ್ಮ ಬುಡಕಟ್ಟಿನ ಸುಂದರ ಕನ್ಯೆಯೊಬ್ಬಳನ್ನು ಮುಂದೆ ನಿಲ್ಲಿಸಿ, 'ಇವಳನ್ನು ನಿಮಗೆ ಮದುವೆ ಮಾಡಿಕೊಡುತ್ತೇವೆ' ಎಂದಿದ್ದರಂತೆ! ಅಯೋಡಿನ್‌ಯುಕ್ತ ಉಪ್ಪು ಸೇವನೆ ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳಿದ ಹೈದರಾಬಾದ್‌ನ ಆ ವಿಜ್ಞಾನಿಯ ಹೆಸರು ಮಿರ್ಜಾ ಮೊಹಮ್ಮದ್ ತಖ್ವಿ ಖಾನ್.

ಉಪ್ಪಿನ ಋಣ

'ಉಪ್ಪಿಗಿಂತ ರುಚಿಯಿಲ್ಲ' ಎಂಬ ಮಾತು ಕೇಳದವರೇ ಇಲ್ಲ. ಮಾಡಿದ ಅಡುಗೆಗೆ ಸೇರಿದರಷ್ಟೇ ಉಪ್ಪಿಗೆ ಸಾರ್ಥಕತೆ. ಈಗಿನ ಕಾಲಮಾನಕ್ಕೆ ಅಡುಗೆ ರುಚಿಯಾಗಿದ್ದರಷ್ಟೇ ಸಾಲದು, ಆರೋಗ್ಯವೂ ವೃದ್ಧಿಸಬೇಕು. ರುಚಿ, ಆರೋಗ್ಯ ಎರಡಕ್ಕೂ ಬೇಕಾಗುವ ಉಪ್ಪಿನಲ್ಲಿ ಅಯೋಡಿನ್ ಅಂಶ ಇರಲೇಬೇಕೆಂದು, ಇರದಿದ್ದರೆ ಅತ್ಯಗತ್ಯವಾಗಿ ಸೇರಿಸಬೇಕೆಂದು ಹೇಳಿದ ಈ ದೇಶ ಕಂಡ ಅಪರೂಪದ ವಿಜ್ಞಾನಿ ತಖ್ವಿ ಖಾನ್‌ಗೆ ನಾವೆಲ್ಲ ಋಣಿಯಾಗಿರಲೇಬೇಕು. ಇಂತಹ ಖಾನ್ ಸಾಹೇಬರಿಗೆ ಈಗ ತೊಂಬತ್ತೂರರ ಹರೆಯ.

ಸುದ್ದಿವಾಹಿನಿಗಳ ಕಾರ್ಯಕ್ರಮಗಳ ಮಧ್ಯೆ ತೂರಿಬರುವ ಉಪ್ಪಿನ ಜಾಹೀರಾತಿನಲ್ಲಿ ಅಯೋಡಿನ್‌ಯುಕ್ತ ಉಪ್ಪಿನ ಪ್ರಸ್ತಾಪವಾಗುತ್ತಲೇ ಇರುತ್ತದೆ. 'ಅಯೋಡಿನ್' ಎಂಬ ಮೂಲ ವಸ್ತುವನ್ನು (ಆರೋಗ್ಯ ಚೂರ್ಣವನ್ನು) ಕಂಡುಹಿಡಿದವನು ಬ್ರಿಟಿಷ್ ವಿಜ್ಞಾನಿ ಡೇವಿಡ್ ಹಂಫ್ರಿ. ಮನುಷ್ಯನ ದೇಹದಲ್ಲಿ ಥೈರಾಯಿಡ್ ರಸದೂತವನ್ನು ಉತ್ಪಾದಿಸಲು ಇದು ಬೇಕೇ ಬೇಕು. ಥೈರಾಯಿಡ್ ರಸದೂತಗಳ ಸ್ರವಿಸುವಿಕೆಯಲ್ಲಿ ವ್ಯತ್ಯಾಸವಾದಾಗ ಜನರು ತೀವ್ರತರವಾದ ಮಾನಸಿಕ ಕಾಯಿಲೆ, ಅಂಗವೈಕಲ್ಯ, ಕುಂದಿದ ದೈಹಿಕ ಬೆಳವಣಿಗೆ, ಕಿವುಡು ಮತ್ತು ಮೂಕತನ, ಮೆಳ್ಳೆಗಣ್ಣು, ದೋಷಯುಕ್ತ ನಡಿಗೆ, ಹಿರಿಯರಲ್ಲಿ ನಿಶ್ಶಕ್ತಿ, ಗಳಗಂಡ ರೋಗ, ಗರ್ಭಪಾತ, ಮೃತ ಶಿಶು ಜನನ (ಮರಣಜಾತ ಶಿಶು) ಸಂಖ್ಯೆಯಲ್ಲಿ ಹೆಚ್ಚಳ ಸೇರಿದಂತೆ ಇನ್ನೂ ಅನೇಕ ನ್ಯೂನತೆಗಳಿಗೆ ಒಳಗಾಗುತ್ತಾರೆ.

ಆಗ ಇಂದಿರಾಗಾಂಧಿ ಪ್ರಧಾನಿಯಾಗಿದ್ದರು. ಆಹಾರದಲ್ಲಿ ಉಂಟಾದ ಅಯೋಡಿನ್ ಕೊರತೆಯಿಂದ ದೇಶದ ಬಹಳಷ್ಟು ಜನ ಬುದ್ಧಿಮಾಂದ್ಯತೆ ಮತ್ತು ಗಾಯಿಟರ್ ಕಾಯಿಲೆಯಿಂದ ಬಳಲುತ್ತಿದ್ದರು. ನಮ್ಮ ದೇಶದ ಆಹಾರ ಕ್ರಮದಲ್ಲಿ ಅಯೋಡಿನ್ ಸಂಯುಕ್ತದ ಕೊರತೆ ಹೆಚ್ಚಾಗಿದ್ದು, ಇದನ್ನು ಪೂರೈಸುವುದು ಹೇಗೆ ಎಂಬ ಪ್ರಶ್ನೆ ಎದುರಲ್ಲಿತ್ತು. ಅದಕ್ಕೆ ಉತ್ತರ ನೀಡಿದ್ದು ಭಾವ್‌ನಗರ್‌ದ ಕೇಂದ್ರೀಯ ಉಪ್ಪು ಮತ್ತು ಸಾಗರ ರಸಾಯನಿಕ ಸಂಶೋಧನಾ ಕೇಂದ್ರದ ಉಸ್ತುವಾರಿಯಾಗಿದ್ದ ತಖ್ವಿ ಖಾನ್. ದೇಶದ ಜನ ಸೇವಿಸುವ ಉಪ್ಪಿನಲ್ಲಿ ಅಯೋಡಿನ್ ಇರುವಂತೆ ನೋಡಿಕೊಳ್ಳಲು ಸಾಹೇಬರಿಗೆ ಬುಲಾವ್ ಕಳಿಸಿದ ಪ್ರಧಾನಿ ಇಂದಿರಾ, ಕೂಡಲೇ ಕೆಲಸ ಶುರುಮಾಡಲು ಬಂಡವಾಳದ ಜೊತೆಗೆ ಮತ್ತೇನು ಬೇಕು ಎಂದು ಕೇಳಿದರು. ಇಡೀ ದೇಶದ ಜನ ಸೇವಿಸುವ ಉಪ್ಪಿನಲ್ಲಿ ಅಯೋಡಿನ್ ಅಂಶ ಸೇರಿಸಲು ಭಾರಿ ಪ್ರಮಾಣದ ಅಯೋಡಿನ್‌ನ ಅವಶ್ಯಕತೆ ಇತ್ತು.

3ನೇ ಪುಟಕ್ಕೆ...

ಚಿತ್ತ ಕಲಕುವ ಚಿತ್ತಾಲರ ಕಾವ್ಯ

ಆರ್. ಲಕ್ಷ್ಮೀನಾರಾಯಣ

ಸ್ಮರಣೆ

ಕಾದಂಬರಿ ಕ್ಷೇತ್ರದ ವಿಶಿಷ್ಟ ಸಾಧಕ ಯಶವಂತ ಚಿತ್ತಾಲ ಮತ್ತು ಕಾವ್ಯ ಕ್ಷೇತ್ರದ ಅಪೂರ್ವ ಸಾಧಕ ಗಂಗಾಧರ ಚಿತ್ತಾಲ ಸೋದರರ ತವರೂರಾದ ಹನೇಹಳ್ಳಿಗೆ ಕನ್ನಡ ಸಾಹಿತ್ಯದ ನಕ್ಷೆಯಲ್ಲಿ ಶಾಶ್ವತವಾದ ಸ್ಥಾನವಿದೆ.

ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಯೆನಿಸಿದ ಗಂಗಾಧರ ಚಿತ್ತಾಲರು ಸಿಂಧ್, ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕವೂ ಸೇರಿದ ಆಗಿನ ಇಡೀ ಮುಂಬೈ ಪ್ರಾಂತಕ್ಕೇ ಎಸ್.ಎಸ್.ಎಲ್.ಸಿಯಲ್ಲಿ ಮೊದಲ ರ್‍ಯಾಂಕ್ ಗಳಿಸುವ ಮೂಲಕ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದವರು. ಬಿ.ಎ. ಪರೀಕ್ಷೆಯ ನಂತರದಲ್ಲಿ ಭಾರತ ಸರ್ಕಾರದ ಐ.ಎ ಎ.ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಕೌಂಟ್ಸ್ ಇಲಾಖೆಯಲ್ಲಿ ಅತ್ಯುನ್ನತ ಅಧಿಕಾರಿಯಾಗಿ ದೇಶ ವಿದೇಶಗಳಲ್ಲಿ ಕಾರ್ಯನಿರ್ವಹಿಸಿ, 1977ರಲ್ಲಿ ಸೇವಾ ನಿವೃತ್ತರಾಗಿ ಮುಂಬೈಯಲ್ಲಿ ನೆಲೆಸಿದರು. 65ನೇ ವಯಸ್ಸಿನಲ್ಲಿ ಆರೋಗ್ಯದ ಮೂರ್ತರೂಪವೆಂಬಂತಿದ್ದ ಚಿತ್ತಾಲರು ಪಾರ್ಕಿನ್ಸನ್ ವ್ಯಾಧಿಗೆ ತುತ್ತಾದದ್ದು ನಿಜಕ್ಕೂ ದುರ್ದೈವವೇ ಸರಿ.

ಚಿತ್ತಾಲರು ಬರೆದದ್ದು 'ಕಾಲದ ಕರೆ', 'ಮನುಕುಲದ ಹಾಡು', 'ಹರಿವ ನೀರಿದು' ಮತ್ತು 'ಸಂಪರ್ಕ' ಎಂಬ ನಾಲ್ಕು ಕವನ ಸಂಕಲನಗಳಿಂದ ಸೇರಿ ಒಟ್ಟು 72 ಕವಿತೆಗಳನ್ನಷ್ಟೇ. ಆದರೆ ಅವುಗಳಲ್ಲಿನ ಬಹಳಷ್ಟು ಕವಿತೆಗಳು ಕಾವ್ಯ ಪ್ರೇಮಿಗಳ ಚಿತ್ತವನ್ನು ಬಗೆ ಬಗೆಯಾಗಿ ಕಲಕುತ್ತ ಅನನ್ಯವಾದ ರೀತಿಯಲ್ಲಿ ಸಹೃದಯರ ಹೃದಯವನ್ನು ಸೆರೆಹಿಡಿಯುತ್ತ ಕನ್ನಡ ಕಾವ್ಯದ ಶ್ರೀಮಂತಿಕೆಯನ್ನು ಅಪೂರ್ವರೀತಿಯಲ್ಲಿ ಹೆಚ್ಚಿಸಿವೆ. ಎಂ.ಎನ್.ರಾಯ್ ಅವರ 'ರ್‍ಯಾಡಿಕಲ್ ಹ್ಯೂಮನಿಸಂ'ನಿಂದ ಆಕರ್ಷಿತರಾಗಿ ಮಾನವತಾವಾದದ ಚಿಂತನೆಗಳನ್ನು ಅಳವಡಿಸಿಕೊಂಡ ಅವರ ಚಿಂತನಪರ ಕವಿತೆಗಳು ಒಂದೆಡೆ ನಮ್ಮ ಚಿತ್ತವನ್ನು ಕಲಕುತ್ತವಾದರೆ, ಇನ್ನೊಂದೆಡೆ ಅವರ ಮರ್ಮಸ್ಪರ್ಶಿ ಚರಮಗೀತೆಗಳು ಹೃದಯವನ್ನು ತಳಮಳಕ್ಕೆ ಈಡುಮಾಡುತ್ತವೆ.

ನವೋದಯ ಕಾವ್ಯ ತನ್ನ ಉತ್ತುಂಗವನ್ನು ತಲುಪಿ ನಂತರದಲ್ಲಿ ರೂಢಿಯ ಜಾಡಿಗೆ ಬಿದ್ದಿದ್ದ, ಆದರೆ ನವ್ಯ ಇನ್ನೂ ಸ್ಪಷ್ಟವಾಗಿ ತನ್ನ ಹೆಜ್ಜೆಗುರುತುಗಳನ್ನು ಮೂಡಿಸದಿದ್ದ ಸಂಧಿಕಾಲದಲ್ಲಿ ಬಂದ ಅವರ ಮೊದಲ ಕವನ ಸಂಕಲನ 'ಕಾಲದ ಕರೆ'ಯನ್ನು ಪ್ರಬುದ್ಧ ಕರ್ನಾಟಕದಲ್ಲಿ ವಿಸ್ತಾರವಾಗಿ ವಿಮರ್ಶಿಸುತ್ತ(1948) ಅಡಿಗರು, ಜೀವನದ ಬಗೆಗಿನ ಚಿಂತನೆ ಹಾಗೂ ಮನುಷ್ಯ ಬದುಕಿನಲ್ಲಿ ಪ್ರಧಾನವಾದ ಪಾತ್ರವಹಿಸುವ ಸಾಮಾಜಿಕ ರಾಜಕೀಯ ವಿಚಾರಗಳ ಚಿಂತನೆ ಅವರ ಕಾವ್ಯದ ಮೂಲ ದ್ರವ್ಯ ಎಂದು ಹೇಳಿ ಅವರ ಕಾವ್ಯದ ಮನೋಧರ್ಮವನ್ನು ಗುರುತಿಸಿದ್ದರು. ಅವರ ಈ ಕವನ ಸಂಕಲನದಿಂದ 'ಕಾಗೆಗಳ ಬಳಗದಲ್ಲಿ ನಿಜವಾದ ಕೋಗಿಲೆಯನ್ನು ಕಂಡಷ್ಟು ಖುಷಿಯಾಯಿತು' ಎಂದು ಹೇಳಿ, ಕವಿಯಾಗಿ ಚಿತ್ತಾಲರ ಮಹತ್ವವನ್ನು ಅಡಿಗರು ಅಂದೇ ಗುರುತಿಸಿದ್ದರು. ಆಗ ಬಂದ ಸ್ವಾತಂತ್ರ್ಯದ ಬಗ್ಗೆ ಅವರ ದೃಷ್ಟಿ ಅದೆಷ್ಟು ವಾಸ್ತವದಿಂದ ಕೂಡಿತ್ತೆಂಬುದಕ್ಕೆ ಈ ಸಾಲುಗಳು ಸಾಕು: 'ತಾಯಾಗಿ ಬರಲಿರುವ ಸ್ವಾತಂತ್ರ್ಯವಿದು ಬಂತೆ| ಹಣದ ಮಕ್ಕಳ ಮನೆಯ ಸೂಳೆಯಾಗಿ? ಒಳಗೊಳಗೆ ಕುದಿದೆದ್ದ ಜೀವ ಕನಲುವುದು ಈ| ಮೋಸಮಾಟವ ಸುಡುವೆ ಹೋಳಿಯಾಗಿ' (ದೀಪೋತ್ಸವ).

ಬದುಕಿನ ಮೂಲ ಸ್ವರೂಪ ಕುರಿತು ಆರಂಭವಾದ ಈ ಚಿಂತನೆ ಅವರ ಮೂರನೆಯದಾದ 'ಹರಿವ ನೀರಿದು' ಕವನ ಸಂಕಲನದ ಬಹುತೇಕ ಎಲ್ಲ ಕವನಗಳಲ್ಲಿ ಘನೀಭೂತಗೊಂಡಿದೆ. ಅಸ್ತಿತ್ವವಾದದ ಚಿಂತನೆಗಳು ಇಲ್ಲಿ ಹೆಪ್ಪುಗಟ್ಟಿವೆ. ನದಿಯ ಹಾಗೆ ನಿರಂತರವಾಗಿ ಕಾಲಾತೀತವಾಗಿ ಸಾಗುವ ಜೀವನ ಪ್ರವಾಹದಲ್ಲಿ 'ಕಾಲಾಧೀನವಾಗಿ ಚರಿಸುವುದೊಂದೆ| ಬೆರಗಿನರ್ಭಕ ದೃಷ್ಟಿ ಚಾಚಿ ಅಭ್ಯಾಗತರ ತೆರದಿ ನೆಲಸುವುದೊಂದೆ|' ಮಾನವ ಬದುಕಿನ ಮಿತಿ ಎಂಬ ವಿಚಾರವನ್ನು ಮಹತ್ವದ ಕವನ- 'ಹರಿವ ನೀರಿದು'ದಲ್ಲಿ ಸಾರಿದ್ದಾರೆ. ಅವರ ಬಹುಮುಖ್ಯ ಕವನಗಳಲ್ಲೊಂದಾದ 'ಕಾಮಸೂತ್ರ'ದಲ್ಲಿ ಶೀಲ ಅಶ್ಲೀಲಗಳ ಮೇರೆಯನ್ನು ಮೀರಿದ ಹಾಗೆ ಕಾಮದ ನಿಸ್ಸಂಕೋಚ ಅಭಿವ್ಯಕ್ತಿಯು ಕಾವ್ಯರೂಪ ತಳೆದಿದೆ. ಯೌವನದ ಚುಂಬಕ ಶಕ್ತಿಯ ಸೆಳೆತಕ್ಕೆ ಸಿಕ್ಕಿದ ಗಂಡು-ಹೆಣ್ಣು ಆ ಸೆಳೆತದ ಪ್ರಕ್ರಿಯೆಯಲ್ಲಿಯೇ ಮನುಕುಲದ ತಂದೆತಾಯಿಗಳಾಗಿ ಬದಲಾಗಿಬಿಡುವ ಪವಾಡವನ್ನು ಈ ಸಾಲುಗಳಲ್ಲಿ ಹಿಡಿದಿಟ್ಟಿದೆ: 'ಯಾವ ಹಿಗ್ಗಿನ ಸೆಲೆಯೊ ನಮಗೆ ಸಿಲುಕಿ| ಇಳೆಯ ಮೂಲಕು ನಮ್ಮ ಬೇರು ನಿಲುಕಿ| ಭೂಗರ್ಭ ಸುರಿದಿತ್ತು ಜೊಲ್ಲು ಬಾಯಿ| ನಾವಂದು ಮನುಕುಲದ ತಾಯಿ ತಂದೆ|'

ಪ್ರಸಿದ್ಧ ಲೇಖಕ ದಿ. ಪ್ರೊ.ಎಚ್.ಜಿ. ಸಣ್ಣಗುಡ್ಡಯ್ಯನವರು "ಕವಿಯ ತನ್ಮಯ ಪ್ರಾಮಾಣಿಕತೆಯ ಮೂಲಕ 'ಕಾಮಸೂತ್ರ' ಒಂದು ಅದ್ಭುತ ಪ್ರಣಯಗೀತೆಯಾಗಿರುವುದು ಕನ್ನಡಿಗರ ಹೆಮ್ಮೆ" ಎಂದು ಇದನ್ನು ಪ್ರಶಂಸಿಸಿದ್ದಾರೆ. ಅವರ ಅತ್ಯಂತ ಮಹತ್ವದ ಕವನ ಸಂಕಲನವಾದ 'ಮನುಕುಲದ ಹಾಡು'ದಲ್ಲಿ ಕವಿಯ ವಾಸ್ತವ ಅನುಭವದ ಪಾರದರ್ಶಕ ಅಭಿವ್ಯಕ್ತಿ ಇದೆ. ಈ ಸಂಕಲನದಲ್ಲಿರುವ ಅವರ ಶ್ರೇಷ್ಠ ಕವನವಾದ 'ದುಃಖಗೀತ'ದ ವಸ್ತು ಅವರ ತಂದೆಯ ಆತ್ಮಹತ್ಯೆಯಿಂದಾದ ದುಃಖ. ದೇಹಕ್ಕೆ ಹತ್ತಿದ ವ್ಯಾಧಿಯ ಪೀಡೆ ತಾಳಲಾರದಾದಾಗ ಸಾಕು ಇನ್ನು ಈ ವೇದನೆ ಎಂದು ಬುದ್ಧಿಪೂರ್ವಕವಾಗಿ ನಿರ್ಧರಿಸಿ ತನ್ನನ್ನು ಇಚ್ಛಾಮರಣಕ್ಕೆ ಒಳಪಡಿಸಿಕೊಂಡದ್ದು ಹತ್ತು ಭಾಗಗಳಲ್ಲಿ ಹರಡಿಕೊಂಡಿದೆ. ಈ ಕವಿತೆಯಲ್ಲಿ- 'ಅನ್ಯ ಕೇಂದ್ರಿತ ವಿಶ್ವದಲ್ಲಿ ಬೇರೂರಿಹುದು| ಆತ್ಮಕೇಂದ್ರಿತ ನಮ್ಮದೀ ಮರ್ತ್ಯ ಜೀವಿತ' ಎಂಬ ಅಸ್ತಿತ್ವವಾದಿ ಚಿಂತನೆಯನ್ನು ಬಿತ್ತರಿಸುತ್ತ ಜೀವನದ ಸ್ವರೂಪ ಮತ್ತು ಅರ್ಥ ಕುರಿತಂತೆ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಲೇ, ಒಮ್ಮೊಮ್ಮೆ ಹತಾಶೆಯ ಮಾತುಗಳನ್ನಾಡಿದರೂ ಕೊನೆಗೆ ದೈವ ನಿರ್ಮಿತಿಯ ಕ್ರಮವನ್ನೊಪ್ಪಿಕೊಂಡೇ ಜೀವ ಕೊನೆಗೆ 'ನೀ ಕೊಟ್ಟೆ ಇದ, ಮತ್ತೆ ನೀನೆ ಇದ ಮರಳಿ ಕೋ' ಎಂದು ಜೀವಾಧಾರಕನಿಗೆ ನಮಿಸಿ ತೆರಳುತ್ತದೆ. ದೈವ, ಜೀವ, ವಿಧಿ ಇವುಗಳ ಬಗೆಗಿನ ಜಿಜ್ಞಾಸೆ ಕವನದುದ್ದಕ್ಕೂ ನಡೆದಿದೆ. ವಿಧಿಗೆ ಶರಣಾಗದೆ ವಿಧಿಯ ಮಿತಿ ಅರಿತು ನಾವು ಪಡೆದುದು ಇದು ಎಂದು ತಿಳಿದು ನಮ್ಮ ಕರ್ತೃತ್ವ ರೂಪುಗೊಳ್ಳಬೇಕೆಂಬ ಕವಿಯ ತಾತ್ವಿಕತೆ ಇದರ ಜೀವಾಳ. 'ಕೊನೆಗೆ ಹೊರಡುವುದು ಆಮಿಷವೊ ಪೀಯೂಷವೊ ವಿಷವೊ ಬಲ್ಲವರಾರು?' ಎಂದು ಪ್ರಶ್ನಿಸುವಲ್ಲಿಯೂ ಕೇಳಿಬರುವ ಧ್ವನಿ ಅಸಹಾಯಕ ವ್ಯಕ್ತಿಯ ಕುರುಡು ನಂಬಿಕೆಯಲ್ಲ, ಮಾನವನ ಪೌರುಷ ಪ್ರಜ್ಞೆಯ ಸತ್ವ ಭರಿತ ನುಡಿ.

ದುಃಖದ ಹೊರತಾಗಿಯೂ ಬದುಕಿದೆ ಎಂಬ ನಿಲುಗಡೆಗೆ ಬಂದ ಸಂದರ್ಭದಲ್ಲಿ ತಮ್ಮ ಜೀವನದ ಬಗೆಗಿನ ಸುದೀರ್ಘ ಚಿಂತನೆಯ, ತಮ್ಮ ಬದುಕಿನ ಮ್ಯಾನಿಫೆಸ್ಟೋ ಥರದ ಕವನ 'ಹರಿವ ನೀರಿದು' ಬರೆದರು. ಬಂದದ್ದೆಲ್ಲವನ್ನೂ ಕೊಂಡು ಬದುಕನ್ನು ಅರ್ಥಪೂರ್ಣವಾಗಿ ಮಾಡುವುದನ್ನೇ ಕರ್ಮವೆಂದು ಹೇಳುತ್ತಾರೆ. ಅನಂತಮೂರ್ತಿಯವರು ಇದನ್ನು ಚಿತ್ತಾಲರ ಸರ್ವಶಕ್ತಿಗಳೂ ಒದಗಿಬಂದಿರುವ ಕವನ ಎಂದು ಮುಕ್ತಕಂಠದಿಂದ ಮೆಚ್ಚುತ್ತಾರೆ.

ಹದಿನೇಳು ಕವನಗಳ ಅವರ ಕೊನೆಯ ಕವನ ಸಂಕಲನ 'ಸಂಪರ್ಕ'ದಲ್ಲಿ ಪ್ರಧಾನವಾಗಿ ಕೇಳಿಬರುವುದು ಯಾತನೆಯ ದನಿ. ಪಾರ್ಕಿನ್ಸನ್ ವ್ಯಾಧಿಯಿಂದ ಕಂಗೆಡದೆ ತಮ್ಮ ನೋವು, ಹತಾಶೆಗಳಿಗೆ ಸಮರ್ಥವಾಗಿ ಕಾವ್ಯಾಭಿವ್ಯಕ್ತಿ ನೀಡುತ್ತಲೇ ಕಾವ್ಯ ಸಾರ್ಥಕ್ಯದ ಬಗ್ಗೆ ಚಿಂತಿಸಿದ್ದಾರೆ. ನೆಲದ ಸಂಪರ್ಕವೇ ಇಲ್ಲದ ಐದನೆಯ ಮಹಡಿಯಲ್ಲಿ ಮಕ್ಕಳು ಖಾಲಿ ಟಿನ್ನಿನಲ್ಲಿ ಬೀದಿಯ ದೂಳು ಒಟ್ಟುಗೂಡಿಸಿ, ಒಣಕಲು ಬೀಜ ಹೂಳಿ, ಬಾಟ್ಲಿ ನೀರಿನಲಿ ಪರ್ಜನ್ಯ ಸುರಿಸಿದ ಮಾತ್ರಕ್ಕೆ 'ಕಣ್ಣಮುಂದೇ ತೆರೆದ ಅಮೃತೋದ್ಭವ ಪ್ರಹರ| ಚಿಣ್ಣರೊಲು ದೂಡಿ ಕೆಂಬೂದಿ ಹಣಿಕಿಕ್ಕಿ| ಇಣಿಕಿವೆ ಸುತ್ತ ನೂರಾರು ಅಂಕುರ!'- ಸೃಜನದ ಈ ಕೌತುಕವ ಕವಿ ನಿಯಾಳಿಸುತ್ತಾರೆ, ಅವುಗಳ ಸ್ಪರ್ಶ ಉರದಲುಮ್ಮಳ ಜೀಕಳಿ ಪುಳಕ ಹುಟ್ಟಿಸುತ್ತವೆ. ಕಾವ್ಯ ಮತ್ತು ಜೀವಚೈತನ್ಯ ಎಂಥದೇ ಪ್ರತಿಕೂಲ ಪರಿಸ್ಥಿತಿಯಲ್ಲೂ ಹೊರಹೊಮ್ಮಬಲ್ಲವು, ಎಂಬ ಅದಮ್ಯ ಆಶಾವಾದ ಅವರ 'ಸಂಪರ್ಕ' ಕವಿತೆಯಲ್ಲಿ ಹೀಗೆ ಮೂಡಿದೆ.

ಹೀಗೆ ಬದುಕಿನ ಅನುಭವಗಳನ್ನು ಕಾವ್ಯವಾಗಿಸುವ ದಿಸೆಯಲ್ಲಿ ಚಿಂತನಶೀಲತೆಯನ್ನು ಅಳವಡಿಸಿಕೊಳ್ಳುತ್ತ ಕನ್ನಡ ಕಾವ್ಯಕ್ಕೆ ಹಲವಾರು ಸಾರ್ಥಕವಾದ ಕವನಗಳನ್ನು ಕೊಡುಗೆಯಾಗಿ ಕೊಟ್ಟ ಚಿತ್ತಾಲರನ್ನು ಅವರು ಹುಟ್ಟಿ ನೂರು ತುಂಬಿದ ಈ ಪರ್ವದಿನದಂದು ನೆನೆಯುತ್ತ ಅವರಿಗೆ ಕೃತಜ್ಞತೆ ಹೇಳುವ ಸರದಿ ಕನ್ನಡಿಗರದಾಗಿದೆ.



ಗಂಗಾಧರ ಚಿತ್ತಾಲರು ಹುಟ್ಟಿ ಈ ತಿಂಗಳ 12ಕ್ಕೆ ನೂರು ವರ್ಷಗಳು ತುಂಬಲಿದೆ (ಜನನ:12-11-1923). ಈ ಸಂದರ್ಭದಲ್ಲಿ ಅವರ ಕೊಡುಗೆಯನ್ನು ನೆನೆಯುವುದು ಅತ್ಯಂತ ಔಚಿತ್ಯಪೂರ್ಣ.

ಸರ್ವಾಧಿಕಾರದಿಂದ ಫ್ಯಾಸಿಸಂವರೆಗಿನ ಪ್ರತಿರೋಧದ ಪಯಣ

ಸಿದ್ಧನಗೌಡ ಪಾಟೀಲ

ವಿಮರ್ಶೆ

'ಮಹಾಸಂಗ್ರಾಮಿ'-ಇದು ಸಾಮಾಜಿಕ ಹೋರಾಟಗಾರ ಎಸ್.ಆರ್.ಹಿರೇಮಠ ಅವರ ರಚನಾತ್ಮಕ ಪ್ರಯೋಗಗಳ ಬಾಳ್ಕಥನ. ಇದನ್ನು ಬರೆದವರು ಇನ್ನೊಬ್ಬ ಸಾಮಾಜಿಕ ಕಾರ್ಯಕರ್ತೆ, ಲೇಖಕಿ ರೂಪಾ ಹಾಸನ. ಎಂಬತ್ತರ ವಯೋಮಾನದ ಹೊಸ್ತಿಲಿನಲ್ಲಿರುವ ಎಸ್.ಆರ್.ಹಿರೇಮಠ ಅವರ ಸಾಮಾಜಿಕ ಜೀವನಕ್ಕೆ ಐವತ್ತು ವರ್ಷಗಳ ಅನುಭವವಿದೆ. ಅವರ ಈ ಅನುಭವವು ಚಟುವಟಿಕೆ ಮತ್ತು ಚಳವಳಿಗಳಿಂದಲೂ ಭೌಗೋಳಿಕವಾಗಿಯೂ ವಿಭಿನ್ನ, ವೈವಿಧ್ಯಮಯ ವಿಷಯ, ವಸ್ತುಗಳನ್ನೊಳಗೊಂಡಿದೆ. ಇಂಥ ವ್ಯಕ್ತಿಯ ಕುರಿತು ಕೃತಿ ರಚಿಸಬೇಕಾದ ಸಂದರ್ಭದಲ್ಲಿ ಪಟ್ಟ ಪರಿಶ್ರಮವನ್ನು ಲೇಖಕಿ ರೂಪಾ 'ಚಿನ್ನಕ್ಕಾಗಿ ಮಣ್ಣು ಸೋಸೆ ಸೂಸಿ' ಎಂಬ ತಮ್ಮ ಆರಂಭಿಕ ಮಾತುಗಳಲ್ಲಿ ದಾಖಲಿಸಿದ್ದಾರೆ. ಕರ್ನಾಟಕ, ಭಾರತ, ಅಮೆರಿಕ, ಯೂರೋಪ್ ಹೀಗೆ ಹಲವು ದೇಶಗಳಲ್ಲಿ ವ್ಯಾಪಿಸಿರುವ ಹಿರೇಮಠ ಅವರ ಚಟುವಟಿಕೆ, ಚಳವಳಿಗಳ ವಿವರಗಳನ್ನು ಸಂಗ್ರಹಿಸುವುದು, ಅವುಗಳನ್ನು ವಿಷಯಕ್ಕೆ ಅನುಗುಣವಾಗಿ ಸಂಕಲಿಸುವುದು ಅಪಾರವಾದ ದೈಹಿಕ, ಮಾನಸಿಕ ಶ್ರಮವನ್ನು ಬೇಡುತ್ತದೆ. ಅಂಥ ಶ್ರಮವನ್ನು ವರ್ಷಾನುಗಟ್ಟಲೆ ನಿರ್ವಹಿಸಿ ಒಂದು ಅಮೂಲ್ಯವಾದ ಹೋರಾಟದ ಕಥನವನ್ನು ಲೇಖಕಿ ಕಟ್ಟಿಕೊಟ್ಟಿದ್ದಾರೆ. ವ್ಯಕ್ತಿ ಕೇಂದ್ರೀತವಾಗದ ಹಾಗೆ, ವ್ಯಕ್ತಿ ವೈಭವೀಕರಣಕ್ಕೆ ತುತ್ತಾಗದ ಹಾಗೆ, ವ್ಯವಸ್ಥೆಯ ವಿಮರ್ಶೆ ಮತ್ತು ಪರ್ಯಾಯ ವ್ಯವಸ್ಥೆಯ ನಿರ್ಮಾಣ ಮಾರ್ಗದಲ್ಲಿ ಶ್ರಮಿಸಿದ ಚೇತನಗಳನ್ನು ಕೇಂದ್ರವಾಗಿಟ್ಟುಕೊಂಡು ರಚನೆಯಾದ ಕೃತಿ ಇದು. ಎಸ್.ಆರ್.ಹಿರೇಮಠ ಅವರ ಸಂದರ್ಶನ, ಅವರ ಸಹವರ್ತಿಗಳ ಸಂದರ್ಶನಗಳು ಮತ್ತು ಹಿರೇಮಠ ಅವರು ಒದಗಿಸಿದ ಸುಮಾರು ಆರು ಸಾವಿರ ಪುಟಗಳ ದಾಖಲೆಗಳು ಈ ಕೃತಿಯ ಆಕರಗಳಾಗಿವೆ.

ಬೆಳವಣಕಿ ಗ್ರಾಮದಲ್ಲಿ 1944 ನವೆಂಬರ್ 5ರಂದು ಸಂಗಯ್ಯ ರಾಚಯ್ಯ ಹಿರೇಮಠ ಅವರು ಜನಿಸಿದರು. ಅವರ ತಂದೆ ಊರಿನ ವ್ಯಾಜ್ಯವೊಂದರಲ್ಲಿ ಬಡ ರೈತರು ಪರವಾಗಿ ನಿಂತು, ಉಳ್ಳವರ ವೈರತ್ವ ಕಟ್ಟಿಕೊಂಡು ಊರು ಬಿಟ್ಟರು. ಪುಟ್ಟ ಬಾಲಕ ತಂದೆ ರಾಚಯ್ಯ ತಾಯಿ ರಾಚವ್ವನ ಜೊತೆ ತಾಯಿಯ ತವರು ವಿಜಾಪುರಕ್ಕೆ ವಲಸೆ ಹೋದರು. ಸಂಗಯ್ಯ ಐದು ವರ್ಷದವನಿದ್ದಾಗ ತಂದೆ ರಾಚಯ್ಯ ನಿಧನ ಹೊಂದಿದರು. ಬಳಿಕ ತಾಯಿ ರಾಚವ್ವ, ದೊಡ್ಡಮ್ಮ ನಿಂಬೆವ್ವನ ಆಶ್ರಯದಲ್ಲಿ ಸಂಗಯ್ಯ ಕಡುಬಡತನದಲ್ಲಿ ಬೆಳೆದರು. ಬಡತನ ಮತ್ತು ಪ್ರತಿಭೆಯ ಮಧ್ಯೆ ಪೈಪೋಟಿ ನಡೆದು ಪ್ರತಿಭೆ ಗೆಲ್ಲುವ ಸಂಗಯ್ಯನ ಬಾಲ್ಯ, ವಿದ್ಯಾಭ್ಯಾಸದ ವಿವರಗಳು ಈ ಕೃತಿಯ ಆರಂಭಿಕ ಅಧ್ಯಾಯಗಳಲ್ಲಿ ಹೃದಯಂಗಮವಾಗಿ ಮೂಡಿಬಂದಿವೆ. ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಪದವಿ ಮುಗಿಸಿ 1968ರಲ್ಲಿ ಅಮೆರಿಕದ ಕ್ಯಾನ್ಸಸ್ ಸ್ಟೇಟ್ ಯೂನಿವರ್ಸಿಟಿಗೆ ಎಂ.ಎಸ್ ಓದಲು ಹೋದನು ಸಂಗಯ್ಯ. ಅಲ್ಲಿಂದ ಅವರೊಳಗೊಬ್ಬ ಸಾಮಾಜಿಕ ಚಿಂತಕ ನಂತರ ಸುಧಾರಕ ರೂಪುಗೊಳ್ಳುವ ವಿವರಗಳು ಆಸಕ್ತಿದಾಯಕವಾಗಿವೆ.

ಬಡತನದ ವಿರುದ್ಧ ಹೋರಾಡುವ ಎರಡು ಮಾದರಿಗಳಿವೆ. ಮೊದಲನೆಯದು, ಸಿರಿವಂತನಾಗಿ ಸಿರಿತನ ಅನುಭವಿಸುವುದು. ಎರಡನೆಯದು, ಬಡತನವೇ ಇರಬಾರದೆಂದು ಹೋರಾಡುವುದು. ಹಿರೇಮಠ ಅವರು ಅಮೆರಿಕದಲ್ಲಿ ವಿದ್ಯಾಭ್ಯಾಸ ಮುಗಿಸಿ, ಅಲ್ಲಿಯೇ ಒಳ್ಳೆಯ ಉದ್ಯೋಗದಲ್ಲಿದ್ದಾಗಲೂ ಭಾರತದ ಬಡತನ, ಅನಾರೋಗ್ಯ, ಗ್ರಾಮಗಳ ಸ್ಥಿತಿಗಳ ಕುರಿತು ಚಿಂತಿಸುತ್ತಲೇ ಅಲ್ಲಿನ ಸಮಾನಮನಸ್ಕರನ್ನು ಸೇರಿಸಿಕೊಂಡು ಹುಟ್ಟುಹಾಕುವ ಸಂಘಟನೆ 'ಇಂಡಿಯಾ ಡೆವೆಲಪ್‌ಮೆಂಟ್ ಸರ್ವೀಸ್'(1974) ಅವರ ತಾಯಿನಾಡಿನ ಕುರಿತಾದ ತುಡಿತಕ್ಕೊಂದು ಸಾಕ್ಷಿ. ಭಾರತದಲ್ಲಿ 1975ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿ ಘೋಷಿಸಿದಾಗ ಅಮೆರಿಕದಲ್ಲಿರುವ ಪ್ರಜ್ಞಾವಂತ ಭಾರತೀಯರೆಲ್ಲರೂ ಸೇರಿ ತುರ್ತು ಪರಿಸ್ಥಿತಿಯ ವಿರುದ್ಧದ ಪ್ರಚಾರಕ್ಕಾಗಿ 'ಇಂಡಿಯನ್ಸ್ ಫಾರ್ ಡೆಮಾಕ್ರಸಿ' ಎಂಬ ವೇದಿಕೆಯನ್ನು ಹುಟ್ಟುಹಾಕುತ್ತಾರೆ. ಅದರ ಸಕ್ರಿಯ ಸಂಘಟಕನಾಗಿ ಬೆಳೆಯುವ ಎಸ್.ಆರ್.ಹಿರೇಮಠ ಅವರು ಸ್ನೇಹಿತರೊಡಗೂಡಿ ಅಮೆರಿಕದಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತಾರೆ. ಹಿರೇಮಠ ಅವರು ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಜಿನೇವಾ ಎಲ್ಲೆಡೆ ಸುತ್ತಿ ತುರ್ತು ಪರಿಸ್ಥಿತಿ ವಿರುದ್ಧ ಅಭಿಪ್ರಾಯ ರೂಪಿಸುತ್ತಾರೆ. ಈ ಸಂದರ್ಭದ ಹಲವಾರು ಮಹತ್ವಪೂರ್ಣ ವಿವರಗಳು ಈ ಕೃತಿಯಲ್ಲಿವೆ. ಹಿರೇಮಠ ಅವರು ಅಮೆರಿಕದ ಮೇವಿಸ್ ಸಿಗ್ವಾಲ್ವ ಎಂಬ ಯುವತಿಯನ್ನು ಪ್ರೀತಿಸಿದರು. ಅವರು ಅಲ್ಲಿಯೇ ಸುಖಜೀವನ ನಡೆಸಬಹುದಿತ್ತು. ಆದರೆ ಭಾರತದಲ್ಲಿ ಗ್ರಾಮೀಣಾಭಿವೃದ್ಧಿಯ ಕನಸು ಹೊತ್ತು 1979ರಲ್ಲಿ ಭಾರತಕ್ಕೆ ಮರಳಿದರು. ಮೇವಿಸ್ ಕೂಡ ಮದುವೆಯಾಗಿ ಹಿರೇಮಠರ ಜೊತೆ ಭಾರತಕ್ಕೆ ಬಂದರು. ಇಲ್ಲಿ ಬಂದಾಗ ಅವರ ಹೆಸರು ಶಾಮಲಾ.

ಧಾರವಾಡಕ್ಕೆ ಬರುವ ಹಿರೇಮಠ ಮತ್ತು ಅವರ ಪತ್ನಿ ರಾಣೆಬೆನ್ನೂರು ತಾಲ್ಲೂಕಿನ ಅತ್ಯಂತ ಹಿಂದುಳಿದ ಪ್ರದೇಶವಾದ ಮೆಡ್ಲೇರಿ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು, ಅಲ್ಲಿನ ಜನರ ಆರೋಗ್ಯ, ಸ್ವಾವಲಂಬನೆ, ಮಹಿಳೆಯರ ಜಾಗೃತಿಯಂತಹ ಅನೇಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದರು. ಈ ಅಧ್ಯಾಯಗಳಲ್ಲಿ ಹಿರೇಮಠರಿಗಿಂತಲೂ ಅವರ ಪತ್ನಿ ಶಾಮಲಾ ಈ ನೆಲದ ಮಗಳಾಗಿ ಬೆಳೆಯುವ ವಿವರಗಳು ಅದ್ಭುತವಾಗಿ ಮೂಡಿಬಂದಿವೆ. ಮೆಡ್ಲೇರಿಯಲ್ಲಿ ಆರಂಭಿಸುವ 'ಇಂಡಿಯಾ ಡೆವೆಲಪ್‌ಮೆಂಟ್ ಸರ್ವೀಸ್'(ಐಡಿಎಸ್) ಸಂಸ್ಥೆಯು ಅಭಿವೃದ್ಧಿ ಚಟುವಟಿಕೆಗಳಿಗೆ ಸೀಮಿತವಾಗಿದ್ದರೆ ಹಿರೇಮಠರು ಹಲವಾರು ಇತರೆ ಸಂಸ್ಥೆಗಳ ಮುಖ್ಯಸ್ಥರಲ್ಲಿ ಒಬ್ಬರಾಗುತ್ತಿದ್ದರು. ಆದರೆ ಹರಿಹರದ ಪಾಲಿಫೈಬರ್ ಫ್ಯಾಕ್ಟರಿಯ ತ್ಯಾಜ್ಯ ತುಂಗಭದ್ರಾ ನದಿ ಸೇರಿ ನೀರು ವಿಷಗೊಂಡಾಗ ಹಿರೇಮಠರು ಹೋರಾಟ ನಡೆಸಿದರು. 1984ರ ಈ ಹೋರಾಟ ಅವರನ್ನು ಸಾಮಾಜಿಕ ಚಳವಳಿಯತ್ತ ಕರೆತಂದಿತು. ಬಳ್ಳಾರಿ ರಿಪಬ್ಲಿಕ್ ಎಂದೇ ಕುಖ್ಯಾತಿ ಪಡೆದಿದ್ದ ಅಕ್ರಮ ಗಣಿಗಾರಿಕೆ ವಿರುದ್ಧ ಹುಟ್ಟುಹಾಕಿದ 'ಜನಸಂಗ್ರಾಮ ಪರಿಷತ್'(2010) ಬೀದಿ ಹೋರಾಟ ಮತ್ತು ನ್ಯಾಯಾಲಯದಲ್ಲಿನ ಹೋರಾಟಕ್ಕೆ ಮಾದರಿಯಾಗಿದೆ. ಈ ಹೋರಾಟದಿಂದ ಗಣಿಗಾರಿಕೆಗೆ ತಡೆಯಾಗಿ ಗಣಿಗಳ್ಳರ ಬಂಧನವೂ ಆಯಿತು. ಇಲ್ಲಿಂದ ನಂತರ 'ಜನಸಂಗ್ರಾಮ ಪರಿಷತ್' ಸಾಗಿಬಂದ ವಿವರಗಳು ಸೊಗಸಾಗಿವೆ.

ಒಬ್ಬ ವ್ಯಕ್ತಿ, ವ್ಯಕ್ತಿಯಾಗಿ ಮತ್ತು ವ್ಯಕ್ತಿತ್ವವಾಗಿ ಎರಡೂ ರೀತಿಯಲ್ಲಿ ಸದಾ ವ್ಯಕ್ತವಾಗುತ್ತಾರೆ. ಹಿರೇಮಠರ ವ್ಯಕ್ತಿತ್ವವನ್ನು ಪ್ರಧಾನವಾಗಿಯೂ ವ್ಯಕ್ತಿಯ ಮಿತಿಗಳನ್ನು ಸೂಕ್ಷ್ಮವಾಗಿಯೂ ಲೇಖಕಿ ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. ಹಿರೇಮಠರ ವೈಯಕ್ತಿಯ ಜೀವನದ ಏರಿಳಿತಗಳನ್ನು ದಾಖಲಿಸಿದ್ದಾರೆ. ಅವರ ಹೋರಾಟಗಳು ಯಾಕೆ ದೊಡ್ಡ ಆಂದೋಲನವಾಗಲಿಲ್ಲ ಎಂಬ ಹಿರೇಮಠರ ಸಹವರ್ತಿಗಳ ಆಯಾಮವೂ ಕೃತಿಯಲ್ಲಿ ಸಿಗುತ್ತದೆ. ಈ ಕೃತಿಯ ಓದು ಕೇವಲ ಒಬ್ಬ ವ್ಯಕ್ತಿಯ ಜೀವನದ ಕಥೆಯಾಗದೆ ದೇಶದ ಐದು ದಶಕಗಳ ರಾಜಕೀಯ, ಸಾಮಾಜಿಕ, ಆಡಳಿತಾತ್ಮಕ ಮತ್ತು ಪರಿಸರದ ಕಥೆಯಾಗಿದೆ. ಅಂತಿಮವಾಗಿ ಪರ್ಯಾಯ ಬದುಕಿನ ಕನಸುಗಳನ್ನೂ ಒಳಗೊಂಡಿದೆ.



ಪು: 464 ₹600

ಮಹಾಸಂಗ್ರಾಮಿ
ಲೇ: ರೂಪಾ ಹಾಸನ
ಪ್ರ:ಅಭಿರುಚಿ ಪ್ರಕಾಶನ
ಸಂ:9980560013

ಟೆನ್ನಿಸ್ ಬಾಲ್ ಕ್ರಿಕೆಟ್...

ಒಂದನೇ ಪುಟದಿಂದ...

90ರ ದಶಕದಲ್ಲಿ ಒಂದು ಪಂದ್ಯಾವಳಿಯಲ್ಲಿ 40ರಿಂದ 50 ತಂಡಗಳು ಭಾಗವಹಿಸುತ್ತಿದ್ದವು. ಈಗ ತಂಡಗಳ ಸಂಖ್ಯೆ 20ರಿಂದ 25ಕ್ಕೆ ಇಳಿದಿದೆ. ಈ ಸ್ವರೂಪದ ಆಟದ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು ಎಂಬ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ ಅಸೋಸಿಯೇಷನ್ ಆರಂಭಗೊಂಡಿದೆ. ಈ ಸಂಘಟನೆಯಿಂದ ಟೆನ್ನಿಸ್ ಬಾಲ್ ಪಂದ್ಯಾವಳಿ ಮೊದಲಿನ ತನ್ನ ವೈಭವವನ್ನು ಮರಳಿ ಪಡೆಯಲಿದೆಯೇ ಎಂದು ಕಾದು ನೋಡಬೇಕಿದೆ.

ಪ್ರತಿಷ್ಠಿತ ಟೂರ್ನಿಗಳು

ದಾವಣಗೆರೆಯಲ್ಲಿ ಪ್ರತಿವರ್ಷ ನಡೆಯುವ 'ಶಾಮನೂರು ಡೈಮಂಡ್ ಶಿವಗಂಗಾ ಕಪ್' ಟೆನ್ನಿಸ್ ಕ್ರಿಕೆಟ್‌ನ ವಿಶ್ವಕಪ್ ಎಂದೇ ಹೆಸರಾಗಿದೆ. ಬೆಂಗಳೂರಿನಲ್ಲಿ ರೇಣು ಗೌಡ ಸಂಘಟಿಸುವ 'ಫ್ರೆಂಡ್ಸ್ ಟ್ರೋಫಿ'ಯಲ್ಲಿ ತಂಡಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ. ಬಹುಮಾನದ ಮೊತ್ತ ಈಗ ₹ 5 ಲಕ್ಷಕ್ಕೆ ಏರಿದೆ. ಬೆಂಗಳೂರಿನಲ್ಲಿ ಸೃಷ್ಟಿ ಗ್ರೂಪ್ಸ್ ಆಯೋಜಿಸುವ 'ಕರ್ನಾಟಕ ಟೆನ್ನಿಸ್ ಬಾಲ್ ಪ್ರೀಮಿಯರ್ ಲೀಗ್' ಅದ್ದೂರಿಯಾಗಿ ನಡೆಯುತ್ತಿದೆ.

ಟೆನ್ನಿಸ್ ಬಾಲ್ ಕ್ರಿಕೆಟ್‌ನ ವೆಬ್‌ಸೈಟ್

ದಕ್ಷಿಣ ಕನ್ನಡ ಜಿಲ್ಲೆಯ ಕ್ರಿಕೆಟ್ ಪ್ರೇಮಿ ಕೆ.ಆರ್ ಕೆ.ಆಚಾರ್ಯ ಅವರು ಟೆನ್ನಿಸ್ ಬಾಲ್ ಕ್ರಿಕೆಟ್ ಆಟಗಾರರನ್ನು ಪರಿಚಯಿಸುವ, ಆಟದ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ sportskannada.com. ಎಂಬ ವೆಬ್‌ಸೈಟ್ ಆರಂಭಿಸಿದ್ದಾರೆ. ಟೆನ್ನಿಸ್ ಕ್ರಿಕೆಟ್‌ನ ಆಟಗಾರರ ಪಂದ್ಯಾವಳಿಗಳ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಈ ವೆಬ್‌ಸೈಟ್ ನಿರತವಾಗಿದೆ.

ಇತ್ತೀಚಿನ ಸ್ಟಾರ್ ಆಟಗಾರರು

ಹೆಸರು	ತಂಡ	ಊರು
ಸಾಗರ್ ಭಂಡಾರಿ	ಫ್ರೆಂಡ್ಸ್	ಬೆಂಗಳೂರು.
ಸಚಿನ್ ಮಹದೇವ್	ಜೈ ಕರ್ನಾಟಕ	ಬೆಂಗಳೂರು.
ಅಕ್ಷಯ್ ಸಿ.ಕೆ.	ನ್ಯಾಶ್	ಬೆಂಗಳೂರು.
ಸ್ವಸ್ತಿಕ್ ನಾಗರಾಜ್	ನ್ಯಾಶ್	ಬೆಂಗಳೂರು.
ರಾಜಾ ಸಾಲಿಗ್ರಾಮ	ಜಾನ್ಸನ್	ಕುಂದಾಪುರ.

ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ 2019ರಲ್ಲಿ ನಡೆದಿದ್ದ ಹೊನಲು ಬೆಳಕಿನ ಎಸ್.ಎಸ್. ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಜನಪ್ರಿಯಾ 11 ತಂಡದ ಆಟಗಾರ ಸುಜೀತ್ ಅವರ ಬ್ಯಾಟಿಂಗ್ ವೈಖರಿಯ ಕ್ಷಣ. –ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ್

ಮೊದಲ ಓದು

ವೆಂಕಟಾಚಲಯ್ಯನವರ ಬದುಕಿನ ಪರಿಚಯ

ಭಾರತದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾಗಿರುವ ಎಂ.ಎನ್. ವೆಂಕಟಾಚಲಯ್ಯ ಅವರ ಕಿರು ಪರಿಚಯ ಮಾಡಿಕೊಡುವ ಕೃತಿ 'ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ'. 'ತೊಂಬತ್ತನಾಲ್ಕು ವರ್ಷವಾಗಿದ್ದರೂ ಶ್ರೀಯುತರು ಇಂದು ಕೂಡ ಸಮುದಾಯಪ್ರಜ್ಞೆಯೊಡನೆ ನ್ಯಾಯಾಂಗದ ವಿವಿಧ ವಿಚಾರಗಳಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಏಕೈಕ ಜ್ಞಾನಿಗಳಾಗಿದ್ದಾರೆ. ಸಂವಿಧಾನದ ಮೂಲ ಆಶಯಗಳನ್ನು ಅತ್ಯಂತ ಅಧಿಕೃತವಾಗಿ ಹೇಳಬಲ್ಲ ವ್ಯಕ್ತಿ' ಎಂದು ಕೃತಿಯ ಮುನ್ನುಡಿಯಲ್ಲಿ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಬರೆದಿದ್ದಾರೆ.

150 ಪುಟದ ಕೃತಿಯಲ್ಲಿ ನ್ಯಾಯಮೂರ್ತಿಗಳ ಬದುಕಿನ ಪಥವನ್ನು ಕಟ್ಟಿಕೊಡುವ ಹಲವು ಪುಟ್ಟ ಬರಹಗಳಿವೆ. ಜೊತೆಗೆ ಕೊನೆಯ ಒಂದಷ್ಟು ಪುಟಗಳಲ್ಲಿ ವಿವಿಧ ಗಣ್ಯರೊಂದಿಗೆ ವೆಂಕಟಾಚಲಯ್ಯನವರು ಇರುವ ಚಿತ್ರಗಳನ್ನು ನೀಡಲಾಗಿದೆ.

'ವೃತ್ತಿ ಜೀವನದಲ್ಲಿನ ಘನತೆ, ಪ್ರಾಮಾಣಿಕತೆ, ಶಿಸ್ತು, ಸವಿನಯದಿಂದ ಕೂಡಿದ ನಡವಳಿಕೆಯಿಂದಲೇ ಎಲ್ಲರ ಮನಸ್ಸು ಗೆದ್ದವರು ವೆಂಕಟಾಚಲಯ್ಯ. ಅವರನ್ನು ಸಮಗ್ರವಾಗಿ ಪರಿಚಯಿಸುವ ಯತ್ನ ಕೃತಿಯಲ್ಲಿದೆ' ಎಂದು ಪುಸ್ತಕದ ಬೆನ್ನುಡಿಯಲ್ಲಿ ಡಾ.ಎನ್.ಕೆ.ವೆಂಕಟರಮಣ ಬರೆದಿದ್ದಾರೆ. ಕರ್ನಾಟಕದ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದ ವೆಂಕಟಾಚಲಯ್ಯನವರು 1987ರಲ್ಲಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ಬಡ್ತಿ ಹೊಂದಿದರು. ಈ ಹುದ್ದೆ ವೆಂಕಟಾಚಲಯ್ಯನವರಿಗೆ ಒಲಿದು ಬಂದಿದ್ದು ಹೇಗೆ ಎಂದು ವಿವರಿಸುವ ಕೃತಿಯಲ್ಲಿನ ಬರಹ ಸೊಗಸಾಗಿದೆ.

1994ರಲ್ಲಿ ಸುಪ್ರೀಂಕೋರ್ಟ್‌ನಿಂದ ನಿವೃತ್ತರಾದ ವೆಂಕಟಾಚಲಯ್ಯನವರು 1996ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡರು. ಇವರು ಈ ಹುದ್ದೇಗೇರಿದ ಮೇಲೆ ಮಾಡಿದ ಅನೇಕ ಕೆಲಸಗಳು, ಆಯೋಗದಲ್ಲಾದ ಬದಲಾವಣೆಗಳ ಕುರಿತು ಬೆಳಕು ಚೆಲ್ಲುವ ಲೇಖನವೊಂದು ಕೃತಿಯಲ್ಲಿ ಕಾಣಸಿಗುತ್ತದೆ. ಕೊಲ್ಲೂರು ಶ್ರೀ ಮೂಕಾಂಬಿಕಾದೇವಾಲಯದ ನವೀಕರಣದಲ್ಲಿ ವೆಂಕಟಾಚಲಯ್ಯನವರ ಸೇವೆ ಸ್ವಾರಸ್ಯಕರವಾಗಿದೆ. ಅಲ್ಲಿನ ವಾಸ್ತುಶಿಲ್ಪದಿಂದ ಹಿಡಿದು ಇಡೀ ದೇವಾಲಯದ ನವೀಕರಣದಲ್ಲಿ ಇವರು ಎಷ್ಟು ಆಸಕ್ತಿವಹಿಸಿ ಕೆಲಸ ಮಾಡುತ್ತಾರೆ, ಇದಕ್ಕಾಗಿ ಎಷ್ಟೆಲ್ಲ ಅಧ್ಯಯನ ನಡೆಸುತ್ತಾರೆ ಎಂಬ ವಿವರಗಳನ್ನು ಲೇಖಕರು ಕೃತಿಯಲ್ಲಿ ನೀಡಿದ್ದಾರೆ. ವೆಂಕಟಾಚಲಯ್ಯನವರು 'ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ'ಕ್ಕೆ ಭಾಜನರಾದ ಬೆನ್ನಲ್ಲೇ ಪ್ರಕಟಗೊಂಡ ಕೃತಿಯಲ್ಲಿ ಬಾಲ್ಯದಿಂದ ಉನ್ನತ ಹುದ್ದೆಗೆ ಏರುವ ತನಕ ವೆಂಕಟಾಚಲಯ್ಯನವರು ಸವೆಸಿದ ಹಾದಿಯ ಚಿತ್ರಣವಿದೆ.



ಪು: 144 ₹200

ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ
ಲೇ: ಕೆ.ಆರ್.ಕಮಲೇಶ್
ಪ್ರ:ಶ್ರೀದೇವಿ ಮೀಡಿಯಾ ಸೆಂಟರ್
ಸಂ: 9448082844

ವಿಜ್ಞಾನಿ ಸಿ. ಎನ್. ಆರ್. ರಾವ್ ಆತ್ಮಕಥನ

ವಿಶ್ವವಿಖ್ಯಾತ ವಿಜ್ಞಾನಿ, ರಾಸಾಯನ ತಜ್ಞ ಪ್ರೊ.ಸಿ.ಎನ್.ಆರ್.ರಾವ್ ಅವರ ಆತ್ಮಕಥನ 'ವಿಜ್ಞಾನದೊಳಗೊಂದು ಜೀವನ'. ಆರುದಶಕಗಳ ಕಾಲ ರಾಸಾಯನ ವಿಜ್ಞಾನದಲ್ಲಿ, ಅದರಲ್ಲಿಯೂ 'ಸಾಲಿಡ್ ಸ್ಟೇಟ್' ಮತ್ತು 'ಸ್ಟ್ರಕ್ಚರಲ್ ಕೆಮಿಸ್ಟ್ರಿ'ಯಲ್ಲಿ ಕೆಲಸ ಮಾಡಿದ ಸಿ.ಎನ್.ಆರ್.ರಾವ್ ಅವರು ತಮ್ಮ ಬದುಕಿನ ಪಯಣವನ್ನು ಬರೆದುಕೊಂಡಿದ್ದಾರೆ. ಕೃತಿಯಲ್ಲಿ ಏಳು ಅಧ್ಯಾಯಗಳಿದ್ದು, ಪ್ರತಿಯೊಂದರಲ್ಲಿಯೂ ಸಾಕಷ್ಟು ಕುತೂಹಲಕಾರಿ ಸಂಗತಿಗಳಿವೆ.

'ಶ್ರೇಷ್ಠ ವಿಜ್ಞಾನಿಗಳ ಬಗ್ಗೆ ಕೇಳುವುದರಿಂದ ಹಾಗೂ ಓದುವುದರಿಂದ, ಯು ಜನಾಂಗಕ್ಕೆ ವಿಜ್ಞಾನ ಕ್ಷೇತ್ರದಲ್ಲಿ ಮುನ್ನಡೆಯಲು ಪ್ರೇರಣೆ ದೊರೆಕುತ್ತದೆ. ಜೀವನದಲ್ಲಿ ಹಲವಾರು ಅಸಾಧ್ಯ ಅಡೆ–ತಡೆಗಳಿದ್ದಾಗ್ಯೂ ಅದ್ಭುತ ಸಂಶೋಧನೆಗಳನ್ನು ನಡೆಸಿದ ಅನೇಕ ಶ್ರೇಷ್ಠ ವಿಜ್ಞಾನಿಗಳ ಜೀವನ ಚರಿತ್ರೆಯಿಂದ ನಾನು ಸ್ಫೂರ್ತಿ ಪಡೆದಿದ್ದೇನೆ' ಎಂದು ಸಿ.ಎನ್.ಆರ್. ರಾವ್ ಕೃತಿಯ ಮುನ್ನುಡಿಯಲ್ಲಿ ಹೇಳಿದ್ದಾರೆ.

'ಏಕೆ ವಿಜ್ಞಾನಿಯಾಗಬೇಕು?' ಕೃತಿಯ ಮೊದಲ ಅಧ್ಯಾಯ. ನೊಬೆಲ್ ಪುರಸ್ಕೃತ ರಸಾಯನ ವಿಜ್ಞಾನಿ ಪಾಲ್.ಜೆ.ಕ್ರುಟ್ಜನ್, ಭೌತ ವಿಜ್ಞಾನಿ ವಿಟಾಲಿ ಎಲ್. ಗಿನ್ಸ್‌ಬರ್ಗ್ ಸೇರಿದಂತೆ ಜಗತ್ತಿನ ಕೆಲವು ಪ್ರಖ್ಯಾತ ವಿಜ್ಞಾನಿಗಳ ಬದುಕಿನ ಕಥನವು ತಮ್ಮ ವಿಜ್ಞಾನ ಪಯಣಕ್ಕೆ ಹೇಗೆ ಸ್ಫೂರ್ತಿಯಾಯಿತು ಎಂಬುದನ್ನು ಲೇಖಕರು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಇದು ವಿಜ್ಞಾನವನ್ನು ಆಯ್ದುಕೊಳ್ಳುವ ಅನೇಕರಿಗೆ ಒಂದು ರೀತಿ ಮಾರ್ಗದರ್ಶಿ ಅಧ್ಯಾಯದಂತಿದೆ.

ವಿಜ್ಞಾನ ಎಂದರೇನು? ಅದರ ಅಗತ್ಯವೇನು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಿದ್ದಾರೆ. ವಿಜ್ಞಾನವು ನಮ್ಮ ಬದುಕಿಗೆ ಎಷ್ಟು ಹತ್ತಿರವಾಗಿದೆ ಎಂದು ತಿಳಿಸುವ ಈ ಅಧ್ಯಾಯವು ವಿಜ್ಞಾನವನ್ನು ಕ್ಲಿಷ್ಟವೆಂದು ಭಾವಿಸುವವರಲ್ಲಿಯೂ ವಿಜ್ಞಾನದತ್ತ ಒಲುವು ಮೂಡಿಸುವಂತಿದೆ. ತಮ್ಮ ಬದುಕಿನ ಸಂಶೋಧನೆ ದಿನಗಳು, ಅಧ್ಯಯನ ಮೊದಲಾದ ಮಾಹಿತಿಗಳಿಂದ ಕೂಡಿದ, ಯುವ ಪೀಳಿಗೆಯ ವಿಜ್ಞಾನ ವಿದ್ಯಾರ್ಥಿಗಳಿಗೆ, ಅಧ್ಯಯನ ಆಸಕ್ತರಿಗೆ ದಿಕ್ಸೂಚಿಯಾಗಬಲ್ಲ ಕೃತಿಯನ್ನು ಡಾ.ಎಂ.ಎಸ್.ಎಸ್.ಮೂರ್ತಿಯವರು ಸರಳವಾಗಿ, ಸೊಗಸಾಗಿ ಅನುವಾದಿಸಿದ್ದಾರೆ.



ಪು: 216 ₹275

ವಿಜ್ಞಾನದೊಳಗೊಂದು ಜೀವನ
ಲೇ: ಪ್ರೊ.ಸಿ.ಎನ್.ಆರ್.ರಾವ್
ಕನ್ನಡಕ್ಕೆ: ಡಾ.ಎಂ.ಎಸ್.ಎಸ್.ಮೂರ್ತಿ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 08022161900

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ದ್ರಾವಿಡ ತಪಸ್ಸು

ದ್ರಾವಿಡ ತಪಸ್ಸು (ನಾ). ಆರ್ಯವರ್ಗಕ್ಕೆ ಸೇರದ, ಸಾತ್ವಿಕವಲ್ಲದ ತಪಸ್ಸು; ದುಷ್ಟಕಾರ್ಯಕ್ಕಾಗಿ ಶಕ್ತಿಯನ್ನು ಸಂಪಾದಿಸುವ ತಪಸ್ಸು.

(ದ್ರಾವಿಡ + ತಪಸ್ಸು)

ವಿಶ್ವಾಮಿತ್ರ ಮುನಿಯು ತಾನು ಮಾಡುತ್ತಿರುವ ಯಜ್ಞಕ್ಕೆ ರಕ್ಷಣೆಗಾಗಿ ಕಲಿ ರಾಮನನ್ನು ಕಳುಹಿಸಿಕೊಡಲು ದಶರಥನನ್ನು ಕೇಳಿಕೊಳ್ಳುವರು. ಮಹಾಮುನಿಯು ಕನಕಲಂಕಾಲಕ್ಷ್ಮಿಯನ್ನು ಆಳುವ ಬಲಿಷ್ಠ ದೈತ್ಯ ರಾವಣ ದಕ್ಷಿಣದಲ್ಲಿದ್ದಾನೆ. ಅವನ ನೆಂಟರಾದ ಮಾರೀಚ ಮೊದಲಾದವರು ಯಜ್ಞಕ್ಕೆ ಅಡ್ಡಿಪಡಿಸುವರು. ಅವರು ಆರ್ಯರಿಗೆ ಸರ್ಪವೈರಿಗಳು. ರಾವಣನು ಪೌಲಸ್ತ್ಯ ವಂಶದವನು, ಅವನು ದ್ರಾವಿಡ ತಪಸ್ಸಿನಿಂದ ಶಿವನಲ್ಲಿ ವರಗಳನ್ನು ಪಡೆದಿರುವನು ಎಂದು ತಿಳಿಸುವರು.

ಆರ್ಯರದು ಸಾತ್ವಿಕ ತಪಸ್ಸು. ದ್ರಾವಿಡರದು ರಾಜಸ ತಾಮಸ ಮಾರ್ಗದ ತಪಸ್ಸು. ಕುವೆಂಪು ಅವರು ಈ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿ 'ದ್ರಾವಿಡ ತಪಸ್ಸು' ಎಂಬ ಪದವನ್ನು ಯೋಜಿಸಿ ಬಳಸಿದ್ದಾರೆ. ಅದು ದುಷ್ಟ ಕಾರ್ಯಕ್ಕಾಗಿ ಶಕ್ತಿಯನ್ನು ಸಂಪಾದಿಸುವ ತಪಸ್ಸು.

ಪೌಲಸ್ತ್ಯ ವಂಶಜಂ; ದ್ರಾವಿಡ ತಪಸ್ಸಿನಿಂ
ಮೃಡನಿಂ ಬರಂಗಳಂ ಪಡೆದನೆಂಬರ್ ಕಣಾ!
ದಿಗ್ಗಜ ದಶಂಗಳದಟಿಪ್ಪುದಾತಂಗೆ, ಮೇಣ್ದು
ಶಶಿರಂ ತಾನೆಂಬರಯ್. (1.2 : 50 - 53)

ಕೊಡಲಿಗೊರವ

ಕೊಡಲಿಗೊರವ (ನಾ). ಕೊಡಲಿಯನ್ನು ಹಿಡಿದುಕೊಂಡ ಗೊರವ; ಪರಶುರಾಮ.

(ಕೊಡಲಿ + ಗೊರವ)

ಗೊರವ (ನಾ). ಸಂನ್ಯಾಸಿ; ತಪಸ್ವಿ

ದಶರಥನ ನಾಲ್ಕು ಜನ ಮಕ್ಕಳಾದ ರಾಮ ಲಕ್ಷ್ಮಣ ಶತ್ರುಘ್ನ ಭರತನು ಜನಕನ ಪುತ್ರಿಯರಾದ ಸೀತೆ ಊರ್ಮಿಳೆ ಶ್ರುತಕೀರ್ತಿ ಮಾಂಡವಿಯರನ್ನು ವಿವಾಹವಾದರು. ಅವರ ವಿವಾಹ ಮೆರವಣಿಗೆ ವೈಭವವಾಗಿ ಮಿಥಿಲೆಯಿಂದ ಅಯೋಧ್ಯೆಗೆ ಸಾಗಿತು. ಆಗ ಮಾರ್ಗ ಮಧ್ಯದಲ್ಲಿ ದಶರಥನ ಕಣ್ಣಿಗೆ, ಕತ್ತಲೆಗೆ ಕಾಯ ಮೂಡಿದಂತೆ ಭೃಗುವಂಶ ಜಮದಗ್ನಿಯ ಪುತ್ರನ ಭೈರವ ಮೂರ್ತಿ ಕಂಡಿತು. ಸೈನ್ಯ ಸರ್ವಸ್ವ ಬೆಚ್ಚಿತು. ಶ್ರೀರಾಮನು ಒಬ್ಬನೇ ಒಸಗೆ ತೇರಿನಿಂದ ಇಳಿದು ಪರಶುರಾಮನ ಬಳಿಗೆ ಸಾಗಿದನು. ಆತನನ್ನು ವರ್ಣಿಸುವಾಗ ಕವಿಯು ಹೊಸಪದ 'ಕೊಡಲಿ ಗೊರವ' ರಚಿಸಿ ಪರಶುರಾಮ ತಪಸ್ವಿಯ ಚೈತನ್ಯ ಕೆಚ್ಚನ್ನು ಪ್ರಕಟಪಡಿಸಿದ್ದಾರೆ.

ಶ್ರೀರಾಮನೊರ್ವನೆಯೆ ತನ್ನೊಸಗೆದೇರಿಳಿದು
ನಡೆದಂ ಶರತ್ಕಾಲ ಸುಪ್ರಸನ್ನತೆಯಂತೆವೋಲ್,
ಕೊಡಲಿಗೊರವನ ಕಡುಪಿನೆಡೆಗೆ. (1.2:668-670)

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2023ರಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ, ಕವನ.

ಕಥೆ
ಪೂರ್ಣಿಮಾ ಮಾಳಗಿಮನಿ ಅವರ
ಹಸಿದ ಹೊಟ್ಟೆ ಮತ್ತು ಶಿಷ್ಟಾಚಾರ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಭಾಗ್ಯ ಕೆ.ಯು. ಅವರ
ಕಣ್ಣಬೀದಿಯಲ್ಲಿ ಹನಿದೇರು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಪ್ರಕಾಶ್ ರಾಜ್ ಅರ್ಪಿಸಿ, ಶರಣ್ಯ ರಾಮಪ್ರಕಾಶ್ ನಿರ್ದೇಶಿಸಿದ 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕವು ಸಂಶೋಧಿಸಿ ಕಲೆಹಾಕಿದ ದಟ್ಟ ವಿವರಗಳನ್ನು ದಾಟಿಸುತ್ತಲೇ ಹಲವು ಪ್ರಶ್ನೆಗಳನ್ನೂ ಉಳಿಸುತ್ತದೆ.

ಹುಡುಕಾಟದ ಜೀವದ್ರವ್ಯದ ಪ್ರಯೋಗ

ರಂಗಭೂಮಿ

ದಾದಾಪೀರ್ ಜೈಮನ್

ವೃತ್ತಿರಂಗಭೂಮಿಯ ನಾಟಕಗಳಲ್ಲಿ ಕಾಣಸಿಗುತ್ತಿದ್ದ ದಿಟ್ಟ ಮಹಿಳಾ ಪಾತ್ರಗಳೆಂದರೆ-ಒಂದೋ ಖಳನಾಯಕಿಯ ಪಾತ್ರಗಳು ಅಥವಾ ಹಾಸ್ಯಪಾತ್ರಗಳು. ಮುಖ್ಯನಾಯಕಿಯರು ಪಿತೃಪ್ರಧಾನ ಸಮಾಜದ ಎಲ್ಲ ಹೊರೆಯನ್ನು ಹೊತ್ತು ಬೆಂದು ಬಸವಳಿದಂತೆ ಕಂಡರೆ, ಈ ದಿಟ್ಟ ಹಾಸ್ಯ ಪ್ರಧಾನ ಪಾತ್ರಗಳು ಸಮಾಜ ಹೇರುವ ಎಲ್ಲಾ ಭಾರಗಳನ್ನು ಕಿತ್ತೆಸೆದು ಬಿಡುಗಡೆಗೊಂಡ ಆತ್ಮಗಳಂತೆ ಕಾಣುತ್ತವೆ. ಅವು ಸಮಾಜವನ್ನು ಪ್ರಶ್ನಿಸುತ್ತವೆ. ಲೈಂಗಿಕತೆಯ ಬಗ್ಗೆ ಮುಕ್ತವಾಗಿ ಮಾತನಾಡುತ್ತವೆ. ಹಾಗೆ ಹೇಳಲು ಅವು ಆಯ್ಕೆ ಮಾಡಿಕೊಳ್ಳುವುದು ಹಾಸ್ಯ, ವ್ಯಂಗ್ಯ, ಲೇವಡಿಯ ಚಾಟಿಗಳನ್ನು. ಅದಕ್ಕೆ ಸೃಷ್ಟಿಮಾಡಿಕೊಂಡ ಭಾಷೆಯೇ ಕುತೂಹಲಕಾರಿ ಎನಿಸುತ್ತದೆ. ದಿನನಿತ್ಯದ ಅಡುಗೆಮನೆ ವಸ್ತುಗಳು, ತರಕಾರಿ, ಸಾಮಾನುಗಳು ರೂಪಕಗಳಾಗಿ ಒದಗಿಬರುತ್ತವೆ. ಈಗ ಅದಕ್ಕೆ 'ಡಬಲ್ ಮೀನಿಂಗ್' ಎಂಬ ಲೋಕಕ್ಕೆ ಒಪ್ಪಿಸಿದ ಭಾಷೆಯನ್ನು ಅನ್ವಯಿಸಿ, ಈ ಹೊಳಹನ್ನೂ ತುಳಿಯುವ ಹುನ್ನಾರ ಪಿತೃಪ್ರಧಾನ ವ್ಯವಸ್ಥೆಯಿಂದಲೇ ಬಂದಿದೆ ಎನಿಸುತ್ತದೆ. ಸಮಾಜ ಅಂತಹ ವ್ಯಕ್ತಿತ್ವಗಳಿಗೆ 'ಬಜಾರಿ' ಎಂದು ನಾಮಕರಣ ಮಾಡುತ್ತದೆ. ಅಂತಹ ಪಾತ್ರಗಳನ್ನು 'ನಕ್ಕು ಮರೆತುಬಿಡುವಂತಹ ಹಾಸ್ಯ/ಬಜಾರಿ ಪಾತ್ರಗಳು' ಎಂದೇ ಸ್ವೀಕರಿಸುತ್ತದೆ. ಅಲ್ಲೊಂದು ಪುರುಷಲೋಕದ ವ್ಯಂಗ್ಯಕ್ಕೆ ಒಳಗಾಗಿಸಾಕಾರಣವೂ ಇದೆಯಲ್ಲವೇ? ಅಂತಹ ಪಾತ್ರಕ್ಕೆ ನವೆಂಬರ್ 1ರಂದು ಬೆಂಗಳೂರು 'ಇಂಟರ್‌ನ್ಯಾಷನಲ್ ಸೆಂಟರ್'ನಲ್ಲಿ ಪ್ರದರ್ಶಿತವಾದ 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕದ ಹಾಜಾವಳಿ ಚೆನ್ನಿ ಉತ್ತಮ ಉದಾಹರಣೆ.

ಇಂಥ ದಿಟ್ಟ ಸ್ತ್ರೀ ಪಾತ್ರಗಳ ಹಿಂದೆ ಹೊರಟ ಶರಣ್ಯ ರಾಮಪ್ರಕಾಶ್, ಎರಡು ವರ್ಷಗಳ ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡದ್ದು-ಆ ಸ್ತ್ರೀ ಪಾತ್ರ ಮಾಡಿದವರ ಬದುಕು, ಅವರ ಇಂದಿನ ಸ್ಥಿತಿಗತಿಗಳು, ಅವುಗಳ ಕಿಡಿಯಿಂದ ತೆರೆದುಕೊಂಡ ಸ್ತ್ರೀ ಲೈಂಗಿಕತೆಯ ಅಭಿವ್ಯಕ್ತಿ ಮಾರ್ಗಗಳು, ಸೆನ್ಸಾರ್‌ಶಿಪ್, ಸಂಸ್ಕೃತಿಯ ಹೆಸರಿನಲ್ಲೂ ಆಗುತ್ತಿರುವ ದಬ್ಬಾಳಿಕೆಗಳು, ಪುರುಷಲೋಕದ ಪ್ರಾಬಲ್ಯ ರಾಜಕಾರಣದ ನಾನಾ ರೂಪಗಳು. ಈ ಎಲ್ಲವುಗಳನ್ನೂ ಹೇಳಲು ಶರಣ್ಯ ಬಳಸಿಕೊಂಡಿರುವುದು ರಂಗಭೂಮಿಯಂಥ ಜೀವಂತ ಮಾಧ್ಯಮವನ್ನು. ಸದ್ಯದ ಪರಿಸ್ಥಿತಿಯಲ್ಲಿ ಲೋಕವನ್ನು ತನ್ನೆಲ್ಲ ಸೂಕ್ಷ್ಮಗಳೊಂದಿಗೆ ಅರ್ಥಮಾಡಿಕೊಳ್ಳಲು ನಮಗೆ ಉಳಿದಿರುವ ಮಾರ್ಗ ಕಲೆ ಒಂದೇ.

ಐದು ಜನ ಸಂಶೋಧಕರು ಚೆನ್ನಿ ಮುಂತಾದ ಕನ್ನಡ ರಂಗಭೂಮಿಯ ಸ್ತ್ರೀ ಪಾತ್ರಗಳನ್ನು ಹುಡುಕುವುದರೊಂದಿಗೆ ಈ ನಾಟಕ ಶುರುವಾಗುತ್ತದೆ. ಪ್ರಯೋಗಾತ್ಮಕ ನಾಟಕವಾಗಿ 'ಪ್ರಾಜೆಕ್ಟ್ ಡಾರ್ಲಿಂಗ್' ಅನ್ನು ನೋಡಬಹುದು. ವಿಡಿಯೊ ಪ್ರಾತ್ಯಕ್ಷಿಕ ತುಣುಕುಗಳು, ಛಾಯಾಚಿತ್ರ ಪ್ರಬಂಧಗಳು, ದೃಶ್ಯರೂಪದ ತುಣುಕುಗಳು, ಹಾಡು, ನೃತ್ಯ, ಗೊಂಬೆಯಾಟ, ಕ್ಲೋನಿಂಗ್ ಮುಂತಾದ ಹಲವಾರು ತಂತ್ರಗಳನ್ನು ಬಳಸಿ ಕಥೆ ಹೇಳಿದ್ದಾರೆ. ಈ ನಾಟಕಕ್ಕೆ ಅದು ಅನಿವಾರ್ಯವೂ ಆಗಿತ್ತು ಎನಿಸುತ್ತದೆ. ರಚನೆಯೂ ವಿಶಿಷ್ಟವಾಗಿದೆ. ವೃತ್ತಿ ರಂಗಭೂಮಿ ನಾಟಕಗಳ ಕಥೆ, ಅದರ ನಡುವೆ ಹಾಸ್ಯ ಮತ್ತು ಅದಕ್ಕೆ ಹೊಂದುವಂತೆ ಹಾಡುವ ಮಾದರಿ ಇಲ್ಲಿ ಬಳಕೆಯಾಗಿದೆ. ನಾಟಕದ ಪಾತ್ರಧಾರಿಗಳೆಲ್ಲರೂ ನುರಿತ ರಂಗನಟ-ನಟಿಯರೇ ಆಗಿರುವುದರಿಂದ ಮೊದಲಿನಿಂದ ಕೊನೆಯವರೆಗೂ ರಂಗದ ಮೇಲಿನ ಶಕ್ತಿ ಸಂಚಯನವಾಗುತ್ತಲೇ ಇರುತ್ತದೆ. ಶ್ವೇತ ಬಿ.ವಿ, ಶಶಾಂಕ್, ಸುರಭಿ ವಶಿಷ್ಠ, ಮಾತಂಗಿ ಪ್ರಸನ್, ಶೀಲ್ಪಾ ರಂಗದ ಮೇಲೆ ಇನ್ನಿಲ್ಲದಂತೆ ಆವರಿಸಿಕೊಳ್ಳುತ್ತಾರೆ. ನಿರ್ದೇಶಕಿ ಶರಣ್ಯ ರಾಮಪ್ರಕಾಶ್ ಅವರೂ ಇಡೀ ಸಂಶೋಧನಾತ್ಮಕ ಕಥೆಯನ್ನು ಕಲೆಯ ಅಭಿವ್ಯಕ್ತಿ ಮಾಧ್ಯಮಗಳ ಮೂಲಕ ಹೇಳುವಲ್ಲಿ ಹಾಕಿದ ಶ್ರಮ ಎದ್ದುಕಾಣುತ್ತದೆ. ಬೆಳಕು, ಧ್ವನಿ, ಮಾತು, ಅಭಿನಯ ಈ ಎಲ್ಲದರ ಹದದೊಳಗೆ ಹಲವಾರು ಪ್ರತಿಮೆಗಳನ್ನು, ಸಂಕೇತಗಳನ್ನು ಸೃಷ್ಟಿಸಿದ್ದಾರೆ. ಅವರು ಈ ಸಂಶೋಧನೆಗಾಗಿ ಮಾಲತಿ ಸುಧೀರ್, ಹೆಲೆನ್ ಹುಬ್ಬಳ್ಳಿ... ಹೀಗೆ ರಂಗಭೂಮಿಯ ಅನೇಕ ಕಲಾವಿದೆಯರನ್ನು ಸಂದರ್ಶಿಸಿದ್ದಾರೆ. ಕುರ್ಚಿ, ಕಣ್ಣುಗಳು, ನಾಟಕದ ಕೊನೆಯಲ್ಲಿ ಲಕೋಟೆಯಲ್ಲಿ ಸಿಕ್ಕ ಫೋಟೊದಲ್ಲಿ ಕಾಣುವ ಚಿತ್ರ ಈ ಮಹಿಳಾ ಪಾತ್ರಗಳ ತೆರೆಯ ಹಿಂದಿನ, ಮುಂದಿನ ಒಳಮಿಡಿತಗಳನ್ನು ಹೇಳುವ ಪರಿಕರಗಳಾಗಿ, ಪ್ರತೀಕಗಳಾಗಿ ಅಭಿವ್ಯಕ್ತಗೊಂಡಿವೆ. ಹುಡುಕಾಟದ ಮೂರ್ತರೂಪದಂತಿರುವ ಚೆನ್ನಿ ಒಂದು ಪಾತ್ರವಾಗಿ ಎಲ್ಲೂ ಕಾಣಿಸದೆ ಅಮೂರ್ತವಾಗಿ, ಅದರ ಸಂಕೇತಗಳಾಗಿ ಕಾಣಿಸುವುದು ಮತ್ತೊಂದು ಸಕಾರಾತ್ಮಕ ಅಂಶ. ನಾಟಕದ ಒಂದು ಕುದಿಬಿಂದುವಿನಲ್ಲಿ ಈ ಕಥೆ-ಹುಡುಕಾಟಕ್ಕೆ ಒಂದು ಅಧ್ಯಾತ್ಮದ ಅರಿವಿನ ಸಾಲುಗಳು ಮುಚ್ಚಿದ ಬಾಗಿಲು ತೆರೆಯುವುದರ ಮೂಲಕ ಕಾಣಿಸುತ್ತವೆ. ಇದು ನಾಟಕಕ್ಕೊಂದು ಹೊಸ ಆಯಾಮವನ್ನು ದಕ್ಕಿಸಿಕೊಟ್ಟಿದೆ.

> 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕದ ಇನ್ನೊಂದು ಪ್ರದರ್ಶನವು ನವೆಂಬರ್ 5ರ ಭಾನುವಾರ ಮೈಸೂರಿನ ರಾಮಕೃಷ್ಣ ನಗರದ ನಟನ ರಂಗಶಾಲೆಯಲ್ಲಿ ನಡೆಯಲಿದೆ. ಸಂಜೆ 6.30ಕ್ಕೆ ನಾಟಕದ ಪ್ರದರ್ಶನವಿದ್ದು, ಟಿಕೆಟ್ ಕಾಯ್ದಿರಿಸಲು ಸಂಪರ್ಕಿಸಿ: 7259537777, 9945281772.

ಇದೊಂದು ಪ್ರಯೋಗಾತ್ಮಕ ರಂಗಭೂಮಿಯ ನಾಟಕ ಎಂದು ಆಹ್ವಾನಪತ್ರಿಕೆಯಲ್ಲಿಯೇ ನಮೂದಿಸಿದ್ದರೂ ಕಣ್ಣಿಗೆ ರಾಚುವ ಒಂದಷ್ಟು ವಿಷಯಗಳಿವೆ. ಒಮ್ಮೊಮ್ಮೆ ಒಂದು ಕವಿತೆಯನ್ನು ಅತಿಯಾಗಿ ತಿದ್ದಿದರೆ ಕವಿತೆಯೇ ಕುಸಿದುಹೋಗುತ್ತದಲ್ಲ, ಹಾಗೆಯೇ ಇಲ್ಲಿ ಅಷ್ಟೊಂದು ನುರಿತ ನಟರಿದ್ದು, ಹಲವು ಮಾಧ್ಯಮಗಳನ್ನು ಬಳಸಿಯೂ ನಾಟಕ ಭಾರವೆನಿಸುತ್ತದೆ. ಸಂಶೋಧಕರು ಶ್ರಮವಹಿಸಿ ಕಾಳಜಿಯಿಂದ ಕಲೆಹಾಕಿದ ವಿವರಗಳ ಬೊಜ್ಜೆ ನಡೆಯುತ್ತಾ ಇರುವಾಗ ಒಮ್ಮೊಮ್ಮೆ ಅಂದಾಜಿಸಿ ಸಿಗದ ಕಾಡಿನಲ್ಲಿ ಕಳೆದುಹೋದ ಹಾಗೆ, ಒಮ್ಮೆಲೆ ಪ್ರೇಕ್ಷಕ ಮೇಲೆ ಉಸಿರು ತೆಗೆದುಕೊಳ್ಳಲೂ ಸಮಯ ಕೊಡದಷ್ಟು ಒಂದಾದ ಮೇಲೊಂದರಂತೆ ಅವನ್ನು ಹೇರಿದಂತೆ ಎನಿಸುತ್ತದೆ. ನಾಟಕ ಉಸಿರಾಡುವುದು ಅಲ್ಲಿರುವ ಸಂಘರ್ಷಗಳ ಕಾಣ್ಕೆಯಿಂದ. ಈ ನಾಟಕದಲ್ಲಿ ಅಂತಹ ಅಂಶಗಳ ಪ್ರಮಾಣ ಕಡಿಮೆ ಇರುವುದರಿಂದ ಇದಕ್ಕೊಂದು ಸರಳ ರೇಖಾತ್ಮಕ ನರೇಟಿವ್ ಎನಿಸುತ್ತದೆ. ಜೋರಾಗಿ ಸುರಿಯುವ ಜಡಿಮಳೆಯಂತೆ ಭಾವನೆಗಳನ್ನು ತಟ್ಟುವುದು ನಾಟಕದ ಮತ್ತೊಂದು ಮುಖ್ಯ ಅಂಶ. ಆದರೆ, ಒಂದು ನಾಟಕ ಹೀಗೆ ಇರಬೇಕು ಅರಳಬೇಕು ಎಂದು ಹೇಳುವ ಯಾವುದೇ 'ಗೇಟ್ ಕೀಪಿಂಗ್' ಇರಬಾರದು.

ನಾಟಕದ ಜೀವ ಇರುವುದು ಹುಡುಕಾಟದಲ್ಲಿ; ಮಹಿಳಾ ಪಾತ್ರಗಳು ತೋರುವ ಪ್ರತಿರೋಧದಲ್ಲಿ ಅಡಗಿರುವ ವ್ಯಂಗ್ಯ, ಅಸಹಾಯಕತೆಯನ್ನು ಹಿಡಿದಿರುವ ನಿರ್ದೇಶಕರ ಸೂಕ್ಷ್ಮತೆಯಲ್ಲಿ. ನಾಟಕ ಮುಗಿಸಿದ ಮೇಲೆ ನಾವು ನಾಟಕದೊಳಗಿನ ಕಥೆ ಹೇಳಲು ಬಹುಮಾಧ್ಯಮಗಳನ್ನು ಯಾಕಾಗಿ ಬಳಸುತ್ತದೆ ಎಂಬ ಪ್ರಶ್ನೆಯೊಂದು ಸುಳಿಯುತ್ತದೆ. ಅದಕ್ಕೆ ಹೊಳೆದ ಉತ್ತರ: ಇಂದಿಗೆ ಸಂಕೀರ್ಣವಾಗುತ್ತಿರುವ, ನಾನಾ ರೂಪಗಳ ತಾಳುತ್ತಿರುವ, ಒಮ್ಮೊಮ್ಮೆ ಮೇಲ್ನೋಟಕ್ಕೆ ಕಾಣದೆ ಹೋಗುವ ದಬ್ಬಾಳಿಕೆಗಳನ್ನು ಹಿಡಿಯಲು ಅದು ಇಂದಿನ ಅಗತ್ಯವೇನೋ ಎನ್ನುವ ಹಾಗೆ ಈ ನಾಟಕ ನಮ್ಮ ಮುಂದಿದೆ. 'ಪ್ರಾಜೆಕ್ಟ್ ಡಾರ್ಲಿಂಗ್' ನಾಟಕ ಅದರ ಆಹ್ವಾನ ಪತ್ರಿಕೆಯಲ್ಲಿಯೇ ಬರೆದುಕೊಂಡಂತೆ ಕನ್ನಡ ರಂಗಭೂಮಿಯ ಮಹಿಳಾ ಕಲಾವಿದರನ್ನು ನಮ್ಮ ಸಾಂಸ್ಕೃತಿಕ ಇತಿಹಾಸಕ್ಕೆ-ನಮ್ಮ ನಿಯಮಗಳ ಮೇಲೆ ಪುನಃ ಪರಿಚಯಿಸುವ ಮಹತ್ವದ ರಂಗಪ್ರಯೋಗ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪರ್ವತದಾಚೆಯ ಬಯಲು

ಸಿ.ಎಸ್ ಸರ್ವಮಂಗಳಾ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಛೇರಿಯಲ್ಲಿ ಪಂಡಿತ್ ತಾರಾನಾಥ ಚಿತ್ರಗಳು: ಸಗ್ಗೆರೆ ರಾಧಾಕೃಷ್ಣ

ಕಳೆದ ವರ್ಷ ಪಂಡಿತ್ ರಾಜೀವ ತಾರಾನಾಥರಿಗೆ 90 ವರ್ಷ ತುಂಬಿದಾಗ ಮಾಧ್ಯಮಮಿತ್ರರೊಬ್ಬರು ಕೇಳಿದ ಪ್ರಶ್ನೆ: '90ರ ಹೊಸ್ತಿಲಲ್ಲಿ ನಿಂತು ಹಿಂದಿರುಗಿ ನೋಡುವಾಗ ನಿಮಗೆ ಏನನಿಸುತ್ತಿದೆ?' ಉತ್ತರ: 'ಹಿಂದಿರುಗಿ ನೋಡುವ ಜಾಯಮಾನದವನಲ್ಲ ನಾನು. ಮುಂದೆ ನೋಡುವವನು. ನಾಳೆ ಬೆಳಿಗ್ಗೆ ಏನು ರಿಯಾಜ್ ಮಾಡಬೇಕೆಂದು ಯೋಚಿಸುವವನು. ನನ್ನ ಗುರು ಉಸ್ತಾದ್ ಅಲಿ ಅಕ್ಬರ್‌ಖಾನ್ ಕಲಿಸಿರುವ ಮೇರುಸಂಗೀತದ ಅಭ್ಯಾಸಕ್ಕೆ ಸಮಯವೇ ಸಾಲದಾಗಿದೆ'.

ತಾರಾನಾಥರ ಮಾತು ಅವರ ಗುರುಭಕ್ತಿಗೆ, ಸಂಗೀತ ಬದ್ಧತೆಗೆ, ಜೀವನಪ್ರೇಮಕ್ಕೆ ಹಿಡಿದ ಕನ್ನಡಿಯಾಗಿದೆ. ಇದಾಗಿ ವರ್ಷ ಕಳೆದಿದೆ. ಅವರ ಸಂಗೀತ-ತಲ್ಲೀನತೆ, ಒಳನೋಟಗಳು ಇನ್ನೂ ಹರಿತಗೊಂಡಿವೆ, ಮುಳುಗುವಿಕೆ ಆಳವಾಗಿದೆ. ಅವರು ಪದೇಪದೇ ಧ್ಯಾನಿಸುವ 'ಔತ್ತಮ್ಯದ ಸಾರ'ವನ್ನು ಕ್ಷಣಕ್ಷಣವೂ ಬದುಕಿನಲ್ಲಿ ಬಸಿದುಕೊಳ್ಳುವ ತಹತಹಿಕೆಯೊಂದಿಗೆ, ತಮ್ಮ ಸಂಗೀತಲೋಕದಲ್ಲಿ ಪಾಲ್ಗೊಳ್ಳುವ ಜನರ ಪ್ರೀತಿಗಾಗಿ ಸದಾ ಹಂಬಲಿಸುವ ಪಕ್ವಮನಸ್ಕರು ರಾಜೀವರು. ಮೇಲು-ಕೀಳು, ಜಾತಿ, ಜನಾಂಗ ಇಂಥ ಸಂಕುಚಿತ ತಾರತಮ್ಯಗಳನ್ನು ಲೆಕ್ಕಿಸದ, ಸುತ್ತಮುತ್ತಲ ಸಮಾಜೋ-ರಾಜಕೀಯ ಆಗುಹೋಗುಗಳಿಗೆ ಸ್ಪಂದಿಸುವ, ಸ್ವಸ್ಥ ಆಲೋಚನೆಯ ಕಲಾವಿದರೊಬ್ಬರ ಸಾಮೀಪ್ಯದ ಸೌಭಾಗ್ಯವೇ ನಮ್ಮ ಜೀವನದ ಮೌಲ್ಯವನ್ನು, ಸೊಗಸನ್ನು ಹೆಚ್ಚಿಸಿದೆ.

ಸಂಗೀತಕೋಣೆಯಲ್ಲಿ ತಂದೆ ಪಂಡಿತ ತಾರಾನಾಥ್, ಕಿರಾನಾ ಘರಾಣಾದ ಮೇರುಶಿಖರ ಉಸ್ತಾದ್ ಅಬ್ದುಲ್ ಕರೀಂಖಾನ್, ಗುರು ಅಲಿ ಅಕ್ಬರ್‌ಖಾನ್ ಭಾವಚಿತ್ರಗಳ ಶಾಂತ ಇರವಿನಲ್ಲಿ ಕೂತು ನುಡಿಸುವ ರಾಜೀವರು ಈಗಲೂ ಮಗುವಿನಂತೆ ಭಾಸವಾಗುತ್ತಾರೆ. ಇವರೆಲ್ಲರ ನೆರಳಿಗಿಂತ ಬದುಕಿಗಿನ್ನಾವ ರಕ್ಷೆ ಬೇಕು? ತಾರಾನಾಥರು ಸುಯೋಗಿ. ಖಾನ್ ಸಾಹೇಬರು ತಾಯಿಯ ಮಮತೆ ತೋರಿದರೆ, ಪಂಡಿತ್ ರವಿಶಂಕರ್ ತಂದೆಯ ಹಾಗೆ ಜಬರಿಸಿ ಪ್ರಶ್ನಿಸುವ ಆತ್ಮೀಯತೆಯಿಂದಲೇ, ಕೆಲಸ ಬಿಡುವಂತೆ ಸಕಾಲದಲ್ಲಿ ಬುದ್ಧಿಮಾತು ಹೇಳಿದರು. ತಾರಾನಾಥರು ಒಂದೇ ಮಾತಿನಲ್ಲಿ 'ದೇವಿ ಎಂದು ಬಣ್ಣಿಸುವ ದಂತಕಥೆ ಅನ್ನಪೂರ್ಣಾದೇವಿ ಅಕ್ಕರೆ ತೋರಿ, ಸಂಗೀತವನ್ನೂ ಕಲಿಸಿದರು. ಇಷ್ಟು ಮಂದಿಯ ಕೂಡುನೆರಳು ಯಾರಿಗೆ ಲಭಿಸೀತು? ಈ ದಿಗ್ಗಜರೆಲ್ಲ ನಮ್ಮ ಭಾವಲೋಕಕ್ಕೆ ಹತ್ತಿರವಾಗಿದ್ದು ರಾಜೀವರ ಖುದ್ದು ಚಿತ್ರಣ-ಬಣ್ಣನೆಗಳ ಮೂಲಕವೇ, ಸಂಗೀತದ ಆಳ-ಅಗಲವನ್ನು ಭಾಷೆಯಲ್ಲಿ ಕಟ್ಟಿಹಾಕುತ್ತ, ಮಾತಿಗೆ ಸಂಗೀತಗುಣವನ್ನೂ ತರಬಲ್ಲ ನೈಪುಣ್ಯದಿಂದಲೇ.

ಸರೋದ್ ಸಂಗೀತದ ಬಗ್ಗೆ ಮಾತನಾಡುವಾಗ ಸಿತಾರಿನ ಬಗ್ಗೆ ಹೇಳಲೇಬೇಕು. ಮೈಹರ್ ಘರಾನಾದಲ್ಲಂತೂ ಅವೆರಡೂ ತಂತುವಾದ್ಯಗಳು ಅವಳಿ ಮಕ್ಕಳಂತೆ. ನಾದಶಾರದೆ ಅನ್ನಪೂರ್ಣಾದೇವಿ, ಸಿತಾರ್‌ನ ಎವರೆಸ್ಟ್ ಶಿಖರ ನಿಖಿಲ್ ಬ್ಯಾನರ್ಜಿ, ವಿಶ್ವಕ್ಕೆಲ್ಲ ಸಿತಾರ್ ಪರಿಚಯಿಸಿದ ರವಿಶಂಕರ್, ಸರೋದ್ ವಾದ್ಯನಾದ ಸಾಧ್ಯತೆಗಳನ್ನೆಲ್ಲ ಜಾಲಾಡಿದ, ರಾಗವೊಂದರ ವಿಶಿಷ್ಟ ದರ್ಶನಶಕ್ತಿ ಹೊಂದಿದ್ದ 'ಶತಮಾನದ ಸಂಗೀತ ಪ್ರತಿಭೆ' ಖಾನ್ ಸಾಹೇಬರು ಎಲ್ಲ ಒಂದೇ ಕುಟುಂಬದವರು. ಇವರಲ್ಲದೆ ವಯೋಲಿನ್, ಕೊಳಲು ಮುಂತಾದ ಕಲಾವಿದರಿದ್ದರು. ಹತ್ತು ಹಲವು ವಾದ್ಯಗಳಲ್ಲಿ ಪರಿಣತಿಯಿದ್ದ 'ಬಾಬಾ' ಅಲ್ಲಾವುದ್ದೀನ್ ಖಾನರು ತೆರೆದ ಮನಸ್ಸಿನಿಂದ ತಮ್ಮ ಮಕ್ಕಳೊಂದಿಗೆ ಈ ಎಲ್ಲ ಕಲಾತಪಸ್ವಿಗಳನ್ನು ಸಲಹಿದರು. ಇತರ ಕದಮುಚ್ಚಿದ ಘರಾಣಾಗಳಂತೆ ಸಂಗೀತವಿದ್ಯೆಯನ್ನು ಕುಟುಂಬಕ್ಕಾಗಿ ಬಚ್ಚಿಡಲಿಲ್ಲ. ಸಿತಾರ್-ಸರೋದ್ ಕುರಿತಂತೆ ಅಪ್ರತಿಮ ಪ್ರತಿಮೆಯೊಂದನ್ನು ರಾಜೀವರು ಒಮ್ಮೆ ಹಂಚಿಕೊಂಡರು. ಮನೆಗಳ ವಿಂಗಡನೆಯಿರುವ ಸಿತಾರ್ ಪಯಣ ಎಂದರೆ ಸಣ್ಣಸಣ್ಣ ಗುಡ್ಡಗಳನ್ನು ದಾಟಿ ಮುಂದುವರೆದಂತೆ. ಆದರೆ ಮನೆಗಳ ಹಂಗಿಲ್ಲದ ಸರೋದ್‌ಯಾನ ದೊಡ್ಡ ಪರ್ವತವನ್ನು ಹತ್ತಿ ಇಳಿದಂತೆ. ಅದರಾಚೆ ಎಲ್ಲ ಬಯಲು. ವಾಹ್! ಝಲ್ಲೆನಿಸಿದ ಕ್ಷಣವದು. ವಚನಕಾರರ ಬಯಲು ದಕ್ಕಿಬಿಟ್ಟರೆ ಸಂಗೀತಗಾರನಿಗೆ ಪರಮ ಸೌಭಾಗ್ಯವಲ್ಲವೇ? ತಾರಾನಾಥರ ನೆಚ್ಚಿನ ಗೋಪಾಲಕೃಷ್ಣ ಅಡಿಗರ ಸಾಲು 'ಬೆತ್ತಲಾಗದೆ ಬಯಲು ಸಿಕ್ಕದಿಲ್ಲಿ', ತಬಲ ಬೋಲಿನಂತೆ ಜೊತೆಜೊತೆಯಲ್ಲೇ ಮನಸ್ಸನ್ನು ತಟ್ಟಿತು.

ತಾರಾನಾಥರು ನುಡಿಸಿದ ಮೊದಲರಾಗ ಕೀರವಾಣಿ (ಇದರರ್ಥ ಗಿಣಿಯ ದನಿ). ಹಿಂದೂಸ್ತಾನಿ ಪದ್ಧತಿಗೆ ಕರ್ನಾಟಕ ಸಂಗೀತದಿಂದ ಆಮದಾಗಿರುವ ಸಂಪೂರ್ಣರಾಗ. ಚಂಚಲ ಪ್ರಕೃತಿಯ ಕೀರವಾಣಿ ವಾದ್ಯಸಂಗೀತಕ್ಕೆ ಹೆಚ್ಚು ಸೂಕ್ತವೆನಿಸಿದೆ. ಗಾಢವಾದ ಕಿರು ಆಲಾಪ್, ನಂತರ ಮಧ್ಯಲಯದ, ಹತ್ತು ಮಾತ್ರೆಗಳ ಝಪ್ತಾಲ್‌ನ ಗತ್. ಅದರ ಚೌಕಟ್ಟಿನಲ್ಲೇ ಜೋಡ್, ಝಾಲಾಗಳನ್ನು ನುಡಿಸುತ್ತ, ಅದು ಹೊಮ್ಮಿಸುವ ನಾದವೈವಿಧ್ಯವನ್ನು ವಿಸ್ತರಿಸಿದರು. ಅದರಾಚೆ ವೇಗವಾಗಿ ಮತ್ತು ಅತಿವೇಗ ಗತಿಯಲ್ಲಿ ಬಂದ ಧೃತ್‌ಗಳು, 16 ಮಾತ್ರೆಗಳ ನಡೆಯಲ್ಲಿ ಕೀರವಾಣಿರಾಗದ ಚುರುಕು ಆಯಾಮವನ್ನು ತೋರಿದವು. ಭಾವತೀವ್ರತೆ ಸೂಸುವ ಘನವಾದ ಶುದ್ಧ ಭೈರವಿಯೊಂದಿಗೆ ತಾರಾನಾಥರು ತುಂಬುಸಭೆಗೆ ಪ್ರೀತಿಯಿಂದ ವಿದಾಯ ಹೇಳಿದರು. ಮಧ್ಯಲಯದ ಅದ್ಧಾತೀನ್ ತಾಲ್, ದೃತ್ತೀನ್ ತಾಲ್‌ಗತ್‌ಳೊಂದಿಗೆ ಮುಕ್ತಾಯಗೊಳಿಸಿದರು. ತಾರಾನಾಥರ ಬಲಗೈನ ರಭಸವಾದ ಬೋಲ್ಕಾರಿ, ಲಯಕಾರಿಯ ಚುರುಕುತನ, ಕ್ಷಣಕ್ಷಣದ ಆಲೋಚನೆಯ ಓಟ, ಆಲಾಪದ ಮಾರ್ದವತೆ ತರುವ ತಾರುಣ್ಯ ಗುಣ... ಇವು ಯಾವುದಕ್ಕೂ ಮುಪ್ಪೆಂಬುದೇ ಇಲ್ಲ.

ಕಾರ್ಯಕ್ರಮದ ಇನ್ನೊಂದು ವಿಶೇಷ, ಜೋಡಿ ತಬಲಾ. ತಂದೆ ಪಂಡಿತ್ ಉದಯರಾಜ್ ಕರ್ಪೂರ್ ಜೊತೆಗೆ ತಬಲಾ ನುಡಿಸಿದ್ದು ಬಾಲತಪಸ್ವಿ ಪ್ರದ್ಯುಮ್ನ ಕರ್ಪೂರ್. ನಿಖರ ಬೋಲ್‌ಗಳು, ಸ್ಪಷ್ಟ ನಡೆ, ಜೊತೆಗೆ ಎಷ್ಟೋ ಘಟ್ಟಗಳಲ್ಲಿ, ಒಟ್ಟು ಪರಿಣಾಮ ಒಂದೇ ತಬಲಾನಾದದಂತೆ ಕೇಳಿಸುತ್ತಿತ್ತು ಎಂದರೆ, ಅದು ಬಾಲಪ್ರತಿಭೆಯ ಲಯಶುದ್ಧಿಗೆ ಹಿಡಿದ ಕನ್ನಡಿ. ತಾರಾನಾಥ್-ಉದಯರಾಜ್ ತಬಲಾ ಸಾಥ್, ಹಲವು ದಶಕಗಳಿಂದ ನಡೆದಿರುವ ಲಯವಿಚಾರ, ಲಯಕಾರಿಯ ಮಂಥನ. ಅಷ್ಟು ಮಾತ್ರವಲ್ಲ, ಸಾಥ್ ಸಂಗತ್ ಮೀರಿದ ನಾದಲಯ ಸಂಗಾತ. ರಾಜೀವರ ಲಯಕಾರಿ ಗುರುಗಳ ಹಾದಿಯನ್ನೇ ಅನುಸರಿಸುತ್ತದೆ. ಉದಯರಾಜ್ ಹೇಳುವಂತೆ, 'ಅಲ್ಲಲ್ಲಿಯೇ ವಿನ್ಯಾಸಗಳನ್ನು ಸೃಷ್ಟಿಸುತ್ತ, ಆ ವಿನ್ಯಾಸಗಳಲ್ಲೇ ಮುಂದುವರಿದು, ಲೆಕ್ಕಾಚಾರ ಮಾಡುತ್ತ, ಮೂರು ಬಾರಿ ಮರುಕಳಿಸುವ ತಿಹಾಯಿಗಳನ್ನೂ ಸ್ಥಳದಲ್ಲೇ ಹುಟ್ಟುಹಾಕುತ್ತದೆ. ತಾರಾನಾಥರಲ್ಲಿ ಪೂರ್ವನಿಯೋಜಿತ ಲೆಕ್ಕಾಚಾರ ತೀರ ಕಡಿಮೆ. ಯಾವಾಗಲೂ ಹಾಗೆಯೇ. ಈ ಕಾರ್ಯಕ್ರಮದಲ್ಲಿ ತಾರಾನಾಥರ ನುಡಿಸುವಿಕೆಯ ವಿಶೇಷವೆಂದರೆ, ಉಪಜ್ ಅಂಗದ ಸಂಚಾರ. ಗತ್ಕಾರಿ (ಸಂಗೀತ ರಚನೆಯನ್ನು ಬಗೆಬಗೆಯಲ್ಲಿ ಚೆಂದಗೊಳಿಸುವುದು), ಅನಾಗತ್ ಚಲನೆ (ಎಂದರೆ ನಿರ್ಧರಿತ ಸ್ಥಾನದಿಂದ ಆಚೀಚೆ ಉದ್ದೇಶಪೂರ್ವಕವಾಗಿ ಜರುಗಿ, ಲೆಕ್ಕದಲ್ಲಿ ಆಟವಾಡಿ ಮತ್ತೆ ಹಿಂದಿರುಗುವ ವೈಖರಿ), ಚೊಕ್ಕ ಸರಳ ಮುಕ್ತಾಯ, ತ್ರಿಶ್ರದಿಂದ ಚತುರಶ್ರಗತಿಗೆ ನಡೆ ಮತ್ತು ಅದರ ಪ್ರತಿಕ್ರಮ ಚಲನೆ. ಇವೆಲ್ಲ ಯಶಸ್ವಿಯಾಗಿ ನಿಭಾಯಿಸಿದ ರೀತಿ ಅಮೋಘವಾಗಿತ್ತು. ಕೆಳಗೆ ಕುಳಿತು ನುಡಿಸಿದ್ದು ಕೂಡ ಗ್ರೇಟ್'.

ಖಾನ್ ಸಾಹೇಬರು-ತಾರಾನಾಥರು ಜೋಡಿಯಾಗಿ ಎಷ್ಟೆಷ್ಟು ನಾದಲೋಕದಲ್ಲಿ ವಿಹರಿಸಿದ್ದಾರೋ, ಅವರೇ ಬಲ್ಲರು. ರಾಜೀವರು ತಮ್ಮ ಕೈಬೆರಳುಗಳಲ್ಲಿ ಗುರುಗಳನ್ನು ಆವಾಹಿಸಿಕೊಂಡು ನಾದಲಹರಿಯನ್ನು ದಾಟಿಸುವ ಹೊತ್ತಿನಲ್ಲಿ, ಜೀವಂತಗೊಳ್ಳುವುದು ಆ ವಿಹಾರದ ತುಣುಕುಗಳೇ.

ಸರೋದ್‌ನಲ್ಲಿ ಶಿಷ್ಯರಾದ ಸಚಿನ್ ಹಂಪೆ, ಅನುಪಮ್ ಜೋಷಿ ಮತ್ತು ಸಿತಾರ್‌ನಲ್ಲಿ ಅರಣ್ಯಕುಮಾರ್ ಗುರುಗಳೊಂದಿಗೆ ಜತೆಗೂಡಿದ್ದರು.

ಅಯೋಡಿನ್‌ಯುಕ್ತ ಉಪ್ಪೂ...

ಒಂದನೇ ಪುಟದಿಂದ...

ಎಲ್ಲರಿಗೂ ಬೇಕಾಗುವಷ್ಟು ಅಯೋಡಿನ್‌ಯುಕ್ತ ಉಪ್ಪು ತಯಾರಿಕೆ ಸರ್ಕಾರಿ ಸಂಸ್ಥೆಗಳಿಂದ ಸಾಧ್ಯವಿಲ್ಲ, ಖಾಸಗಿಯವರೂ ಕೈಜೋಡಿಸಿದರೆ ಆಗುತ್ತದೆ ಎಂದು ಕೆಲಸ ಶುರುಮಾಡಿದರು.

ದೇಸೀ ಸಂಶೋಧನೆ: ಸಮುದ್ರದ ಪಾಚಿಯಿಂದ ಅಯೋಡಿನ್ ಹೊರತೆಗೆಯುವ ವಿನೂತನ ಸಂಶೋಧನೆ ಮಾಡಿ ಯಶಸ್ವಿಯಾದ ವಿಜ್ಞಾನಿ ತಕ್ವಿ ಖಾನ್ ಅವರನ್ನು ಹೈದರಾಬಾದ್‌ನ ಡೇವಿಡ್ ಹಂಫ್ರಿ ಎಂದೇ ಕರೆಯಲಾಗುತ್ತದೆ. ಓಸ್ಮಾನಿಯ ವಿಶ್ವವಿದ್ಯಾಲಯದ ರಸಾಯನ ವಿಜ್ಞಾನ ವಿಭಾಗದ ಮುಖ್ಯಸ್ಥರೂ ಮತ್ತು ನಿಜಾಮ್ ಕಾಲೇಜಿನ ಪ್ರಾಚಾರ್ಯರಾಗಿ ಕೆಲಸ ಮಾಡಿದ್ದ ಖಾನ್ ಸಾಹೇಬರು, ಸಮುದ್ರದ ಕಂದು ಪಾಚಿಯಲ್ಲಿ ಸಾಕಷ್ಟು ಅಯೋಡಿನ್ ಇರುವುದನ್ನು ಕಂಡುಕೊಂಡಿದ್ದರು. ಪಾಚಿಯನ್ನು ಒಣಗಿಸಿ, ಸುಟ್ಟು ಪುಡಿ ಮಾಡಿ, ನೀರಿನಲ್ಲಿ ಕರಗಿಸಿದಾಗ ಅಯೋಡಿನ್ ಸಿಗುತ್ತದೆ ಎಂಬ ದೇಸೀ ತಂತ್ರಜ್ಞಾನ ಅವರಿಗೆ ಗೊತ್ತಿತ್ತು. ಇಂದಿರಾಗಾಂಧಿಯವರಿಂದ ಕರೆ ಬಂದ ದಿನಗಳಲ್ಲಿ ಭಾವ್‌ನಗರ್‌ನ ಸಂಶೋಧನಾ ಕೇಂದ್ರದಲ್ಲಿ ಪಾಚಿಯಿಂದ ಯುರೇನಿಯಂ ತೆಗೆಯುವ ತಂತ್ರಜ್ಞಾನಕ್ಕಾಗಿ ತಕ್ವಿ ಖಾನ್ ಶ್ರಮಿಸುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ರಸಾಯನಿಕ ಕ್ರಿಯೆಗಳಿಂದ ವಿಕಿರಣ ಹೊಮ್ಮಲು ಶುರುವಾದಾಗ, ಆ ಯೋಜನೆಯನ್ನು ಕೈಬಿಟ್ಟು ಅಯೋಡಿನ್ ಪಡೆಯುವುದರತ್ತ ಗಮನಹರಿಸಿದರು.

ನೆಲ-ನೀರಿನ ಋಣ: ನಾವೆಲ್ಲ ಮನೆಗೆ ಕೊಳ್ಳುವ ರಿವರ್ಸ್ ಆಸ್ಮೋಸಿಸ್ (ಆರ್‌ಒ) ತಂತ್ರಜ್ಞಾನದ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಭಾರತದಲ್ಲಿ ಮೊದಲು ರೂಪಿಸಿದ ಕೀರ್ತಿ ಕೂಡ ಖಾನ್ ಸಾಹೇಬರಿಗೆ ಸಲ್ಲುತ್ತದೆ. 'ಮೇಕ್ ಇನ್ ಇಂಡಿಯ' ಧ್ಯೇಯವನ್ನು ಎಂಬತ್ತರ ದಶಕದಲ್ಲಿಯೇ ಅನುಸರಿಸಿ ಉಪ್ಪುನೀರಿನ ಲವಣಾಂಶವನ್ನು ತೆಗೆದುಹಾಕಲು ಬೇಕಾದ ತಂತ್ರಜ್ಞಾನವನ್ನು ಅತ್ಯಂತ ಕಡಿಮೆ ದರದಲ್ಲಿ ಪ್ರತಿ ಲೀಟರ್‌ಗೆ ಒಂದು ಪೈಸೆಯಂತೆ ಜನರ ಕೈಗೆಟುವಂತೆ ಮಾಡಿದ್ದರು. ರಾಜಸ್ಥಾನ ಮತ್ತು ಗುಜರಾತಿನ ಸೌರಾಷ್ಟ್ರ ಭಾಗಗಳ ಕುಡಿಯುವ ನೀರಿನಲ್ಲಿ ಕ್ಷಾರ ಮತ್ತು ಲವಣಾಂಶ ಅತಿ ಎನಿಸುವಷ್ಟಿರುತ್ತಿತ್ತು. ಅದನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದ ಖಾನ್ ಅವರ ತಂತ್ರಜ್ಞಾನವನ್ನು ಥಾಯ್ಲೆಂಡ್ ಮತ್ತು ವಿಯೆಟ್ನಾಂ ಅನುಮತಿ ಪಡೆದು ಬಳಸಲು ಪ್ರಾರಂಭಿಸಿದವು.

ಜೊಜೊಬಾ-ಅಜೂಬಾ: ಇದಷ್ಟೇ ಅಲ್ಲ, ನಿರಂತರವಾಗಿ ಬರಗಾಲಕ್ಕೆ ತುತ್ತಾಗಿ, ಅಂತರ್ಜಲ ಕುಸಿದಿದ್ದ ಥಾರ್ ಮರುಭೂಮಿ ಮತ್ತು ಕಛ್‌ನ ರಣ ಪ್ರದೇಶದಲ್ಲಿ ಎರಡನೆಯ ಹಸಿರು ಕ್ರಾಂತಿಯನ್ನು ಸಂಘಟಿಸಿ ಮರುಭೂಮೀಕರಣವನ್ನು ರಿವರ್ಸ್ ಮಾಡಿದ ಹೆಗ್ಗಳಿಕೆಯೂ ಖಾನ್ ಅವರಿಗೆ ಸಲ್ಲುತ್ತದೆ. ದೂರದ ಮೆಕ್ಸಿಕೊದಲ್ಲಿ ಸೊನಾರನ್ ಮರುಭೂಮಿಯ ಹಸಿರೀಕರಣವನ್ನು ಕಣ್ಣಾರೆ ಕಂಡಿದ್ದ ಖಾನ್, ಅಲ್ಲಿನ ಜೊಜೊಬಾ ಗಿಡದ ಬೀಜಗಳನ್ನು ನಮ್ಮಲ್ಲಿಗೆ ತಂದು ನೆಟ್ಟು ಬೆಳೆಸಿದರು. ನೂರು-ಇನ್ನೂರು ವರ್ಷ ಬಾಳುವ ಜೊಜೊಬಾ ಗಿಡಗಳು ಹೆಚ್ಚಿನ ನೀರು ಬೇಡದೆ ಅಧಿಕ ಉಷ್ಣತೆ ಮತ್ತು ವಾತಾವರಣದ ಕ್ಷಾರದ ಅಂಶವನ್ನು ತಡೆದುಕೊಳ್ಳುತ್ತವೆ. ಮರುಭೂಮಿಯ ಬಂಗಾರ ಎಂಬ ಖ್ಯಾತಿಯ ಜೊಜೊಬಾ ಬೀಜದ ಒಂದು ಲೀಟರ್ ಎಣ್ಣೆಯ ಬೆಲೆ ಬರೋಬ್ಬರಿ ಏಳು ಸಾವಿರ ರೂಪಾಯಿ!

